ವಿಶ್ವವಾಣಿ
ವಿಶ್ವಾಸವೇ ವಿಶ್ವ

ಆರ್‌ಸಿಬಿಗೆ ಫೈನಲ್‌ಗೇರುವ ತವಕ

ಈ ಬಾರಿಯ ಐಪಿಎಲ್ ಪ್ರಧಾನಘಟ್ಟಕ್ಕೆ ಕಾಲಿಟ್ಟಿದೆ. ಮಂಗಳವಾರ ಆರ್‌ಸಿಬಿ-ಗುಜರಾತ್ ಟೈಟಾನ್ಸ್ ನಡುವೆ ಹಿಮಾಚಲಪ್ರದೇಶದ ಧರ್ಮಶಾಲಾದಲ್ಲಿ 1ನೇ ಕ್ವಾಲಿಫೈಯರ್ ನಡೆಯಲಿದೆ. ಸಮಬಲರ ನಡುವಿನ ಈ ಪಂದ್ಯದಲ್ಲಿ ಗೆದ್ದ ತಂಡ ಫೈನಲ್‌ಗೇರಲಿದೆ. ಸೋತ ತಂಡ 2ನೇ ಕ್ವಾಲಿಫೈಯರ್‌ನಲ್ಲಿ ಆಡಲಿದೆ.

ಸೊಂಪಾದ ಪುಟಗಳು

ಲೈಕ್ಸ್-ಕಾಮೆಂಟ್ ಬಿಟ್ಟು, ಬೂತ್ ಸಂಘಟಿಸಿ: ಕಮಲ ಪಾಠ
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ 6

ನಮ್ಮ ಡೆಮಾಕ್ರಸಿಗೆ ಬೇಕಿದೆ ಮೇಜರ್ ಸರ್ಜರಿ!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ 7

ದಾರಿದೀಪೋಕ್ತಿ

ನೀವು ಯಾರ ಜತೆಗೆ ಎಷ್ಟು ಸಮಯ ಕಳೆಯುತ್ತಿದ್ದೀರಿ ಎಂಬುದು ಮುಖ್ಯ. ವ್ಯರ್ಥವಾಗಿ ಕಳೆದ ಸಮಯ ವ್ಯರ್ಥವಾಗಿ ವ್ಯಯಿಸಿದ ಹಣಕ್ಕೆ ಸಮ. ಹಣವನ್ನಾದರೂ ಗಳಿಸಬಹುದು. ಸಮಯವನ್ನು ಗಳಿಸುವುದು ಸಾಧ್ಯವಿಲ್ಲ.

ವಕ್ರತುಂಡೋಕ್ತಿ

ನೀವು ಹೇಳುವುದೆಲ್ಲವನ್ನೂ ನಿಮ್ಮ ಹೆಂಡತಿ ಗಮನವಿಟ್ಟು ಕೇಳಬೇಕು ಎಂದು ಬಯಸಿದರೆ, ಬೇರೆ ಹೆಂಗಸಿನ ಜತೆ ಮಾತಾಡಬೇಕು.

ರಾಜ್ಯದ ಹೈಡ್ರಾಮಕ್ಕೆ ಹೈ ಮದ್ದು?

ಆರು ತಿಂಗಳ ಬಳಿಕ ಕೊನೆಗೂ ದೆಹಲಿಗೆ ಬುಲಾವ್ | ಇಂದು ಬೆಳಗ್ಗೆ 11 ಗಂಟೆಗೆ ರಾಹುಲ್ ನೇತೃತ್ವದಲ್ಲಿ ಸಿಎಂ, ಡಿಸಿಎಂ ಸಭೆ | ಒಬಿಸಿ ಸಿಎಂ ಬದಲಿಸೋಕೆ ಒಲ್ಲದ ರಾಗಾ; ಡಿಕೆಗೆ ಹೆಚ್ಚುವರಿ ಖಾತೆಯ ಆಫರ್?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಆರು ತಿಂಗಳುಗಳಿಂದ ಕರ್ನಾಟಕ ಕಾಂಗ್ರೆಸ್‌ನಲ್ಲಿ ನಾಯಕತ್ವ ಬದಲಾವಣೆ, ಸಚಿವ ಸಂಪುಟ ಪುನಾರಚನೆಗೆ ಸಂಬಂಧಿಸಿದಂತೆ ನಡೆಯುತ್ತಿರುವ 'ಹೈಡ್ರಾಮ'ಕ್ಕೆ ಇತಿಶ್ರೀ ಹಾಡಲು ಕೊನೆಗೂ ಹೈಕಮಾಂಡ್ ಮುಂದಾಗಿದೆ.

ಭಾನುವಾರವೇ ವಿದೇಶಕ್ಕೆ ತೆರಳಬೇಕಿದ್ದ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರು ತಮ್ಮ ವಿದೇಶ ಪ್ರವಾಸವನ್ನು ಮುಂದೂಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ದೆಹಲಿಗೆ ಬರಲು ಸೂಚನೆ ನೀಡಿದ್ದಾರೆ. ಮಂಗಳವಾರ ಬೆಳಗ್ಗೆ 11 ಗಂಟೆಗೆ ಕರ್ನಾಟಕ ಕಾಂಗ್ರೆಸ್‌ನ ಗೊಂದಲಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸಭೆಯನ್ನು ನಿಗದಿ ಮಾಡಿದ್ದಾರೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರನ್ನು ಒಟ್ಟಿಗೆ ಕೂರಿಸಿಕೊಂಡು ಸಭೆ ನಡೆಸುವರೋ ಅಥವಾ ಪ್ರತ್ಯೇಕ ಸಭೆ ನಡೆಸುವರೋ ಎನ್ನುವ ಸ್ಪಷ್ಟನೆ ಇಲ್ಲವಾದರೂ, ಸಂಜೆ ವೇಳೆಗೆ ಇಡೀ ಗೊಂದಲಕ್ಕೆ 'ಅಂತ್ಯ' ಹಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಆರಂಭದಲ್ಲಿ ರಾಜ್ಯಸಭಾ ಚುನಾವಣಾ ಅಭ್ಯರ್ಥಿಗಳ ಆಯ್ಕೆಗೆ ಸೀಮಿತವಾಗಿ ಈ ಸಭೆ ನಡೆಯಲಿದೆ ಎಂದು ಹೇಳಲಾಗಿತ್ತು. ಆದರೆ ಡಿ.ಕೆ.ಶಿವಕುಮಾರ್ ಅವರನ್ನೂ ದೆಹಲಿಗೆ ಬರುವಂತೆ ಹೇಳಿದ್ದರಿಂದ, ನಾಯಕತ್ವ ಬದಲಾವಣೆ, ಸಂಪುಟ ಪುನಾರಚನೆಯ ಗೊಂದಲಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಸುವ ಸಾಧ್ಯತೆಯಿದೆ ಎನ್ನಲಾಗಿದೆ. ಈ ಹಿಂದೆ ಕೇರಳ ಚುನಾವಣೆ ಮುಗಿಯುವ ತನಕ ಯಾವುದೇ ತೀರ್ಮಾನ ಕೈಗೊಳ್ಳುವುದು ಬೇಡ ಎಂದು ರಾಹುಲ್ ಹೇಳಿದ್ದರು. ಆದರೀಗ ಕೇರಳ ಚುನಾವಣೆ ಮುಕ್ತಾಯವಾಗಿರುವುದರಿಂದ, ಇಬ್ಬರನ್ನು ಕರೆಸಿಕೊಂಡು ಚರ್ಚಿಸಿ ಅಂತಿಮ ತೀರ್ಮಾನ ನೀಡುವ ಸಾಧ್ಯತೆಯಿದೆ.

ಮುಖ್ಯಮಂತ್ರಿ ಸ್ಥಾನದ ವಿಚಾರವಾಗಿ ಚರ್ಚೆ ನಡೆಯುವ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಚಾರವಾಗಿ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ಹೈಕಮಾಂಡ್ ನಾಯಕರು ದೆಹಲಿಗೆ ಕರೆದರೆ ಹೋಗುತ್ತೇವೆ. ನಾಯಕರು ದೆಹಲಿಗೆ ಬನ್ನಿ ಎಂದರೆ ನಾನು ಹೋಗುತ್ತೇನೆ. ಇಲ್ಲವಾದರೆ ಇಲ್ಲೇ ಉಳಿಯುತ್ತೇನೆ. ಪಕ್ಷ ಕರೆದಾಗ ನಾವು ಹೋಗಲೇಬೇಕಾಗುತ್ತದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಮುಖ್ಯಮಂತ್ರಿ ಗಳನ್ನು ಹೈಕಮಾಂಡ್ ಕರೆದಿದ್ದಾರೆ. ಅವರು ಹೋಗುತ್ತಿದ್ದಾರೆ. ಅವರೊಂದಿಗೆ ನಾವೂ ಹೋಗುತ್ತಿದ್ದೇವೆ. ಸಭೆಯಲ್ಲಿ ಯಾವೆಲ್ಲ ವಿಷಯ ಚರ್ಚೆಗೆ ಬರಲಿದೆ ಎನ್ನುವ ಸ್ಪಷ್ಟನೆ ಇಲ್ಲ. ಪಕ್ಷದಲ್ಲಿರುವ ಕೆಲ ರಾಜಕೀಯ ಗೊಂದಲಗಳಿಗೆ ತೆರೆ ಎಳೆಯಬೇಕಿದೆ. ಆದಷ್ಟು ಶೀಘ್ರದಲ್ಲಿ ಈ ಎಲ್ಲ ಗೊಂದಲ ಬಗೆಹರಿಯುವ ವಿಶ್ವಾಸವಿದೆ. ಈ ಬಗ್ಗೆ ಹೈಕಮಾಂಡ್‌ಗೆ ಮನವಿ ಮಾಡುತ್ತೇವೆ.
- ಡಾ.ಜಿ. ಪರಮೇಶ್ವರ, ಗೃಹ ಸಚಿವ

ಆಡಳಿತ ಪಕ್ಷದ ನಾಯಕತ್ವ ಪ್ರಹಸನ ಮುಂದುವರಿದಿದೆ. ಸಿಎಂ ಕುರ್ಚಿಗಾಗಿ ಕಾದಾಟ ನಡೆಯುತ್ತಿದೆ. ಡಿ.ಕೆ.ಶಿವಕುಮಾರ್ ಭವಿಷ್ಯ ನೋಡಿಕೊಳ್ಳುತ್ತಾರೋ ಅಥವಾ ಬೇರೆ ಪಕ್ಷಕ್ಕೆ ಹೋಗುತ್ತಾರೋ ಎಂದು ಗೊತ್ತಿಲ್ಲ. ಸಿದ್ದರಾಮಯ್ಯ ಮಾತ್ರ ಸಿಎಂ ಕುರ್ಚಿಯನ್ನು ಖಾಲಿ ಮಾಡುವುದಿಲ್ಲ, ಆದರೆ ಡಿಕೆಶಿಗೆ ಖಾಲಿ ತಟ್ಟೆ ಕೊಟ್ಟಿದ್ದಾರೆ.
- ಆರ್.ಅಶೋಕ, ಪ್ರತಿಪಕ್ಷ ನಾಯಕ

ಸಿಎಂ ಜತೆ ತೆರಳಿದ ಆಪ್ತರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಸಂಜೆ 7 ಗಂಟೆಗೆ ವಿಶೇಷ ವಿಮಾನದಲ್ಲಿ ದೆಹಲಿಗೆ ತೆರಳಿದ್ದಾರೆ. ಸಿದ್ದರಾಮಯ್ಯ ಅವರೊಂದಿಗೆ ಆಪ್ತ ಸಚಿವರಾದ ಜಿ.ಪರಮೇಶ್ವರ, ಬೈರತಿ ಸುರೇಶ್, ಡಾ. ಎಚ್.ಸಿ.ಮಹದೇವಪ್ಪ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಕೆ.ಜೆ.ಜಾರ್ಜ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ತೆರಳಿದ್ದಾರೆ. ಇದಕ್ಕೂ ಮೊದಲು ಸಚಿವ ಸಚಿವ ಸತೀಶ್ ಜಾರಕಿಹೊಳಿ 6 ಗಂಟೆಗೆ ಪ್ರತ್ಯೇಕವಾಗಿ ದೆಹಲಿಗೆ ತೆರಳಿದ್ದಾರೆ ಎಂದು ತಿಳಿದುಬಂದಿದೆ. ಈ ನಡುವೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಮ್ಮ ಸಹೋದರ ಡಿ.ಕೆ.ಸುರೇಶ್ ಅವರೊಂದಿಗೆ ಸಂಜೆ 6.40ಕ್ಕೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೂಲಕ ಪ್ರತ್ಯೇಕವಾಗಿ ದೆಹಲಿಗೆ ತೆರಳಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಡಿಕೆ ನಿವಾಸದಲ್ಲಿ ತಡರಾತ್ರಿ ಸಭೆ

ದೆಹಲಿಗೆ ಸಿಎಂಗೆ ಬುಲಾವ್ ಬರುತ್ತಿದ್ದಂತೆ ಡಿ.ಕೆ.ಶಿವಕುಮಾರ್ ತಮ್ಮ ಸಹೋದರ ಸುರೇಶ್ ಅವರೊಂದಿಗೆ ಭಾನುವಾರ ತಡರಾತ್ರಿ ಸಭೆ ನಡೆಸಿದ್ದಾರೆ. ಸಂಪುಟ ಪುನಾರಚನೆಗೆ ಅವಕಾಶ ನೀಡಿದರೆ, ನಾಯಕತ್ವ ಬದಲಾವಣೆ ವಿಷಯಕ್ಕೆ ಸಂಬಂಧಿಸಿದಂತೆ ಯಾವ ರೀತಿಯಲ್ಲಿ ಹೈಕಮಾಂಡ್ ಜತೆ ಚರ್ಚಿಸಬೇಕು ಎನ್ನುವ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದುಬಂದಿದೆ. ಇನ್ನೊಂದೆಡೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಸಹ, ಆಪ್ತ ಹಾಗೂ ಹಿರಿಯ ಸಚಿವರೊಂದಿಗೆ ಸಭೆ ನಡೆಸಿದ್ದಾರೆ. ಹೈಕಮಾಂಡ್ ನಾಯಕರ ಮುಂದೆ ಯಾವೆಲ್ಲಾ ವಿಷಯಗಳನ್ನು ಮಂಡಿಸಬೇಕು? ಸಂಪುಟ ಪುನಾರಚನೆ, ನಾಯಕತ್ವ ಬದಲಾವಣೆ, ರಾಜ್ಯಸಭೆ ಹಾಗೂ ವಿಧಾನ ಪರಿಷತ್ತಿನ ಅಭ್ಯರ್ಥಿಗಳ ಆಯ್ಕೆ ಸಂಬಂಧಪಟ್ಟಂತೆ ತಮ್ಮ ನಿಲುವುಗಳ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ.

ಈ ನಡುವೆ ಡಿ.ಕೆ.ಶಿವಕುಮಾರ್ ಅವರ ಆರಾಧ್ಯ ಗುರುಗಳಾದ ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ನೊಣವಿನಕೆರೆಯ ಶ್ರೀ ಕಾಡಸಿದ್ದೇಶ್ವರ ಮಠದ ಡಾ.ಕರಿವೃಷಭ ದೇಶಿ ಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಮಾತನಾಡಿದ್ದು, ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗೇ ಆಗುತ್ತಾರೆ ಎಂದು ಭವಿಷ್ಯ ನುಡಿದಿದ್ದಾರೆ. ಶಿವಕುಮಾರ್ ಅವರು ಶ್ರೀ ಕಾಡುಸಿದ್ದೇಶ್ವರ ಮಠದ ಭಕ್ತರಾಗಿದ್ದಾರೆ. ಶಿವಕುಮಾರ್ ಮುಖ್ಯಮಂತ್ರಿಯಾಗುವ ಸಂಕಲ್ಪ ಮಾಡಿದ್ದು, ಮಠದ ಆಶೀರ್ವಾದ ಅವರ ಮೇಲೆ ಇದೆ. ಸಮಯ, ಅವಕಾಶಕ್ಕಾಗಿ ಕಾಯುತ್ತಿದ್ದು, ಆದಷ್ಟು ಬೇಗ ಸಿಎಂ ಶಿವಕುಮಾರ್ ಆಗುತ್ತಾರೆ ಎನ್ನುವ ಮೂಲಕ ಮತ್ತಷ್ಟು ಕುತೂಹಲ ಮೂಡಿಸಿದ್ದಾರೆ.

ಒಬಿಸಿ ನಾಯಕನ ಬದಲಿಸಲು ಒಪ್ಪದ ರಾಗಾ

ಈ ನಡುವೆ ದೆಹಲಿ ಮೂಲಗಳ ಪ್ರಕಾರ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಇಬ್ಬರನ್ನೂ ದೆಹಲಿಗೆ ಕರೆಸಿಕೊಂಡಿರುವ ರಾಹುಲ್ ಗಾಂಧಿ ಅವರು, 'ಮಧ್ಯಮ'ಸೂತ್ರವೊಂದನ್ನು ಸಿದ್ಧಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ಹಿಂದುಳಿದ ವರ್ಗಗಳ ನಾಯಕನನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿದರೆ ಅದರ ಹೊಡೆತ ಮುಂದಿನ ಚುನಾವಣೆಯಲ್ಲಿ ಆಗುವ ಆತಂಕವಿರುವುದರಿಂದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ರಾಹುಲ್ ಗಾಂಧಿ ಸಮ್ಮತಿಯಿಲ್ಲ. ಆದರೆ ರಾಜ್ಯದಲ್ಲಿ ಸರಕಾರವನ್ನು ಅಧಿಕಾರಕ್ಕೆ ತರುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಡಿ.ಕೆ.ಶಿವಕುಮಾರ್ ಅವರಿಗೂ ಬೇಸರವಾಗದಂತೆ ನೋಡಿಕೊಳ್ಳಲು ಸೂತ್ರಕ್ಕೆ ಸಿದ್ಧತೆ ನಡೆಸಲಾಗಿದೆ ಎಂದು ತಿಳಿದುಬಂದಿದೆ.

ರಾಹುಲ್ ಗಾಂಧಿ ಆಪ್ತರ ಪ್ರಕಾರ ಸಿದ್ದರಾಮಯ್ಯ ಅವರನ್ನು ಸಿಎಂ ಆಗಿ ಮುಂದುವರೆಸುವ ಜತೆಗೆ ಡಿ.ಕೆ.ಶಿವಕುಮಾರ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿಯೇ ಮುಂದುವರಿಸಲಾಗುವುದು. ಇದರೊಂದಿಗೆ ಸರಕಾರದ ಮತ್ತೊಂದು ಆಯಕಟ್ಟಿನ ಖಾತೆಯನ್ನೂ ನೀಡಲಾಗುವುದು. ಈ ಎರಡರೊಂದಿಗೆ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಅವರನ್ನು ರಾಜ್ಯಸಭೆಗೆ ಕರ್ನಾಟಕದಿಂದ ಕಳುಹಿಸುವ ಆಫರ್ ಅನ್ನು ನೀಡುವ ಸಾಧ್ಯತೆಯಿದೆ. ಒಂದು ವೇಳೆ ಹೆಚ್ಚುವರಿಯಾಗಿ ಗೃಹ ಖಾತೆಯನ್ನು ಡಿ.ಕೆ.ಶಿವಕುಮಾರ್ ಅವರಿಗೆ ನೀಡಿದರೆ, ಪರಮೇಶ್ವರ ಅವರಿಗೆ ಡಿಕೆ ಬಳಿಯಿರುವ ಒಂದು ಖಾತೆಯನ್ನು ನೀಡುವ ಚರ್ಚೆ ನಡೆಯಬಹುದು ಎನ್ನಲಾಗಿದೆ.

ಆದರೆ ಸದ್ಯದ ಸ್ಥಿತಿಯಲ್ಲಿ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನ, ಹೆಚ್ಚುವರಿ ಖಾತೆಗಿಂತ ಮಿಗಿಲಾಗಿ ಮುಖ್ಯಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ. ಹೆಚ್ಚುವರಿ ಖಾತೆಗಳ ಮೇಲಿನ ಆಸಕ್ತಿ ಉಳಿದಿಲ್ಲ. ಎಲ್ಲ ಖಾತೆಗಳನ್ನೂ ನೀವೇ ಇಟ್ಟುಕೊಳ್ಳಿ, ಮುಖ್ಯಮಂತ್ರಿ ಸ್ಥಾನವೊಂದನ್ನು ನೀಡಿ ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಏಕೆಂದರೆ, ಈ ಬಾರಿ ಮುಖ್ಯಮಂತ್ರಿ ಸ್ಥಾನ ಪಡೆಯದಿದ್ದರೆ 2028ರ ಚುನಾವಣೆವರೆಗೆ ಅದು ಸಾಧ್ಯವಿಲ್ಲ ಎನ್ನುವುದು ಡಿ.ಕೆ.ಶಿವಕುಮಾರ್ ಅವರಿಗೆ ಗೊತ್ತಿರುವುದರಿಂದ ಶತಾಯಗತಾಯ ಪ್ರಯತ್ನ ಹಾಕಲು ತೀರ್ಮಾನಿಸಿದ್ದಾರೆ. ಈ ಕಾರಣಕ್ಕಾಗಿಯೇ ಡಿ.ಕೆ.ಸುರೇಶ್ ಅವರನ್ನು ದೆಹಲಿಗೆ ಕರೆದುಕೊಂಡು ಹೋಗಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಖಾತೆ ಹಂಚಿಕೆ; ಹೆಚ್ಚಿದ ಕೌತುಕ

ಸಂಪುಟ ಪುನಾರಚನೆಯ ಗೊಂದಲ ನಡುವೆಯೇ ಸಚಿವ ಕೆ.ವೆಂಕಟೇಶ್ ಅವರಿಗೆ ಹೆಚ್ಚುವರಿ ಖಾತೆ ಹಂಚಿದ ಸಿದ್ದರಾಮಯ್ಯ ಅವರ ನಡೆ ಕುತೂಹಲಕ್ಕೆ ಕಾರಣವಾಗಿದೆ. ಈ ಹಿಂದೆ ಕೆ.ಎನ್. ರಾಜಣ್ಣ ಹಾಗೂ ಬಿ. ನಾಗೇಂದ್ರ ರಾಜೀನಾಮೆ ನೀಡಿದ ಬಳಿಕ ಅವರ ಖಾತೆಗಳನ್ನು ಇತರರಿಗೆ ಹಂಚಿಕೆ ಮಾಡಿರಲಿಲ್ಲ. ಇದೀಗ ಸಚಿವ ಡಿ. ಸುಧಾಕರ್ ಅವರ ನಿಧನದಿಂದ ತೆರವಾದ ಸಾಂಖ್ಯಿಕ ಖಾತೆಯನ್ನು ಕೆ. ವೆಂಕಟೇಶ್ ಅವರಿಗೆ ಹಂಚಿಕೆ ಮಾಡಿರುವುದು ಕುತೂಹಲಕ್ಕೆ ಕಾರಣವಾಗಿದೆ. ಸಂಪುಟ ಪುನಾರಚನೆ ವೇಳೆ ವೆಂಕಟೇಶ್ ಅವರನ್ನು ಕೈಬಿಡುವ ಸಾಧ್ಯತೆಯಿದೆ ಎನ್ನಲಾಗಿತ್ತು. ಆದರೀಗ ಹೆಚ್ಚುವರಿ ಖಾತೆ ನೀಡುವ ಮೂಲಕ ಸಚಿವ ಸಂಪುಟ ಪುನಾರಚನೆ ಸಾಧ್ಯತೆ ಬಗ್ಗೆಯೂ ಅನುಮಾನ ಶುರುವಾಗಿದೆ.

ಭಟ್ಕಳ ಉದ್ವಿಗ್ನ: ನಿಷೇಧಾಜ್ಞೆ ಜಾರಿ

ತಡರಾತ್ರಿ, ಗಲಭೆ ಸಂಬಂಧ 6 ಜನರ ಬಂಧನ, ಬಿಗಿ ಪೊಲೀಸ್ ಬಂದೋಬಸ್ತ್

ಭಟ್ಕಳ: ತಾಲೂಕಿನ ವೆಂಕಟಾಪುರದ ಸಮೀಪ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ಹಿಂದೂ ಯುವಕರು ಮರುನಿರ್ಮಾಣ ಮಾಡಿದ 'ಮುರಿನಕಟ್ಟೆ'ಯನ್ನು ಭಾನುವಾರ ರಾತ್ರಿ ಮುಸ್ಲಿಮರ ತಂಡವೊಂದು ಧ್ವಂಸ ಮಾಡಿದ ಬಳಿಕ ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ತಲೆದೋರಿದೆ. ಈ ಹಿನ್ನೆಲೆಯಲ್ಲಿ ಭಟ್ಕಳ ಪಟ್ಟಣ ಹಾಗೂ ಜಾಲಿ ಪಂಚಾಯತ್ ವ್ಯಾಪ್ತಿಯಲ್ಲಿ ಮೇ 27ರ ತನಕ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಘಟನೆಗೆ ಸಂಬಂಧ ಗಲಭೆ, ಪುಂಡಾಟಿಕೆ, ನಗರ ಠಾಣೆ ಪೊಲೀಸರ ಮೇಲೆ ಹಲ್ಲೆ, ಹೆದ್ದಾರಿ ತಡೆ, ವ್ಯಕ್ತಿಯ ಮೇಲಿನ ಹಲ್ಲೆ, ಸಾಮಾಜಿಕ ಜಾಲತಾಣದಲ್ಲಿ ಪ್ರಚೋದನಕಾರಿ ವಿಡಿಯೊ ಹರಿಬಿಟ್ಟಿರುವುದು ಸೇರಿ ಹಲವರ ಮೇಲೆ ಒಟ್ಟು 4 ಪ್ರಕರಣಗಳನ್ನು ದಾಖಲು ಮಾಡಿದ್ದು, ಈವರೆಗೆ 6 ಜನರನ್ನು ಬಂಧಿಸಲಾಗಿದೆ. ಸ್ಥಳದಲ್ಲಿ ಹೆಚ್ಚಿನ ಬಂದೋಬಸ್ತ್‌ಗಾಗಿ 9 ಕೆಎಸ್‌ಆರ್‌ಪಿ. ತುಕಡಿ, 3 ಡಿಎಆರ್. ತುಕಡಿ ಸೇರಿದಂತೆ ಜಿಲ್ಲೆಯಿಂದ 300ಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಎಸ್.ಪಿ. ದೀಪನ್ ತಿಳಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 66ರ ವಿಸ್ತರಣೆ ಕಾಮಗಾರಿ ಆರಂಭವಾದಾಗಿನಿಂದಲೂ ಈ ಮುರಿನಕಟ್ಟೆ ವಿವಾದದ ಕೇಂದ್ರಬಿಂದುವಾಗಿತ್ತು. ನೂರಾರು ವರ್ಷಗಳ ಇತಿಹಾಸ ಹಾಗೂ ಧಾರ್ಮಿಕ ನಂಬಿಕೆ ಹೊಂದಿದ್ದ ಈ ಸ್ಥಳವನ್ನು ಹೆದ್ದಾರಿಗಾಗಿ ಬಿಟ್ಟು ಕೊಡಲಾಗಿತ್ತು. ರಸ್ತೆ ಅಗಲೀಕರಣದ ಬಳಿಕ, ಇದನ್ನು ಸಂಪೂರ್ಣವಾಗಿ ತೆರವುಗೊಳಿಸಬೇಕೆಂದು ಮುಸ್ಲಿಂ ಸಮುದಾಯ ಒತ್ತಾಯಿಸುತ್ತಿದ್ದರೆ, ಮೂಲ ಸ್ಥಳದಲ್ಲೇ ಮರುನಿರ್ಮಿಸಬೇಕು ಎಂದು ಹಿಂದೂ ಸಂಘಟನೆಗಳು ಪಟ್ಟು ಹಿಡಿದಿದ್ದವು. ಹಲವು ಬಾರಿ ಮನವಿ ಮಾಡಿದರೂ ಇಲಾಖೆಯು ಮರು ನಿರ್ಮಾಣ ಮಾಡದ ಹಿನ್ನೆಲೆಯಲ್ಲಿ, ಭಾನುವಾರ ಬೆಳಗ್ಗೆ ಹಿಂದೂ ಸಂಘಟನೆಯ ನೂರಾರು ಕಾರ್ಯಕರ್ತರು ಒಟ್ಟಾಗಿ ಕಟ್ಟೆಯನ್ನು ಮರು ನಿರ್ಮಿಸಿದ್ದರು.

→ 4

ಏನಿದು ಮುರಿನ ಕಟ್ಟೆ?

ಭಟ್ಕಳ ನಗರದ ಜಾಗಟೆ ಕಟ್ಟೆಯ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನೂರಾರು ವರ್ಷಗಳಿಂದ ಮೂರಿನ ಕಟ್ಟೆಯಿತ್ತು. ಶಿರಸಿ ಮಾರಿಕಾಂಬೆಗೆ ಭಕ್ತರು ನೀಡುವ ಹೊರೆ ಕಾಣಿಕೆಯನ್ನು ಆಯಾ ಗ್ರಾಮದ ಜನರು ಇಲ್ಲಿ ಇರಿಸಿ ಮುಂದಿನ ಗ್ರಾಮಕ್ಕೆ ಸಾಗಿಸುತ್ತಾರೆ. ಯಾವ ಗ್ರಾಮದಲ್ಲಿ ಹೊರೆ ಕಾಣಿಕೆ ಇರಿಸುತ್ತಾರೋ ಆ ಸ್ಥಳಕ್ಕೆ ಮೂರಿನ ಕಟ್ಟೆ ಎನ್ನುತ್ತಾರೆ.

ವಿವಾದ ಏನು?

ಹೆದ್ದಾರಿ ಅಗಲೀಕರಣ ಸಂದರ್ಭದಲ್ಲಿ ಪಕ್ಕದಲ್ಲಿದ್ದ ಮುರಿನಕಟ್ಟೆ ಸ್ಥಳಾಂತರ ಮಾಡಲು ಆದೇಶ ನೀಡಲಾಗಿತ್ತು. ಹಿಂದೂ ಕಾರ್ಯಕರ್ತರ ಹೋರಾಟದ ಬಳಿಕ ಹೆದ್ದಾರಿ ಅಧಿಕಾರಿಗಳೇ ಹೊಸ ಕಟ್ಟೆ ಕಟ್ಟಲು ಪಕ್ಕದಲ್ಲಿ ಜಾಗ ಗುರುತಿಸಿ ಕೊಟ್ಟಿದ್ದರು. ಇಲ್ಲಿ ಹೊಸದಾಗಿ ಕಟ್ಟೆಯನ್ನು ನಿರ್ಮಾಣ ಮಾಡಲಾಗಿತ್ತು. ಮುಸ್ಲಿಂ ಯುವಕನೋರ್ವ ಕಟ್ಟೆಯ ವಿಡಿಯೊವನ್ನು ವೈರಲ್ ಮಾಡಿದ್ದರಿಂದ, ನೂರಾರು ಜನರು ಕಟ್ಟೆಯ ಹತ್ತಿರ ಜಮಾವಣೆಗೊಂಡು ಪರ್ಯಾಯ ಕಟ್ಟೆಗೆ ಹಾನಿ ಮಾಡಿದ್ದಾರೆ. ಆದರೆ ಮೂರಿನಕಟ್ಟೆ ಕೆಡವಲಾಗಿದೆ ಎನ್ನುವುದು ಸುಳ್ಳು ಸುದ್ದಿ ಎಂದು ಎಸ್.ಪಿ. ದೀಪನ್ ತಿಳಿಸಿದ್ದಾರೆ. ಗದ್ದಲದ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳ ಮೇಲೂ ನೂಕಾಟ, ತಳ್ಳಾಟ ನಡೆದಿದೆ. ತಡರಾತ್ರಿ ಮತ್ತೆ ಕಟ್ಟೆಯನ್ನು ಕಟ್ಟಲು ಬಂದಿದ್ದ ಹಿಂದೂ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆಯಲಾಗಿದೆ.

ಶತಾವಧಾನಿ ಗಣೇಶ್ ಪದ್ಮಭೂಷಣ

ದೆಹಲಿ: 2026ನೇ ಸಾಲಿನಲ್ಲಿ ಘೋಷಿಸಲಾಗಿದ್ದ 131 ಪದ್ಮ ಪ್ರಶಸ್ತಿಗಳ ಪೈಕಿ 66 ಪದ್ಮ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಸಂಜೆ ಪ್ರದಾನ ಮಾಡಿದರು. ಸಂಸ್ಕೃತ ಮತ್ತು ಬಹುಭಾಷಾ ಕ್ಷೇತ್ರದಲ್ಲಿನ ಸಾಧನೆಗಾಗಿ ಶತಾವಧಾನಿ ಗಣೇಶ್ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು. ಉಳಿದಂತೆ ಮಂಡ್ಯ ಜಿಲ್ಲೆಯವರಾದ 'ಪುಸ್ತಕ ಮನೆ' ಸಂಸ್ಥಾಪಕ ಅಂಕೇಗೌಡ ಮತ್ತು ಬೆಂಗಳೂರಿನ ಹೆಸರಾಂತ ಸಮಾಜಸೇವಕಿ, ಸುಮಂಗಲಿ ಸೇವಾ ಆಶ್ರಮದ ಸಾಧಕಿ ಎಸ್.ಜಿ.ಸುಶೀಲಮ್ಮ ಅವರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದರು. ಈ ಬಾರಿ ಕರ್ನಾಟಕಕ್ಕೆ ಪದ್ಮಭೂಷಣ ಸೇರಿ ಒಟ್ಟು 8 ಮಂದಿಗೆ ಪದ್ಮ ಪ್ರಶಸ್ತಿಗಳು ಘೋಷಣೆ ಆಗಿವೆ.

ಶಿಕ್ಷಣ ತಜ್ಞ ಡಾ.ಪ್ರಭಾಕರ ಕೋರೆ, ಸಮಾಜ ಸೇವಾ ಕ್ಷೇತ್ರದ ಶಶಿಶೇಖರ್ ವೇಂಪಟಿ, ಬಾಹ್ಯಾಕಾಶ ವಿಜ್ಞಾನಿ ಶುಭ ವೆಂಕಟೇಶ ಅಯ್ಯಂಗಾರ್, ಕರ್ನಾಟಕ ಹೆಮೊಫಿಲಿಯ ಸೊಸೈಟಿ ಸಂಸ್ಥಾಪಕ, ಡಾ.ಸುರೇಶ್ ಹನಗವಾಡಿ ಮತ್ತು ಉದ್ಯಮಿ ಟಿಟಿ ಜಗನ್ನಾಥನ್ (ಮರಣೋತ್ತರ) ಅವರಿಗೆ 2ನೇ ಹಂತದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ.

47 ಲಕ್ಷ ರು. ಮೌಲ್ಯದ ಬಿಟ್‌ಕಾಯಿನ್ ಜಪ್ತಿ

ಬೆಂಗಳೂರು: ದೇಶಾದ್ಯಂತ ಭಾರೀ ಸಂಚಲನ ಮೂಡಿಸಿರುವ ಬಹುಕೋಟಿ ಬಿಟ್‌ಕಾಯಿನ್ ಹಗರಣ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು, ಮೂವರು ಪ್ರಮುಖ ಆರೋಪಿಗಳಿಂದ ಲಕ್ಷಾಂತರ ರುಪಾಯಿ ಮೌಲ್ಯದ ಬಿಟ್‌ಕಾಯಿನ್ ಹಾಗೂ ಡಿಜಿಟಲ್ ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಟ್‌ಕಾಯಿನ್ ಪ್ರಕರಣದ ಪ್ರಮುಖ ಆರೋಪಿಗಳಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ರಾಬಿನ್ ಖಂಡೇವಾಲ ಮತ್ತು ಸುನೀಶ್ ಹೆಗ್ಡೆ ಎಂಬುವವರಿಂದ ಸುಮಾರು 50 ಸಾವಿರ ಯುಎಸ್‌ಡಿಟಿ ಮೌಲ್ಯದ ಬಿಟ್‌ಕಾಯಿನ್ ಅನ್ನು ಇ.ಡಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಇದರ ಭಾರತೀಯ ಕರೆನ್ಸಿ ಮೌಲ್ಯ ಸುಮಾರು 47,66,275 ರು.ಗಳಾಗಿದೆ ಎಂದು ಅಂದಾಜಿಸಲಾಗಿದೆ. ಬಿಟ್‌ಕಾಯಿನ್ ಮಾತ್ರವಲ್ಲದೆ, ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮೂರು ಲ್ಯಾಪ್‌ಟಾಪ್ ಹಾಗೂ 3 ಮೊಬೈಲ್ ಫೋನ್‌ಗಳನ್ನು ಸಹ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಎಡಿಎಂಕೆಯ ಮೂವರು ಶಾಸಕರ ರಾಜೀನಾಮೆ, ಟಿವಿಕೆ ಪಕ್ಷಕ್ಕೆ ಸೇರ್ಪಡೆ

ಚೆನ್ನೈ: ಇತ್ತೀಚಿನ ಚುನಾವಣಾ ಸೋಲಿನ ನಂತರ ಆಂತರಿಕ ಬಿಕ್ಕಟಿನಿಂದ ಬಳಲುತ್ತಿರುವ ಎಐಎಡಿಎಂಕೆಗೆ ಮತ್ತೊಂದು ಹೊಡೆತ ಬಿದ್ದಿದೆ. ಪಕ್ಷದ ಮೂವರು ಶಾಸಕರು ಸೋಮವಾರ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿ ವಿಜಯ್ ನೇತೃತ್ವದ ಟಿವಿಕೆಗೆ ಸೇರ್ಪಡೆಯಾಗಿದ್ದಾರೆ. ಶಾಸಕರಾದ ಮರಗತಮ್ ಕುಮಾರವೇಲ್, ಜಯಕುಮಾರ್ ಮತ್ತು ಸತ್ಯಭಾಮ ಅವರು ಸಲ್ಲಿಸಿದ ರಾಜೀನಾಮೆ ಪತ್ರಗಳನ್ನು ತಮಿಳುನಾಡು ವಿಧಾನಸಭಾ ಸ್ಪೀಕರ್ ಜೆಸಿಡಿ ಪ್ರಭಾಕರ್ ಅಂಗೀಕರಿಸಿದ್ದಾರೆ. ಎಐಎಡಿಎಂಕೆ ಪಕ್ಷದ ಹಿರಿಯ ನಾಯಕ ಸಿವಿ ಷಣ್ಮುಗಂ ನೇತೃತ್ವದಲ್ಲಿ 30 ಶಾಸಕರು ವಿಜಯ್ ಅವರ ಟಿವಿಕೆ ಸರಕಾರಕ್ಕೆ ಬೆಂಬಲ ನೀಡಿದ ಎರಡು ವಾರಗಳ ನಂತರ ಈ ಬೆಳವಣಿಗೆ ನಡೆದಿದೆ. ಮೂವರು ಶಾಸಕರು ರಾಜೀನಾಮೆ ನೀಡಿ ಐವರು ಶಾಸಕರು ಪಳನಿಸ್ವಾಮಿ ಬಣಕ್ಕೆ ಮರಳಿರುವುದರಿಂದ ಬಂಡಾಯ ಬಣದ ಬಲ ಈಗ 25ರಿಂದ 17 ಕ್ಕೆ ಇಳಿದಿದೆ.

ಭಟ್ಕಳ ದುರಂತ: ಮೃತರ ಸಂಖ್ಯೆ 11ಕ್ಕೆ ಏರಿಕೆ

ಭಟ್ಕಳ: ವೆಂಕಟಾಪುರ ನದಿಯಲ್ಲಿ ತಟ್ಟಿಹಕ್ಕಲಿನ ಸಮೀಪ ಕಪ್ಪೆಚಿಪ್ಪು ಆರಿಸಲು ಹೋಗಿ ನೀರುಪಾಲಾಗಿದ್ದ ಮಾದೇವ ನಾಯ್ಕ ಅವರ ಮೃತ ದೇಹ ಪತ್ತೆಯಾಗಿದ್ದು ಮೃತರ ಸಂಖ್ಯೆ 11ಕ್ಕೇರಿದೆ. ಭಾನುವಾರ ಬೆಳಗ್ಗೆ ಶಿರಾಲಿ ಸಾರದ ಹೊಳೆಯ ಒಂದೇ ಕುಟುಂಬದವರು, ಅಕ್ಕ ಪಕ್ಕದ ಮನೆಯವರು ಸೇರಿ ಒಟ್ಟೂ 14 ಜನರು ವೆಂಕಟಾಪುರ ನದಿಗೆ ಕಪ್ಪೆಚಿಪ್ಪು ಆರಿಸಿ ತರಲು ಹೋಗಿದ್ದರು. ಮೃತಪಟ್ಟವರ ಶವಗಳ ಸಾಮೂಹಿಕ ಅಂತ್ಯಸಂಸ್ಕಾರ ಸೋಮವಾರ ಭಾವುಕ ವಾತಾವರಣದಲ್ಲಿ ನೆರವೇರಿತು. ಗ್ರಾಮದಲ್ಲಿ ಎಲ್ಲೆಡೆ ಶೋಕದ ಛಾಯೆ ಆವರಿಸಿತ್ತು.

ಫನ್‌ತರಂಗ

- ರಘುಪತಿ ಶೃಂಗೇರಿ -

ಹೈಕಮಾಂಡ್ ಜೊತೆ ಸಿಎಂ ಸಭೆ ಸಂಪುಟ ಪುನರ್ರಚನೆ ಪ್ರಸ್ತಾಪಕ್ಕೆ ಪಟ್ಟೆ ಸಿದ್ದ



ಪೆಟ್ರೋಲ್, ಡೀಸೆಲ್ ಬೆಲೆ ನಾಲ್ಕನೇ ಬಾರಿ ಏರುಮುಖ

ಪೆಟ್ರೋಲ್ 2.61, ಡೀಸೆಲ್ 2.71ರು. ಹೆಚ್ಚಳ

ದೆಹಲಿ: ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಮತ್ತೆ ಏರಿಕೆಯಾಗಿದ್ದು, ಸೋಮವಾರ ಬೆಳಗ್ಗಿನಿಂದಲೇ ಪೆಟ್ರೋಲ್ ಬೆಲೆ ಲೀಟರ್‌ಗೆ 2.61 ಹಾಗೂ ಡೀಸೆಲ್‌ಗೆ 2.71 ಹೆಚ್ಚಳ ಮಾಡಲಾಗಿದೆ. ಐದು ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾದ ಬಳಿಕ ಕಳೆದ ಎರಡು ವಾರಗಳಲ್ಲಿ ತೈಲ ಕಂಪನಿಗಳು ನಾಲ್ಕನೇ ಬಾರಿ ದರ ಏರಿಸಿವೆ. ಮೇ15ರಿಂದ ಇಂಧನ ದರ ಪರಿಷ್ಕರಣೆ ಆರಂಭವಾದ ನಂತರ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಒಟ್ಟಾರೆ ಪ್ರತಿ ಲೀಟರ್‌ಗೆ ಸುಮಾರು 8 ರು. ಏರಿಕೆಯಾಗಿದೆ. ಇದರಿಂದ ಅಗತ್ಯ ವಸ್ತುಗಳ ಹಾಗೂ ಸಾರಿಗೆ ವೆಚ್ಚ ಹೆಚ್ಚಳದ ಆತಂಕ ಮೂಡಿದೆ.

ಪರಿಷ್ಕೃತ ದರದಂತೆ ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ ₹99.51ರಿಂದ ₹102.12ಕ್ಕೆ ಏರಿಕೆಯಾಗಿದೆ. ಡೀಸೆಲ್ ದರ ₹92.49ರಿಂದ ₹95.20ಕ್ಕೆ ಹೆಚ್ಚಳವಾಗಿದೆ. ಮುಂಬೈನಲ್ಲಿ ಲೀಟರ್ ಪೆಟ್ರೋಲ್ ದರವು ₹111.21 ಹಾಗೂ ಡೀಸೆಲ್ ದರವು ₹97.83 ಆಗಿದೆ. ಕೋಲ್ಕತ್ತದಲ್ಲಿ ಕ್ರಮವಾಗಿ ₹113.51 ಹಾಗೂ ₹99.82 ಮತ್ತು ಚೆನ್ನೈಯಲ್ಲಿ ₹107.77 ಹಾಗೂ ₹99.55ಕ್ಕೆ ಏರಿಕೆಯಾಗಿದೆ.

ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿ ನಡೆಸಿದ ಬಳಿಕ ಜಾಗತಿಕ ಹಡಗು ಸಂಚಾರ ಮಾರ್ಗವಾದ ಹೊರ್ಮುಜ್ ಜಲಸಂಧಿ ಮುಚ್ಚಿದ್ದರಿಂದ ಇಂಧನ ಪೂರೈಕೆ ಸರಪಳಿಗೆ ಅಡಚಣೆಯಾಗಿದೆ. ಇದರಿಂದ ಜಾಗತಿಕ ಕಚ್ಚಾ ತೈಲ ಬೆಲೆಗಳು ಶೇ 50ರಷ್ಟು ಏರಿಕೆಯಾಗಿದೆ. ಕಚ್ಚಾ ತೈಲದ ಬೆಲೆ ಏರಿಕೆ, ರಿಫೈನಿಂಗ್ ವೆಚ್ಚದ ಹೆಚ್ಚಳ ಹಾಗೂ ರೂಪಾಯಿ ಮೌಲ್ಯ ಕುಸಿತದಿಂದ ಆಮದು ವೆಚ್ಚ ಏರಿಕೆಯಾಗಿರುವುದು ಬೆಲೆ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ತೈಲ ಕಂಪನಿಯ ಮೂಲಗಳು ತಿಳಿಸಿವೆ.

ಮೇ 15ರಂದು ಪೆಟ್ರೋಲ್ ಮತ್ತು ಡೀಸೆಲ್ ಎರಡಕ್ಕೂ ಲೀಟರ್‌ಗೆ 3ರು. ಹೆಚ್ಚಳ ಮಾಡಲಾಗಿತ್ತು. ಮೇ 19ರಂದು ಲೀಟರ್‌ಗೆ 90 ಪೈಸೆ ಹೆಚ್ಚಿಸಲಾಗಿತ್ತು. ಮೇ 24ರಂದು ಪೆಟ್ರೋಲ್‌ಗೆ 87 ಪೈಸೆ ಮತ್ತು ಡೀಸೆಲ್‌ಗೆ 91 ಪೈಸೆ ಹೆಚ್ಚಳ ಮಾಡಲಾಗಿತ್ತು.

ಬೆಂಗಳೂರಿನ ದರ

ದಿನಾಂಕ	ತೈಲ	ದರ
14/5/2026	ಪೆಟ್ರೋಲ್	102.96
	ಡೀಸೆಲ್	90.99
25/5/2026	ಪೆಟ್ರೋಲ್	110.93
	ಡೀಸೆಲ್	98.80
ಒಟ್ಟು ಏರಿಕೆ ಪ್ರಮಾಣ	ಪೆಟ್ರೋಲ್	7.97
	ಡೀಸೆಲ್	7.81

ಮೇ 30ಕ್ಕೆ ರಾಜ್ಯಾದ್ಯಂತ ಕೈ ಪ್ರತಿಭಟನೆ

ಬೆಲೆ ಏರಿಕೆ ಖಂಡಿಸಿ ಕೇಂದ್ರದ ವಿರುದ್ಧ ತಾಲ್ಲೂಕು, ಜಿಲ್ಲಾ ಕೇಂದ್ರಗಳಲ್ಲಿ ಧರಣಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ 11 ದಿನದಲ್ಲಿ ನಾಲ್ಕು ಬಾರಿ ಇಂಧನ ದರ ಏರಿಸಿರುವ ಕೇಂದ್ರ ಬಿಜೆಪಿ ಸರಕಾರದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಕಾಂಗ್ರೆಸ್ ಸಜ್ಜಾಗಿದೆ.

ದೇವನಹಳ್ಳಿಯ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ನಡೆದ ಸಭೆಯಲ್ಲಿ, ಈ ಬಗ್ಗೆ ಚರ್ಚಿಸಿರುವ ನಾಯಕರು ರಾಜ್ಯಾದ್ಯಂತ ಬಿಜೆಪಿ ಸರಕಾರದ ಈ ಧೋರಣೆಯನ್ನು ಖಂಡಿಸಿ ಪ್ರತಿಭಟನೆ ನಡೆಸುವ ಮೂಲಕ ಜನಾಕ್ರೋಶ ರೂಪಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ.

ಮೇ30ರಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಸಲು ಸ್ಥಳೀಯ ನಾಯಕರಿಗೆ ಸೂಚನೆ ನೀಡಲಾಗಿದೆ. ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ಧ ದರ ಏರಿಕೆಯ ಆರೋಪ ಮಾಡುತ್ತಿರುವ ಬಿಜೆಪಿಗೆ ತಿರುಗೇಟು ನೀಡಲು ಇಂಧನ ದರ ಏರಿಕೆಯನ್ನು ಬಳಸಿಕೊಳ್ಳಲು ನಾಯಕರು ತೀರ್ಮಾನಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಸಚಿವ ಕೆ.ಎಚ್. ಮುನಿಯಪ್ಪ, ಕೇಂದ್ರ ಬಿಜೆಪಿ ಸರಕಾರವು ಎಸ್‌ಐಆರ್ ಪರಿಶೀಲನೆಯ ಮೂಲಕ ಸಾರ್ವಜನಿಕರ ಹೆಸರನ್ನು ಕೈಬಿಡುವ ಮೂಲಕ ಪ್ರಜಾಪ್ರಭುತ್ವ ಕಗ್ಗೊಲೆ ಮಾಡುತ್ತಿದೆ. ಇದು ಸಂವಿಧಾನಕ್ಕೆ ಮಾಡುತ್ತಿರುವ ದ್ರೋಹ. ಇದರೊಂದಿಗೆ ಇಂಧನ ದರವನ್ನು 11 ದಿನ ಅಂತರದಲ್ಲಿ ನಾಲ್ಕು ಬಾರಿ ಏರಿಸಿದೆ. ಈ ಜನ ವಿರೋಧಿ ನಡೆಗಳ ವಿರುದ್ಧ ಮೇ 30ರಂದು ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಬೃಹತ್ ಪ್ರತಿಭಟನೆ ನಡೆಸಲಾಗುವುದು. ಜಿಲ್ಲಾ ಕೇಂದ್ರದಲ್ಲಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರು ಭಾಗವಹಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರಕಾರ ಬರುತ್ತದೆ. ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಕಳೆದ 11 ದಿನಗಳಿಂದ 4 ಬಾರಿ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ದರ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110 .93 ರು.ಗಳಾಗಿವೆ. ಡೀಸೆಲ್ ದರ 98.89 ರು.ಗಳಾಗಿವೆ. ಎರಡು ವಾರದಲ್ಲಿ 8ರು. ಗಳಷ್ಟು ಬೆಲೆ ಏರಿಕೆಯಾಗಿದೆ. ಪ್ರಧಾನಿ ಮೋದಿಯವರು ದೇಶವನ್ನು ಲೂಟಿ ಮಾಡುತ್ತಿರುವುದು ರುಜುವಾತಾಗುತ್ತಿದೆ.
-ಸಿದ್ದರಾಮಯ್ಯ, ಮುಖ್ಯಮಂತ್ರಿ

ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆಯಿದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರಕಾರ ನಿತ್ಯ ಒಂದು ಸಾವಿರ ಕೋಟಿ ರು. ಸಂಗ್ರಹಿಸುತ್ತಿದೆ. ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಬೆಲೆ ಏರಿಕೆಯಾಗಿಲ್ಲ. ಜನಸಾಮಾನ್ಯರ ಮೇಲೆ ಪರಿಣಾಮ ಬೀರಿದೆ.
- ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರಕಾರ ಇಂಧನ ಮತ್ತು ತೆರಿಗೆಗಳ ಮೂಲಕ ಬರೋಬ್ಬರಿ 57 ಲಕ್ಷ ಕೋಟಿ ರು.ಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿದೆ. ಸದ್ಯ ಆರ್‌ಬಿಐನಲ್ಲೇ 14 ಲಕ್ಷ ಕೋಟಿ ರುಪಾಯಿ ಹಣವಿದೆ. ದೇಶದ ಸಣ್ಣ ವ್ಯಾಪಾರಿಗಳು, ನೌಕರರು ಮತ್ತು ರೈತರಿಂದ ಪ್ರತಿದಿನ ಅಂದಾಜು 1,000 ಕೋಟಿ ರು.ಗಳನ್ನು ಲೂಟಿ ಮಾಡಲಾಗುತ್ತಿದೆ. ಕೇವಲ ಇಂಧನ ಮಾತ್ರವಲ್ಲದೆ, ಅಡುಗೆ ಅನಿಲ ಮತ್ತು ಸಿಎನ್‌ಜಿ ಬೆಲೆಯನ್ನೂ ಗಗನಕ್ಕೇರಿಸುವ ಮೂಲಕ ಕೇಂದ್ರ ಸರಕಾರ ಜನಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ.
- ರಣದೀಪ್ ಸಿಂಗ್ ಸುರ್ಜೇವಾಲ, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಕೇಂದ್ರದ ನಡೆ ವಿರುದ್ಧ ವಾಗ್ದಾಳಿ: ದರ ಏರಿಕೆ ಖಂಡಿಸಿ ಕೆಪಿಸಿಸಿ ಕಚೇರಿಯಲ್ಲಿ ನಡೆದ ಜಂಟಿ ಸುದ್ದಿಗೋಷ್ಠಿಯಲ್ಲಿ, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜಂಟಿ ಸುದ್ದಿಗೋಷ್ಠಿ ನಡೆಸಿ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದರು. 12 ವರ್ಷಗಳಲ್ಲಿ ಮೋದಿ ಸರಕಾರ 57 ಲಕ್ಷ ಕೋಟಿ ರು. ಲೂಟಿ ಮಾಡಿದೆ. ಪ್ರತಿದಿನದ ಇಂಧನ ಲೂಟಿಯಿಂದ ಸಾಮಾನ್ಯ ಜನರ ಜೇಬನ್ನು ಬಿಜೆಪಿ ಸರಕಾರ ಪಿಕ್‌ಪಾಕೆಟ್ ಮಾಡುತ್ತಿದೆ ಎಂದು ವಾಗ್ದಾಳಿ ನಡೆಸಿದರು.

ಸಿಗರೇಟ್ ಹೊಗೆ ವಿಚಾರಕ್ಕೆ ಆಟೋ ಚಾಲಕನ ಕೊಲೆ

ಬೆಂಗಳೂರು: ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಗಲಾಟೆಯೊಂದು ಹತ್ಯೆಯಲ್ಲಿ ಅಂತ್ಯವಾಗಿರುವ ಘಟನೆ ಭಾನುವಾರ ತಡರಾತ್ರಿ ಅಬ್ಬಿಗೆರೆ ಮುಖ್ಯರಸ್ತೆಯಲ್ಲಿ ನಡೆದಿದೆ.

ಸಿಗರೇಟ್ ಹೊಗೆ ಬಿಟ್ಟ ವಿಚಾರಕ್ಕೆ ಶುರುವಾದ ಜಗಳದಲ್ಲಿ ಆಟೋ ಚಾಲಕನೋರ್ವನನ್ನು ಡ್ರ್ಯಾಗರ್‌ನಿಂದ ಇರಿದು ಭೀಕರವಾಗಿ ಹತ್ಯೆಗೈಯ್ಯಲಾಗಿದೆ. ಬಾಗಲೂರಿನ ರಾಜಾ ಸಾಬ್ ಪಾಳ್ಯದ ನಿವಾಸಿ ಸೈಯದ್ ಶಫೀ (36) ಹತ್ಯೆಯಾದ ಆಟೋ ಚಾಲಕ. ಘಟನೆಗೆ ಸಂಬಂಧಿಸಿದಂತೆ ಆರೋಪಿ ದರ್ಶನ್ ಎಂಬಾತನನ್ನು ಚಿಕ್ಕಬಾಣಾವರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭಾನುವಾರ ರಾತ್ರಿ 11:30ರ ಸಮಯಕ್ಕೆ ಅಬ್ಬಿಗೆರೆ ಮುಖ್ಯರಸ್ತೆಯ ಮೀನಾ ಬಾರ್ ಬಳಿ ಬಂದಿದ್ದ ಶಫಿ ಮದ್ಯ ಖರೀದಿಸಿದ್ದ. ಬಾರ್ ಮುಚ್ಚುವ ಸಮಯವಾದ್ದರಿಂದ ಮುಂಭಾಗದಲ್ಲೇ ಆಟೋ ನಿಲ್ಲಿಸಿ ಗೆಳೆಯನೊಂದಿಗೆ ಮದ್ಯಪಾನ ಮಾಡುತ್ತಿದ್ದ. ಅದೇ ಸಂದರ್ಭದಲ್ಲಿ ಆರೋಪಿ ದರ್ಶನ್ ಸಹ ಆತನ ಸ್ನೇಹಿತರೊಂದಿಗೆ ಬಾರ್‌ನಿಂದ ಹೊರಬಂದಿದ್ದ. ಬಳಿಕ ಶಫಿಯ ಆಟೋ ಪಕ್ಕದಲ್ಲೇ ನಿಂತು ಸಿಗರೇಟ್ ಸೇದುತ್ತ, ಮೂತ್ರ ವಿಸರ್ಜನೆ ಮಾಡುತ್ತಾ ನಿಂತಿದ್ದ. ಸಿಗರೇಟ್ ಹೊಗೆ ತನ್ನತ್ತ ಬಂದಿದ್ದರಿಂದ ಆರೋಪಿಯತ್ತ ತಿರುಗಿ ಗುರಾಯಿಸಿದ್ದ. ಇದರಿಂದ ದರ್ಶನ್ ಹಾಗೂ ಶಫಿ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆ ತಾರಕಕ್ಕೇರಿದೆ. ಸಿಟ್ಟಿಗೆದ್ದ ದರ್ಶನ್ ತನ್ನ ಬಳಿ ಇದ್ದ ಡ್ರ್ಯಾಗರ್‌ನಿಂದ ಶಫಿಯ ಕುತ್ತಿಗೆಗೆ ಮನಬಂದಂತೆ ಇರಿದಿದ್ದಾನೆ. ತೀವ್ರ ರಕ್ತಸ್ರಾವದಿಂದಾಗಿ ಶಫಿ ರಸ್ತೆಯಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ ಚಿಕ್ಕಬಾಣಾವರ ಠಾಣೆ ಪೊಲೀಸರು ಆರೋಪಿ ದರ್ಶನ್‌ನನ್ನು ಬಂಧಿಸಿದ್ದಾರೆ. ದರ್ಶನ್ ವಿರುದ್ಧ 2023ರಲ್ಲಿ ಹಲ್ಲೆ ಪ್ರಕರಣವೊಂದು ದಾಖಲಾಗಿರುವುದು ಬೆಳಕಿಗೆ ಬಂದಿದ್ದು, ತನಿಖೆ ನಡೆಸಲಾಗುತ್ತಿದೆ. ಕೊಲೆಯಾದ ಶಫಿ ಯಶವಂತಪುರದ ಗ್ಯಾರೇಜ್ ಒಂದರಲ್ಲಿ ಕಳೆದ 15 ವರ್ಷಗಳಿಂದ ಟಿಂಕರಿಂಗ್ ಕೆಲಸ ಮಾಡಿಕೊಂಡಿದ್ದ. ಜತೆಗೆ ಬಿಡುವಿನ ಅವಧಿಯಲ್ಲಿ ಆಟೋ ಓಡಿಸುತ್ತಿದ್ದ. ಮೃತನಿಗೆ ಪತ್ನಿ ಹಾಗೂ ಇಬ್ಬರು ಮಕ್ಕಳಿದ್ದಾರೆ. ಆದರೆ ಶಫಿ ಕುಡಿದು ಬಂದು ಗಲಾಟೆ ಮಾಡುತ್ತಿದ್ದರಿಂದ ಬೇಸತ್ತಿದ್ದ ಪತ್ನಿ, ಕಳೆದ ಆರು ತಿಂಗಳಿನಿಂದ ಆತನನ್ನು ಮನೆಗೆ ಸೇರಿಸಿರಲಿಲ್ಲ. ಆತ ಎಲ್ಲಿದ್ದ, ಏನು ಮಾಡುತಿದ್ದ ಎಂಬ ಮಾಹಿತಿ ಕುಟುಂಬಸ್ಥರಿಗೆ ಇರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಗರ್ಭಿಣಿಯ ವಿಡಿಯೊ ಚಿತ್ರೀಕರಣ: ಎಫ್‌ಐಆರ್

ಬೆಂಗಳೂರು: ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯೊಂದರ ಶೌಚಾಲಯದಲ್ಲಿ ಗರ್ಭಿಣಿ ಮಹಿಳೆಯೊಬ್ಬರ ಫೋಟೋ/ವಿಡಿಯೊ ಚಿತ್ರೀಕರಿಸಲು ಯತ್ನಿಸಿದ ಆರೋಪ ಕೇಳಿಬಂದಿದೆ. ನೊಂದ ಮಹಿಳೆ ನೀಡಿದ ದೂರಿನನ್ವಯ ಆರೋಪಿತ ಹೌಸ್‌ಕೀಪಿಂಗ್ ಸಿಬ್ಬಂದಿ ಕೃಷ್ಣ ರಾಮ್ ಪಾಂಗಿಂಗ್ ಮತ್ತು ಆಸ್ಪತ್ರೆ ಆಡಳಿತ ಮಂಡಳಿ ವಿರುದ್ಧ ವರ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ವೇಳೆ ಆಸ್ಪತ್ರೆಯ ಶೌಚಾಲಯ ಬಳಸುತ್ತಿದ್ದಾಗ, ಅಲ್ಲಿನ ಹೌಸ್‌ಕೀಪಿಂಗ್ ಸಿಬ್ಬಂದಿ ಕೃಷ್ಣ ರಾಮ್ ಪಾಂಗಿಂಗ್ ಎಂಬಾತ ಸಂಶಯಾಸ್ಪದವಾಗಿ ವರ್ತಿಸುತ್ತಿರುವುದು ಅವರ ಗಮನಕ್ಕೆ ಬಂದಿತ್ತು. ಮೊಬೈಲ್ ಫೋನ್ ಬಳಸಿ ಶೌಚಾಲಯದ ಒಳಗಿನ ದೃಶ್ಯಗಳನ್ನು ಚಿತ್ರೀಕರಣ ಮಾಡುತ್ತಿರುವುದನ್ನು ಗಮನಿಸಿ ಆತನನ್ನು ಪ್ರಶ್ನಿಸಿದ್ದರು.

Tracxn

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್

CIN: L72200KA2012PLC065294

ನೋಂ. ಕಚೇರಿ: ನಂ. ಎಲ್–248, 2ನೇ ಮಹಡಿ, 17ನೇ ಕ್ರಾಸ್, ಸೆಕ್ಟರ್ 6, ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು, ಕರ್ನಾಟಕ–560102, ದೂ: +91 90360 90116,
ಇ-ಮೇಲ್: investor.relations@tracxn.com, ವೆಬ್‌ಸೈಟ್: www.tracxn.com

ಮಾರ್ಚ್ 31, 2026ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕವಾಗಿ ಅಂತ್ಯಗೊಂಡ ಪರಿಶೋಧಿತ ಆರ್ಥಿಕ ಫಲಿತಾಂಶಗಳ ಹೇಳಿಕೆಗಳು

ಕಂಪನಿಯ ನಿರ್ದೇಶಕ ಮಂಡಳಿಯು ಮೇ 25, 2026 ರಂದು ನಡೆದ ತಮ್ಮ ಸಭೆಯಲ್ಲಿ ಮಾರ್ಚ್ 31, 2026 ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಅಂತ್ಯಗೊಂಡ ಪರಿಶೋಧಿತ ಹಣಕಾಸು ಫಲಿತಾಂಶಗಳನ್ನು ಅನುಮೋದಿಸಿದೆ.

ಹೇಳಲಾದ ಹಣಕಾಸು ಫಲಿತಾಂಶಗಳ ಸಂಪೂರ್ಣ ವಿವರ ಮತ್ತು ಲೆಕ್ಕಪರಿಶೋಧಕರ ವರದಿಯು ಜೊತೆಗೆ ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್‌ಗಳಾದ https://www.bseindia.com / https://www.nseindia.com/ ನಲ್ಲಿ ಲಭ್ಯವಿರುತ್ತದೆ ಮತ್ತು ಕಂಪನಿಯ ವೆಬ್‌ಸೈಟ್ https://w.tracxn.com/investor-relations/quarterly-results ರಲ್ಲಿ ಸಹ ಪೋಸ್ಟ್ ಮಾಡಲಾಗಿದ್ದು, ಇಲ್ಲಿ ನೀಡಲಾದ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಡಬಹುದು.

ಟ್ರಾಕ್ಸನ್ ಟೆಕ್ನಾಲಜೀಸ್ ಲಿಮಿಟೆಡ್ ಪರವಾಗಿ
ಸಹಿ/–
ನೇಹಾ ಸಿಂಗ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಅಧ್ಯಕ್ಷರು
(ಡಿಐಎನ್ : 05331824)

ಸ್ಥಳ: ಬೆಂಗಳೂರು
ದಿನಾಂಕ: ಮೇ 25, 2026

ಟಿಪ್ಪಣಿ : ಮೇಲಿನ ಸೂಚನೆಯು ನಿಯಂತ್ರಣ 33 ನ್ನು ಓದಿಕೊಂಡಂತೆ ಜೊತೆಗೆ ನಿಯಂತ್ರಣ 47(1) ರ ಸೆಬಿ (ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್) ನಿಯಂತ್ರಣ, 2015 ರಂತೆ

ಅನುಬಂಧ IV-ಎ

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಮಾರಾಟದ ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6)ರ ನಿಬಂಧನೆಗೊಂದಿಗೆ ಓದಲಾಗುವ ಸೆಕ್ಯುರೈಟೇಶನ್ ಆ್ಯಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಶಿಯಲ್ ಅಸೆಟ್ಸ್ ಆ್ಯಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ, 2002ರಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟದ ಸಲುವಾಗಿ ಇ–ಹರಾಜು ಮಾರಾಟ ಸೂಚನೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರು (ಗಳು) ಮತ್ತು ಗ್ಯಾರಂಟರ (ಗಳು) ರಿಗೆ ಸೂಚನೆ ನೀಡುವುದೇನೆಂದರೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)(CIN : L65922DL2005PLC136029)** (''**ಸೆಕ್ಯೂರ್ಡ್ ಕ್ರೆಡಿಟರ್**'') ಇವರಿಗೆ ಮಾರ್ಟ್‌ಗೇಜ್ ಮಾಡಲಾದ / ಚಾರ್ಜ್ ಮಾಡಲಾದ ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿ(ಗಳು)ಯ **ಭೌತಿಕ ಸ್ವಾಧೀನತೆಯನ್ನು** ಸೆಕ್ಯೂರ್ಡ್ ಕ್ರೆಡಿಟರರ ಅಧಿಕೃತ ಅಧಿಕಾರಿಯವರು ಪಡೆದುಕೊಂಡಿದ್ದು, ಸೆಕ್ಯೂರ್ಡ್ ಕ್ರೆಡಿಟರರಿಗೆ **ಅನೂಪ್ ಕುಮಾರ್ ಬ್ರಹ್ಮ ಮತ್ತು ಪ್ರಭಿಲಾ ಡಿ. ಎಸ್.** ಇವರಿಂದ ಸಾಲ ಖಾತೆ ನಂ. **HDHLBAN00490509** ಇದರಲ್ಲಿನ ಅಸಲು, ಹಿಂದಿನ ಬಾಕಿ (ಸಂಚಯಿತ ವಿಳಂಬ ಶುಲ್ಕವನ್ನೊಳಗೊಂಡು) ಮತ್ತು **18.05.2026**ರ ತನಕದ ಬಡ್ಡಿ **ರೂ. 49,23,042/- (ರೂಪಾಯಿ ನಲವತ್ತ ಒಂಬತ್ತು ಲಕ್ಷ ಇಪ್ಪತ್ತ ಮೂರು ಸಾವಿರದ ನಲವತ್ತ ಎರಡು ಮಾತ್ರ)** ಸಾಲ ಒಪ್ಪಂದ ಮತ್ತು ಇತರ ಸಂಬಂಧಿತ ದಸ್ತಾವೇಜಿ(ಗಳು)ನಂತೆ ಕಾನೂನು ಸಂಬಂಧಿತ ವೆಚ್ಚಗಳು ಮತ್ತು ಸೆಕ್ಯೂರ್ಡ್ ಕ್ರೆಡಿಟರರಿಗೆ ಬರ ಬೇಕಾದ ಇತರ ಶುಲ್ಕಗಳೊಂದಿಗೆ **19.05.2026**ರಿಂದ ಭವಿಷ್ಯದ ಬಡ್ಡಿಯ ವಸೂಲಿಗಾಗಿ ''**ಎಲ್ಲಿದೆಯೊ ಹಾಗೆ**'', ''**ಏನಿದೆಯೊ ಹಾಗೆ**'' ಮತ್ತು ''**ಯಾವುದೇ ರಿಕೊರ್ಸ್ ಇಲ್ಲದ**'' ಆಧಾರದಲ್ಲಿ ತಾರೀಖು **29.06.2026**ರಂದು **ಸಂಜೆ 05.00 ರಿಂದ ಸಂಜೆ 06.00 ರವರೆಗೆರ** ತನಕ ಮಾರಾಟ ಮಾಡಲಿದ್ದಾರೆ.

ಸ್ಥಿರಾಸ್ತಿ(ಗಳ)ಯ ರಿಸರ್ವ್ ಬೆಲೆ **ರೂ. 62,78,000/- (ರೂಪಾಯಿ ಅರವತ್ತ ಎರಡು ಲಕ್ಷ ಎಪ್ಪತ್ತ ಎಂಟು ಸಾವಿರ ಮಾತ್ರ)** ಆಗಿದೆ ಮತ್ತು ಅರ್ನೆಸ್ಟ್ ಮನಿ ಡಿಪಾಸಿಟ್ (''**ಇಎಮ್‌ಡಿ**'') **ರೂ. 6,27,800/- (ರೂಪಾಯಿ ಆರು ಲಕ್ಷ ಇಪ್ಪತ್ತ ಏಳು ಸಾವಿರದ ಎಂಟು ನೂರು ಮಾತ್ರ)** ಅಂದರೆ, ರಿಸರ್ವ್ ಬೆಲೆಯ 10%ಕ್ಕೆ ಸಮನಾಗಿದೆ.

ಸ್ಥಿರಾಸ್ತಿ(ಗಳ) ವಿವರಣೆ

1200 **ಚದರ ಅಡಿ ವಿಸ್ತೀರ್ಣದ, ವಾಸಯೋಗ್ಯ ಸ್ಥಿರ ಆಸ್ತಿ ಹೊಂದಿರುವ ಸೈಟ್ ಸಂಖ್ಯೆ** 1291, **ವಿಪಿ ಖಾತಾ ಸಂಖ್ಯೆ** 175, **ಸರ್ವೆ ಸಂಖ್ಯೆ** 188/2 **ರ ''ನಿರ್ಮಾಣ್ ಲೇಔಟ್'', ಕೃಷಿಯೇತರ ನಿವಾಸ ಉದ್ದೇಶಕ್ಕಾಗಿ ಆದೇಶ ಸಂಖ್ಯೆ ALN (AJ) SR/234/2011-12 ರಂತೆ ಪರಿವರ್ತಿಸಲಾಗಿದೆ, ಇದು ಕೊಪ್ಪ ಗ್ರಾಮ, ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು**- 560083, **ಕರ್ನಾಟಕದಲ್ಲಿ ಸ್ಥಿತವಾಗಿದೆ ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.**

ಅಳತೆ ಈ ಕೆಳಗಿನಂತಿದೆ :-

ಪೂರ್ವದಿಂದ ಪಶ್ಚಿಮಕ್ಕೆ : ಉತ್ತರ ಭಾಗ 40 **ಅಡಿ / ದಕ್ಷಿಣ ಭಾಗ** 40 **ಅಡಿ,** **ಉತ್ತರದಿಂದ ದಕ್ಷಿಣಕ್ಕೆ : ಪೂರ್ವ ಭಾಗ** 35 **ಅಡಿ / ಪಶ್ಚಿಮ ಭಾಗ** 25 **ಅಡಿ.**

ಈ ಕೆಳಗಿನಂತೆ ಚಕ್ಕುಬಂದಿ :-

ಪೂರ್ವಕ್ಕೆ : ರಸ್ತೆ | **ಉತ್ತರಕ್ಕೆ : ಸೈಟ್ ಸಂಖ್ಯೆ** 1069
ಪಶ್ಚಿಮಕ್ಕೆ : ಸೈಟ್ ಸಂಖ್ಯೆ 1290 | **ದಕ್ಷಿಣಕ್ಕೆ : ಸೈಟ್ ಸಂಖ್ಯೆ** 523 **ಮತ್ತು** 524

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ ಅಂದರೆ www.sammaancapital.com; ಸಂಪರ್ಕ ಸಂಖ್ಯೆ: 0124-6910910, +91 7065451024; ಇ–ಮೇಲ್ ಐಡಿ : auctionhelpline@sammaancapital.com. ಬಿಡ್ಡಿಂಗ್‌ಗಾಗಿ, www.auctionbazaar.com ಗೆ ಲಾಗಿನ್ ಮಾಡಿ.

ಸಹಿ
ಅಧಿಕಾರಯುಕ್ತ ಅಧಿಕಾರಿ
ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)

ದಿನಾಂಕ : 19.05.2026
ಸ್ಥಳ : ಬೆಂಗಳೂರು

INDIQUBE®
GROW YOUR BUSINESS

ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್

CIN: L45400KA2015PLC133523
ನೋಂದಾಯಿತ ಕಚೇರಿ: ಪ್ಲಾಟ್ # 53, ಕರಿಯರ್‌ನೆಟ್ ಕ್ಯಾಂಪಸ್, ಕರಿಯಮ್ಮನ ಅಗ್ರಹಾರ ರಸ್ತೆ, ದೇವರಬೀಸನಹಳ್ಳಿ, ಹೊರ ವರ್ತುಲ ರಸ್ತೆ, ಬೆಂಗಳೂರು 560103, ಕರ್ನಾಟಕ, ಭಾರತ
ಫೋನ್: +91 99000 92210, **ಇ-ಮೇಲ್:** cs.compliance@indiqube.com,
ವೆಬ್‌ಸೈಟ್: www.indiqube.com

ಅಂಚೆ ಮತಪತ್ರದ ನೋಟಿಸ್

ಕಂಪನೀಸ್ ಆ್ಯಕ್ಟ್, 2013ರ (ಇನ್ನು ಮುಂದೆ ಇದನ್ನು **ಆ್ಯಕ್ಟ್** ಎಂದು ಕರೆಯಲಾಗುತ್ತದೆ) ಸೆಕ್ಷನ್ 108 ಮತ್ತು 110 ಮತ್ತು ಇತರ ಅನ್ವಯಿಸುವ ಪ್ರಾವಧಾನಗಳು, ಏನಾದರೂ ಇದ್ದರೆ, ಅವುಗಳ ಪ್ರಕಾರ, ಜೊತೆಗೆ ಕಂಪನೀಸ್ (ಮ್ಯಾನೇಜ್‌ಮೆಂಟ್ ಮತ್ತು ಅಡ್ಮಿನಿಸ್ಟ್ರೇಶನ್) ರೂಲ್ಸ್, 2014ರ ('**ರೂಲ್ಸ್**') ರೂಲ್ 20 ಮತ್ತು 22 ಹಾಗೂ ಆ್ಯಕ್ಟ್‌ನ ಇತರ ಅನ್ವಯಿಸುವ ಪ್ರಾವಧಾನಗಳು, ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಅವುಗಳ ಅಡಿಯ ರೂಲ್‌ಗಳು, ಸರ್ಕ್ಯುಲರ್‌ಗಳು ಮತ್ತು ನೋಟಿಫಿಕೇಶನ್‌ಗಳು (**ಅದಕ್ಕೆ** ಸಂಬಂಧಿಸಿದಂತೆ ಆ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು–ಜಾರಿ ಒಳಗೊಂಡಂತೆ), ದಿನಾಂಕ ಏಪ್ರಿಲ್ 8, 2020 ರ ಜನರಲ್ ಸರ್ಕ್ಯುಲರ್ ನಂ. 14/2020, ದಿನಾಂಕ ಏಪ್ರಿಲ್ 13, 2020ರ ನಂ. 17/2020, ದಿನಾಂಕ ಜೂನ್ 15, 2020 ರ ನಂ. 22/2020, ದಿನಾಂಕ ಸೆಪ್ಟೆಂಬರ್ 28, 2020 ರ ನಂ. 33/2020, ದಿನಾಂಕ ಡಿಸೆಂಬರ್ 31, 2020 ರ ನಂ. 39/2020, ದಿನಾಂಕ ಜೂನ್ 23, 2021 ರ ನಂ. 10/2021, ದಿನಾಂಕ ಡಿಸೆಂಬರ್ 8, 2021 ರ ನಂ. 20/2021, ದಿನಾಂಕ ಮೇ 5, 2022 ರ ನಂ. 3/2022, ದಿನಾಂಕ ಡಿಸೆಂಬರ್ 28, 2022 ರ ನಂ. 11/2022, ದಿನಾಂಕ ಸೆಪ್ಟೆಂಬರ್ 25, 2023 ರ ನಂ. 09/2023, ದಿನಾಂಕ ಸೆಪ್ಟೆಂಬರ್ 19, 2024 ರ ನಂ. 09/2024 ಮತ್ತು ದಿನಾಂಕ ಸೆಪ್ಟೆಂಬರ್ 22, 2025 ರ ನಂ. 03/2025 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು (**ಎಂಸಿಎ**) ಹೊರಡಿಸಿದ ಇತರ ಸಂಬಂಧಿತ ಸರ್ಕ್ಯುಲರ್‌ಗಳು, ಏನಾದರೂ ಇದ್ದರೆ, (ಇವನ್ನು ಒಟ್ಟಾಗಿ (**ಎಂಸಿಎ** ಸರ್ಕ್ಯುಲರ್‌ಗಳುಃ ಎಂದು ಕರೆಯಲಾಗುತ್ತದೆ), ಇನ್‌ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ ಹೊರಡಿಸಿದ ಜನರಲ್ ಮೀಟಿಂಗ್‌ಗಳ ಸೆಕ್ರೆಟೇರಿಯಲ್ ಸ್ಟ್ಯಾಂಡರ್ಡ್, ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯದ ರೆಗ್ಯುಲೇಶನ್ 44 (ಲಿಸ್ಟಿಂಗ್ ಆಬ್ಲಿಗೇಶನ್ ಮತ್ತು ಡಿಸ್‌ಕ್ಲೋಶರ್ ಅವಶ್ಯಕತೆಗಳು) ರೆಗ್ಯುಲೇಶನ್‌ಗಳು, 2015, (ಸೆಬಿ ಲಿಸ್ಟಿಂಗ್ ರೆಗ್ಯುಲೇಶನ್‌ಗಳು), ತಿದ್ದುಪಡಿ ಮಾಡುವ ಪ್ರಕಾರ, ಮತ್ತು ಇತರ ಯಾವುದೇ ಅನ್ವಯಿಸುವ ಕಾನೂನುಗಳು, ರೂಲ್‌ಗಳು ಮತು ರೆಗ್ಯುಲೇಶನ್‌ಗಳು (ಅದಕ್ಕೆ ಸಂಬಂಧಿಸಿದಂತೆ ಆ ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು–ಜಾರಿ ಒಳಗೊಂಡಂತೆ), ಇವನ್ನು ಜೊತೆಗೆ ಓದಿಕೊಂಡು ಈ ಕೆಳಗಿನ ನಿರ್ಣಯಗಳಿಗೆ ಇಂಡಿಕ್ಯೂಬ್ ಸ್ಪೇಸಸ್ ಲಿಮಿಟೆಡ್‌ನ (ಇನ್ನು ಮುಂದೆ ಇದನ್ನು 'ಕಂಪನಿ' ಎಂದು ಕರೆಯಲಾಗುತ್ತದೆ) ಸದಸ್ಯರ ಒಪ್ಪಿಗೆಯನ್ನು ಅಂಚೆ ಮತಪತ್ರದ ವಿಧಾನದಲ್ಲಿ, ರಿಮೋಟ್ ಇ-ವೋಟಿಂಗ್ ('**ಇ-ಮತದಾನ**') ಪ್ರಕ್ರಿಯೆಯ ಮೂಲಕ ಮಾತ್ರ ಕೇಳಲಾಗುತ್ತಿದೆ ಎಂದು ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ:

ಕ್ರಮಾಂಕ	ನಿರ್ಣಯಗಳ ವಿವರಣೆ	ನಿರ್ಣಯದ ಪ್ರಕಾರ
1.	ಆರಂಭಿಕ ಸಾರ್ವಜನಿಕ ಆಫರಿಂಗ್‌ನ ಆದಾಯದ ಬಳಕೆಯ ಉದ್ದೇಶಗಳು / ನಿಯಮಗಳಲ್ಲಿನ ಬದಲಾವಣೆಗಳು	ವಿಶೇಷ ನಿರ್ಣಯ
2.	ಕಂಪನಿಯ ಚೇರ್‌ಮನ್, ಎಕ್ಸಿಕ್ಯುಟಿವ್ ಡೈರೆಕ್ಟರ್ ಮತ್ತು ಚೀಫ್ ಎಕ್ಸಿಕ್ಯುಟಿವ್ ಆಫೀಸರ್ ಶ್ರೀ ರಿಷಿ ದಾಸ್ (DIN:00420103) ಅವರ ವೇತನದಲ್ಲಿ ಪರಿಷ್ಕರಣೆ	ವಿಶೇಷ ನಿರ್ಣಯ
3.	ಕಂಪನಿಯ ಚೀಫ್ ಆಪರೇಟಿಂಗ್ ಆಫೀಸರ್ ಮತ್ತು ಎಕ್ಸಿಕ್ಯುಟಿವ್ ಡೈರೆಕ್ಟರ್ ಶ್ರೀಮತಿ ಮೇಘನಾ ಅಗರವಾಲ್ (DIN:06944181) ಅವರ ಅವರ ವೇತನದಲ್ಲಿ ಪರಿಷ್ಕರಣೆ	ವಿಶೇಷ ನಿರ್ಣಯ

90% ಗಿಂತ ಹೆಚ್ಚು ಷೇರುದಾರರ (ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸುವ ಷೇರುದಾರರ ಸಂಖ್ಯೆ ಮತ್ತು ಶೇಕಡಾವಾರು) ಒಪ್ಪಿಗೆಯ ಬಹುಮತದಿಂದ ಮಾತ್ರ ಕಂಪನಿಯು ಈ ನಿರ್ಣಯವನ್ನು ಕೈಗೊಳ್ಳುತ್ತದೆ.

ಸದಸ್ಯರಿಗೆ ಹೀಗೆಂದು ತಿಳಿಸಲಾಗುತ್ತಿದೆ:

1. ಖಇಅ ಸರ್ಕ್ಯುಲರ್‌ಗಳ ಸೋಮವಾರ, ಮೇ 22, 2026 ಶುಕ್ರವಾರ ಸದಸ್ಯರ ರೆಜಿಸ್ಟರ್‌ನಲ್ಲಿ ಕಂಡುಬಂದ ಸದಸ್ಯರ ಹೆಸರುಗಳಿಗೆ, ಡೆಪಾಸಿಟರಿಗಳಿಂದ ಪಡೆಯಲಾದ ಮತ್ತು ಕಂಪನಿ/ಡೆಪಾಸಿಟರಿಗಳಲ್ಲಿ ಇ-ಮೇಲ್ ವಿಳಾಸವನ್ನು ರೆಜಿಸ್ಟರ್ ಮಾಡಿರುವ ಫಲಾನುಭವಿ ಮಾಲೀಕರುಗಳ ಪಟ್ಟಿಗೆ, ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆ ಮತ್ತು ವಿಧಾನವನ್ನು ಸೂಚಿಸುವ ಈ ಅಂಚೆ ಮತಪತ್ರ ನೋಟೀಸನ್ನು (''**ನೋಟಿಸ್**'') ಶುಕ್ರವಾರ, ಮೇ 25, 2026 ರಂದು ಎಲೆಕ್ಟ್ರಾನಿಕ್ ವಿಧಾನದ ಮೂಲಕ, ಕಳಿಸಲಾಗಿದೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು. ಅಂಚೆ ಮತಪತ್ರದ ನೋಟಿಸ್‌ನ ಫಿಸಿಕಲ್ ಪ್ರತಿಗಳನ್ನು ಅಂಚೆ ಮತಪತ್ರದ ಫಾರ್ಮ್‌ಗಳುನ ಮತ್ತು ಪ್ರೀ-ಪೇಯ್ಡ್ ಬಿಸಿನೆಸ್ ಕವರ್‌ಗಳನ್ನು ಈ ಅಂಚೆ ಮತಪತ್ರಕ್ಕಾಗಿ ಸದಸ್ಯರಿಗೆ ಕಳಿಸಲಾಗುವುದಿಲ್ಲ. ಸದಸ್ಯರು ತಮ್ಮ ಸಮ್ಮತಿ ಅಥವಾ ಅಸಮ್ಮತಿಯನ್ನು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ತಿಳಿಸಬೇಕಾಗುತ್ತದೆ.
2. ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ ಕಂಪನಿಯು ಎಮ್‌ಯುಎಫ್‌ಜಿ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ (ಹಿಂದಿನ ಹೆಸರು ಲಿಂಕ್ ಇಂಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್) **("MIIPL")** ಸರ್ವೀಸ್‌ಗಳನ್ನು ಬಳಸಿಕೊಳ್ಳುತ್ತಿದೆ. ಬುಧವಾರ, ಜೂನ್ 24, 2026ರ (ಕಟ್-ಆಫ್ ದಿನಾಂಕ) ಪ್ರಕಾರ ಷೇರುಗಳನ್ನು ಹೊಂದಿರುವ ಸದಸ್ಯರು ರಿಮೋಟ್ ಇ-ವೋಟಿಂಗ್ ಮೂಲಕ ತಮ್ಮ ಮತ ಚಲಾಯಿಸಲು ಅರ್ಹರಾಗಿರುತ್ತಾರೆ. ಇ-ವೋಟಿಂಗ್ ಸೌಲಭ್ಯವು ಮಂಗಳವಾರ, ಮೇ 26, 2026, ಬೆಳಿಗ್ಗೆ 09:00 (IST) ರಿಂದ ಬುಧವಾರ, ಜೂನ್ 24, 2026, ಸಂಜೆ 05:00ರ (IST) ವರೆಗೆ ಲಭ್ಯವಿರುತ್ತದೆ. ಬುಧವಾರ, ಜೂನ್ 24, 2026 ರಂದು ಸಂಜೆ 5.00 (IST) ನಂತರ ಖಐಐಕಔ ನಿಂದ ಇ-ವೋಟಿಂಗ್ ಮಾಡ್ಯೂಲ್ ಅನ್ನು ನಿಷ್ಕ್ರಿಯಗೊಳಿಸಲಾಗುತ್ತದೆ. ನಿರ್ಣಯಗಳ ಮೇಲೆ ಸದಸ್ಯರು ಮತ ಚಲಾಯಿಸಿದ ಮೇಲೆ, ಸದಸ್ಯರು ಅದನ್ನು ನಂತರದಲ್ಲಿ ಬದಲಾಯಿಸಲು ಅನುಮತಿ ನೀಡಲಾಗುವುದಿಲ್ಲ.
3. ಇ-ವೋಟಿಂಗ್‌ಗೆ ಸಂಬಂಧಿಸಿದ ವಿವರವಾದ ನಿರ್ದೇಶನಗಳನ್ನು ನೋಟಿಸ್‌ನ ಭಾಗವಾಗಿ ನೀಡಲಾಗಿದೆ, ಸದಸ್ಯರು ಮತ ಚಲಾಯಿಸುವ ಮೊದಲು ಅವುಗಳನ್ನು ಎಚ್ಚರಿಕೆಯಿಂದ ಓದಬೇಕು. ಈ ನೋಟಿಸ್ ಮತ್ತು ವಿವರಣಾತ್ಮಕ ಹೇಳಿಕೆಗಳು ಕಂಪನಿಯ ವೆಬ್‌ಸೈಟ್ https://indiqube.com/investor/ ನಲ್ಲಿ ಲಭ್ಯವಿವೆ. ಇದು ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್‌ನ ವೆಬ್‌ಸೈಟ್ ಅನುಕ್ರಮವಾಗಿ www.bseindia.com ಮತ್ತು www.nseindia.com ನಲ್ಲಿ ಮತ್ತು ಖಐಐಕಔನ ವೆಬ್‌ಸೈಟ್ https://instavote.linkintime.co.in/ ನಲ್ಲಿ ಕೂಡ ಲಭ್ಯವಿದೆ.
4. ಅಂಚೆ ಮತಪತ್ರ ಪ್ರಕ್ರಿಯೆಯನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನಡೆಸಲು ಕಂಪನಿಯ ಬೋರ್ಡ್ ಆಫ್ ಡೈರೆಕ್ಟರ್ಸ್ ಸಿಎಸ್ ವರ್ಷಾ ವಿ ಶೆಣೈ (ಐಇಖಐ ಸದಸ್ಯತ್ವ ಸಂಖ್ಯೆ: No.: F9012, COP: 10499) ಅವರನ್ನು ಪರಿಶೀಲಕರಾಗಿ (ಸ್ಕ್ರೂಟಿನೈಸರ್) ನೇಮಿಸಿದೆ.
5. ಅಂಚೆ ಮತಪತ್ರದ ಮತದಾನದ ಫಲಿತಾಂಶಗಳನ್ನು ಮತ್ತು ಪರಿಶೀಲಕರ (ಸ್ಕ್ರೂಟಿನೈಸರ್) ವರದಿಯನ್ನು ಶುಕ್ರವಾರ, ಜೂನ್ 26, 2026 ರ ಬುಧವಾರ ಅಥವಾ ಅದಕ್ಕೂ ಮೊದಲು ಘೋಷಿಸುತ್ತದೆ ಮತ್ತು ಕಂಪನಿಯ ಸೆಕ್ಯುರಿಟಿಗಳನ್ನು ಪಟ್ಟಿ ಮಾಡಿರುವ ಸ್ಟಾಕ್ ಎಕ್ಸ್‌ಚೇಂಜ್‌ಗಳಿಗೆ ತಿಳಿಸಲಾಗುತ್ತದೆ. ಫಲಿತಾಂಶಗಳನ್ನು ಪರಿಶೀಲಕರ ವರದಿಯೊಂದಿಗೆ ಕಂಪನಿಯ ವೆಬ್‌ಸೈಟ್ https://indiqube.com/investor/ ಮತ್ತು ಖಐಐಕಔನ ವೆಬ್‌ಸೈಟ್ https://instavote.linkintime.co.in/ ನಲ್ಲಿ ಕೂಡ ಪ್ರಕಟಿಸಲಾಗುತ್ತದೆ.
6. ಇನ್ನೂ ತಮ್ಮ ಇ-ಮೇಲ್ ವಿಳಾಸವನ್ನು ನೋಂದಾಯಿಸದೆ ಇರುವ ಸದಸ್ಯರು, ಡಿಮೆಟೀರಿಯಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುಗಳಿಗೆ ಸಂಬಂಧಿಸಿದಂತೆ ತಮಗೆ ಸಂಬಂಧಿಸಿದ ಡೆಪಾಸಿಟರಿ ಪಾರ್ಟಿಸಿಪಂಟ್‌ರೊಂದಿಗೆ ನೋಂದಾಯಿಸಿಕೊಳ್ಳುವಂತೆ ಕೋರಲಾಗಿದೆ. ಕೆವೈಸಿ ನವೀಕರಣಗಳಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳಿಗೆ, ಸದಸ್ಯರು investor.helpdesk@in.mpms.mufg.com ನಲ್ಲಿ ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ ರನ್ನು ಸಂಪರ್ಕಿಸಬಹುದು.
7. ಡಿಮ್ಯಾಟ್ ಮೋಡ್‌ನಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ಷೇರುದಾರರು, ಡೆಪಾಸಿಟರಿ, ಅಂದರೆ ಘಖಈಔ ಮತ್ತು ಇಈಖಔ ಮೂಲಕ ಲಾಗಿನ್ ಮಾಡಲು ಸಂಬಂಧಿಸಿದ ಯಾವುದೇ ತಾಂತ್ರಿಕ ಸಮಸ್ಯೆಗಳಿಗೆ, ಕೆಳಗೆ ತಿಳಿಸಿರುವಂತೆ ದಯವಿಟ್ಟು ಸಂಬಂಧಪಟ್ಟ ಹೆಲ್ಪ್‌ಡೆಸ್ಕ್‌ಅನ್ನು ಸಂಪರ್ಕಿಸಿ:

ಲಾಗಿನ್ ಪ್ರಕಾರ	ಹೆಲ್ಪ್‌ಡೆಸ್ಕ್ ವಿವರಗಗಳು
ಘಖಈಔನಲ್ಲಿ ಡಿಮ್ಯಾಟ್ ಮೋಡ್‌ನಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ವೈಯಕ್ತಿಕ ಷೇರುದಾರರು	ಲಾಗಿನ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು evoting@nsdl.co.in ಗೆ ಕೋರಿಕೆಯನ್ನು ಸಲ್ಲಿಸುವ ಮೂಲಕ ಘಖಈಔ ಹೆಲ್ಪ್‌ಡೆಸ್ಕ್‌ಅನ್ನು ಸಂಪರ್ಕಿಸಬಹುದು ಅಥವಾ 022 – 4886 7000 ಗೆ ಕರೆ ಮಾಡಬಹುದು.
ಇಈಖಔ ನಲ್ಲಿ ಡಿಮ್ಯಾಟ್ ಮೋಡ್‌ನಲ್ಲಿ ಸೆಕ್ಯೂರಿಟಿಗಳನ್ನು ಹೊಂದಿರುವ ವೈಯಕ್ತಿಕ ಷೇರುದಾರರು	ಲಾಗಿನ್‌ನಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು helpdesk.evoting@cdslindia.com ಗೆ ಕೋರಿಕೆಯನ್ನು ಸಲ್ಲಿಸುವ ಮೂಲಕ ಇಈಖಔ ಹೆಲ್ಪ್‌ಡೆಸ್ಕ್‌ಅನ್ನು ಸಂಪರ್ಕಿಸಬಹುದು ಅಥವಾ ಟೋಲ್ ಫ್ರೀ ನಂಬರ್ 1800 22 55 33 ನ್ನು ಸಂಪರ್ಕಿಸಬಹುದು.

ಪರ್ಯಾಯವಾಗಿ, ಷೇರುದಾರರು ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್‌ರಿಗೆ cs.compliance@indiqube.com ನಲ್ಲಿ ಇ-ಮೇಲ್ ಬರೆಯಬಹುದು.

ಇಂಡಿಕ್ಯೂಬ್ ಸ್ಪೇಸ್ ಲಿಮಿಟೆಡ್ ಪರವಾಗಿ,
ಭಾಸ್ಕರ್ ದುಬೆ
ಕಂಪನಿ ಸೆಕ್ರೆಟರಿ ಮತ್ತು ಕಂಪ್ಲೈಯನ್ಸ್ ಆಫೀಸರ್
ಐಇಖಐ ಸದಸ್ಯತ್ವದ ನಂ. ಅ33287

ಸ್ಥಳ: ಬೆಂಗಳೂರು, ಕರ್ನಾಟಕ
ದಿನಾಂಕ: 26 ಮೇ 2026

INDIQUBE®
GROW YOUR BUSINESS

Form PAS-1

[Pursuant to section 27(1) and rule 7(2) of Companies (Prospectus and Allotment of Securities) Rules, 2014]

Advertisement giving details of notice of special resolution for varying the terms of any contract referred to in the prospectus or altering the objects for which the prospectus was issued

Indiqube Spaces Limited

CIN: L45400KA2015PLC133523

Registered Office: Plot # 53, Careernet Campus, Kariyammanna Agrahara Road, Devarabisanahalli, Outer Ring Road, Bengaluru- 560103, Karnataka, India; **Tel**: +91- 9900092210; **Email ID**: cs.compliance@indiqube.com; **Website**: www.indiqube.com

PUBLIC NOTICE

Notice is hereby given that by a resolution dated May 20, 2026, the Board of Directors ("Board") of **Indiqube Spaces Limited** ("Company") has proposed to vary the objects/terms of utilisation of the Initial Public Offering ("IPO") proceeds ("IPO Proceeds"), for which prospectus dated July 25, 2025 ("Prospectus") issued in connection with the IPO of the Company, which consisted of a fresh issue of 27,432,636 equity shares at an issue price of INR 237/- aggregating to INR 6,500.00 million (where the net proceeds received by Company after deduction of issue related expenses was INR 6,044.59 million).

In pursuance of the said resolution, further notice is given that for approving the proposed variation of the objects/terms of utilisation of the IPO Proceeds a special resolution of the Company is proposed to be passed by postal ballot. The detailed information of the aforesaid resolution (including the terms and conditions thereof along with the explanatory statement) and instructions for remote e-voting is given in Postal Ballot Notice dated May 20, 2026, available at the website of the Company at https://indiqube.com/investor/.

The resolution shall be subject to the condition that, in the event the resolution is approved by a majority that meets or exceeds the statutory threshold for a special resolution but does not exceed the threshold of 90% shareholding (number and percentage of shareholders voting through remote e-voting), the Company will, notwithstanding the foregoing statutory threshold, not implement the proposed variation/extension, and such resolution shall be deemed by the Company as not having been acted upon/implemented. Accordingly, the objects/terms of utilisation of IPO Proceeds mentioned in the Prospectus will be deemed to have not been varied by such resolution.

The details regarding such variation are as follows:

1) **Particulars of the terms of the Contract to be varied (or objects to be altered):**

(INR in million)

Sl No.	Original objects of the IPO as stated in the Prospectus	Total amount raised through IPO	Amount utilized as on May 11, 2026	Details of Variation	Revised amount after variation	Revised amount utilization post variation
01	Funding capital expenditure towards establishment of new centers	4,626.49	3,507.82	1,870.00 [allocated out of Object 1 to Object 4,5, 6 and 7 (as set out below)]	2,756.49	1,637.82
02	Repayment / pre-payment, in full or in part, of certain borrowings availed by our Company	913.40^	Nil	No change	913.40^	Nil
03	General corporate purpose	504.70^	4.01	No change	504.70^	4.01
04	Funding security deposit for new centers	-	-	520.00 (allocated from Object 1)	520.00	520.00
05	Funding capital expenditure towards fit-out and interior in non Indiqube properties	-	-	550.00 (allocated from Object 1)	550.00	550.00
06	Funding capital expenditure towards renewable power infrastructure	-	-	160.00 (allocated from Object 1)	160.00	160.00
06	Capital deployment in strategic commercial real estate opportunities	-	-	640.00 (allocated from Object 1)	640.00	640.00

^ Following the repayment of borrowings as outlined in the Offer Document, a balance of INR 16.95 million remained unutilized under the object titled "Repayment/pre-payment, in full or in part, of certain borrowings availed by the Company." Accordingly, this balance amount of INR 16.95 million was reallocated to "General corporate purposes," resulting in a revised allocation of INR 504.70 million as against the originally allocated amount of INR 487.75 million. Such reallocation is in line with the disclaimer set out in the Offer Document, which states: "In case the actual utilization towards any of the Objects is lower than the proposed deployment, such balance will be used for funding other existing Objects, if necessary, and/or towards general corporate purposes, provided that the total amount utilized towards general corporate purposes does not exceed 25% of the Gross Proceeds in accordance with the SEBI ICDR Regulations'.

2) **Particulars of the proposed variation/alteration:**

Please refer to table given in Point 1 above for the details of the original objects as per the Prospectus and the proposed reallocation of IPO Proceeds.

3) **Reasons/justification for the variation:**

Background:

The Company is a managed workplace solutions provider offering comprehensive, sustainable, and technology-driven workplace solutions aimed at transforming the traditional office experience. Through its diverse suite of offerings, the Company enhances workplace experiences for clients and their employees by delivering integrated and flexible workspace solutions tailored to evolving enterprise requirements. Its core offering of plug-and-play office solutions is further strengthened through backward and forward integration capabilities, enabling the Company to serve the workspace value chain in a comprehensive and integrated manner. While the Company's backward integration capabilities focus on asset renovation, upgradation, and customized build-to-suit solutions, its forward integration capabilities enable the delivery of value-added B2B and B2C services to clients and their employees.

The workspace solutions industry continues to evolve rapidly and requires continuous alignment of capital deployment with changing market dynamics, emerging business opportunities, and long-term strategic priorities. Enterprises are increasingly viewing workspaces not merely as physical offices, but as strategic hubs that support talent acquisition and retention, productivity, organizational culture, employee experience, sustainability objectives, and long-term operational efficiency.

In parallel, sustainability considerations have evolved from being optional differentiators to becoming fundamental business requirements for enterprise occupiers. Clients are also increasingly seeking integrated, PAN India workplace partners capable of delivering holistic, end-to-end solutions across the entire workspace lifecycle while simultaneously reducing upfront capital expenditure requirements.

In line with these industry developments, the Company has, over the years and particularly subsequent to its IPO, further evolved its business model and operational capabilities to cater to clients even outside its leased ecosystem through scalable "as-a-service" offerings. By absorbing the upfront costs associated with office fit-outs, interiors, renewable energy and workplace infrastructure, the Company enables clients to convert significant capital expenditures into predictable operating expenditures, thereby improving cost efficiency, financial flexibility, and scalability for enterprise customers.

In view of the above, the Board believes that the proposed variation is expected to support the Company's organic growth strategy and align the deployment of IPO proceeds with the Company's current business priorities, market opportunities and long-term strategic objectives.

Rationale to reallocate funds out of Object 1.

In the Company's IPO, INR 4,626.49 million of the total proceeds were earmarked for Object 1, funding of capital expenditure towards establishment of new centers. While capital expenditure towards interiors continues to remain relevant to the Company's business, the Company believes that a portion of the funds earmarked for Object 1 can also be efficiently deployed towards other synergic opportunities that are directly aligned with its current business priorities.

These include funding security deposits for new centers, funding capital expenditure towards fit-outs and interiors in non Indiqube properties, funding capital expenditure towards renewable power infrastructure and making investments in strategic real estate assets.

The Company believes that reallocating a portion of the IPO proceeds from Object 1 towards these opportunities will enable targeted and efficient utilization of funds, while continuing to support its core workspace expansion requirements.

To maximize shareholder value and support organic growth, the Board proposes adjusting the Company's IPO fund allocation. Therefore, it is proposed to reduce the Fund allocation for Object 1 from INR 4,626.49 million to INR 2,756.49 million of total IPO proceeds, reallocating the remaining balance to Objects 4 to 7.

Rationale to reallocate funds to Object 4, 5, and 6

Object 4 - "Funding security deposit for new centers"

Security deposits to landlords are a key enabler of future supply creation and play a central role in securing high quality inventory in advance. As the Company continues to expand across premium Tier 1 business districts and Grade A managed office spaces, the ability to commit security deposits in a timely manner has become increasingly important for locking strategically located assets and building a robust pipeline of future centres.

The difference between Area Under Management and Rent Yielding Area increased from 3.07 million sq. ft. as of March 2025 to 3.33 million sq. ft. as of March 2026, reflecting the growth in our pipeline of future supply. As the Company continues to secure supply ahead of demand and build capacity for future revenue growth, the requirement for security deposits has correspondingly increased. Accordingly, higher investment towards security deposits is necessary to support timely acquisition of new properties and sustained expansion.

In parallel, demand from GCCs and enterprise clients has increasingly shifted towards premium, high quality tech park environments with superior infrastructure, institutional ownership, strong compliance standards and enhanced employee experience. In line with this shift, the Company has increased its focus on acquiring institutional supply. The share of institutional supply in total AUM increased from 14% in March 2025 to 18% in March 2026. Such institutional properties typically command higher rentals and, consequently, higher security deposits compared to the portfolio average. As the Company strengthens its presence in premium Grade A tech parks and institutional assets, the overall quantum of deposits required to acquire new institutional supply has increased.

Maintaining adequate liquidity for security deposits enables the Company to swiftly secure high potential properties in competitive micro markets, strengthen credibility with institutional landlords and improve access to premium assets. It also enhances negotiating leverage for favourable lease terms such as competitive rentals, rent free periods, escalation protections and expansion rights. Since these deposits are refundable and recognized as recoverable balance sheet assets, they represent a capital efficient deployment towards long term growth.

Accordingly, allocating dedicated capital of INR 520 million towards security deposits for new centres is a strategic investment in future supply, premium asset access and sustained expansion. This funding will help the Company lock high quality institutional properties, support growing GCC and enterprise demand, reduce launch lead times, preserve operating liquidity and strengthen confidence among landlords, investors and partners in the Company's long term growth plans.

Object 5 - "Funding capital expenditure towards fit-out and interior in non Indiqube properties."

The proposed allocation of funds towards capital expenditure for fit-out and interior align with Indiqube Bespoke model. While the interior projects are undertaken in third-party/client premises, the nature of capital expenditure remains consistent with the Company's core business activities involving interior fit-outs, furnishing and workspace customization.

The proposed expenditure is directly linked to revenue-generating projects. Since the properties are neither leased by the Company, the business model involves limited occupancy exposure and does not require long-term lease commitments or rental obligations. Further, successful execution of fit-out assignments strengthens client relationships and contributes towards tenant acquisition and retention through repeat mandates, expansion projects, refurbishment contracts, and long-term business associations. The project-based execution model also supports faster revenue realization and better cash flow dynamics through milestone-based billing structures involving advance payments and progressive invoicing during the execution cycle.

The business model additionally provides the Company with the ability to scale operations without long-term real estate exposure, as this expansion primarily depends on execution capabilities, vendor networks, and project management expertise rather than acquisition or leasing of commercial assets. Moreover, the fit-out and interiors segment offers diversified revenue opportunities across commercial offices, retail spaces, hospitality, healthcare, educational institutions, and other infrastructure sectors, thereby reducing sector-specific concentration risks.

Accordingly, the proposed utilization of funds towards fit-out and interior capital expenditure is commercially justified, operationally efficient, and aligned with the Company's long-term growth and scalability objectives.

The proposed reallocation of INR 550 million is expected to strengthen the Company's market positioning, enhance its ability to cater to increasing client demand for integrated fit-out solutions, and support the organic growth and expansion of the Company's operations. Further, such investment is expected to enable the Company to capitalize on the growing trend of outsourcing workspace infrastructure requirements under asset-light models adopted by corporate occupiers in addition to its core business model.

Object 6 - "Funding capital expenditure towards renewable power infrastructure"

Sustainability and green energy have been at the core of our operations. In our journey towards becoming 100% green power backed company, we have deployed a captive 20 MW solar power plant in Yadgir, Karnataka and a 4 MW solar power plant in Latur, Maharashtra.

Our renewable power initiatives are aligned with the increasing adoption of green energy by enterprises, particularly clients with defined ESG commitments and long term sustainability objectives. As more occupiers seek sustainable and energy efficient workplace solutions, we believe that renewable power will continue to form an important part of our value added services portfolio, including for clients outside the ecosystem of our leased properties.

We foresee a requirement of 'Green Power as a service' arising from outside the ecosystem of our leased properties as well and intend to tap this opportunity by allocating additional funds towards this object.

Given the strategic importance of sustainability linked solutions and the expected growth in demand for green power, the management proposes to reallocate INR 160 million of IPO proceeds. The proposed reallocation is intended to align the utilization of IPO proceeds with our broader strategy of expanding our sustainability linked offerings and strengthening our position as a full stack workplace solutions company.

Object 7 - "Capital deployment in strategic commercial real estate opportunities."

The proposed capital investment in strategic commercial real estate assets is intended to strengthen the Company's managed office space business by securing access to high-potential commercial assets in key micro markets. The investment strategy is aimed at addressing supply-side constraints in premium business districts where availability of quality office inventory remains limited and highly competitive.

Strategic investment in select real estate assets enables the Company to enhance its presence within established micro markets, ensure long-term supply stability, strengthen operational continuity for future expansion. The proposed deployment of INR 640.00 million will also enable the Company to participate in rental yield and long-term asset appreciation.

4) **Effect of the proposed variation/alteration on the financial position of the Company**

The proposed reallocation of IPO proceeds from Object 1 to Objects 4, 5, 6 and 7 is expected to strengthen the Company's long-term earnings profile, improve capital efficiency, and support sustainable cash flow generation by aligning capital deployment with evolving market opportunities and business priorities.

Funding security deposits through IPO proceeds will preserve internal accruals and working capital that would otherwise be blocked in upfront lease-related commitments, thereby improving liquidity and operational flexibility.

While the proposed investments in fit-out and interiors may lead to incremental depreciation and amortisation expenses but such investments are expected to contribute positively to revenue growth, profitability and cash flows over the medium to long term.

Over time, the investment in renewable power is expected to generate substantial savings in power / utilities expenses, and also generate recurring cash inflows through green power linked service offerings, thereby contributing to improved operating cash flows as the capacity becomes operational and demand scales.

Investment in real estate assets is expected to support long-term cash flow visibility through stable access to supply, reduced lease related uncertainties, improved occupancy planning and potential rental or asset linked returns, thereby strengthening the Company's long-term operating and investment cash flow profile.

Accordingly, the Board believes that the proposed reallocation is in the best interests of the Company and its shareholders, as it is expected to strengthen the Company's competitive position, support sustainable growth, and maximise long-term shareholder value.

5) **Major Risk factors pertaining to new objects**

All non-historical statements in the Postal Ballot Notice dated May 20, 2026, including those regarding our financial outlook, business strategies, and growth objectives, are "forward-looking statements." These are based on current estimates and are subject to risks, such as regulatory changes, market competition, and economic shifts that could cause actual results to differ materially.

Security deposits are generally refundable and treated as recoverable balance-sheet assets, recovery may be delayed, disputed, or adversely affected due to contractual disagreements, landlord defaults, insolvency proceedings, property-related claims, regulatory issues, or unfavorable market conditions, which could negatively impact working capital and cash flow management.

Interior business remains subject to certain risks including project execution delays, fluctuations in raw material and procurement costs, dependence on timely client approvals and payments, competitive pricing pressures, labour availability constraints, and changes in overall economic and commercial real estate activity. Delays in project completion or client collections may impact working capital cycles and profitability. Further, any slowdown in corporate expansion or infrastructure development may affect demand for fit-out and interior services.

Renewable energy investments are subject to risks relating to regulatory approvals, changes in renewable energy policies, execution delays, cost overruns, third party dependencies, equipment performance, maintenance requirements and demand for green energy solutions from clients. Since certain renewable energy projects may be developed outside the Company's leased property ecosystem, the Company may have limited control over site level, operational and commercial factors. Further, the expected benefits from such deployment are based on assumptions relating to client adoption, power generation, tariff savings, utilization levels and long-term demand for sustainable workplace solutions. Any adverse change in these factors may impact the commercial viability, return potential and strategic benefits expected from the proposed reallocation.

The proposed investments in real estate assets may be subject to risks relating to fluctuations in real estate market conditions, title, occupancy levels, changes in commercial demand cycles, regulatory approvals, capital commitment requirements, and macroeconomic factors affecting rental yields and asset valuations. Delays in monetization, lower-than-expected utilization levels, or adverse market conditions may impact projected returns and operational performance.

Following the proposed variation, the Company might still need to rely on internal accruals, future borrowing or equity financing to support its establishment of new centers. Although the Company undertakes comprehensive due diligence in evaluating properties, projects and negotiating lease arrangements, such risks may nevertheless materialise due to factors beyond the Company's control, which could adversely impact its liquidity, cash flow, financial condition, and expansion plan.

Notwithstanding the above risks, the proposed capital deployment is considered commercially prudent and strategically beneficial as it strengthens supply access, enhances operational control, improves long-term revenue visibility, and supports sustainable growth of the Company's managed office space business.

6) **Name of the Directors who voted against the proposed variation/alteration:**

None of the Directors have voted against the proposed variation/alteration.

Any interested person may obtain the copy of the special resolution along with the Explanatory Statement free of charge at the Registered office of the company at Plot # 53, Careernet Campus, Kariyammanna Agrahara Road, Devarabisanahalli, Outer Ring Road, Bengaluru- 560103, Karnataka, India or visit the website of the Company at https://indiqube.com/investor/ for the same.

For Indiqube Spaces Limited

Bhasker Dubey
Company Secretary and Compliance Officer

Place: Bengaluru
Date: May 26, 2026

Adfactors 102/26

ಸಮಗ್ರ ಉಪನಗರ ಯೋಜನೆ: 7,481 ಎಕರೆಯಲ್ಲಿ ವಸತಿ ಬಡಾವಣೆ, ಬೃಹತ್ ಏಕನಿವೇಶನ ಅಭಿವೃದ್ಧಿ

6,650 ಎಕರೆ ಭೂಸ್ವಾಧೀನ ಸವಾಲು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿಯ ಅನತಿ ದೂರದ ಬಿಡದಿ ಸಮೀಪ ಒಟ್ಟು 7,481 ಎಕರೆ ಪ್ರದೇಶದಲ್ಲಿ ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆ ಅನುಷ್ಠಾನಕ್ಕೆ ತರುವ ವಿಚಾರ ಕುರಿತು ಆಡಳಿತ-ವಿರೋಧ ಪಕ್ಷಗಳ ನಡುವೆ ಸಂಘರ್ಷ ಏರ್ಪಟ್ಟಿದೆ. ಇದರ ನಡುವೆ ಯೋಜನೆ ರದ್ದತಿಗಾಗಿ ರೈತರು, ಭೂಮಾಲೀಕರು ತೀವ್ರ ಹೋರಾಟ ನಡೆಸುವ ಮೂಲಕ ಬಿಗಿಪಟ್ಟು ಹಿಡಿದಿದ್ದಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯಿದೆಯಡಿ ಒಟ್ಟು 18,133 ಕೋಟಿ ರು. ವೆಚ್ಚದಲ್ಲಿ ಯೋಜನೆ ಅನುಷ್ಠಾನಗೊಳಿಸಲು ಅನುಮೋದನೆ ನೀಡಲಾಗಿದೆ. ಬೆಂಗಳೂರು ನಗರ ಪ್ರದೇಶ ವ್ಯಾಪ್ತಿಯಲ್ಲಿನ ನಗರಗಳನ್ನು ಯೋಜನಾಬದ್ಧವಾಗಿ ಅಭಿವೃದ್ಧಿಗೊಳಿಸುವ ಉದ್ದೇಶದಿಂದ 'ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್‌ಸಿಟಿ' ಯೋಜನಾ ಪ್ರದೇಶಕ್ಕೆ ರಚಿಸಲಾಗಿರುವ ಬೆಂಗಳೂರು-ಬಿಡದಿ ಸ್ಮಾರ್ಟ್ ಸಿಟಿ ಯೋಜನಾ ಪ್ರಾಧಿಕಾರವನ್ನು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ರಾಮನಗರ ಜಿಲ್ಲೆಯ (ಪ್ರಸ್ತುತ ಬೆಂಗಳೂರು ದಕ್ಷಿಣ ಜಿಲ್ಲೆ) ರಾಮನಗರ ತಾಲೂಕಿನ ಬಿಡದಿ ಹೋಬಳಿಯ ಭೈರಮಂಗಲ, ಹೊಸೂರು, ಕೆ.ಜಿ.ಗೊಲ್ಲರಪಾಳ್ಯ, ಕಂಚುಗಾರನಹಳ್ಳಿ, ಬನ್ನಿಗಿರಿ, ಅರಳಾಳುಸಂದ್ರ, ಕೆಂಪಯ್ಯನಪಾಳ್ಯ, ಕಂಚುಗಾರನಹಳ್ಳಿ ಕಾವಲು, ಮಂಡಲಹಳ್ಳಿ ಮತ್ತು ಹಾರೋಹಳ್ಳಿ ಹೋಬಳಿಯ ವಡೇರಹಳ್ಳಿ ಸೇರಿ ಒಟ್ಟು 10 ಗ್ರಾಮಗಳ ವ್ಯಾಪ್ತಿಯಲ್ಲಿ ಒಟ್ಟು 7,481 ಎಕರೆ ಪ್ರದೇಶಗಳಲ್ಲಿ 'ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ' ಯೋಜನೆಯನ್ನು ಅನುಷ್ಠಾನ ತರಲು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹೊರಟಿದೆ. ಯೋಜನೆ ಸಂಬಂಧ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಈಗಾಗಲೇ ತಳ್ಳಿಹಾಕಲಾಗಿದೆ.

5,681 ಎಕರೆ ಪ್ರದೇಶದಲ್ಲಿ ಬೃಹತ್ ಏಕ ನಿವೇಶನ ಅಭಿವೃದ್ಧಿ:

ಗ್ರೇಟರ್ ಬೆಂಗಳೂರು ಸಮಗ್ರ ಉಪನಗರ ಯೋಜನೆಯಡಿ 1,800 ಎಕರೆ ಪ್ರದೇಶಗಳಲ್ಲಿ ವಸತಿ ಬಡಾವಣೆ ನಿರ್ಮಾಣ ಮತ್ತು 5,681 ಎಕರೆ ಪ್ರದೇಶದಲ್ಲಿ ಬೃಹತ್ ಏಕನಿವೇಶನ ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಭೂಮಾಲೀಕರಿಗೆ ಪರಿಹಾರ ರೂಪದಲ್ಲಿ ನೀಡುವ ವಸತಿ ನಿವೇಶನಗಳ ಅಭಿವೃದ್ಧಿಗೆ ಅಂದಾಜು 2,827 ಕೋಟಿ ರು. ಹಾಗೂ ಏಕ ನಿವೇಶನಗಳ ಅಭಿವೃದ್ಧಿಗೆ ಅಂದಾಜು 3,753 ಕೋಟಿ ರು. ಸೇರಿ ಒಟ್ಟು ಅಭಿವೃದ್ಧಿ ವೆಚ್ಚ 6,580 ಕೋಟಿ ರು.ಗಳಾಗಲಿದೆ ಎಂದು ಅಂದಾಜಿಸಲಾಗಿದೆ. ಈ ಯೋಜನೆ ಅನುಷ್ಠಾನ, ಅಭಿವೃದ್ಧಿಗೆ ತೆಗೆದುಕೊಳ್ಳುವ ಸಾಲದ ಮೊತ್ತಕ್ಕೆ ಬಡ್ಡಿ ಸರಕಾರ ಭರಿಸಬೇಕಿದೆ. ಹಾಗಾಗಿ, 3 ವರ್ಷ ಅವಧಿಗೆ ಈ ಯೋಜನೆಗಾಗಿ 2,443 ಕೋಟಿ ರು. ಅನುದಾನ ಕೋರಲಾಗಿದೆ. ಎಲ್ಲ ಮೂಲಗಳಿಂದ ಕ್ರೋಡೀಕರಿಸಿದ ಸಂಪನ್ಮೂಲಗಳು ಮತ್ತು ಬಾಹ್ಯ ಹಣಕಾಸು ಸಂಸ್ಥೆಗಳಿಂದ ಪಡೆದ ಸಾಲಕ್ಕೆ 3,897 ಕೋಟಿ ರು.ಬಡ್ಡಿ ನೀಡಬೇಕಾಗುತ್ತದೆ.

ಹುಡ್ಕೋನಿಂದ 12,661 ಕೋಟಿ ರು. ಸಾಲ

ಈ ಯೋಜನೆಗೆ ಸರಕಾರವು ವಿವಿಧ ಮೂಲಗಳಿಂದ ಆರ್ಥಿಕ ಸಂಪನ್ಮೂಲ ಕ್ರೋಢೀಕರಿಸಲು ಯೋಜನೆ ರೂಪಿಸಿದೆ. ಬಿಎಂಆರ್‌ಡಿಎ ವ್ಯಾಪ್ತಿಯ ಯೋಜನಾ ಪ್ರಾಧಿಕಾರಗಳಿಂದ 1,150 ಕೋಟಿ ರು., ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 2 ಸಾವಿರ ಕೋಟಿ ರು. ಹಾಗೂ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಸಿಎ ನಿವೇಶನಗಳನ್ನು ಅಡಮಾನ ಇಟ್ಟು ಬ್ಯಾಂಕ್‌ನಿಂದ 3,500 ಕೋಟಿ ರು. ಸಾಲ ಪಡೆಯಲು ಯೋಜಿಸಲಾಗಿದೆ. ಹುಡ್ಕೋ ಬ್ಯಾಂಕ್‌ನಿಂದ ಬರೋಬ್ಬರಿ 12,661 ಕೋಟಿ ರು. ಸಾಲ ಪಡೆಯಲು ಸರಕಾರ ನಿರ್ಧರಿಸಿದೆ. ಯೋಜನೆಯಿಂದ ಬರುವ ಆದಾಯ ಹುಡ್ಕೋ ಸಾಲ ತೀರಿಸಲು ಆದ್ಯತೆ ನೀಡಲಾಗಿದೆ.

ಈ ಯೋಜನೆಯು ನಗರಾಭಿವೃದ್ಧಿಯ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಆದರೆ, ಪಾರದರ್ಶಕ ಭೂಸ್ವಾಧೀನ ಪ್ರಕ್ರಿಯೆ, ನ್ಯಾಯಸಮ್ಮತ ಪರಿಹಾರ, ಸಮಯೋಚಿತ ಪುನರ್ವಸತಿ ಮತ್ತು ಮೂಲಸೌಕರ್ಯಕ್ಕೆ ಆದ್ಯತೆ ನೀಡುವ ಆಧಾರದಲ್ಲಿ ಈ ಯೋಜನೆ ಅವಲಂಬಿತವಾಗಿದೆ. ರೈತರು, ಭೂಮಾಲೀಕರು, ನಗರ ಯೋಜನೆ, ಪರಿಸರ, ಸ್ಥಳೀಯ ಸಮುದಾಯಗಳ ಮೇಲೆ ಬೀರುವ ಪರಿಣಾಮವನ್ನು ಸರಕಾರವು ಗಂಭೀರವಾಗಿ ಪರಿಗಣಿಸಬೇಕು. ಪ್ರೀಮಿಯಂ ಎಫ್‌ಎಆರ್, ಪರಿಸರ ಸಮತೋಲನ ಮತ್ತು ಸಮಗ್ರ ನಗರ ಯೋಜನಾ ಉದ್ದೇಶಗಳನ್ನು ದುರ್ಬಲಗೊಳಿಸಬಾರದು.

-ಪ್ರಶಾಂತ್ ಮಿರ್ಲೆ, ವಕೀಲರು

ಯೋಜನೆಯ ಮುಖ್ಯಾಂಶಗಳು

- ಒಟ್ಟು 7,481 ಎಕರೆ ಪ್ರದೇಶಗಳಲ್ಲಿ ಜಿಬಿಎ ಸಮಗ್ರ ಉಪನಗರ ಯೋಜನೆ ಅನುಷ್ಠಾನ
- ಸರಕಾರಿ ಮಾಲೀಕತ್ವದ 830 ಎಕರೆ ಇದ್ದರೆ, ಖಾಸಗಿ ಮಾಲೀಕತ್ವದ 6,650 ಎಕರೆ ಜಾಗ ಇದೆ.
- ರೈತರು ಸೇರಿ ಖಾಸಗಿ ಭೂಮಾಲೀಕರಿಂದ 6,650 ಎಕರೆ ಭೂಸ್ವಾಧೀನ ಮಾಡಿಕೊಳ್ಳಬೇಕಿದೆ
- ಪ್ರತಿ ಎಕರೆಗೆ ಭೂಮಾಲೀಕರಿಗೆ 9,696 ಚ.ಅಡಿ ವಸತಿ ನಿವೇಶನ/8,723 ಚ.ಅಡಿ ವಾಣಿಜ್ಯ ನಿವೇಶನ ಪರಿಹಾರ
- ಯೋಜನೆ ಅನುಷ್ಠಾನಕ್ಕೆ ಬಡ್ಡಿ ಸೇರಿ ಒಟ್ಟು 22,001 ಕೋಟಿ ರು. ವೆಚ್ಚ

ಜೈವಿಕ ಇಂಧನ ಸಹಭಾಗಿತ್ವಕ್ಕೆ ಹೊಸ ದಿಕ್ಕು

ಬೆಂಗಳೂರು: ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್. ಈ. ಸುಧೀಂದ್ರ ಅವರು ಮಧ್ಯಪ್ರದೇಶದ ಮುಖ್ಯಮಂತ್ರಿ ಡಾ. ಮೋಹನ್ ಯಾದವ್ ಅವರನ್ನು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿ ಚರ್ಚೆ ನಡೆಸಿದರು.

ಈ ಕುರಿತು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಮಾತನಾಡಿ, ಭೇಟಿಯ ವೇಳೆ ಕರ್ನಾಟಕದಲ್ಲಿ ರೂಪುಗೊಳ್ಳುತ್ತಿರುವ ನೂತನ ಜೈವಿಕ ಇಂಧನ ನೀತಿ, ರಾಜ್ಯದಲ್ಲಿ ಪ್ರಗತಿಯಲ್ಲಿರುವ ಜೈವಿಕ ಇಂಧನ ಯೋಜನೆಗಳು ಹಾಗೂ ಹಸಿರು ಇಂಧನ ಕ್ಷೇತ್ರದಲ್ಲಿ ರಾಜ್ಯಾಂತರ ಸಹಭಾಗಿತ್ವದ ಅವಕಾಶಗಳ ಕುರಿತು ಮಾತುಕತೆ ನಡೆಸಲಾಗಿದೆ. ಜೈವಿಕ ಇಂಧನ ನೀತಿಯು ಇಂಧನ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವುದರ ಜತೆಗೆ ರೈತರ ಆದಾಯ ಹೆಚ್ಚಿಸುವುದು, ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶ ನಿರ್ಮಿಸುವುದು ಮತ್ತು ಹೂಡಿಕೆದಾರರನ್ನು ಆಕರ್ಷಿಸುವ ಗುರಿ ಹೊಂದಿದೆ. ಜೈವಿಕ ಇಂಧನ ಮೂಲಸೌಕರ್ಯ ಅಭಿವೃದ್ಧಿ, ಸಂಶೋಧನೆ, ತಾಂತ್ರಿಕ ನವೀಕರಣ ಮತ್ತು ಸುಸ್ಥಿರ ಇಂಧನ ಬಳಕೆಗೆ ಕರ್ನಾಟಕ ಕೈಗೊಂಡಿರುವ ವಿವಿಧ ಕ್ರಮಗಳ ವಿವರಿಸಿಲಾಗಿದೆ ಎಂದರು.

ಚರ್ಚೆಯ ಪ್ರಮುಖ ವಿಷಯಗಳು:

ಚರ್ಚೆಯ ಪ್ರಮುಖ ಭಾಗವಾಗಿ, ಗೋವಿನ ಸಗಣಿ ಮತ್ತು ನಗರ ಘನ ತ್ಯಾಜ್ಯ ನಿರ್ವಹಣೆಗೆ ಮಧ್ಯಪ್ರದೇಶದಲ್ಲಿ ಅನುಷ್ಠಾನಗೊಳ್ಳುತ್ತಿರುವ ಸಿಬಿಜಿ ತಂತ್ರಜ್ಞಾನವು ಬೆಂಗಳೂರಿನಿಂದ ರೂಪುಗೊಂಡ ತಂತ್ರಜ್ಞಾನವಾಗಿರುವುದನ್ನು ಉಲ್ಲೇಖ. ಕೆಎಸ್‌ಬಿಡಿಬಿಯ ವಿಶ್ವಮಟ್ಟದ ಪ್ರಯೋಗಾಲಯ ಸೌಲಭ್ಯಗಳು, ಸಂಶೋಧನಾ ಸಾಮರ್ಥ್ಯ, ತಾಂತ್ರಿಕ ಪರಿಣಿತಿ ಹಾಗೂ ಜೈವಿಕ ಇಂಧನ ಪರಿಸರ ವ್ಯವಸ್ಥೆ ನಿರ್ಮಾಣದಲ್ಲಿ ನೀಡುತ್ತಿರುವ ನೀತಿ ಬೆಂಬಲದ ಕುರಿತು ಸಹ ಚರ್ಚೆ ನಡೆಯಿತು.

ಕೋಟ್ಯಂತರ ಗ್ರಾಹಕರ ಜೇಬಿನ ಹೊರೆ ಇಳಿಸಿದ ಗೃಹ ಜ್ಯೋತಿ

ಕರೆಂಟ್ ಬಿಲ್‌ನಿಂದ ಮುಕ್ತಿ, ಬದುಕಿಗೆ ಆರ್ಥಿಕ ಶಕ್ತಿ । ಕತ್ತಲ ಮನೆಗಳಿಗೆ ಬೆಳಕಿನ ಭಾಗ್ಯ

ಗ್ಯಾರಂಟಿ ವಾರ್ತೆ

ಬೆಂಗಳೂರು: ದಿನನಿತ್ಯದ ಬದುಕಿನ ವೆಚ್ಚಗಳು ಗಗನಕ್ಕೇರುತ್ತಿರುವ ಈ ಕಾಲದಲ್ಲಿ, ಸಾಮಾನ್ಯ ಕುಟುಂಬವೊಂದರ ಮಾಸಿಕ ಬಜೆಟ್ ಅನ್ನು ಅತಿ ಹೆಚ್ಚು ಕಾಡುವ ವಿಷಯವೆಂದರೆ ಅದು ಅಗತ್ಯ ಸೇವೆಗಳ ಬಿಲ್ ಪಾವತಿ. ಇಂತಹ ಸವಾಲಿನ ದಿನಗಳಲ್ಲಿ ರಾಜ್ಯದ ಬಡ ಹಾಗೂ ಕೆಳ-ಮಧ್ಯಮ ವರ್ಗದ ಕುಟುಂಬಗಳ ಮನೆ-ಮನಗಳನ್ನು ಬೆಳಗಿದ ಯೋಜನೆ 'ಗೃಹಜ್ಯೋತಿ'.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಜಾರಿಗೆ ತಂದ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಈ ಯೋಜನೆ, ಕಳೆದ ಮೂರು ವರ್ಷಗಳಲ್ಲಿ ಕೇವಲ ಉಚಿತ ವಿದ್ಯುತ್ ನೀಡುವ ಸೌಲಭ್ಯವಾಗಿ ಉಳಿಯದೆ, ರಾಜ್ಯದ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿಯ ಶಕ್ತಿಯಾಗಿ ಹೊರಹೊಮ್ಮಿದೆ. ಸರ್ಕಾರದ ಇಂಧನ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ರಾಜ್ಯದ 1.64 ಕೋಟಿಗೂ ಅಧಿಕ ಗೃಹ ವಿದ್ಯುತ್ ಗ್ರಾಹಕರು ಈ ಯೋಜನೆಯಡಿ ನೋಂದಾಯಿಸಿಕೊಂಡು 'ಶೂನ್ಯ ಬಿಲ್' (Zero Bill) ಸೌಲಭ್ಯವನ್ನು ಪಡೆಯುತ್ತಿದ್ದಾರೆ. ಇದಕ್ಕಾಗಿ ಸರ್ಕಾರವು ಈವರೆಗೆ ₹26,115 ಕೋಟಿ ಅನುದಾನವನ್ನು ವೆಚ್ಚ ಮಾಡಿದ್ದು, ವಿದ್ಯುತ್ ಸರಬರಾಜು ಕಂಪನಿಗಳಿಗೆ (ESCOMs) ಸಬ್ಸಿಡಿ ರೂಪದಲ್ಲಿ ಪಾವತಿಸುತ್ತಿದೆ.

2023ರ ಆಗಸ್ಟ್ 5ರಂದು ಕಲಬುರಗಿಯಲ್ಲಿ ಅಧಿಕೃತವಾಗಿ ಚಾಲನೆ ಪಡೆದ ಈ ಯೋಜನೆ, ರಾಜ್ಯದ ಪ್ರತಿಯೊಂದು ಮನೆಗೂ ಗರಿಷ್ಠ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಭರವಸೆಯನ್ನು ಯಶಸ್ವಿಯಾಗಿ ಈಡೇರಿಸಿದೆ. ಈ ಯೋಜನೆಯ ಅತ್ಯಂತ ಪ್ರಗತಿಪರ ನಿರ್ಧಾರವೆಂದರೆ, ಇದು ಕೇವಲ ಸ್ವಂತ ಮನೆ ಉಳ್ಳವರಿಗಷ್ಟೇ ಸೀಮಿತವಾಗದೆ, ಲಕ್ಷಾಂತರ ಬಾಡಿಗೆ ಮನೆಗಳ ನಿವಾಸಿಗಳಿಗೂ ವಿಸ್ತರಣೆಯಾಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಭಾಗದ ಶ್ರಮಿಕ ವರ್ಗಕ್ಕೆ ಅತಿ ದೊಡ್ಡ ಆರ್ಥಿಕ ನೆಮ್ಮದಿ ಸಿಕ್ಕಂತಾಗಿದೆ.

ದುಡಿದು ತಿನ್ನುವ ನಮ್ಮಂಥವರಿಗೆ ಕರೆಂಟ್ ಬಿಲ್ ಕಟ್ಟುವುದೇ ದೊಡ್ಡ ಕಗ್ಗಂಟಾಗಿತ್ತು. ಎರಡು ದಿನದ ಕಷ್ಟದ ದುಡಿಮೆಯನ್ನು ಅದಕ್ಕೇ ಮುಡಿಪಾಗಿಡಬೇಕಿತ್ತು. ಈಗ ಸಿದ್ದರಾಮಯ್ಯನವರ ಕಡೆಯಿಂದ ಕರೆಂಟ್ ಸಂಪೂರ್ಣ ಉಚಿತವಾಗಿದೆ. ಇದ-ರಿಂದ ಉಳಿಯುವ ಹಣ ನಮ್ಮ ಹೊಟ್ಟೆ ತುಂಬಿಸುತ್ತಿದೆ. ಅಷ್ಟೇ ಅಲ್ಲ, ನಮ್ಮ ಮಕ್ಕಳು ಯಾವುದೇ ಭಯವಿಲ್ಲದೆ ರಾತ್ರಿ ಹೊತ್ತು ನೆಮ್ಮದಿಯಿಂದ ಓದಿಕೊಳ್ಳಲು ಈ ಯೋಜನೆ ಬೆಳಕಾಗಿದೆ.

ಮಹದೇವಪ್ಪ ವಾಲ್ಮೀಕಿ, ಹಾವೇರಿ

ಕೂಲಿ ಮಾಡಿ ದಿನದ ತುತ್ತು ಹುಡುಕುವ ಜನ ನಾವು. ತಿಂಗಳಿಗೆ ಸಾವಿರ ರೂಪಾಯಿ ಕರೆಂಟ್ ಬಿಲ್ ಬರುತ್ತಿತ್ತು. ಬಿಲ್ ಕಟ್ಟಲು ಎರಡು ದಿನದ ಇಡೀ ಕೂಲಿಯನ್ನು ಎತ್ತಿಡಬೇಕಿತ್ತು. ಆದರೆ ಗೃಹಜ್ಯೋತಿಯಿಂದಾಗಿ 'ಜೀರೋ ಬಿಲ್' ಬರುತ್ತಿದೆ. ಕರೆಂಟ್ ಫ್ರೀ ಆಗಿದ್ದರಿಂದ ಬಡವರ ಬದುಕಿಗೆ ಬಹಳ ಅನುಕೂಲವಾಗಿದೆ.

ಲಕ್ಷ್ಮಣಕುಮಾರ್, ರಾಯಚೂರು

ಬಂಡವಾಳದ ಕೊರತೆಯಿಂದಾಗಿ ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ನೀಡಲು ಹೊಸ ಯಂತ್ರ ಖರೀದಿಸಲಾಗದೆ ಹಾಗೂ ವಿದ್ಯುತ್ ವೆಚ್ಚ ಭರಿಸಲು ಚಿಂತಿಸುತ್ತಿದ್ದೆ. ಇಂತಹ ಸಮಯದಲ್ಲಿ ಸರ್ಕಾರದ 'ಗೃಹಜ್ಯೋತಿ' ಯೋಜನೆಯ ಉಚಿತ ಕರೆಂಟ್ ನನಗೆ ದೊಡ್ಡ ಬಲ ತುಂಬಿತು. ವಿದ್ಯುತ್ ಬಿಲ್‌ನ ಚಿಂತೆ ಇಲ್ಲದಾದಾಗ, ಪ್ರತಿ ತಿಂಗಳು ಬರುತ್ತಿದ್ದ 'ಗೃಹಲಕ್ಷ್ಮಿ' ಹಣವನ್ನು ಅತ್ಯಂತ ಜೋಪಾನವಾಗಿ ಕೂಡಿಟ್ಟು ಹೊಸ ಹೊಲಿಗೆ ಯಂತ್ರಗಳನ್ನು ಖರೀದಿಸಿ ಸ್ವಂತ 'ಟೈಲರಿಂಗ್ ಕ್ಲಾಸ್' ಆರಂಭಿಸಿದೆ!

ಅಮೀನಾ ಬೇಗಂ, ಶಹಾಪುರ

ದೇಶಕ್ಕೇ ಮಾದರಿಯಾದ ಇಂಧನ ಕ್ರಾಂತಿ

ಕರ್ನಾಟಕದ ಈ 'ಗೃಹಜ್ಯೋತಿ' ಮಾದರಿಯು ದೇಶದ ಇಂಧನ ವಲಯದಲ್ಲೇ ಒಂದು ಕ್ರಾಂತಿ-ಕಾರಿ ಹೆಜ್ಜೆಯಾಗಿದೆ. ಕೇವಲ ಉಚಿತ ಸೌಲಭ್ಯ ನೀಡುವುದಷ್ಟೇ ಅಲ್ಲದೆ, ಗ್ರಾಹಕರು ತಮ್ಮ ಸರಾಸರಿ ಬಳಕೆಯ ಮಿತಿಯೊಳಗೆ ವಿದ್ಯುತ್ ಬಳಸುವಂತೆ ಪ್ರೇರೇಪಿಸುವ ಮೂಲಕ ವಿದ್ಯುತ್ ಉಳಿತಾಯದ (Power Conservation) ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ದೇಶದ ಹಲವು ರಾಜ್ಯಗಳು ಇಂದು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ತಮ್ಮಲ್ಲೂ ಜಾರಿಗೆ ತರಲು ಆಸಕ್ತಿ ತೋರುತ್ತಿರುವುದು ಇದರ ಸಾಧನೆಯಾಗಿದೆ.

ಶೂನ್ಯ ಬಿಲ್‌ನಿಂದ ಗ್ರಾಮೀಣ ಆರ್ಥಿಕತೆ ಚೇತರಿಕೆ

ಪ್ರತಿ ತಿಂಗಳು ವಿದ್ಯುತ್ ಬಿಲ್ ರೂಪದಲ್ಲಿ ಉಳಿತಾಯವಾಗುತ್ತಿರುವ ₹800 ರಿಂದ ₹1,500 ವರೆಗಿನ ಹಣವು ಬಡ ಮತ್ತು ಮಧ್ಯಮ ವರ್ಗದವರ ಜೇಬಿನಲ್ಲೇ ಉಳಿಯುತ್ತಿದೆ. ಈ ಹಣವನ್ನು ಪೋಷಕರು ತಮ್ಮ ಮಕ್ಕಳ ಶಾಲಾ ಸೌಲಭ್ಯಗಳಿಗೆ, ಉತ್ತಮ ಪೌಷ್ಟಿಕ ಆಹಾರ ಧಾನ್ಯಗಳ ಖರೀದಿಗೆ ಮತ್ತು ಮನೆಯ ಹಿರಿಯರ ಔಷಧಿ ವೆಚ್ಚಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಸಣ್ಣಪುಟ್ಟ ಉದ್ದಿಮೆಗಳನ್ನು ಕೂಡ ಮನೆಯಿಂದಲೇ ಆರಂಭಿಸಿದ್ದಾರೆ. ಆ ಮೂಲಕ ಜನರ ಕೊಳ್ಳುವ ಶಕ್ತಿ ಹೆಚ್ಚಾಗಿದ್ದು, ಗ್ರಾಮೀಣ ಆರ್ಥಿಕತೆಯೂ ಚೇತರಿಸಿಕೊಳ್ಳುತ್ತಿದೆ.



ಬಡವರ ಮನೆ ಬೆಳಗುವುದೇ ನಿಜವಾದ ಸುಶಾಸನ

ಪ್ರತಿ ತಿಂಗಳು ಕೋಟ್ಯಂತರ ಮನೆಗಳಿಗೆ ಗೃಹಜ್ಯೋತಿಯಡಿ ಶೂನ್ಯ ಬಿಲ್ ತಲುಪುತ್ತಿರುವುದನ್ನು ನೋಡಿದಾಗ ಆಗುವ ತೃಪ್ತಿ ಅಪಾರ. ಜನರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡಿ, ಅವರ ಬದುಕಿನ ಗುಣಮಟ್ಟವನ್ನು ಹೆಚ್ಚಿಸುವುದೇ ನಮ್ಮ ಪ್ರಗತಿಪರ ಕರ್ನಾಟಕದ ಮೂಲ ಆಶಯ.

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

ಇಂಧನ ವಲಯದಲ್ಲಿ ಕರ್ನಾಟಕದ ಹೊಸ ಇತಿಹಾಸ

ಗೃಹಜ್ಯೋತಿ ಯೋಜನೆಯು ಜನಸಾಮಾನ್ಯರ ಆರ್ಥಿಕ ಸಬಲೀಕರಣಕ್ಕೆ ಹೊಸ ಶಕ್ತಿ ತುಂಬಿದೆ. ಗೃಹಬಳಕೆಯ ವಿದ್ಯುತ್ ಬಿಲ್‌ನಿಂದ ಮುಕ್ತಿ ನೀಡುವುದರ ಜೊತೆಗೆ, ಜನರಲ್ಲಿ ಜವಾಬ್ದಾರಿಯುತ ವಿದ್ಯುತ್ ಬಳಕೆಯ ಶಿಸ್ತನ್ನು ತಂದಿರುವುದು ಈ ಯೋಜನೆಯ ದೊಡ್ಡ ಯಶಸ್ಸು.

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

ಪಾರದರ್ಶಕ ಮತ್ತು ನಿರಂತರ ಇಂಧನ ಸೇವೆ

ಅತ್ಯಂತ ಸಂಕೀರ್ಣವಾದ ವಿದ್ಯುತ್ ವಿತರಣಾ ವ್ಯವಸ್ಥೆಯ ನಡುವೆಯೂ, ನಮ್ಮ ಇಲಾಖೆಯು 1.64 ಕೋಟಿಗೂ ಅಧಿಕ ಗ್ರಾಹಕರಿಗೆ ಯಾವುದೇ ಗೊಂದಲವಿಲ್ಲದೆ ಗೃಹಜ್ಯೋತಿಯ ಸೌಲಭ್ಯವನ್ನು ಯಶಸ್ವಿಯಾಗಿ ತಲುಪಿಸಿದೆ.

ಕೆ.ಜೆ. ಜಾರ್ಜ್, ಇಂಧನ ಸಚಿವರು

ಕರ್ನಾಟಕ ವಾರ್ತೆ

ಹೆಣ್ಣೂರು ಸ್ಪರ್ಶ್ ಆಸ್ಪತ್ರೆಗೆ ಒಂದು ವರ್ಷ

ಬೆಂಗಳೂರು: ಸ್ಪರ್ಶ್ ಆಸ್ಪತ್ರೆಯ ಹೆಣ್ಣೂರು ಶಾಖೆ ತನ್ನ ಕಾರ್ಯಾಚರಣೆಯ ಮೊದಲ ವರ್ಷವನ್ನು ಪೂರ್ಣಗೊಳಿಸಿದ್ದು, ಉತ್ತರ ಬೆಂಗಳೂರಿನಲ್ಲಿ ಸಮಗ್ರ ಮತ್ತು ಸುಧಾರಿತ ಆರೋಗ್ಯಸೇವೆಗಳ ಬೇಡಿಕೆ ಗಣನೀಯವಾಗಿ ಏರಿಕೆಯಾಗಿರುವುದು ಆಸ್ಪತ್ರೆಯ ಅಂಕಿಅಂಶಗಳಿಂದ ಸ್ಪಷ್ಟವಾಗಿದೆ ಎಂದು ಸ್ಪರ್ಶ್ ಆಸ್ಪತ್ರೆಯ ಸಿಒಒ ಕರ್ನಲ್ ರಾಹುಲ್ ತಿವಾರಿ ತಿಳಿಸಿದರು.

ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಕಳೆದ ಹನ್ನೆರಡು ತಿಂಗಳಲ್ಲಿ ಆಸ್ಪತ್ರೆಯಲ್ಲಿ 50 ಸಾವಿರಕ್ಕೂ ಹೆಚ್ಚು ಒಪಿಡಿ ಭೇಟಿಗಳು ದಾಖಲಾಗಿದ್ದು, 6 ಸಾವಿರಕ್ಕೂ ಅಧಿಕ ಆರೋಗ್ಯ ತಪಾಸಣೆ, 2 ಸಾವಿರಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆ, 1 ಸಾವಿರಕ್ಕೂ ಹೆಚ್ಚು ಕ್ಯಾಥ್ ಲ್ಯಾಬ್ ಪ್ರೊಸೀಜರ್, 3,500ಕ್ಕೂ ಅಧಿಕ ಡಯಾಲಿಸಿಸ್ ಸೆಷನ್ ಹಾಗೂ 2,800ಕ್ಕೂ ಹೆಚ್ಚು ಸಿಟಿ ಮತ್ತು ಎಂಆರ್‌ಐ ಸ್ಕ್ಯಾನ್‌ಗಳು ನಡೆದಿವೆ. ಸ್ಪರ್ಶ್ ಆಸ್ಪತ್ರೆ ಹೆಣ್ಣೂರು ರಸ್ತೆ ಮತ್ತು ಯಶವಂತಪುರ, ಉತ್ತರ-ಪೂರ್ವ ಬೆಂಗಳೂರಿನ ಆರೋಗ್ಯ ಅಗತ್ಯಗಳು ವೇಗವಾಗಿ ಬದಲಾಗುತ್ತಿವೆ. ಸಾಮಾನ್ಯ ಹಾಗೂ ಸಂಕೀರ್ಣ ಚಿಕಿತ್ಸೆಗಳನ್ನು ಒಂದೇ ಸಮನ್ವಯಿತ ವ್ಯವಸ್ಥೆಯಡಿ ನೀಡಬಲ್ಲ ಆಸ್ಪತ್ರೆಗಳ ಅಗತ್ಯ ಹೆಚ್ಚುತ್ತಿದೆ. ಮುಂದಿನ ದಿನಗಳಲ್ಲಿ ಸಮುದಾಯಕ್ಕೆ ಸಮಯೋಚಿತ, ಸುಲಭ ಮತ್ತು ಸಹಾನುಭೂತಿಯುತ ಆರೋಗ್ಯಸೇವೆ ನೀಡುವುದರತ್ತ ನಮ್ಮ ಗಮನ ಮುಂದುವರಿಯಲಿದೆ ಎಂದರು.

ಎಂಸಿಯು ಹಣಕಾಸು ಅಧಿಕಾರಿ ವಿರುದ್ಧ ಪ್ರತಿಭಟನೆ

ಬೆಂಗಳೂರು: ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವಿತ್ತಾಧಿಕಾರಿ ಎಂ.ಎಸ್.ಚೇತನ್ ಕುಮಾರ್ ವಿದ್ಯಾರ್ಥಿ ವಿರೋಧಿಧೋರಣೆ ಹಾಗೂ ಮಹಿಳಾ ಉಪನ್ಯಾಸಕರಿಗೆ ನೀಡುತ್ತಿರುವ ಮಾನಸಿಕ ಕಿರುಕುಳ ಖಂಡಿಸಿ ಸೋಮವಾರ ರಾಷ್ಟ್ರೀಯ ಅಂಬೇಡ್ಕರ್ ಸೇನೆ ಹಾಗೂ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯರ ಕ್ಷೇಮಾಭಿವೃದ್ಧಿ ಒಕ್ಕೂಟದ ಜಂಟಿ ಆಶ್ರಯದಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ಪ್ರತಿಭಟನಾ ಧರಣಿ ನಡೆಯಿತು.

ಈ ಕುರಿತು ರಾಷ್ಟ್ರೀಯ ಅಂಬೇಡ್ಕರ್ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಡಾ.ಜಿ.ಅರ್ಜುನ್ ಗೋಪಾಲಯ್ಯ ಮಾತನಾಡಿ, ವಿಭಾಗದಲ್ಲಿ ಅಧ್ಯಯನ ಮಾಡುತ್ತಿರುವ ಬಹುತೇಕ ವಿದ್ಯಾರ್ಥಿಗಳು ಎಸ್‌ಸಿ, ಎಸ್‌ಟಿ ಅಲ್ಪಸಂಖ್ಯಾತ ಹಾಗೂ ರೈತ ಕುಟುಂಬಗಳ ಹಿನ್ನೆಲೆಯವರಾಗಿದ್ದು, ಅವರ ಉದ್ಯೋಗ ಭವಿಷ್ಯಕ್ಕೆ ಸಹಾಯಕವಾಗಬೇಕಿದ್ದ ಪ್ಲೇಸ್‌ಮೆಂಟ್ ಟ್ರೈನಿಂಗ್ ಪ್ರೋಗ್ರಾಂಗೆ ಬಿಡುಗಡೆ ಆಗಬೇಕಿದ್ದ ಅನುದಾನವನ್ನು ವಿತ್ತಾಧಿಕಾರಿ ತಡೆಹಿಡಿದಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗುತ್ತಿದೆ. ಕಳೆದ ಮೂರು ತಿಂಗಳಿನಿಂದ ಅತಿಥಿ ಉಪನ್ಯಾಸಕರಿಗೆ ಹಾಗೂ ವಿಷಯ ತಜ್ಞರಿಗೆ ನೀಡಬೇಕಿದ್ದ ಗೌರವಧನ ಹಣಕಾಸು ವಿಭಾಗದಿಂದ ತಡೆಹಿಡಿದಿರುವುದರಿಂದ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಉಂಟಾಗಿದೆ ಎಂದರು.

ವಿತ್ತಾಧಿಕಾರಿ ಎಂ.ಎಸ್.ಚೇತನ್ ಮಹಿಳಾ ಉಪನ್ಯಾಸಕರಿಗೆ ಮಾನಸಿಕ ಕಿರುಕುಳ ನೀಡುತ್ತಿರುವುದಾಗಿಯೂ ದೂರು ಬಂದಿವೆ. ಈ ಸಂಬಂಧ ಕೆಲವು ಮಹಿಳಾ ಉಪನ್ಯಾಸಕರು ಈಗಾಗಲೇ ಕುಲಪತಿಗಳಿಗೆ ಲಿಖಿತ ದೂರು ಸಲ್ಲಿಸಿದ್ದಾರೆ. ಅವರ ವಿರುದ್ಧ ಕ್ರಮಕೈಗೊಳ್ಳಲು ಉನ್ನತ ಶಿಕ್ಷಣ ಸಚಿವ, ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ರಾಜ್ಯ ಮಹಿಳಾ ಆಯೋಗಕ್ಕೆ ದೂರು ಸಲ್ಲಿಸಿದ್ದೇವೆ. ಪ್ಲೇಸ್‌ಮೆಂಟ್ ತರಬೇತಿ ಹಾಗೂ ಅತಿಥಿ ಉಪನ್ಯಾಸಕರ ಗೌರವಧನ ತಕ್ಷಣ ಬಿಡುಗಡೆ ಮಾಡಬೇಕು, ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡಿದ ಆರೋಪದ ಕುರಿತು ಮಹಿಳಾ ಆಯೋಗವು ಸ್ವಯಂಪ್ರೇರಿತ ತನಿಖೆ ನಡೆಸಬೇಕು ಹಾಗೂ ಸಂಬಂಧಪಟ್ಟ ಅಧಿಕಾರಿಯನ್ನು ಸೇವೆಯಿಂದ ಅಮಾನತುಪಡಿಸಿ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂಬುವುದು ನಮ್ಮ ಬೇಡಿಕೆ ಎಂದರು. ಈ ವೇಳೆ ಎಂ.ಕೆಂಚಯ್ಯ, ಯಂಕೋಬ ಜೂರಟಗಿ ಸೇರಿದಂತೆ ಇನ್ನಿತರರು ಇದ್ದರು.

ವಿತ್ತಾಧಿಕಾರಿ ಎಂ.ಎಸ್.ಚೇತನ್ ಕುಮಾರ್ ಆಡಳಿತ ವಿರೋಧಿಸಿ ರಾಷ್ಟ್ರೀಯ ಅಂಬೇಡ್ಕರ್ ಸೇನೆ ಹಾಗೂ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ವಿದ್ಯಾರ್ಥಿನಿಯರ ಕ್ಷೇಮಾಭಿವೃದ್ಧಿ ಒಕ್ಕೂಟ ಪ್ರತಿಭಟನೆ ಮಾಡಿದರು. ಈ ವೇಳೆ ರಾ.ಅಂ.ಸೇ. ರಾಷ್ಟ್ರೀಯ ಅಧ್ಯಕ್ಷ ಡಾ.ಜಿ.ಅರ್ಜುನ್ ಗೋಪಾಲಯ್ಯ, ಎಂ.ಕೆಂಚಯ್ಯ, ಯಂಕೋಬ ಜೂರಟಗಿ, ವಿದ್ಯಾರ್ಥಿಗಳು ಇದ್ದರು.

ಎಐ, ಡಿಜಿಟಲ್ ವಾಟರ್ ಶೃಂಗಸಭೆ ನಾಳೆ

ಬೆಂಗಳೂರು: ಭವಿಷ್ಯದ ಜಲ ನಿರ್ವಹಣೆ ಕುರಿತು ಚರ್ಚಿಸಲು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ವತಿಯಿಂದ ಮೇ 27 ರಂದು ನಗರದ ಫೋರ್ ಸೀಸನ್ಸ ಹೋಟೆಲ್‌ನಲ್ಲಿ ದೇಶದ ಮೊಟ್ಟಮೊದಲ ಹಾಗೂ ಅತಿದೊಡ್ಡ ರಾಷ್ಟ್ರೀಯ ಎಐ ಮತ್ತು ಡಿಜಿಟಲ್ ವಾಟರ್ ಶೃಂಗಸಭೆ 2026 ಆಯೋಜಿಸಿದೆ ಎಂದು ಜಲಮಂಡಳಿ ಅಧ್ಯಕ್ಷರಾದ ಡಾ.ರಾಮ್ ಪ್ರಸಾತ್ ಮನೋಹರ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶೃಂಗಸಭೆಯಲ್ಲಿ ಸಿಎಂ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ. ಭವಿಷ್ಯದ ಸ್ಮಾರ್ಟ್ ಜಲ ನಿರ್ವಹಣಾ ವ್ಯವಸ್ಥೆ ರೂಪಿಸುವ ಗುರಿ ಹೊಂದಿರುವ ಈ ಶೃಂಗಸಭೆಯಲ್ಲಿ ಜಾಗತಿಕ ಜಲ ತಜ್ಞರು, ಎಐ ಪರಿಣತರು ಮತ್ತು ತಂತ್ರಜ್ಞಾನ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಪ್ರಮುಖವಾಗಿ ಎಐ ಆಧಾರಿತ ಜಲ ಆಡಳಿತ, ಸ್ಮಾರ್ಟ್ ಯುಟಿಲಿಟಿ, ಡಿಜಿಟಲ್ ಟ್ವಿನ್ಸ್, ಐಒಟಿ ಮೇಲ್ವಿಚಾರಣೆ, ತ್ಯಾಜ್ಯನೀರು ಮರುಬಳಕೆ, ಮುನ್ಸೂಚಕ ವಿಶ್ಲೇಷಣೆ ಹಾಗೂ ಭವಿಷ್ಯದ ಆರ್ಥಿಕ ಮಾದರಿಗಳ ಕುರಿತು ಚರ್ಚೆಗಳು ನಡೆಯಲಿವೆ ಎಂದರು.

ಜತೆಗೆ ಶೃಂಗಸಭೆಯಲ್ಲಿ ಬೆಂಗಳೂರು ಜಲಮಂಡಳಿಯ ಸ್ಕಾಡಾ, ಜಿಐಎಸ್ ಮ್ಯಾಪಿಂಗ್, ಐಒಟಿ ಟ್ಯಾಂಕರ್ ಟ್ರ್ಯಾಕಿಂಗ್, ಸ್ಮಾರ್ಟ್ ಮೀಟರಿಂಗ್ ವ್ಯವಸ್ಥೆಗಳ ಪ್ರದರ್ಶನ ಹಾಗೂ ಜಲಮಂಡಳಿಯ ಕೃತಕ ಬುದ್ಧಿಮತ್ತೆ ಆಧಾರಿತ ಪ್ರಜ್ಞಾ, ದತ್ತಾಂಶ ಆಧಾರಿತ ನೀತಿ, ಸ್ಮಾರ್ಟ್ ಮೂಲಸೌಕರ್ಯದ ತಂತ್ರಜ್ಞಾನ, ಸುಸ್ಥಿರ ಹೂಡಿಕೆಯ ಅರ್ಥ, ಹವಾಮಾನ ಭದ್ರತೆಯ ಸ್ಥಿರತೆಯನ್ನು ಒಳಗೊಂಡಿರುವ ಮಹತ್ವಾಕಾಂಕ್ಷೆಯ ಪಂಚಸೂತ್ರಗಳ ಕಾರ್ಯತಂತ್ರವು ಈ ಶೃಂಗಸಭೆಯ ಪ್ರಮುಖ ಆಕರ್ಷಣೆಯಾಗಲಿದೆ.

ಭವಿಷ್ಯದ ಬೇಡಿಕೆಗಳನ್ನು ಪೂರೈಸಲು ಹೆಚ್ಚು ಪಾರದರ್ಶಕ, ದಕ್ಷ ಮತ್ತು ಸ್ಥಿತಿಸ್ಥಾಪಕ ಸಾರ್ವಜನಿಕ ಸೇವಾ ಮಾದರಿ ರಚಿಸುವುದು ಈ ಡಿಜಿಟಲ್ ರೂಪಾಂತರದ ಮುಖ್ಯ ಉದ್ದೇಶವಾಗಿದೆ ಎಂದರು.

ಜಿಬಿಎ ಚುನಾವಣೆಗೆ ಜೆಡಿಎಸ್ ಸಿದ್ಧತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯ ಪಂಚ ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಸರಕಾರಕ್ಕೆ ಸುಪ್ರೀಂಕೋರ್ಟ್ ಅಂತಿಮ ಗಡುವು ನೀಡಿರುವ ಹಿನ್ನೆಲೆಯಲ್ಲಿ ಜೆಡಿಎಸ್ ಚುನಾವಣಾ ಪೂರ್ವ ಸಿದ್ಧತೆ ಆರಂಭಿಸಿದೆ.

ಜೆಡಿಎಸ್ ರಾಜ್ಯ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಸೂಚನೆಯಂತೆ ಪಕ್ಷದ ಕಚೇರಿ ಜೆಪಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೋರ್ ಕಮಿಟಿ ಅಧ್ಯಕ್ಷ ಎಂ. ಕೃಷ್ಣಾರೆಡ್ಡಿ ಹಾಗೂ ಗ್ರೇಟರ್ ಬೆಂಗಳೂರು ಜೆಡಿಎಸ್ ಅಧ್ಯಕ್ಷ ಎಚ್.ಎಂ ರಮೇಶ್ ಗೌಡ ನೂತನ ಪದಾಧಿಕಾರಿಗಳನ್ನು ನೇಮಿಸಿ ಆದೇಶ ಪತ್ರ ಹಸ್ತಾಂತರ ಮಾಡಿದರು.

ಅಬಕಾರಿ ಸುಧಾರಣೆ 2026: ಆಕ್ಷೇಪಣೆ, ಸಲಹೆ ಸಲ್ಲಿಸಲು ಸಾರ್ವಜನಿಕರಿಗೆ ಅವಕಾಶ



ಬೆಂಗಳೂರು: ಸಿದ್ದರಾಮಯ್ಯ ಸರಕಾರದ ಪ್ರಸ್ತಾವಿತ ಕರ್ನಾಟಕ ರಾಜ್ಯ ಅಬಕಾರಿ ಸುಧಾರಣೆಗಳು 2026ಕ್ಕೆ ಸಾರ್ವಜನಿಕರ ಸಲಹೆ, ಸೂಚನೆ, ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ನೀಡಲಾಗಿದೆ.ಇದೇ ಮೇ 31ರೊಳಗೆ ಸಾರ್ವಜನಿಕರು ಕರ್ನಾಟಕ ರಾಜ್ಯ ಅಬಕಾರಿ ಸುಧಾರಣೆಗಳು 2026ರ ಬಗ್ಗೆ ತಮ್ಮ ಸಲಹೆ, ಸೂಚನೆ, ಆಕ್ಷೇಪಣೆಗಳನ್ನು ಸಲ್ಲಿಸಬಹುದು ಎಂದು ಸಿಎಂ ಅವರು ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಸಾರ್ವಜನಿಕರು ಈ ಲಿಂಕ್ https://www.civis.vote/consultations/ 1524/read ಬಳಸಿ ತಮ್ಮ ಅಭಿಪ್ರಾಯ ತಿಳಿಸಬಹುದು.ರಾಜ್ಯ ಸರಕಾರವು

ಮದ್ಯದ ಮೇಲಿನ ಅಬಕಾರಿ ಸುಂಕದ ಸ್ವರೂಪದಲ್ಲಿ ಬದಲಾವಣೆ ತರಲು ಮುಂದಾಗಿದೆ. ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣ ಮತ್ತು ಅದು ಉಂಟುಮಾಡುವ ಸಾಮಾಜಿಕ ಪರಿಣಾಮಗಳನ್ನೂ ಪರಿಗಣಿಸಿ ತೆರಿಗೆ ವಿಧಿಸುವ ಸಂಬಂಧ ಕರಡು ನಿಯಮಗಳನ್ನು ಬಿಡುಗಡೆ ಮಾಡಿದೆ.ಹೆಚ್ಚು ಆಲ್ಕೋಹಾಲ್ ಇರುವ, ಸಮಾಜದ ಮೇಲೆ ಹೆಚ್ಚಿನ ಪರಿಣಾಮಗಳನ್ನು ಬೀರುವ ಮದ್ಯದ ಮೇಲಿನ ತೆರಿಗೆ ಪ್ರಮಾಣ ಹೆಚ್ಚಾಗಲಿದೆ. ಮದ್ಯ ನಿಷೇಧದ ಬದಲಿಗೆ ಬೇರೊಂದು ರೀತಿಯಲ್ಲಿ ಕುಡಿತದ ಸಮಸ್ಯೆ-ಸವಾಲುಗಳನ್ನು ಎದುರಿಸಲು ಪೂರಕವಾಗುವಂತೆ ಹೊಸ ನಿಯಮಗಳನ್ನು ರೂಪಿಸಲಾಗಿದೆಆಲ್ಕೋಹಾಲ್ ಪ್ರಮಾಣ ಆಧರಿತ ತೆರಿಗೆ ವ್ಯವಸ್ಥೆಯು ಈ ಸುಧಾರಣೆಯ ಪ್ರಮುಖ ಭಾಗವಾಗಿದೆ. ಮದ್ಯ ಕುಡಿತದಿಂದ ಉಂಟಾಗುವ ಹಾನಿಯು ಅವರು ಸೇವಿಸುವ ಆಲ್ಕೋಹಾಲ್ ಪ್ರಮಾಣವನ್ನು ಆಧರಿಸಿರುತ್ತದೆ. ಆದ್ದರಿಂದ, ಒಂದು ಲೀಟರ್ ಶುದ್ಧ ಆಲ್ಕೋಹಾಲ್ ಮೇಲಿನ ತೆರಿಗೆಯು (ಎಲ್‌ಎಐಬಿ) ಪ್ರತಿಯೊಂದು ಮದ್ಯಕ್ಕೂ ಅದರ ಹಾನಿಯ ಸಂಭಾವ್ಯಕ್ಕೆ ಅನುಗುಣವಾಗಿಯೇ ತೆರಿಗೆ ವಿಧಿಸುವುದನ್ನು ಖಚಿತಪಡಿಸುತ್ತದೆ ಎಂದು ಸರಕಾರ ತಿಳಿಸಿದೆ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು–560009.

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

<table>
<tr><th>ಕ್ರ. ಸಂ</th><th>ಸಾಲಗಾರರ ಹೆಸರು ಮತ್ತು ವಿಳಾಸ</th><th>ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ</th><th>ನೋಟೀಸ್ ದಿನಾಂಕ</th><th>ಬರಬೇಕಾದ ಬಾಕಿ (ರೂ.ಗಳಲ್ಲಿ)</th></tr>
<tr><td>1.</td><td>(1) ಶ್ರೀ.ಮುಸ್ಸೂರು ಶಶಿಧರ್
ಬಿನ್ ಶ್ರೀ ಎಂ ಲಕ್ಷ್ಮಣ್ಣ
(2) ಶ್ರೀಮತಿ ಸೌಮ್ಯ ಕಣಿಯಮಪತಿ
ಕೋಂ ಶ್ರೀ ಮುಸ್ಸೂರು ಶಶಿಧರ್,
ಇವರಿಬ್ಬರ ವಿಳಾಸ: ವೈದ್ಯರ ಕ್ವಾರ್ಟರ್ಸ್, ಸೇಂಟ್ ಮಾರ್ಟಿನ್ ಆಸ್ಪತ್ರೆ, ಅಂಬಲವಾಯಲ್ ಪೋಸ್ಟ್, ವಯನಾಡ್, ಕೇರಳ–673593.
ಮತ್ತೊಂದು ವಿಳಾಸ: ನಂ.49, 3ನೇ ಕ್ರಾಸ್, ಎಸ್‌ಬಿಎಂ ಕಾಲೋನಿ, ಬೃಂದಾವನ ನಗರ, ಬೆಂಗಳೂರು ಉತ್ತರ– 560054.</td><td>ಶ್ರೀ ಮುಸ್ಸೂರು ಶಶಿಧರ್ ಮತ್ತು ಶ್ರೀಮತಿ ಸೌಮ್ಯ ಕಣಿಮಾಪತಿ ಅವರಿಗೆ ಸೇರಿದ ಆಸ್ತಿಯ ವಿವರ
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.11, (ಹಳೆ ನಂ.11/73–3), ಪ್ರಸ್ತುತ ಬಿಬಿಎಂಪಿ ಖಾತಾ ನಂ.49, ಪಿಐಡಿ ನಂ.2–97–39, ಹೊಸ ಪಿಐಡಿ ನಂ.017–W0333–23, ಈ ಆಸ್ತಿಯು 3ನೇ ಕ್ರಾಸ್, ಎಸ್.ಬಿ.ಎಂ ಕಛೇರಿಗಳ ಕಾಲೋನಿ, 8ನೇ ಮೇನ್, ಬೃಂದಾವನ ನಗರ, ಮತ್ತಿಕೆರೆ, ಬಿಬಿಎಂಪಿ ವಾರ್ಡ್ ನಂ.2, ಬೆಂಗಳೂರಿನಲ್ಲಿದೆ. ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 40 ಅಡಿ ಅಥವಾ 12.19 ಮೀಟರ್‌ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 35 ಅಡಿ ಅಥವಾ 10.66 ಮೀಟರ್‌ಗಳು, ಒಟ್ಟು ವಿಸ್ತೀರ್ಣ 1400 ಚದರ ಅಡಿ (129.14 ಚದರ ಮೀಟರ್‌ಗಳು) ಜೊತೆಗೆ 1800 ಚದರ ಅಡಿ ಮನೆಯನ್ನು ನಿರ್ಮಿಸಲಾಗಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ಆಸ್ತಿ, ಪಶ್ಚಿಮಕ್ಕೆ: 25 ಅಡಿ ರಸ್ತೆ, ಉತ್ತರಕ್ಕೆ: ನಿವೇಶನ ನಂ.12, ದಕ್ಷಿಣಕ್ಕೆ: ನಿವೇಶನ ನಂ.10.
ಯಾವುದೇ ಮಾಹಿತಿಗಾಗಿ ಶ್ರೀ ಗಿರಿಧರ್ ಡಿ, ಮೊಬೈಲ್ ನಂ.9703831581ನ್ನು ಸಂಪರ್ಕಿಸಿ.</td><td>29.04.2026
ಎನ್‌ಪಿಎ ದಿನಾಂಕ: 21.04.2026</td><td>ASSET POWER BRE
Loan A/c No. LPR056106787901
Amount : Rs.96,58,147/-
Total Amount: Rs.90,21,960/-
Overdraft Against Property
Loan A/c No. 922030016826241
Amount : Rs.15,00,000/-
Total Amount: Rs.10,71,305/-
ಒಟ್ಟು ಬಾಕಿ ಮೊತ್ತ: ರೂ. 1,00,93,265/– ದಿನಾಂಕ: 27.04.2026ರಂದು ಇದ್ದಂತೆ.</td></tr>
<tr><td>2.</td><td>(1) ಶ್ರೀ ಮಂಜುನಾಥ ಪಿ ಬಿನ್ ಶ್ರೀ ಪ್ರಭಾಕರ್
(2) ಶ್ರೀಮತಿ ನಯನಾ ಎಂ
ಕೋಂ ಶ್ರೀ ಮಂಜುನಾಥ ಪಿ
ಇವರಿಬ್ಬರ ವಿಳಾಸ : 296, ಎಲ್–ವಿಂಗ್ ಸೋನೆಸ್ಟಾ ಮೆಡೋಸ್, ತುಬ್ರಹಲಿ ಎಕ್ಸ್‌ಟೆನ್ಡ್ ರಸ್ತೆ, ತುಬ್ರಹಲಿ, ಬೆಂಗಳೂರು–560066.
ಮತ್ತೊಂದು ವಿಳಾಸ: ನಂ.105, ಚಿಕ್ಕತೊಗಲೇರಿ, ದಾವಣಗೆರೆ–577514.
ಮತ್ತೊಂದು ವಿಳಾಸ: ಸ್ವಾಮಿ ವಿವೇಕಾನಂದ ಬಡಾವಣೆ, 1ನೇ ಮೇನ್, ನಿವೇಶನ ನಂ.37ಪಿ, ಡೋರ್ ನಂ.2086ಪಿ, ದಾವಣಗೆರೆ–577005.</td><td>ಶ್ರೀ ಮಂಜುನಾಥ್ ಪಿ ಅವರಿಗೆ ಸೇರಿದ ಆಸ್ತಿಯ ವಿವರ
ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ನಿರ್ಮಿತ ಆರ್‌ಸಿಸಿ ಕಟ್ಟಡದ ಆಸ್ತಿಯ ನಿವೇಶನ ನಂ.37ಪಿ, ಡೋರ್ ನಂ.2086/ಪಿ, ವಿಸ್ತೀರ್ಣ 17.6' x50' ಮತ್ತು ನಿವೇಶನ ನಂ.37ಪಿ, ಡೋರ್ ನಂ.2086/ಪಿ, ವಿಸ್ತೀರ್ಣ 17.6' x50', ಒಟ್ಟು ವಿಸ್ತೀರ್ಣ 35' x50', ಈ ಆಸ್ತಿಯು 1ನೇ ಮೇನ್, 1ನೇ ಕ್ರಾಸ್, ಸ್ವಾಮಿ ವಿವೇಕಾನಂದ ಬಡಾವಣೆ, ಶಾಮನೂರು ವಿಭಾಗ, ದಾವಣಗೆರೆಯಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ನಂ.19, ಪಶ್ಚಿಮಕ್ಕೆ: ಮುರುಳಿರವರ ಮನೆಯ ನಿವೇಶನ ನಂ.36, ಉತ್ತರಕ್ಕೆ: ನಿವೇಶನ ನಂ.20 ಮತ್ತು 32, ದಕ್ಷಿಣಕ್ಕೆ: 30' ರಸ್ತೆ.
ಯಾವುದೇ ಮಾಹಿತಿಗಾಗಿ ಶ್ರೀ ಪ್ರೇಮ್, ಮೊಬೈಲ್ ನಂ.8880041234ನ್ನು ಸಂಪರ್ಕಿಸಿ.</td><td>29.04.2026
ಎನ್‌ಪಿಎ ದಿನಾಂಕ: 12.02.2026</td><td>POWER HOME VANILLA BRE
Loan A/c No. PHR022504242354
Amount : Rs.61,31,106/-
ಒಟ್ಟು ಬಾಕಿ ಮೊತ್ತ: ರೂ. 54,13,749/– ದಿನಾಂಕ: 22.04.2026 ರಂದು ಇದ್ದಂತೆ.</td></tr>
<tr><td>3.</td><td>(1) ಮೆ॥ ಬಿ ಆರ್ ಖ್ವಾಜಾ ಟ್ರೇಡರ್ಸ್
ಇದನ್ನು ಪ್ರತಿನಿಧಿಸುವ ಮಾಲೀಕರು
ಶ್ರೀ ದಾದಾ ಖಲೇಂದರ್, ಡೋರ್ ನಂ. 361 1,2,3, ಕೆಆರ್ ರಸ್ತೆ, ಶಾಮನೂರು ಆಸ್ಪತ್ರೆ ಹತ್ತಿರ, ದಾವಣಗೆರೆ–577001.
(2) ಶ್ರೀ ದಾದಾ ಖಲೇಂದರ್
ಬಿನ್ ಶ್ರೀ. ಬಾಬಾಜಾನ್ ಸಾಬ್, ನಂ.559, ನೂರಾನಿ ಮಸೀದಿ ರಸ್ತೆ, ಇಮಾಮ್ ನಗರ, ದಾವಣಗೆರೆ–577001.</td><td>ದಾದಾ ಖಲೇಂದಾರ್ ಅವರಿಗೆ ಸೇರಿದ ಆಸ್ತಿಯ ವಿವರ
<table>
<tr><td>Site No. PID.No./Door No./Khatha No./Site No.</td><td>364/1,2,3</td><td>Road</td><td>Old Bethur Road,</td></tr>
<tr><td>Colony/Nagar/Sector</td><td>K.R. Road</td><td>Locality/ Landmark</td><td>Old Bethur Road</td></tr>
<tr><td>Village/Town/City</td><td>Davangere</td><td>District</td><td>Davangere</td></tr>
<tr><td>State</td><td>Karnataka</td><td>Pin code</td><td>--</td></tr>
<tr><td colspan="4">Boundaries: Property bearing old D.No.322/1, bearing new D.No.364/1, 2, 3 measuring 86 X 19 consisting of country tiled house situated at left to Jagalur road, Old Bethur Road, Davangere</td></tr>
<tr><td>North</td><td>Property of Girijamma</td><td>South</td><td>Property of Liyakath Khan</td></tr>
<tr><td>West</td><td>Conservancy</td><td>East</td><td>Road</td></tr>
</table>
26.09.25 ರಂದು ನೀಡಲಾದ ಹಿಂದಿನ 13.2 ಸೂಚನೆಯನ್ನು ಇಲ್ಲಿ ಹಿಂಪಡೆಯಲಾಗಿದೆ.
ಯಾವುದೇ ಮಾಹಿತಿಗಾಗಿ ಅನೀಸ್ ವಾಜಿದ್, ಕಲೆಕ್ಷನ್ ಮ್ಯಾನೇಜರ್, ನಂ.6361990243ನ್ನು ಸಂಪರ್ಕಿಸಿ.</td><td>24.04.2026
ಎನ್‌ಪಿಎ ದಿನಾಂಕ: 12.03.2025</td><td>SBB CASH CREDIT (CASH CREDIT)
Loan A/c No. 92303002629772 4
Amount : Rs.70,00,000/-
Total Amount: Rs. 71,40,876/-
BANK GUARANTEE
Loan A/c No. 924030072415955
Amount : Rs.60,00,000/-
Total Amount: Rs. 52,50,061 /-
ಒಟ್ಟು ಬಾಕಿ ಮೊತ್ತ: ರೂ. 1,23,90,937/– ದಿನಾಂಕ: 23.04.2026 ರಂದು ಇದ್ದಂತೆ.</td></tr>
<tr><td>4.</td><td>(1) ಶ್ರೀ ಅರವಿಂದ್ ಬಿನ್ ಶ್ರೀ ಲಕ್ಷ್ಮಣ ಬೈಕುಡ್
ಮೇಡಗಳ್ಳಿ ಶೋರಾಪುರ, ಶೋರಾಪುರ ಟೌನ್, ಯಾದಗಿರಿ–585224.
ಮತ್ತೊಂದು ವಿಳಾಸ : 1480/7, ಜನತಾ ಪ್ಲಾಟ್ – ರಾಯಬಾಗ್ ಟಿ2 ಬೆಳಗಾವಿ ಜಿಲ್ಲೆ, ರಾಯಬಾಗ್, ಬೆಳಗಾವಿ–591222, ಸರ್ಕಾರಿ ಪ್ರೌಢಶಾಲೆ ಹತ್ತಿರ.
(2) ಶ್ರೀ ಲಕ್ಷ್ಮಣ ಮಲ್ಲಪ್ಪ ಬೈಕುಡ್
ಬಿನ್ ಶ್ರೀ ಮಲ್ಲಪ್ಪ ಬೈಕುಡ್, ಶೋರಾಪುರ, ಶೋರಾಪುರ ಟೌನ್, ಯಾದಗಿರಿ–585224.</td><td>ಶ್ರೀ ಬೈಕೋಡ ಲಕ್ಷ್ಮಣ್ ಮಲ್ಲಪ್ಪ ಮತ್ತು ಶ್ರೀ ಅರವಿಂದ್ ಅವರಿಗೆ ಸೇರಿದ ಆಸ್ತಿಯ ವಿವರ
ನೋಂದಾಯಿತ ಇಕ್ವಿಟೇಬಲ್ ಅಡಮಾನ ವಾಸಯೋಗ್ಯ ಮನೆಯ ಖಾತಾ ನಂ.23–507–296, ಅಸೆಸ್‌ಮೆಂಟ್ ನಂ.10–87/186, ವಿಸ್ತೀರ್ಣ 69.67 ಚದರ ಮೀಟರ್ ಮತ್ತು ಕಟ್ಟಡವನ್ನೊಳಗೊಂಡಿದೆ (46.45 ಚದರ ಮೀಟರ್ ಬಿಲ್ಟ್‌ಅಪ್ ಪ್ರದೇಶ), ಈ ಆಸ್ತಿಯು ಲಕ್ಷ್ಮಿನಗರ, ಶಹಾಪುರ, ಯಾದಗಿರಿ ಜಿಲ್ಲೆಯಲ್ಲಿದ್ದು, ಶ್ರೀ ಅರವಿಂದ್ ಶ್ರೀ ಲಕ್ಷ್ಮಣ್ ಬೈಕೋಡ ಅವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: 527–10ನೇ ಎ ಕ್ರಾಸ್ ರಸ್ತೆ, ಪಶ್ಚಿಮಕ್ಕೆ: 507–4ನೇ ಮೇನ್, ಉತ್ತರಕ್ಕೆ: 528–10ನೇ ಕ್ರಾಸ್ ರಸ್ತೆ, ದಕ್ಷಿಣಕ್ಕೆ: 529–9ನೇ ಕ್ರಾಸ್ ರಸ್ತೆ.
ಯಾವುದೇ ಮಾಹಿತಿಗಾಗಿ ಸಂಗಯ್ಯ ಹೆಚ್, ಕಲೆಕ್ಷನ್ ಮ್ಯಾನೇಜರ್, ನಂ.9739349666ನ್ನು ಸಂಪರ್ಕಿಸಿ.</td><td>29.04.2026
ಎನ್‌ಪಿಎ ದಿನಾಂಕ: 07.11.2025</td><td>Overdraft
Loan A/c No. 921030049068532
Amount : Rs.20,00,000/-
Total Amount: Rs 21,17,284/-
PRODUCTION CREDIT (WORKING CAPITAL)
Loan A/c No. 921030049068561
Amount : Rs.26,000/-
Total Amount: Rs 27,840 /-
ಒಟ್ಟು ಬಾಕಿ ಮೊತ್ತ: ರೂ.21,45,124/– ದಿನಾಂಕ: 27.04.2026ರಂದು ಇದ್ದಂತೆ.</td></tr>
<tr><td>5.</td><td>(1) ಶ್ರೀ ಮಲ್ಲಿಕಾರ್ಜುನ್ ಬಿನ್ ಶ್ರೀ ಶಿವನ್ ಗೌಡ
(2) ಶ್ರೀ.ಚಂದ್ರಕಲಾ ಬೆಳಗುರ್ಕಿ
ಕೋಂ ಶ್ರೀ ಮಲ್ಲಿಕಾರ್ಜುನ್
ಇವರಿಬ್ಬರ ವಿಳಾಸ: ಗೊರೇಬಾಳ ಧನಿವಾರ ಅಂಗಲ ಗೊರೇಬಾಳ ಸಿಂಧನೂರು, ಗ್ರಾಮಪಂಚಾಯತಿ, ರಾಯಚೂರು–584128.
ಮತ್ತೊಂದು ವಿಳಾಸ : ಪ್ಲಾಟ್ ನಂ.28, ಎಎಲ್‌ಎನ್ 153/14–15, ಸರ್ವೆ ನಂ–56, ಗಂಗಾನಗರ ಸಿಂಧನೂರು, ಚಾಲೆಂಜಿಂಗ್ ಕೋಚಿಂಗ್ ಹತ್ತಿರ, ರಾಯಚೂರು–584128.</td><td>ಶ್ರೀ ಮಲ್ಲಿಕಾರ್ಜುನ ಶಿವಂಗುಡ ಅವರಿಗೆ ಸೇರಿದ ಆಸ್ತಿಯ ವಿವರ
ಪ್ಲಾಟ್ ನಂ.697, ವಿಸ್ತೀರ್ಣ 506.04 ಚದರ ಮೀಟರ್‌ಗಳು, ಈ ಆಸ್ತಿಯು ಸರ್ವೆ ನಂ.140/2/1, ಗೋರೆಬಲ್ ತಾಲ್ಲೂಕು, ಸಿಂಧನೂರು ಜಿಲ್ಲೆ, ರಾಯಚೂರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಬ್ಲಾಕ್ ನಂ.2, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಹಳ್ಳ, ದಕ್ಷಿಣಕ್ಕೆ: Hissa 2 & 3.
ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್ ಪ್ರಸಾದ್, ಮೊಬೈಲ್ ನಂ.9916566630ನ್ನು ಸಂಪರ್ಕಿಸಿ.</td><td>18.04.2026
ಎನ್‌ಪಿಎ ದಿನಾಂಕ: 10.04.2026</td><td>POWER HOME VANILLA BRE
Loan A/c No. PHR034210173913
Amount : Rs.35,00,000/-
ಒಟ್ಟು ಬಾಕಿ ಮೊತ್ತ: ರೂ.35,39,423/– ದಿನಾಂಕ: 18.04.2026 ರಂದು ಇದ್ದಂತೆ.</td></tr>
<tr><td>6.</td><td>(1) ಶ್ರೀ ಮಾರುತೇಶ್ ಹಡಪದ್
ಬಿನ್ ಶ್ರೀ ಸಿದ್ದಪ್ಪ ಹಡಪದ್
ಹನಮನಹಳ್ಳಿ ಗ್ರಾಮ, ಕೊಟಗಾನಹಳ್ಳಿ ಪೋಸ್ಟ್ ಕೊಪ್ಪಳ ತಾಲ್ಲೂಕು, ಕೊಪ್ಪಳ ಜಿಲ್ಲೆ, ಕುಟಗಾನಹಳ್ಳಿ, ಕೊಪ್ಪಳ–583228.</td><td>ಶ್ರೀ ಮಾರುತೇಶ್ ಹಡಪದ್ ಅವರಿಗೆ ಸೇರಿದ ಆಸ್ತಿಯ ವಿವರ
ವಿಶೇಷ ಶುಲ್ಕದ ನೋಂದಾಯಿತ ಇಕ್ವಿಟೇಬಲ್ ಅಡಮಾನ ವಾಸಯೋಗ್ಯ ಆಸ್ತಿಯು ಶ್ರೀ ಮಾರುತೇಶ್ ಹಡಪದ್ ಬಿನ್ ಸಿದ್ದಪ್ಪ ಹಡಪದ್ ಅವರ ಹೆಸರಿನಲ್ಲಿದೆ, ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ನಂ.5 (ಗ್ರಾಮ ಪಂಚಾಯಿತಿ ದಾಖಲೆಗಳ ಪ್ರಕಾರ), ಇ–ಆಸ್ತಿ ನಂ.152000202200220051, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 3.725 ಮೀಟರ್, ಉತ್ತರದಿಂದ ದಕ್ಷಿಣಕ್ಕೆ: 13 ಮೀಟರ್, ಒಟ್ಟು ವಿಸ್ತೀರ್ಣ 48.43 ಚದರ ಮೀಟರ್‌ಗಳು, ನಿರ್ಮಿತ ಪ್ರದೇಶದ ವಿಸ್ತೀರ್ಣ 48.43 ಚದರ ಮೀಟರ್‌ಗಳು, ಈ ಆಸ್ತಿಯು ಹನಮನಹಳ್ಳಿ, ಲೆಬಗೇರಿ ಗ್ರಾಮ ಪಂಚಾಯಿತಿ ವ್ಯಾಪ್ತಿ, ಕೊಪ್ಪಳದಲ್ಲಿದೆ, ಜೊತೆಗೆ ನೋಂದಾಯಿತ ಜಿಲ್ಲೆ ಮತ್ತು ಉಪ–ನೋಂದಾಯಿತ ಜಿಲ್ಲೆ ಕೊಪ್ಪಳದಲ್ಲಿದೆ, ಚಕ್ಕುಬಂದಿ: ಪೂರ್ವಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ಪಶ್ಚಿಮಕ್ಕೆ: ನೀಲಮ್ಮ ಈರಪ್ಪರವರ ಆಸ್ತಿ, ದಕ್ಷಿಣಕ್ಕೆ: ದುರ್ಗಪ್ಪ ಹಿಟ್ನಾಳ್ ಅವರ ಆಸ್ತಿ.
ಯಾವುದೇ ಮಾಹಿತಿಗಾಗಿ ಸಂಗಯ್ಯ ಹೆಚ್, ಕಲೆಕ್ಷನ್ ಮ್ಯಾನೇಜರ್, ನಂ.9739349666ನ್ನು ಸಂಪರ್ಕಿಸಿ.</td><td>29.04.2026
ಎನ್‌ಪಿಎ ದಿನಾಂಕ: 05.04.2026</td><td>Overdraft
Loan A/c No. 922030033745480
Amount :Rs.7,10,580/-
Total Amount: Rs.7,10,580 /-
PRODUCTION CREDIT (WORKING CAPITAL)
Loan A/c No. 922030033745497
Amount : Rs.38,714/-
Total Amount: Rs 38,714/-
ಒಟ್ಟು ಬಾಕಿ ಮೊತ್ತ: ರೂ. 7,49,294/– ದಿನಾಂಕ: 27.04.2026ರಂದು ಇದ್ದಂತೆ.</td></tr>
<tr><td>7.</td><td>(1) ಶ್ರೀ ಸಿಯಾಬುದ್ದೀನ್ ಬಿನ್ ಶ್ರೀ ಅಬೂಬಕ್ಕರ್, 14–45/Q25 ಮದ್ವಾ ಬಿ ಮೂಡ ಜೋಡುಮಾರ್ಗ ಬಂಟ್ವಾಳ ದಕ್ಷಿಣ ಕನ್ನಡ ಮಂಗಳೂರು–574219.
ಮತ್ತೊಂದು ವಿಳಾಸ: ಡೋರ್ ನಂ.6–35/38, ಫ್ಲಾಟ್ ನಂ.207, 2ನೇ ಮಹಡಿ, ಯಶ್ ಎನ್‌ಕ್ಲೇವ್, ಬಿಜೈ ಕಾವೂರು ರಸ್ತೆ, ಮಂಗಳೂರು–574219.
(2) ಶ್ರೀಮತಿ ಅಮ್ನಾಜ್
ಕೋಂ ಶ್ರೀ ಸಿಯಾಬುದ್ದೀನ್, ಫ್ಲಾಟ್ ನಂ.103, ಮಲ್ಲಿಗೆ ಬಿಲ್ಡಿಂಗ್ ಪೆರ್ಲಿಯಾ, ಶಾಂತಿ ಅಂಗಡಿ ಬಿ ಮೂಡ, ಮಂಗಳೂರು–574219.
ಮತ್ತೊಂದು ವಿಳಾಸ: 14–45/Q 25 ಮದ್ವಾ ಬಿ ಮೂಡ ಜೋಡುಮಾರ್ಗ ಬಂಟ್ವಾಳ ದಕ್ಷಿಣ ಕನ್ನಡ ಮಂಗಳೂರು–574219.
ಮತ್ತು ಇಲ್ಲಿ: ಡೋರ್ ನಂ.6–35/38, ಫ್ಲಾಟ್ ನಂ.207, 2ನೇ ಮಹಡಿ, ಯಶ್ ಎನ್ಕ್ಲೇವ್, ಬಿಜೈ ಕಾವೂರ್ ರಸ್ತೆ, ಮಂಗಳೂರು–574219.</td><td>ಶ್ರೀ ಸಿಯಾಬುದ್ದೀನ್ ಮತ್ತು ಶ್ರೀಮತಿ ಅಮ್ನಾಜ್ ಅವರಿಗೆ ಸೇರಿದ ಆಸ್ತಿಯ ವಿವರ
ಷೆಡ್ಯೂಲ್ 'ಎ' [ಆಸ್ತಿಯ ವಿವರ] : ಕೃಷಿಯೇತರ ಬಲಭಾಗದಲ್ಲಿರುವ ಸ್ಥಿರಾಸ್ತಿಯು ಕಾವೂರು ಗ್ರಾಮ, ಮಂಗಳೂರು ತಾಲ್ಲೂಕು, ಜೊತೆಗೆ ಮಂಗಳೂರು ಸಿಟಿ ಕಾರ್ಪೊರೇಷನ್ ವ್ಯಾಪ್ತಿಯಲ್ಲಿದೆ ಮತ್ತು ನೋಂದಾಯಿತಿ ಉಪ ಜಿಲ್ಲೆ ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ & ಇವಗಳಲ್ಲಿ ಒಳಗೊಂಡಿದೆ:–
<table>
<tr><th>Item No.</th><th>R.S. No</th><th>Kisssam</th><th>Extent (A-C)</th><th>Portion</th></tr>
<tr><td>1</td><td>105/3B2</td><td>Converted</td><td>00-13</td><td>Southern</td></tr>
<tr><td>2</td><td>46/1B</td><td>Converted</td><td>00-02</td><td>Western</td></tr>
<tr><td>3</td><td>105/5P</td><td>Converted</td><td>00-02</td><td>Middle</td></tr>
<tr><td>4</td><td>105/5P</td><td>Converted</td><td>00-02</td><td>Middle</td></tr>
<tr><td>5</td><td>46-3P2</td><td>Converted</td><td>0-09</td><td>Northern</td></tr>
<tr><td>6</td><td>105-3B3P2</td><td>Converted</td><td>0-08</td><td>Northern</td></tr>
<tr><td colspan="3">Total</td><td>0-36</td><td></td></tr>
</table>
ಇತರ ಎಲ್ಲಾ ಮತ್ತು ದಾರಿ, ನೀರು ಇತ್ಯಾದಿಗಳೊಂದಿಗೆ ಒಂದು ಬ್ಲಾಕ್‌ನ್ನು ಒಳಗೊಂಡಿದೆ. ಜೊತೆಗೆ ಚಕ್ಕುಬಂದಿ: ಐಟಂ ನಂ.1 ರಿಂದ 4ರವರೆಗಿನ ಚಕ್ಕುಬಂದಿ: ಉತ್ತರಕ್ಕೆ: ಸರ್ವೆ ನಂ.105/5 & 105/3ಬಿ2, ದಕ್ಷಿಣಕ್ಕೆ: ಸರ್ವೆ ನಂ.105/5 & 105/3ಬಿ3 & 46, ಪೂರ್ವಕ್ಕೆ: ಸರ್ವೆ ನಂ.46/1ಪಿ, ಪಶ್ಚಿಮಕ್ಕೆ: ರಸ್ತೆ. ಐಟಂ ನಂ.5ರ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ: ಅದೇ ಸರ್ವೆ ನಂಬರ್‌ನ ಉಳಿಕೆ ಭಾಗ, ದಕ್ಷಿಣಕ್ಕೆ: ಸರ್ವೆ ನಂ.46–3ಬಿ, ಪೂರ್ವಕ್ಕೆ: ಸರ್ವೆ ನಂ.46/2ಎ1, ಪಶ್ಚಿಮಕ್ಕೆ: ಸರ್ವೆ ನಂ.105–3ಬಿ3ಪಿ2. ಐಟಂ ನಂ.6ರ ಆಸ್ತಿಯ ಚಕ್ಕುಬಂದಿ: ಉತ್ತರಕ್ಕೆ: ಸರ್ವೆ ನಂ.105–2ಬಿ2, ದಕ್ಷಿಣಕ್ಕೆ: ಸರ್ವೆ ನಂ.105–3ಬಿ2ಬಿ, ಪೂರ್ವಕ್ಕೆ: ಸರ್ವೆ ನಂ.46/3ಪಿ2, ಪಶ್ಚಿಮಕ್ಕೆ: ಸರ್ವೆ ನಂ.105–5ಬಿ.
ಷೆಡ್ಯೂಲ್–ಬಿ (ಅಪಾರ್ಟ್‌ಮೆಂಟ್‌ನ ವಿವರ) : ವಾಸಯೋಗ್ಯ ಅಪಾರ್ಟ್‌ಮೆಂಟ್ ನಂ.207, ಡೋರ್ ನಂ.6–35/38, ಎರಡನೇ ಮಹಡಿಯಲ್ಲಿದ್ದು, ವಿಸ್ತೀರ್ಣ 1851 ಚದರ ಅಡಿ ಸೂಪರ್ ಬಿಲ್ಟ್ ಅಪ್ ಪ್ರದೇಶ (172.02 ಚದರ ಮೀಟರ್‌ಗಳು) ಮತ್ತು "ಯಶ್ ಎನ್‌ಕ್ಲೇವ್" ಎಂದು ಕರೆಯಲ್ಪಡುವ ಕಟ್ಟಡದಲ್ಲಿ ಕಾರು ಪಾರ್ಕಿಂಗ್ ಸ್ಲಾಟ್ ನಂ.207 ಕೆಳಗಿನ ತಳ ಮಹಡಿಯಲ್ಲಿದ್ದು, 2.62% ಅವಿಭಾಜಿತ ಭಾಗ, ಹಕ್ಕು, ಶೀರ್ಷಿಕೆ ಮತ್ತು ಹಿತಾಸಕ್ತಿಯನ್ನು ಷೆಡ್ಯೂಲ್ 'ಎ' ಆಸ್ತಿಯಲ್ಲಿ ಒಳಗೊಂಡಿದೆ, ಕಟ್ಟಡವನ್ನು ನಿರ್ಮಿಸಲಾದ ಸ್ಥಳದಲ್ಲಿ & ಸಾಮಾನ್ಯ ಪ್ರದೇಶದಲ್ಲಿ ಅವಿಭಾಜಿತ ಭಾಗ ಮತ್ತು ಸೌಲಭ್ಯಗಳನ್ನು ಕಟ್ಟಡದಲ್ಲಿ ಒಳಗೊಂಡಿದೆ (ಪಿಐಡಿ ನಂ.40_ಡಿಎನ್8025ಟಿಹೆಚ್_1_10/24).
ಯಾವುದೇಶ ಮಾಹಿತಿಗಾಗಿ ಸುದರ್ಶನ್, ಮೊಬೈಲ್ ನಂ.9611067929ನ್ನು ಸಂಪರ್ಕಿಸಿ.</td><td>29.04.2026
ಎನ್‌ಪಿಎ ದಿನಾಂಕ: 10.04.2026</td><td>POWER HOME VANILLA BRE
Loan A/c No. PHR007711980941
Amount : Rs.66,22,464/-
ಒಟ್ಟು ಬಾಕಿ ಮೊತ್ತ: ರೂ.66,52,481/– ದಿನಾಂಕ: 22.04.2026 ರಂದು ಇದ್ದಂತೆ.</td></tr>
</table>

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್–13 ರ ಉಪ–ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನರ್ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ–ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 25.05.2026
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಸರಕಾರ ಮದ್ಯದ ದರ ಇಳಿಸಿದರೂ ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳ ಕಳ್ಳಾಟ

ಹಳೇ ಬೆಲೆಯಲ್ಲೇ ಮದ್ಯ ಮಾರಾಟ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯ ಸರಕಾರ ಹೊಸ ಎಐಬಿ ತೆರಿಗೆ ವ್ಯವಸ್ಥೆ ಜಾರಿಗೆ ತಂದ ಹಿನ್ನಲೆ ಪ್ರೀಮಿಯಂ ವಿಸ್ಕಿ, ಬಿಯರ್, ಜಿನ್ ಹಾಗೂ ಟಕೀಲಾ ಮದ್ಯಗಳ ದರ ಶೇ.5 ರಿಂದ ಶೇ.24 ರವರೆಗೆ ಇಳಿಕೆಯಾಗಿದೆ. ಎಕ್ಸೈಸ್ ಸ್ಲ್ಯಾಬ್ ಅನ್ನು 16 ರಿಂದ 8ಕ್ಕೆ ಇಳಿಸಿದರೂ ಹಳೆಯ ದರದಲ್ಲೇ ಮದ್ಯ ಮಾರಾಟವಾಗುತ್ತಿದೆ.

ರಾಜ್ಯದಲ್ಲಿ ಆಲ್ಕೋಹಾಲ್ ಇನ್ ಬೇವರೇಜ್ (ಎಐಬಿ) ಆಧಾರಿತ ತೆರಿಗೆ ಪದ್ಧತಿ ಜಾರಿಯಿಂದ ಹಲವು ಮದ್ಯ, ಬಿಯರ್‌ಗಳ ಬೆಲೆ ಗಣನೀಯವಾಗಿ ಕಡಿಮೆಯಾಗಿದ್ದರೂ ಬಹುತೇಕ ಮದ್ಯದಂಗಡಿಯವರು ಈ ಬ್ರಾಂಡ್‌ಗಳ ಬೆಲೆ ಕಡಿಮೆ ಮಾಡದೇ ಗ್ರಾಹಕರಿಗೆ ಮೋಸ ಮಾಡುತ್ತಿದ್ದಾರೆ. ಹಲವು ದಶಕಗಳಿಂದ ರಾಜ್ಯದಲ್ಲಿ ಬಲ್ಕ್ ಲೀಟರ್ ಆಧರಿತ ತೆರಿಗೆ ಪದ್ಧತಿ ಇದ್ದು ಇದೇ ಮೊದಲ ಬಾರಿಗೆ ದೇಶದಲ್ಲೇ ಪ್ರಥಮವಾಗಿ ಕರ್ನಾಟಕದಲ್ಲಿ ಮೇ 11 ರಿಂದ ಮದ್ಯದಲ್ಲಿನ ಆಲ್ಕೋಹಾಲ್ ಪ್ರಮಾಣ ಆಧರಿಸಿದ ಎಐಬಿ ತೆರಿಗೆ ಪದ್ಧತಿ ಜಾರಿಯಾಗಿದೆ. ಇದರಿಂದಾಗಿ ಬಹುತೇಕ ಬಿಯರ್‌ಗಳ ಬೆಲೆ ಭಾರೀ ಪ್ರಮಾಣದಲ್ಲಿ ಕಡಿಮೆಯಾಗಿದೆ. ವಿಸ್ಕಿ, ರಮ್ ಮತ್ತಿತರ ಹಲವು ದೇಶಿಯ ಮದ್ಯಗಳ ದರವೂ ಕಡಿಮೆಯಾಗಿದೆ. ಆದರೆ ಇದರ ಲಾಭ ಗ್ರಾಹರಿಗೆ ವರ್ಗವಾಗುತ್ತಿಲ್ಲ.

ಬಿಯರ್ ದರ

650 ಎಂಎಲ್ ಬಿಯರ್	ಮೊದಲಿನ ದರ	ಪ್ರಸ್ತುತ ದರ
ಕಿಂಗ್‌ಫಿಶರ್ ಪ್ರೀಮಿಯಂ	185	110
ಕಿಂಗ್‌ಫಿಶರ್ ಸ್ಟ್ರಾಂಗ್	190	180
ಬಡ್ವೈಸರ್ ಪ್ರೀಮಿಯಂ	225	205
ಬುಲೆಟ್ ಲೇಜರ್	100	90
ನಾಕೌಟ್ ಸ್ಟ್ರಾಂಗ್	180	175
ಯುಬಿ ಪ್ರೀಮಿಯಂ	160	135
ಯುಬಿ ಸ್ಟ್ರಾಂಗ್	165	135
ಟುಬರ್ಗ್	190	140

ವಿದೇಶಗಳಲ್ಲಿ ಎಐಬಿ ಪದ್ಧತಿ ಅನುಸರಿಸುವುದು ಸಾಮಾನ್ಯವಾಗಿದ್ದು, ರಾಜ್ಯದಲ್ಲಿ ಅಬಕಾರಿ ರಾಜಸ್ವ ಹೆಚ್ಚಿಸಿಕೊಳ್ಳಲು ಇದನ್ನು ಅಳವಡಿಸಿಕೊಳ್ಳಲಾಗಿದೆ.

ಇದರಿಂದ ಬಿಯರ್ ಮತ್ತು ಬಹಳಷ್ಟು ಪ್ರೀಮಿಯಂ ಬ್ರ್ಯಾಂಡ್‌ಗಳು ಅಗ್ಗವಾಗಿವೆ. ಆದರೆ ಬಹುತೇಕ ವೈನ್ ಸ್ಟೋರ್, ಬಾರ್ ಆ್ಯಂಡ್ ರೆಸ್ಟೋರೆಂಟ್‌ಗಳು ಇನ್ನೂ ಹಳೆಯ ದರದಲ್ಲೇ ಮದ್ಯ ಮಾರಾಟ ಮಾಡುತ್ತಿವೆ. ಕೆಲ ಎಂಎಸ್‌ಐಎಲ್ ಮದ್ಯ ಮಾರಾಟ ಮಳಿಗೆಗಳ ಕತೆಯೂ ಇದಕ್ಕೆ ಹೊರತಲ್ಲ.

ಹಳೇ ಲೇಬಲ್‌ಗಳ ದರ ಆಧರಿಸಿ ಮಾರಾಟ: ಬೆಲೆ ಇಳಿಕೆಯಾಗಿದ್ದರೂ ಬಾಟಲ್ ಮೇಲಿನ ಲೇಬಲ್‌ಗಳಲ್ಲಿ ಇನ್ನೂ ಹೊಸ ದರ ನಮೂದಾಗಿಲ್ಲ. ಕಂಪನಿಗಳ ಸಾಮರ್ಥ್ಯಕ್ಕೆ ಅನುಸಾರ ಅದಕ್ಕೆ ಇನ್ನೂ ಒಂದು ವಾರ ಕಾಲಾವಕಾಶ ಬೇಕಾಗಬಹುದು.

ಆದರೆ ಕರ್ನಾಟಕ ರಾಜ್ಯ ಪಾನೀಯ ನಿಗಮ (ಕೆಎಸ್‌ಬಿಸಿಎಲ್)ವು ಹಳೆಯ ಲೇಬಲ್ ಇದ್ದರೂ ಕಡಿಮೆ ದರಕ್ಕೇ ಮದ್ಯದಂಗಡಿಗಳಿಗೆ ಬಿಯರ್ ಸರಬರಾಜುಮಾಡುತ್ತಿದೆ.

ಅಂದರೆ,ಮದ್ಯಪ್ರಿಯರಿಗೆ ಇದ್ಯಾವುದರ ಅರಿವಿಲ್ಲದಿರುವುದರಿಂದ ಬಹುತೇಕ ಮದ್ಯದಂಗಡಿಗಳಲ್ಲಿ ಬಾಟಲ್‌ಗಳ ಮೇಲಿನ ಹಳೆಯ ದರವನ್ನೇ ತೋರಿಸಿ ಗ್ರಾಹಕರಿಂದ ಅಧಿಕ ಹಣ ವಸೂಲಿ ಮಾಡಲಾಗುತ್ತಿದೆ. ಮತ್ತೊಂದೆಡೆ, ಬೆಲೆ ಹೆಚ್ಚಳವಾದ ಮದ್ಯದ ಬ್ರ್ಯಾಂಡ್‌ಗಳನ್ನು(ಲೇಬಲ್‌ನಲ್ಲಿ ಕಡಿಮೆ ದರವಿದ್ದರೂ) ಅಧಿಕ ಬೆಲೆಗೆ ಮಾರುವುದನ್ನು ಮಾತ್ರ ಮದ್ಯದಂಗಡಿಯವರು ಮರೆಯುತ್ತಿಲ್ಲ.

ನಿಷೇಧಾಜ್ಞೆ ಜಾರಿ

← ಮೊದಲಪುಟದಿಂದ

ಪೊಲೀಸರ ಎದುರಲ್ಲೇ ಜಿದ್ದಾಜಿದ್ದಿ: ಸಾರ್ವಜನಿಕ ಸ್ಥಳದಲ್ಲಿ ಕಟ್ಟೆ ನಿರ್ಮಾಣವಾಗುತ್ತಿದ್ದಂತೆ ಸ್ಥಳೀಯ ನಿವಾಸಿಗಳು ಮತ್ತು ಮಜ್ಲಿಸೆ ಇಸ್ಲಾಹ್ ವ ತಂಝೀಮ್ ಮುಖಂಡರು ತೀವ್ರ ಆಕ್ಷೇಪ ವ್ಯಕ್ತಪ ಡಿಸಿದ್ದರು. ಪರಿಸ್ಥಿತಿ ಕೈಮೀರುತ್ತಿದ್ದಂತೆ ಉಪವಿಭಾ ಗಾಧಿಕಾರಿ ಜೆ. ಮಹೇಶ್ ಅವರು ಶಾಂತಿ ಸಭೆ ನಡೆಸಿ, ಇದು ಹೆದ್ದಾರಿಯ ಅತಿಕ್ರಮಿತ ಜಾಗ ಎಂದು ತಿಳಿಸಿದ್ದರು. ಅನ್ಯಕೋ ಮಿನ ಮುಖಂಡರು ಇದಕ್ಕೆ ಒಪ್ಪಿದರೂ, ರಾತ್ರಿ ಸಾವಿರಾರು ಯು ವಕರು ಸ್ಥಳದಲ್ಲಿ ಜಮಾಯಿಸಿ ಘೋಷ ಣೆಗಳನ್ನು ಕೂಗು ತ್ತಾ ಹೆದ್ದಾರಿ ಬಂದ್ ಮಾಡಿದರು. ಎಸ್‌ಪಿ ದೀಪನ್ ಮತ್ತು ಎ.ಸಿ ಮಹೇಶ್, ಯುವಕರನ್ನು ನಿ ಯಂತ್ರಿ ಸಲು ಮಾತು ಕತೆ ನಡೆಸುತ್ತಿ ದ್ದಾಗಲೇ, ಕೆಲ ಯುವಕರು ಪೊಲೀಸರ ಎದುರೇ ಕಬ್ಬಿಣದ ಸಲಾಕೆಗಳಿಂದ ಮೂರಿನ ಕಟ್ಟೆಯನ್ನು ಭಾಗಶಃಧ್ವಂ ಸಗೊಳಿಸಿದ್ದಾರೆ.

ಕರ್ನಾಟಕ ರಾಜ್ಯ ಸರಕಾರಿ ಖಾಯಂ ಅಲ್ಲದ ನೌಕರರ ಸಂಘದ ಸದಸ್ಯರು ಕನಿಷ್ಠ ವೇತನ ಪರಿಷ್ಕರಣೆ ಸೇರಿದಂತೆ ಮತ್ತಿತರ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ಸರ್ಕಾರ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ದಾವಣಗೆರೆ.
ಸಂ:ಕಾಪಾಇಂ/ಪಂರಾಇಂ/ವಿ/ದಾ/ಸ.ಇಂ/ಟೆಂಡರ್/2026–27/298
ದಿನಾಂಕ:–25/05/2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
("ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್" ಮೂಲಕ)

ಈ ವಿಭಾಗ ವ್ಯಾಪ್ತಿಯ ವಿವಿಧ ಲೆಕ್ಕಶೀರ್ಷಿಕೆ ಯೋಜನೆಯಡಿ ಅನುಮೋದನೆಯಾದ ಕಾಮಗಾರಿಗಳನ್ನು ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆಪಿಪಿಪಿ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು **ಏಕ & ದ್ವಿ–ಲಕೋಟೆಯಲ್ಲಿ ಟೆಂಡರ್‌ಗಳನ್ನು ಕೆ.ಡಬ್ಲ್ಯೂ ನಮೂನೆ–1 & 3ರಲ್ಲಿ ಆಹ್ವಾನಿಸಲಾಗಿದೆ. ಒಟ್ಟು ಕಾಮಗಾರಿಗಳ ಸಂಖ್ಯೆ:08 ಟೆಂಡರ್‌ಗಿಟ್ಟ ಮೊತ್ತ ರೂ.5.05 ಲಕ್ಷಗಳಿಂದ 84.23 ಲಕ್ಷಗಳವರೆಗೆ ಇರುತ್ತವೆ. ಕಾಮಗಾರಿ ಕಟ್ಟಡ ಮತ್ತು ರಸ್ತೆ ನಿರ್ಮಾಣ ಟೆಂಡರ್ ಫಾರಂಗಳನ್ನು ದಿನಾಂಕ: 25/05/2026 ರಿಂದ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 02/06/2026 ಸಂಜೆ 4.00 ಗಂಟೆಯವರೆಗೆ** ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ:08192–250156 ಅಥವಾ www.KPPP.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ.

ವಾಸಾಇ/ಡಿವಿಜಿ/99/ ಕೆಎಸ್‌ಎಂಸಿಎ/2026–27

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಪಂ.ರಾ.ಇಂ.ವಿಭಾಗ, ದಾವಣಗೆರೆ.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ. ದೂರವಾಣಿ: 08172–268876, 266719
ನಂ:ಹಾ.ನ.ಪ್ರಾ/ಸ.ಕಾ.ಅ/ಟೆಂಡರ್–01/26–27 ದಿನಾಂಕ: 19.05.2026

ಕೆ.ಪಿ.ಪಿ.ಪಿ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಹಾಸನ ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕೂರ್‌ಮೆಂಟ್ ಪೋರ್ಟೆಲ್ (Visit:https://www.kppp.karnataka.gov.in/) ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು. 1)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:20.05.2026 to 05.06.2026 up to 17.30 hrs 2)ತಾಂತ್ರಿಕ ಬಿಡ್ ತೆರೆಯುವ ದಿನಾಂಕ:08.06.2026 at 11.00 hrs 3)ಆರ್ಥಿಕ ಬಿಡ್ ತೆರೆಯುವ ದಿನಾಂಕ:15.06.2026 at 11.00 hrs ಕ್ರ.ಸಂ.1)ಕಾಮಗಾರಿಯ ಹೆಸರು: PROVIDING BEAUTIFICATION FOR BIDAREKATTE TANK NEAR PAYPURA IN BELUR TALUK HASSAN DISTRICT ಟೆಂಡರ್‌ಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ) 167.76

ಸಹಿ/– (ಪಟೇಲ್ ಶಿವಣ್ಣ) ಅಧ್ಯಕ್ಷರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
ಸಹಿ/–(ಶ್ರೀ ಕೆ.ಎಂ. ರಮೇಶ್) ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ

ವಾಸಾಸಂಇ/ಹಿಸನಿ/ಹಾಸನ/164/ಕೆಎಸ್‌ಎಂಸಿಎ/2025–26

ಕರ್ನಾಟಕ ಸರಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜೀನಿಯರಿಂಗ ವಿಭಾಗ, ಕಲಬುರಗಿ
ಲೋಕೋಪಯೋಗಿ ಇಲಾಖೆ ವಸತಿ ಗೃಹ ಸಂಖ್ಯೆ: 110ಡಿ, ಐವಾನ್–ಇ–ಶಾಹಿ ಕಾಲೋನಿ,
ಹೆಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಎದುರುಗಡೆ ಕಲಬುರಗಿ –585102.
ದೂರವಾಣಿ/ಫ್ಯಾಕ್ಸ ಸಂಖ್ಯೆ –08472–241982 E –mail : ee.khsdrp.klb@gmail.com
ಸಂಖ್ಯೆ: ಆಕುಕ/ಕಾನಿಅ/ಇಂ.ವಿ.ಕ/ಸ.ಇಂ–2/PMC & DPR/2026–27/287 ದಿನಾಂಕ: 22.05.2026

ಟೆಂಡರ್ ಪ್ರಕಟಣೆ

ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ, ಇಂಜಿನೀಯರಿಂಗ್ ವಿಭಾಗ ಕಲಬುರಗಿ ರವರಿಂದ ಡಿಪಿಆರ್, ಆರ್ಕಟೆಕ್ಚರಲ್ ಸ್ಟ್ರಕ್ಚರಲ್ ಹಾಗೂ ಇನ್ನಿತರ ಸೌಲಭ್ಯಗಳ ನಕ್ಷೆ ತಯಾರಿಸುವ ಕಾಮಗಾರಿಗಳು 06, ಮತ್ತು ಯೋಜನಾ ನಿರ್ವಹಣಾ ಸಮಾಲೋಚಕರನ್ನು ನೇಮಿಸುವ ಕಾಮಾಗಾರಿಗಳು 04 ಕಾಮಗಾರಿಗಳು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (kppp portal)ಮೂಲಕ ದ್ವಿ ಲಕೋಟೆ ಟೆಂಡರ್ ದಾಸ್ತಾವೇಜು ಪದ್ದತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. **4.50 ಲಕ್ಷಗಳು** ಹಾಗೂ ಗರಿಷ್ಠ ಮೊತ್ತ **ರೂ 80.00 ಲಕ್ಷಗಳು** ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ಕೆ.ಪಿ.ಪಿ ಪೋರ್ಟಲ್‌ನಲ್ಲಿ ನೋಡುವುದು.

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: –
1) ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **10.06.2026 ರಂದು 16.00 ಗಂಟೆಯವರೆಗೆ,**
2 ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **11.06.2026 ರಂದು 16.30 ಗಂಟೆಗೆ.**

ಟಿಪ್ಪಣಿ: 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆ&ಕುಕಇ, ಇಂಜಿನೀಯರಿಂಗ್ ವಿಭಾಗ ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/160/ಕೆ.ಎಸ್.ಎಂ.ಸಿ.&ಎ/2026–27

ಮುರಿನಕಟ್ಟೆ ಧ್ವಂಸ ಕೃತ್ಯ ಕೋಮು ದ್ವೇಷದ ಪರಮಾವಧಿ

ಶಿರಸಿ: ಭಟ್ಕಳ ತಾಲೂಕಿನ ವೆಂಕಟಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿದ್ದ, ನೂರಾರು ವರ್ಷಗಳ ಇತಿಹಾಸಪ್ರಸಿದ್ಧ ಹಾಗೂ ಹಿಂದೂಗಳ ಧಾರ್ಮಿಕ ಶ್ರದ್ಧಾಕೇಂದ್ರವಾದ 'ಮುರಿನಕಟ್ಟೆ'ಯನ್ನು ಭಾನುವಾರ ತಡರಾತ್ರಿ ಸಮಾಜಘಾತಕ ಶಕ್ತಿಗಳು ಏಕಾಏಕಿ ಗುಂಪು ಕಟ್ಟಿಕೊಂಡು ಬಂದು ಧ್ವಂಸಗೊಳಿಸಿರುವುದು ಅತ್ಯಂತ ಹೇಯ, ವಿಕೃತ ಹಾಗೂ ಸಮಾಜ ತಲೆತಗ್ಗಿಸುವಂತಹ ಸಹಿಸಲ ಸಾಧ್ಯವಾದ ಕೃತ್ಯವಾಗಿದೆ ಎಂದು ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕಪ್ಪೆ ಚಿಪ್ಪು ಸಂಗ್ರಹಿಸಲು ಹೋಗಿ ಸಮುದ್ರದಲ್ಲಿ ದುರಂತ ಸಾವಿಗೀಡಾದ ಬಡ ಜನರ ಶೋಕಾಚರಣೆಯಲ್ಲಿ ಇಡೀ ಭಟ್ಕಳದ ಜನತೆ ಮುಳುಗಿದ್ದ ಸೂಕ್ಷ್ಮ ಪರಿಸ್ಥಿತಿಯನ್ನು ಇಲ್ಲಿ ದುರುಪಯೋಗಪಡಿಸಿಕೊಳ್ಳಲಾಗಿದೆ ಎಂದು ಆರೋಪಿಸಿದ್ದಾರೆ. ಮುಖ್ಯವಾಗಿ, ಈ ಮೂರುನಕಟ್ಟೆ ಸ್ಥಳವು ಮುಸ್ಲಿಮರಿಗೆ ಯಾವುದೇ ರೀತಿಯಲ್ಲೂ ಸಂಬಂಧಪಡದ ವಿಷಯವಾಗಿತ್ತು. ಇದು ಕೇವಲ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮತ್ತು ಹಿಂದೂ ಸಮಾಜದ ನಡುವಿನ ಒಪ್ಪಂದದ ಅನ್ವಯ ನಿರ್ಮಾಣಗೊಂಡ ಹಿಂದೂಗಳ ಧಾರ್ಮಿಕ ಭಾಗವಾಗಿತ್ತು. ಇದು ಮುಸ್ಲಿಮರಿಗೆ ಸೇರಿದ ಜಾಗವೂ ಅಲ್ಲ, ಅವರಿಗೆ ಯಾವುದೇ ಕಾರಣಕ್ಕೂ ಸಂಬಂಧಿಸಿದ ವಿಷಯವೂ ಆಗಿರಲಿಲ್ಲ. ಹೀಗಿದ್ದೂ, ಕೇವಲ ಜಿಲ್ಲೆಯ ಕೋಮು ಸೌಹಾರ್ದತೆಯನ್ನು ಕೆಡಿಸಿ, ಗಲಭೆ ಸೃಷ್ಟಿಸುವ ಏಕೈಕ ದುರುದ್ದೇಶದಿಂದಲೇ ಈ ಧ್ವಂಸ ಕೃತ್ಯ ಎಸಗಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ.

ಡಿವಿಡೆಂಡ್ ಪಾಲನ್ನು ಸಿಎಂಗೆ ಹಸ್ತಾಂತರಿಸಿದ ಬಿಐಎಎಲ್

ಬೆಂಗಳೂರು: ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿಯಮಿತವು ಶೇ.13ರಷ್ಟು ಬಂಡವಾಳ ಪಾಲು ಹೊಂದಿರುವ ರಾಜ್ಯಸರಕಾರಿ ಸ್ವಾಮ್ಯದ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಕರ್ಯ ಅಭಿವೃದ್ಧಿ ನಿಗಮದ 16.49 ಕೋಟಿ ರು.ಗಳ ಲಾಭಾಂಶದ ಚೆಕ್‌ನ್ನು ಬಿಐಎಎಲ್ ಅಧ್ಯಕ್ಷ ಹರಿ ಮರಾರ್, ಸಿಎಂ ಸಿದ್ದರಾ ಮಯ್ಯ ಅವರಿಗೆ ಸೋಮವಾರ ಹಸ್ತಾಂತರಿಸಿದರು. ಈ ಕುರಿತು ಬಿಐಎಎಲ್ ಅಧ್ಯಕ್ಷ ಹರಿ ಮರಾರ್ ಮಾತನಾಡಿ, ಬಿಐಎಎಲ್ 2025–26ನೇ ಸಾಲಿಗೆ ಅನ್ವಯವಾಗುವಂತೆ ಪ್ರತೀ ಷೇರ್‌ಗೆ 3 ರು. ಲಾಭಾಂಶ ಘೋಷಿಸಿದೆ. ಇದರಂತೆ ಕೆಎಸ್‌ಐಐಡಿಸಿಗೆ 16.49 ಕೋಟಿ ರು. ಒಟ್ಟು ಲಾಭಾಂಶ ಕೊಡಲಾಗಿದೆ.

ಇದರಲ್ಲಿ ತೆರಿಗೆ ಕಡಿತದ ನಂತರ ಆ ಸಂಸ್ಥೆಗೆ 14.84 ಕೋಟಿ ರು. ಡಿವಿಡೆಂಡ್ ಸಿಕ್ಕಿದೆ. ಈ ಲಾಭಾಂಶ ಘೋಷಣೆಯು ಬಿಐಎಎಲ್ ಸಂಸ್ಥೆಯ ಅತ್ಯುತ್ತಮ ಆರ್ಥಿಕ ನಿರ್ವಹಣೆಯ ಸಂಕೇತವಾಗಿದೆ. ಸಂಸ್ಥೆಯಲ್ಲಿ ಕೆಎಸ್‌ಐಐಡಿಸಿ ರಾಜ್ಯಸರಕಾರ ಪ್ರತಿನಿಧಿಸುತ್ತಿದೆ. ಬಿಐಎಎಲ್ ಸಂಸ್ಥೆಯು 2017–18ರ ಬಳಿಕ ಇದೇ ಮೊದಲ ಬಾರಿಗೆ ಡಿವಿಡೆಂಡ್ ಘೋಷಿಸಿದೆ. ಬಂದ ಲಾಭವನ್ನು ಮೂಲಸೌಕರ್ಯ ಮತ್ತು ಸಾಮರ್ಥ್ಯ ವಿಸ್ತರಣೆಯಂತಹ ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಿದ್ದು, ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆಗಳನ್ನು ದೃಢಗೊಳಿಸಿದ್ದೇವೆ ಎಂದರು.

ಬಿಐಎಎಲ್ ನಲ್ಲಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಶೇ.13, ಎಫ್‌ಐಎಚ್ ಮಾರಿಷಸ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಶೇ. 30.36 ಮತ್ತು ಆ್ಯಂಕರೇಜ್ ಇನ್‌ಫ್ರಾಸ್ಟ್ರಕ್ಚರ್ ಇನ್ವೆಸ್ಟ್‌ಮೆಂಟ್ಸ್ ಹೋಲ್ಡಿಂಗ್ಸ್ ಲಿಮಿಟೆಡ್ ಶೇ. 43.64ರಷ್ಟು ಬಂಡವಾಳ ಪಾಲು ಹೊಂದಿವೆ ಎಂದರು. ಚೆಕ್ ಸ್ವೀಕರಿಸುವ ಸಂದರ್ಭದಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕಿ ಖುಷ್ಬೂ ಗೋಯೆಲ್ ಉಪಸ್ಥಿತರಿದ್ದರು.

ಸಮಾಚಾರ ಸಣ್ಣದಲ್ಲ

ಮುರಿನಕಟ್ಟೆ ಧ್ವಂಸ: ದುಷ್ಕರ್ಮಿಗಳ ಬಂಧಿಸಿ



ಬೆಂಗಳೂರು: ಭಟ್ಕಳದಲ್ಲಿ ಮಾರಿಯಮ್ಮ ದೇವಸ್ಥಾನಕ್ಕೆ ಸಂಬಂಧಿಸಿದ ಮುರಿನ ಕಟ್ಟೆಯನ್ನು ಧ್ವಂಸಗೊಳಿಸಿ, ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ದುಷ್ಕರ್ಮಿಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದಲ್ಲಿ ಕಾನೂನು- ಸುವ್ಯವಸ್ಥೆ ಸಂಪೂರ್ಣ ಕುಸಿದಿದ್ದು, ತಮ್ಮನ್ನು ಯಾರೂ ಏನೂ ಮಾಡುವುದಿಲ್ಲ ಎನ್ನುವ ಧೈರ್ಯದಿಂದ ದುಷ್ಕರ್ಮಿಗಳು ಅಟ್ಟಹಾಸ ಮೆರೆಯುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರಕಾರದ ನಿರಂತರ ತುಷ್ಟೀಕರಣ ಮತ್ತು ಓಲೈಕೆ ರಾಜಕೀಯ, ಸಮಾಜ ವಿರೋಧಿ ಶಕ್ತಿಗಳಿಗೆ ಎಗ್ಗಿಲ್ಲದ ಧೈರ್ಯ ನೀಡುತ್ತಿರುವುದು ಸುಸ್ಪಷ್ಟ. ರಕ್ಷಣೆ ನೀಡಬೇಕಾದ ಪೊಲೀಸ್ ಪಡೆಯ ನೈತಿಕತೆಯನ್ನೇ ಕುಗ್ಗಿಸುವ ಕೃತ್ಯಗಳು ರಾಜ್ಯಕ್ಕೆ ಕಂಟಕಪ್ರಾಯ. ಸಮಾಜದ ಶಾಂತಿ ಕೆಡಿಸಿ, ಅಟ್ಟಹಾಸ ಮೆರೆದ ಮತ್ತು ಪೊಲೀಸರ ಮೇಲೆ ಕೈ ಮಾಡಿದ ಪ್ರತಿಯೊಬ್ಬ ದುಷ್ಕರ್ಮಿಗಳನ್ನು ತಕ್ಷಣವೇ ಬಂಧಿಸಿ, ಮುರಿನಕಟ್ಟೆಯನ್ನು ಮತ್ತೆ ನಿರ್ಮಿಸಿ, ದುಷ್ಕರ್ಮಿಗಳ ವಿರುದ್ಧ ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಹೋಟೆಲ್ ತಿಂಡಿಗಳ ದರ ಹೆಚ್ಚಳ ಸಂಭವ

ಬೆಂಗಳೂರು: ರಾಜ್ಯ ಸರಕಾರ ಜಾರಿಗೆ ತಂದಿರುವ ಪರಿಷ್ಕೃತ ಕನಿಷ್ಠ ವೇತನ ಹಾಗೂ ವೇತನ ಪರಿಷ್ಕರಣೆಯಿಂದ ಹೋಟೆಲ್ ಮತ್ತು ಉಪಹಾರ ಗೃಹಗಳ ದರಗಳಲ್ಲಿ ಭಾರೀ ಏರಿಕೆ ಸಂಭವಿಸುವ ಸಾಧ್ಯತೆ ಇದೆ ಎಂದು ಕರ್ನಾಟಕ ರಾಜ್ಯ ಹೋಟೆಲುಗಳ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ ತಿಳಿಸಿದರು. ಪ್ರಸ್ತುತ 50 ರು. ದರದಲ್ಲಿರುವ ಒಂದು ಪ್ಲೇಟ್ ಇಡ್ಲಿ 90 ರು.ಗೆ ಹಾಗೂ 80-90 ದರದಲ್ಲಿರುವ ಮಸಾಲೆ ದೋಸೆ 150 ರು.ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ. ಪ್ರಸ್ತುತ 150-200 ರು. ದರದಲ್ಲಿರುವ ಸಸ್ಯಾಹಾರಿ ಊಟ 250-300 ರು.ಕ್ಕೆ ತಲುಪಬಹುದು. ಬೆಂಗಳೂರಿನಲ್ಲಿ 300-350 ರು. ದರದಲ್ಲಿರುವ ಬಿರಿಯಾನಿ ಪದಾರ್ಥಗಳು ಸುಮಾರು 500 ರು.ಕ್ಕೆ ಏರಬಹುದು. ಇದರಿಂದ ಸಾಮಾನ್ಯ ಜನರಿಗೆ ಹೊರಗೆ ಊಟ ಮಾಡುವುದು ದುಬಾರಿಯಾಗಲಿದೆ ಎಂದರು. ರಾಜ್ಯ ಸರಕಾರ ವಲಯ-3ರ ಅಪ್ರಶಿಕ್ಷಿತ ಕಾರ್ಮಿಕರಿಗೆ 19,300 ರು. ರಿಂದ 23,376 ರು. ರವರೆಗೆ ಹಾಗೂ ವಲಯ-1ರ ಪರಿಣತ ಕಾರ್ಮಿಕರಿಗೆ 31,100 ರು. ರವರೆಗೆ ಕನಿಷ್ಠ ವೇತನ ಪರಿಷ್ಕರಿಸಲಾಗಿದೆ. ಇದರಿಂದ ಸರಾಸರಿ ಶೇ.60ರಷ್ಟು ಏರಿಕೆಯಾಗಿದೆ. ಹೊಸ ವೇತನ ಪರಿಷ್ಕರಣೆ ಸಣ್ಣ ಹಾಗೂ ಕುಟುಂಬ ಆಧಾರಿತ ಹೋಟೆಲ್‌ಗಳಿಗೆ ದೊಡ್ಡ ಹೊಡೆತ ನೀಡಲಿದೆ ಎಂದರು.

ಅಕ್ರಮ ಸಂಬಂಧ: ಅಕ್ಕನ ಕತ್ತು ಸೀಳಿ ಕೊಂದ ತಮ್ಮ

ಹಾವೇರಿ: ಪರ ಪುರುಷನ ಜತೆ ಅಕ್ರಮ ಸಂಬಂಧ ಹೊಂದಿರುವ ಶಂಕೆ ಹಿನ್ನೆಲೆ ಅಂಗನವಾಡಿಯಲ್ಲಿಯೇ ಅಕ್ಕನನ್ನು ತಮ್ಮ ಕತ್ತು ಸೀಳಿ ಭೀಕರವಾಗಿ ಕೊಲೆಗೈದ ಘಟನೆ ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ನಡೆದಿದೆ. ಸುಮಾ ಶಿವಶಂಕರ್ ವನಹಳ್ಳಿ (29) ಕೊಲೆಯಾದ ದುರ್ದೈವಿ. ಸುಮಾ ಶಿಗ್ಗಾವಿ ಪಟ್ಟಣದ ಮೌಲಾಲಿ ಗುಡ್ಡದಲ್ಲಿರುವ ಅಂಗನವಾಡಿ ಕೇಂದ್ರದಲ್ಲಿ ಆಯಾ ಕೆಲಸ ಮಾಡಿಕೊಂಡಿದ್ದಳು. ಬೆಳಗ್ಗೆ ಸುಮಾರು 10:15ಕ್ಕೆ ಸುಮಾ ಅವರ ಸ್ವಂತ ತಮ್ಮ ಸಂಜೀವ (27) ಮಚ್ಚಿನಿಂದ ಸುಮಾಳ ಕುತ್ತಿಗೆ ಹಾಗೂ ಕೈಗೆ ಹೊಡೆದಿದ್ದಾನೆ. ಮಚ್ಚು ಬೀಸಿದ ರಭಸಕ್ಕೆ ಸುಮಾಳ ಕೈ ಕಟ್ ಆಗಿದೆ. ಕುತ್ತಿಗೆಗೂ ಗಂಭೀರ ಗಾಯಗಳಾದ ಹಿನ್ನೆಲೆ ಸುಮಾ ಸ್ಥಳದಲ್ಲೇ ಸಾವನ್ನಪ್ಪಿದ್ದಾಳೆ. ಆರೋಪಿ ಸಂಜೀವನನ್ನು (27) ಪೊಲೀಸರು ಬಂಧಿಸಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
26.05.2026
ಸಂಜೆ: 06.55 ರಿಂದ 08.05 ರವರೆಗೆ
ಮಂಗಳವಾರದ ಅತಿಥಿ
ಶ್ರೀಮತಿ ಅಂಜಲಿ ಹಳಿಯಾಳ್
ವಿಷಯ
ಹಾಡಿನ ಪುಸ್ತಕದ ಹಾದುಗಳು

vishwavani.news

ದಿನ ವಿಶೇಷ

26 ಮೇ 2026 ಮಂಗಳವಾರ

- ಸೂರ್ಯೋದಯ : 5-43
- ಸೂರ್ಯಾಸ್ತ : 7-04
- ತಿಥಿ : ಏಕಾದಶಿ
- ನಕ್ಷತ್ರ : ಹಸ್ತ
- ಸಂವತ್ಸರ : ಪರಾಭವ
- ಅಯನ : ಉತ್ತರಾಯಣ
- ಋತು : ಗ್ರೀಷ್ಮ
- ಮಾಸ : ಅಧಿಕ ಜ್ಯೇಷ್ಠ
- ಪಕ್ಷ : ಶುಕ್ಲಪಕ್ಷ

ಕೆಪಿಸಿಸಿ ಆಯೋಜಿಸಿದ್ದ 2 ದಿನಗಳ ಸಭೆಗೆ ಬಾರದ ಪದಾಧಿಕಾರಿಗಳ ಅಮಾನತು

ಎಸ್‌ಐಆರ್ ಸಭೆಗೆ ಗೈರಾದವರಿಗೆ ಶಾಕ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೇಂದ್ರ ಚುನಾವಣಾ ಆಯೋಗ ನಡೆಸಲು ಮುಂದಾಗಿರುವ ಎಸ್‌ಐಆರ್ ಪ್ರಕ್ರಿಯೆ ವಿರುದ್ಧ ಮುಂದಿನ ಹೋರಾಟ ಹೇಗಿರಬೇಕು ಎನ್ನುವ ಸಭೆಗೆ ಗೈರಾಗಿರುವ ಕಾಂಗ್ರೆಸ್ ಪದಾಧಿಕಾರಿಗಳಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶಾಕ್ ನೀಡಿದ್ದಾರೆ.

ಜಿಬಿಎ ಚುನಾವಣೆ, ಎಸ್‌ಐಆರ್ ಜಾಗೃತಿ ಸೇರಿದಂತೆ ಪಕ್ಷದ ಸಂಘಟನಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ದೇವನಹಳ್ಳಿ ಹೊರವಲಯದಲ್ಲಿ ಕೆಪಿಸಿಸಿ ಆಯೋಜಿಸಿದ್ದ ಸಭೆಗೆ ಕೆಲ ಪದಾಧಿಕಾರಿಗಳು ಗೈರಾಗಿದ್ದರು. ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವ ಡಿ.ಕೆ.ಶಿವಕುಮಾರ್, ಸಚಿವರು, ಶಾಸಕರು ಎಲ್ಲ ಕೆಲಸಗಳನ್ನು ಬದಿಗಿಟ್ಟು ಈ ಕೆಲಸದ ಬಗ್ಗೆ ಗಮನಹರಿಸಬೇಕು ಎಂದು ಸೂಚಿಸಿದ್ದೇವೆ. ಸಭೆಗೆ ಗೈರಾಗಿರುವ ಪದಾಧಿಕಾರಿಗಳನ್ನು ಅವರ ಸ್ಥಾನದಿಂದ ತೆಗೆಯಲು ಪಕ್ಷದಿಂದ ನಿರ್ದೇಶನ ಬಂದಿರುವ ಹಿನ್ನೆಲೆಯಲ್ಲಿ, ಯಾರು ಸಭೆಗೆ ಬಂದಿಲ್ಲವೋ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ಪಕ್ಷದ ಸಂಘಟನೆಯಲ್ಲಿ ಆಸಕ್ತಿ ತೋರದವರನ್ನು ಅವರ ಸ್ಥಾನಮಾನದಿಂದ ತೆಗೆದು ಹಾಕಲಾಗುವುದು ಎಂದು ಸ್ಪಷ್ಟಪಡಿಸಿದರು. ಇದು ಮ್ಯಾಪಿಂಗ್ ಪ್ರಕ್ರಿಯೆ ಎಂಬುದನ್ನು ಎಲ್ಲರೂ ತಲೆಯಿಂದ ತೆಗೆದು ಹಾಕಿ. ಬಿಎಲ್‌ಒಗಳು ನೀಡುವ ಎನ್ಯುಮರೇಷನ್ ಅರ್ಜಿಯನ್ನು ಕಡ್ಡಾಯವಾಗಿ ತುಂಬಿ ದಾಖಲೆ ಸಮೇತ ಚುನಾವಣಾಧಿಕಾರಿಗಳಿಗೆ ಸಲ್ಲಿಕೆ ಮಾಡಬೇಕು. ಇದಕ್ಕಾಗಿ ನಮ್ಮ ಕಾರ್ಯಕರ್ತರಿಗೆ ತರಬೇತಿ ನೀಡಲಾಗುವುದು. ಬಿಎಲ್‌ಒಗಳು ಪಕ್ಷಭೇದ ಮರೆತು ಸರಿಯಾದ ರೀತಿಯಲ್ಲಿ ಎಲ್ಲರ ಮತದಾನದ ಹಕ್ಕನ್ನು ರಕ್ಷಣೆ ಮಾಡಲು ಸಹಕಾರ ನೀಡಬೇಕು. ಯಾರೂ ಮತದಾನದ ಹಕ್ಕು ಕಳೆದುಕೊಳ್ಳುವಂತಾಗಬಾರದು. ಜನರಿಗೆ ಸರಿಯಾದ ದಾಖಲೆ ಒದಗಿಸಿಕೊಟ್ಟು ಅವರ ಮತ ಕಾಪಾಡಬೇಕು ಎಂದು ಹೇಳಿದರು.

ಇದೇ ಡಿಕೆ, ಕಾಂಗ್ರೆಸ್ ಅಧಿಕಾರಕ್ಕೆ: ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುವ ವೇಳೆ, 2028ಕ್ಕೆ ನಮ್ಮ ಸರಕಾರ ಬರುವ ಕನಸು ಕಾಣಬೇಡಿ, ಕೆಲಸ ಮಾಡಿ ಎಂಬ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತೀನ್ ನಬಿನ್ ಅವರು ರಾಜ್ಯ ನಾಯಕರಿಗೆ ಸೂಚನೆ ನೀಡಿದ್ದಾರೆ ಎಂದು ತಿಳಿದುಬಂದಿದೆ. ಅಮಿತ್ ಶಾ ಅವರು ಬಿಜೆಪಿಗೆ 122 ಸೀಟು ಬರುತ್ತದೆ, ಎಲ್ಲರೂ ಸೂಟುಬೂಟು ಸಿದ್ಧಮಾಡಿಕೊಳ್ಳಿ ಎಂದಿದ್ದರು. ನಾನು ನಮಗೆ 136 ಸೀಟು ಬರಲಿದೆ ಎಂದು ಹೇಳಿದ್ದೆ. ಈಗಲೂ ಹೇಳುತ್ತಿದ್ದೇನೆ ಬರೆದುಕೊಳ್ಳಿ, 2028ಕ್ಕೆ ಇದೇ ಡಿ.ಕೆ.ಶಿವಕುಮಾರ್ ಹಾಗೂ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ಭವಿಷ್ಯ ನುಡಿದರು.

ಗ್ಯಾರಂಟಿ ಪರಿಷ್ಕರಣೆ?

ಸರಕಾರದ ಮಹತ್ವದ ಯೋಜನೆಯಾಗಿರುವ ಗೃಹ ಲಕ್ಷ್ಮಿ ಮತ್ತು ಗೃಹ ಜ್ಯೋತಿ ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಲು ಸರಕಾರ ಮುಂದಾಗಿದೆ ಎನ್ನಲಾಗಿದೆ. ಭಾನುವಾರ ಎಸ್‌ಐಆರ್ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿದ್ದು, ಫಲಾನುಭವಿಗಳ ಅರ್ಹತೆಯನ್ನು ಸಮಗ್ರವಾಗಿ ಪರಿಶೀಲಿಸಲು ಸರಕಾರ ಮುಂದಾಗಿದೆ. ಗೃಹಲಕ್ಷ್ಮಿ ಯೋಜನೆಯಲ್ಲಿ ಅರ್ಹತೆ ಮೀರಿದವರು ಹಾಗೂ ಸತ್ತವರ ಹೆಸರಿನಲ್ಲೂ ಹಣ ಪಡೆಯಲಾಗುತ್ತಿದೆ ಎಂಬ ಮಾಹಿತಿಯಿದೆ. ಗೃಹಜ್ಯೋತಿ ಯೋಜನೆಯಲ್ಲೂ ಬಹುತೇಕ ಅರ್ಹತೆ ಮೀರಿದವರು ಫಲಾನುಭವಿಗಳಾಗುತ್ತಿದ್ದಾರೆ ಎನ್ನುವ ಮಾಹಿತಿ ಇದೆ. ಅದೇ ಕಾರಣಕ್ಕೆ ಎರಡೂ ಯೋಜನೆಗಳ ಪರಿಷ್ಕರಣೆಗೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಡಿ.ಕೆ. ಶಿವಕುಮಾರ್ ಮಾತನಾಡಿ, ಕೆಲವು ಗ್ಯಾರಂಟಿ ಫಲಾನುಭವಿಗಳು ಮೃತಪಟ್ಟಿದ್ದು, ಸುಮಾರು 100 ಕೋಟಿಯಷ್ಟು ಹಣ ಬೇರೆಯವರಿಗೆ ಹೋಗಿ ದುರ್ಬಳಕೆಯಾಗಿದೆ.

ಇನ್ನು ಬೇರೆಯವರ ದೂರವಾಣಿ ಸಂಖ್ಯೆ ಕೊಟ್ಟಿರುವುದರಿಂದ ಸರಿಯಾದ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿದೆಯೇ, ಇಲ್ಲವೇ ಎಂಬುದನ್ನು ತಿಳಿಯಬೇಕಿದೆ. ಹೀಗಾಗಿ ಫಲಾನುಭವಿಗಳ ದಾಖಲೆ ಸಂಗ್ರಹಿಸುವ ಬಗ್ಗೆ ಚರ್ಚೆ ಮಾಡುವ ಬಗ್ಗೆ ಸಲಹೆ ಬಂದಿದೆ. ಪ್ರತಿ ತಾಲೂಕಿನಲ್ಲಿ ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

> **ಬಿಜೆಪಿಯವರು ಜಾತಿ, ಧರ್ಮದ ವಿಚಾರವಾಗಿ ಭಾವನೆ ಮೇಲೆ ರಾಜಕಾರಣ ಮಾಡಿದರೆ, ನಾವು ಬದುಕಿನ ಮೇಲೆ ರಾಜಕೀಯ ಮಾಡುತ್ತೇವೆ. ಜನರ ಬೆವರು, ಪರಿಶ್ರಮಕ್ಕೆ ಬೆಲೆ ನೀಡಿ ಅವರ ಹೊಟ್ಟೆ ತುಂಬಿಸುವ ಕಾರ್ಯಕ್ರಮಗಳ ಮೂಲಕ ರಾಜಕೀಯ ಮಾಡುತ್ತೇವೆ. ಇದು ನಮ್ಮ ಚಿಂತನೆ.**
> **-ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ತಮ್ಮ ಅರ್ಹತೆ ಅರಿತು ನಿಖಿಲ್ ಮಾತನಾಡಲಿ

ಬೆಂಗಳೂರು: ಬಿಡದಿ ಟೌನ್ಶಿಪ್ ಕುರಿತಂತೆ ಡಿ.ಕೆ.ಶಿವಕುಮಾರ್ ಅವರನ್ನು ಟೀಕಿಸುವ ಮೊದಲು ತಮ್ಮ ಅರ್ಹತೆ ಏನು ಎನ್ನುವುದನ್ನು ನಿಖಿಲ್ ಕುಮಾರಸ್ವಾಮಿ ತಿಳಿದುಕೊಳ್ಳಲಿ ಎಂದು ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್.ಮಂಜುನಾಥ ಗೌಡ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಯೋಜನೆ ಕುರಿತಂತೆ ಚರ್ಚಿಸಲು ತಮ್ಮ ತಂದೆಯನ್ನು (ಎಚ್.ಡಿ. ಕುಮಾರಸ್ವಾಮಿ) ನಿಖಿಲ್ ಒಪ್ಪಿಸಲಿ. ಬಿಡದಿ ಟೌನ್ಶಿಪ್ ಭೂಸ್ವಾಧೀನದ ಕಥೆ, ಚಿತ್ರಕತೆ ಎಲ್ಲವೂ ಕುಮಾರಸ್ವಾಮಿ ಅವರದ್ದು. ಡಿಎಲ್‌ಎಫ್ ಸಂಸ್ಥೆಯನ್ನು ಹೀರೊ ಮಾಡಲು ಹೊರಟಿದ್ದರು. ಆದರೆ, ಈಗ ನಾವು ಅದನ್ನು ಚಿತ್ರ ರೂಪದಲ್ಲಿ ತರುತ್ತಿದ್ದೇವೆ ಎಂದರು. ಬಿಡದಿ ಯೋಜನೆಗೆ ರೈತರು ಭೂಮಿ ನೀಡಿದ್ದಾರೆ. ಡಿ.ಕೆ. ಶಿವಕುಮಾರ್ ಜತೆ ಸಭೆ ನಡೆಸಿದ ರೈತರನ್ನು ದಲ್ಲಾಳಿಗಳು ಎಂದು ನಿಖಿಲ್ ಕರೆದಿದ್ದಾರೆ. ರೈತರು ಉತ್ತಮ ಬಟ್ಟೆ ಧರಿಸುವುದೇ ತಪ್ಪು ಎಂಬಂತೆ ಮಾತನಾಡಿದ್ದಾರೆ. ರೈತರು ದಡ್ಡರಲ್ಲ. ರೈತರ ಪ್ರಶ್ನೆಗಳಿಗೆ ಉತ್ತರ ನೀಡುವ ಕೆಲಸವನ್ನು ಸರಕಾರ ಮಾಡಲಿದೆ ಎಂದರು.

ಜೂ.1ರಿಂದ ಬೇರೆ ಕೋರ್ಟ್‌ನಲ್ಲಿ ನಟ ದರ್ಶನ್ ವಿಚಾರಣೆ

ಬೆಂಗಳೂರು: ನಟ ದರ್ಶನ್ ಹಾಗೂ ಪವಿತ್ರಾಗೌಡ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಜೂನ್ 1ರಿಂದ ಬೇರೊಂದು ಕೋರ್ಟ್‌ನಲ್ಲಿ ನಡೆಯಲಿದೆ. 2024ರಲ್ಲಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಇದುವರೆಗೂ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಜೂನ್ 1ರಿಂದ 59ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯಲಿದೆ. ಒಂದು ವರ್ಷದ ಒಳಗೆ ಪ್ರಕರಣದ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿದ ಬೆನ್ನಲ್ಲೇ ಪ್ರಮುಖ 60 ಸಾಕ್ಷಿಗಳ ವಿಚಾರಣೆಗೆ ಸಿದ್ಧತೆ ನಡೆದಿದೆ. ನ್ಯಾಯಾಧೀಶರಾದ ಸುಜಾತಾ ಮಡಿವಾಳಪ್ಪ ಸಾಂಬ್ರಾಣಿ ಅವರು ಪ್ರಕರಣದ ವಿಚಾರಣೆ ನಡೆಸಲಿದ್ದಾರೆ. ಸಿಟಿ ಸಿವಿಲ್ ಕೋರ್ಟ್‌ನ ಡೆಪ್ಯುಟಿ ರಿಜಿಸ್ಟ್ರಾರ್ ಈ ಕುರಿತು ಆದೇಶ ಹೊರಡಿಸಿದ್ದಾರೆ.

ಬಕ್ರೀದ್ ಹಬ್ಬದ ಪ್ರಯುಕ್ತ ಬೆಂಗಳೂರಿನ ಚಾಮರಾಜಪೇಟೆಯ ಈದ್ಗಾ ಮೈದಾನದಲ್ಲಿ ಶನಿವಾರ ಕುರಿ ಮತ್ತು ಮೇಕೆಗಳನ್ನು ಮಾರಾಟ ಮಾಡುತ್ತಿರುವ ದೃಶ್ಯ. ಚಿತ್ರ: ಸುಧಾಕರ್ ದೇವರಾಜ್

ಮತಾಂತರ ನಿಷೇಧ ಕಾಯ್ದೆ ಹಿಂಪಡೆಯಿರಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿದ್ದಾಗ, ಕರ್ನಾಟಕದಲ್ಲಿ ಜಾರಿಯಲ್ಲಿರುವ ಮತಾಂತರ ನಿಷೇಧ ಕಾಯ್ದೆ ರದ್ದುಮಾಡುತ್ತೇವೆ ಎಂದು ಭರವಸೆ ನೀಡಿದ್ದರು, ಆದರೆ ಅವರು ಅಧಿಕಾರಕ್ಕೆ ಬಂದು ಮೂರು ವರ್ಷ ಆದರೂ ಅದರ ಕಡೆ ಗಮನಹರಿಸಿಲ್ಲ ಇದು ಕ್ರೈಸ್ತ ಸಮುದಾಯಕ್ಕೆ ಮಾಡಿದ ಮಹಾಮೋಸ ಎಂದು ಅಖಿಲ ಭಾರತ ಕ್ರೈಸ್ತ ಮಹಾಸಭಾ ಸಂಸ್ಥಾಪಕ ರಾಷ್ಟ್ರೀಯ ಅಧ್ಯಕ್ಷ ಪ್ರಜ್ವಲ್ ಸ್ವಾಮಿ ಎಸ್ ತಿಳಿಸಿದರು.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷಕ್ಕೆ ಇಡೀ ಕ್ರೈಸ್ತ ಸಮುದಾಯ ಮತ ನೀಡಿ ಅಧಿಕಾರಕ್ಕೆ ತಂದಿದೆ, ಚುನಾವಣೆಯ ಸಂದರ್ಭದಲ್ಲಿ ಪಕ್ಷ ಮತಾಂತರ ನಿಷೇಧ ಕಾಯ್ದೆ ಸೇರಿದಂತೆ ನಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸುತ್ತೇವೆ ಎಂದು ವಾಗ್ದಾನ ನೀಡಲಾಗಿತ್ತು, ಆದರೆ ಅದು ಈಡೇರಿಲ್ಲ. ಅಷ್ಟೇ ಅಲ್ಲದೆ ಕ್ರೈಸ್ತ ಸಮುದಾಯದ ಭವನಗಳು, ಚರ್ಚುಗಳ ಜೀರ್ಣೋದ್ಧಾರ ಮತ್ತು ನಿರ್ಮಾಣಕ್ಕೆಂದು ಕೇಳಿದ ಹಣ ಬಿಡುಗಡೆ ಮಾಡಲಿಲ್ಲ. ಕೆಲವೆಡೆ ಮನೆ, ಪ್ರಾರ್ಥನೆ, ಚರ್ಚ್ ಆರಾಧನೆ, ಪ್ರೇಯರ್ ಮೀಟಿಂಗ್ ನಡೆಯುವಾಗ ಬಲವಂತ ಮತಾಂತರ ಎಂಬ ಆರೋಪ ಮಾಡಿ ಗುಂಪುಗಳು ದಾಳಿ ನಡೆಸಿದ ಪ್ರಕರಣಗಳು ಹೆಚ್ಚಾಗುತ್ತಿವೆ. ಕೆಲವು ವರದಿಗಳ ಪ್ರಕಾರ ವೈಯಕ್ತಿಕ ವೈಷಮ್ಯ, ಜಾತಿ ಭೇದಭಾವ ಅಥವಾ ಕುಟುಂಬದ ವಿರೋಧದ ಹಿನ್ನೆಲೆಯಲ್ಲಿ ಕೂಡ ಮತಾಂತರ ಆರೋಪಗಳನ್ನು ಬಳಸಲಾಗಿದೆ ಎಂದರು.

ರಾಜ್ಯಸಭೆಗೆ ನಾನು ಕೂಡ ಆಕಾಂಕ್ಷಿ

ಮೈಸೂರು: ರಾಜ್ಯಸಭಾ ಸದಸ್ಯ ಸ್ಥಾನಕ್ಕೆ ನಾನೂ ಆಕಾಂಕ್ಷಿ. ನಾನು ಸಕ್ರೀಯ ಚುನಾವಣಾ ರಾಜಕೀಯದಿಂದ ದೂರ ಉಳಿದಿದ್ದೇನೆ. ಹೀಗಾಗಿ ಪಕ್ಷದ ಹಿರಿಯರು ರಾಜ್ಯಸಭೆ ಅಥವಾ ಬೇರೆ ಯಾವುದೇ ಸ್ಥಾನಮಾನ ನೀಡಿದರೆ ನಿಭಾಯಿಸುತ್ತೇನೆ ಎಂದು ಮಾಜಿ ಸಿಎಂ ಡಿ.ವಿ.ಸದಾನಂದ ಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಎನ್‌ಡಿಎ ಮಿತ್ರ ಪಕ್ಷದ ಸ್ಥಾನ ಖಾಲಿಯಾಗುವ ಕಾರಣ ಈ ಬಗ್ಗೆ ತೀರ್ಮಾನವನ್ನು ರಾಷ್ಟ್ರೀಯ ನಾಯಕರು ಮಾಡುತ್ತಾರೆ. ನಾನು ರಾಜ್ಯಸಭಾ ಸ್ಥಾನದ ಆಕಾಂಕ್ಷಿ ಎಂಬುದನ್ನು ತಿಳಿಸಿದ್ದೇನೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಕುರಿತು ಪ್ರತಿಕ್ರಿಯಿಸಿ, ನಮ್ಮಲ್ಲಿ ಅಧ್ಯಕ್ಷರ ಬದಲಾವಣೆ ಪ್ರಸ್ತಾಪ ಇಲ್ಲ. ಈಗ ಅವರು ಎರಡು ವರ್ಷ ಮುಗಿಸಿದ್ದು, ಇನ್ನೊಂದು ವರ್ಷದಲ್ಲಿ ಅವಧಿಯೇ ಮುಗಿಯುತ್ತದೆ. ಬಿಜೆಪಿ ಎಲ್ಲ ಕಡೆ ಜಯಭೇರಿ ಭಾರಿಸುತ್ತಿದ್ದು, ರಾಜ್ಯದಲ್ಲಿ ಹಿಂದೆ ಜನಸೇವೆ ಮಾಡಿದ ಬಿಜೆಪಿಯನ್ನು ಹೇಗೆ ಮತ್ತೆ ಅಧಿಕಾರಕ್ಕೆ ತರಬೇಕು ಎನ್ನುವ ಮೂಲ ವಿಚಾರ ತಿಳಿಸುವ ಕೆಲಸವಾಗುತ್ತಿದೆ ಎಂದರು.

ಕಾಂಗ್ರೆಸ್ ರಾಜ್ಯದ ಜನ ತನಗೆ ಕೊಟ್ಟ ಜವಾಬ್ದಾರಿ ನಿರ್ವಹಿಸಲಾಗದೆ, ಜನ ತಮ್ಮ ಮೇಲೆ ಮುಗಿ ಬಿದ್ದಾಗ ಅವರ ದಿಕ್ಕು ತಪ್ಪಿಸಲು ಎಸ್‌ಐಆರ್ ಬಗ್ಗೆ ಸುಳ್ಳು ಹರಡುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

> **ಪೆಟ್ರೋಲ್, ಡೀಸೆಲ್‌ಗೆ ಜಾಗತಿಕ ಮಟ್ಟದಲ್ಲಿ ಸಮಸ್ಯೆ ಬಂದರೂ ಅದನ್ನು ಹತೋಟಿಯಲ್ಲಿಡುವ ಕೆಲಸ ಆಗಿದೆ. ಹೀಗಾಗಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿದೆ. ಆದರೂ ಯಾರಿಗೂ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗುತ್ತಿದೆ.**
> **-ಡಿ.ವಿ.ಸದಾನಂದ ಗೌಡ,** ಮಾಜಿ ಮುಖ್ಯಮಂತ್ರಿ

ಡೀಮ್ಡ್ ಅರಣ್ಯ: ಬಿಜೆಪಿ ಮಾಡಿದ್ದ ತಪ್ಪು ಸರಿಪಡಿಸಲು ಯತ್ನ

ಉಡುಪಿ: ಪರಿಭಾವಿತ (ಡೀಮ್ಡ್) ಅರಣ್ಯ ಪ್ರದೇಶದಲ್ಲಿ ಸರಕಾರಿ ಕಟ್ಟಡ, ಆಸ್ಪತ್ರೆ, ಅಂಗನವಾಡಿ ಇತ್ಯಾದಿ ಇದ್ದು, ಬಿಜೆಪಿ ಸರಕಾರದ ಆಡಳಿತದಲ್ಲಿ ಆಗಿರುವ ತಪ್ಪು ಸರಿಪಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವುದಾಗಿ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದ್ದಾರೆ.

ಕಾರ್ಕಳದಲ್ಲಿ ವಲಯ ಅರಣ್ಯಾಧಿಕಾರಿಗಳ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ನೂತನ ಕಟ್ಟಡ ಉದ್ಘಾಟಿಸಿ, ಅರಣ್ಯ ಹುತಾತ್ಮರಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಡೀಮ್ಡ್ ಅರಣ್ಯ ಸಮಸ್ಯೆ ಪರಿಹರಿಸಲು ಕೊನೆಯ ಅವಕಾಶ ದೊರೆತಿದ್ದು, ಸುಪ್ರೀಂಕೋರ್ಟ್‌ಗೆ ಮರು ಮನವಿ ಸಲ್ಲಿಸುವುದಕ್ಕಾಗಿ ಜಿಲ್ಲಾ ಮತ್ತು ರಾಜ್ಯಮಟ್ಟದಲ್ಲಿ ಸಮಿತಿ ರಚಿಸಲಾಗಿದೆ ಎಂದರು.

ಮೊದಲಿಗೆ ಸುಪ್ರೀಂಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದಾಗ 9 ಲಕ್ಷ ಹೆಕ್ಟೇರ್ ಜಮೀನನ್ನು ಡೀಮ್ಡ್ ಎಂದು ಗುರುತಿಸಲಾಗಿತ್ತು. ನಂತರ 2022ರಲ್ಲಿ ಪ್ರಮಾಣಪತ್ರ ಸಲ್ಲಿಸಿದಾಗ 3 ಲಕ್ಷ 33 ಸಾವಿರ ಹೆಕ್ಟೇರ್ ಜಮೀನು ಎಂದು ಪರಿಷ್ಕರಿಸಲಾಯಿತು. ಆಗ ಸಮರ್ಪಕವಾಗಿ ಸರ್ವೇ ನಡೆಸದೆ, ಖುದ್ದು ಪರಿಶೀಲಿಸದ ಕಾರಣ ಸರಕಾರಿ ಕಟ್ಟಡ, ಶಾಲೆ, ಆಸ್ಪತ್ರೆ, ಪಟ್ಟಾ ಭೂಮಿ ಸೇರಿದೆ. ಬಡ ಮತ್ತು ಮಧ್ಯಮ ವರ್ಗದ ಜನರು ಸಂಕಷ್ಟ ಎದುರಿಸುತ್ತಿದ್ದು, ಈ ಲೋಪ ಸರಿಪಡಿಸಬೇಕಾಗಿದೆ. ಕುದುರೆಮುಖ ಕಬ್ಬಿಣದ ಅದಿರು ಕಂಪನಿಯು ಅರಣ್ಯ ಇಲಾಖೆಗೆ ದಂಡ ಮತ್ತು ಇತರ ಶುಲ್ಕವನ್ನು ಪಾವತಿಸಬೇಕಾಗಿದೆ. ಪ್ರಸ್ತುತ ಹೈಕೋರ್ಟ್ ಈ ಸಂಬಂಧ ನಿರ್ದೇಶನ ನೀಡಿದ್ದು, ನ್ಯಾಯಾಲಯದ ಆದೇಶದಂತೆ ಸರಕಾರ ನಡೆಯಲಿದೆ ಎಂದು ಹೇಳಿದರು.

ಅಣುಸ್ಥಾವರ ಘಟಕ: ಪ್ರಸ್ತಾವನೆ ಬಂದಿಲ್ಲ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಬೇಸೂರಿನಲ್ಲಿ ಅಣು ಸ್ಥಾವರ ಘಟಕ ನಿರ್ಮಾಣಕ್ಕೆ ಸಂಬಂಧಿಸಿ ಇಲ್ಲಿಯವರೆಗೆ ಯಾವುದೇ ಪ್ರಸ್ತಾವನೆ ಸರಕಾರದ ಮುಂದೆ ಬಂದಿಲ್ಲ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿದರು. ಈಗಾಗಲೇ ಪಶ್ಚಿಮ ಘಟ್ಟದ ಸಂರಕ್ಷಣೆಗೆ ಎಲ್ಲ ರೀತಿಯ ಕ್ರಮವನ್ನು ಸರಕಾರ ಕೈಗೊಂಡಿದೆ. ಅಣು ಸ್ಥಾವರಕ್ಕೆ ಸಂಬಂಧಿಸಿ ಸಮೀಕ್ಷೆ ನಡೆಯುತ್ತಿರುವ ವಿಚಾರವು ನಮ್ಮ ಗಮನಕ್ಕೆ ಬಂದಿಲ್ಲ. ಪ್ರಸ್ತಾವನೆ ಬಂದಾಗ ಪ್ರತಿಕ್ರಿಯೆ ನೀಡುತ್ತೇವೆ ಎಂದು ಹೇಳಿದರು. ಕಸ್ತೂರಿ ರಂಗನ್ ವರದಿಯಿಂದ ಜನರಿಗೆ ಸಮಸ್ಯೆಯಾಗಬಾರದು ಎಂದು ಆ ವರದಿಯನ್ನು ನಾವು ಒಪ್ಪಲಿಲ್ಲ. ತಿರಸ್ಕಾರ ಮಾಡಬೇಕೆಂದು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ನಮ್ಮಲ್ಲಿ ಶೇ.83ರಷ್ಟು ಪಶ್ಚಿಮಘಟ್ಟ ಸುರಕ್ಷಿತವಾಗಿದೆ ಎಂದು ತಿಳಿಸಿದರು.

ರಾಜ್ಯ ಸರಕಾರ ವ್ಯಾಟ್ ಕಡಿಮೆ ಮಾಡಲಿ: ಆರ್.ಅಶೋಕ

ಬೆಂಗಳೂರು: ಪೆಟ್ರೋಲ್ ದರ ಏರಿಕೆಯಿಂದ ವಾರ್ಷಿಕ 6,000 ಕೋಟಿ ರು. ಹೆಚ್ಚುವರಿ ಆದಾಯ ಗಳಿಸುತ್ತಿರುವ ರಾಜ್ಯ ಕಾಂಗ್ರೆಸ್ ಸರಕಾರ ವ್ಯಾಟ್ ಕಡಿಮೆ ಮಾಡದೆ ಕೇಂದ್ರದ ಮೇಲೆ ಆರೋಪ ಮಾಡುತ್ತಿದೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪೆಟ್ರೋಲ್ ದರ ಏರಿಕೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಕಾರಣ ಮಾಡುತ್ತಿದ್ದಾರೆ. ಯುದ್ಧದಿಂದಾಗಿ ಪೆಟ್ರೋಲ್ ಬಳಕೆ ಕಡಿಮೆ ಮಾಡಲು ಬೇರೆ ದೇಶಗಳು ನಿರ್ಬಂಧ ಹಾಕಿದ್ದರೂ ಪ್ರಧಾನಿ ನರೇಂದ್ರ ಮೋದಿ ಅಂತಹ ನಿರ್ಬಂಧ ಹಾಕಿಲ್ಲ. ಕರ್ನಾಟಕದಲ್ಲಿ ಪೆಟ್ರೋಲ್ ದರ ಲೀಟರ್‌ಗೆ 107.70 ರು. ಇದ್ದರೆ, ದೆಹಲಿಯಲ್ಲಿ 99.50 ರು., ಗುಜರಾತ್‌ನಲ್ಲಿ 99.10 ರು., ಉತ್ತರ ಪ್ರದೇಶದಲ್ಲಿ 99.50 ರು., ಹರಿಯಾಣದಲ್ಲಿ 99.70 ರು. ದರವಿದೆ. ಅಂದರೆ ರಾಜ್ಯದಲ್ಲಿ ಮಾತ್ರ ದರ ಹೆಚ್ಚಿದೆ. ಕಾಂಗ್ರೆಸ್ ಸರಕಾರ ಪೆಟ್ರೋಲ್ ಮೇಲಿನ ವ್ಯಾಟ್ ಹೆಚ್ಚಳ ಮಾಡಿದ್ದು, ಅದನ್ನು ಕಡಿಮೆ ಮಾಡದೆ ಕೇಂದ್ರದ ಮೇಲೆ ಗೂಬೆ ಕೂರಿಸುವ ಕೆಲಸ ಮಾಡುತ್ತಿದೆ. ದರ ಏರಿಕೆಯಿಂದ ಕೇಂದ್ರಕ್ಕೆ ಆದಾಯ ಬರುವುದಿಲ್ಲ. ರಾಜ್ಯಕ್ಕೆ ಹೆಚ್ಚುವರಿಯಾಗಿ ವಾರ್ಷಿಕ 6,000 ಕೋಟಿ ರು. ಆದಾಯ ಬರಲಿದೆ. ಇದನ್ನು ಗ್ಯಾರಂಟಿಗೆ ಬಳಸುತ್ತಾರೆ. ಜನರಿಗೆ ಸಹಾಯ ಮಾಡಬೇಕೆಂಬ ಮನಸ್ಸಿದ್ದರೆ ರಾಜ್ಯ ಸರಕಾರದ ಕಡೆಯಿಂದಲೇ ತೆರಿಗೆ ಇಳಿಕೆ ಮಾಡಬೇಕು. ಇಲ್ಲವಾದರೆ ಹೆಚ್ಚುವರಿ ಆದಾಯ ಪಡೆಯುತ್ತಿರುವ ಬಗ್ಗೆ ಜನರಿಗೆ ಹೇಳಬೇಕು. ದರ ಏರಿಕೆಯ ವಿರುದ್ಧ ಕಾಂಗ್ರೆಸ್ ಹೋರಾಟ ಮಾಡುವುದು ಎಂದರೆ ಅದು ಜನರಿಗೆ ಮಾಡುವ ವಂಚನೆ ಎಂದರು.

ಆಳಂದದ ಕೋಮುಗಲಭೆ ಪ್ರಕರಣದಲ್ಲಿ ಮುಸ್ಲಿಮರ ವಿರುದ್ಧದ ಕೇಸು ವಾಪಸ್ ಪಡೆಯಲಾಗಿದೆ. ನಂತರ ಭಟ್ಕಳದಲ್ಲಿ ಹಿಂದೂಗಳು ಕಟ್ಟಿದ್ದ ಮೂರಿನಕಟ್ಟೆಯನ್ನು ಮುಸ್ಲಿಂ ಮತಾಂಧರು ಒಡೆದುಹಾಕಿದ್ದಾರೆ. ಈ ಭಯೋತ್ಪಾದಕರ ಸಂತತಿಯವರು ಇಷ್ಟೆಲ್ಲ ಮಾಡಿದರೂ ಪೊಲೀಸರು ಕ್ರಮ ವಹಿಸಿಲ್ಲ. ಸಿದ್ದರಾಮಯ್ಯ ಇರುವವರೆಗೂ ಕೇಸು ವಾಪಸ್ ಪಡೆಯುತ್ತಾರೆ ಎಂಬ ನಂಬಿಕೆ ಮುಸ್ಲಿಂ ಮತಾಂಧರಲ್ಲಿದೆ. ಮತ ಬ್ಯಾಂಕ್ ರಾಜಕಾರಣಕ್ಕಾಗಿ ಇಂತಹ ಗಲಭೆ ನಡೆಯುತ್ತಿವೆ. ಪೊಲೀಸರ ಮೇಲೆ ಹಲ್ಲೆ ಯಾದರೂ ಕ್ರಮ ಕೈಗೊಂಡಿಲ್ಲ. ಇದನ್ನು ಹಗುರವಾಗಿ ಪರಿಗಣಿಸದೆ ತನಿಖೆ ಮಾಡಬೇಕು ಎಂದರು.

ರಾಜ್ಯದ ಖಜಾನೆ ಖಾಲಿ

ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯಿಂದ ಬಾಂಗ್ಲಾ ಅಕ್ರಮ ನಿವಾಸಿಗಳ ಪತ್ತೆಯಾಗಲಿದೆ. ನಿಜವಾದ ಮತದಾರರು ಮಾತ್ರ ಮತದಾರರ ಪಟ್ಟಿಯಲ್ಲಿ ಉಳಿದುಕೊಳ್ಳುತ್ತಾರೆ. ಪಡಿತರ ಚೀಟಿಯ ಪರಿಷ್ಕರಣೆಗೆ ಅಭಿಯಾನ ಮಾಡುವ ಅಗತ್ಯವಿಲ್ಲ. ಮರಣ ಪ್ರಮಾಣಪತ್ರ ಮಂಜೂರಾದ ಕೂಡಲೇ ಸ್ವಯಂಚಾಲಿತವಾಗಿ ಪಡಿತರ ಚೀಟಿ ರದ್ದಾಗಬೇಕು. ಆದರೆ ಗ್ಯಾರಂಟಿಗಳಲ್ಲಿ ಹಣ ಉಳಿಸಲು ಪಡಿತರ ಚೀಟಿ ರದ್ದು ಮಾಡಲಾಗುತ್ತಿದೆ. ಕೇಂದ್ರದಿಂದ ಅಕ್ಕಿ ಸಿಗುತ್ತಿಲ್ಲ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆದರೆ ಕೇಂದ್ರ ಜೂನ್‌ವರೆಗೆ ಅಕ್ಕಿ ಲಭ್ಯವಿದೆ. 4 ಲಕ್ಷ ಟನ್ ಅಕ್ಕಿ ಸಿದ್ಧವಾಗಿದ್ದರೂ, ಆರ್ಥಿಕ ಇಲಾಖೆಯಿಂದ ಕೆಜಿಗೆ 23 ರು.ನಂತೆ ಹಣ ಬಿಡುಗಡೆ ಮಾಡಿಲ್ಲ. ರಾಜ್ಯ ಸರಕಾರ ಹಣ ನೀಡಿದ ಕೂಡಲೇ ಕೇಂದ್ರ ಅಕ್ಕಿ ನೀಡುತ್ತದೆ. ಅಂದರೆ ಖಜಾನೆ ಖಾಲಿಯಾಗಿದೆ ಎಂದು ಮತ್ತೆ ಸಾಬೀತಾಗಿದೆ ಎಂದರು.

ಬೆಂಗಳೂರಲ್ಲೇ ಅತೀ ಹೆಚ್ಚು ಪ್ರಕರಣ ದಾಖಲು | 4,341 ಕೋಟಿ ಪೈಕಿ 360 ಕೋಟಿ ರು. ವಾಪಸ್ ಪಡೆದ ಪೊಲೀಸರು

ಸೈಬರ್ ವಂಚನೆ: 4 ತಿಂಗಳಲ್ಲಿ 4,040 ಪ್ರಕರಣ ಬೆಳಕಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜಧಾನಿ ಸೇರಿದಂತೆ ರಾಜ್ಯದಲ್ಲಿ ಸೈಬರ್ ವಂಚನೆ ಪ್ರಕರಣಗಳು ಹೆಚ್ಚಾಗುತ್ತಿದ್ದು, ಕಳೆದ ನಾಲ್ಕು ತಿಂಗಳಲ್ಲಿ 4,040 ಪ್ರಕರಣಗಳು ಬೆಳಕಿಗೆ ಬಂದಿವೆ.

ಸೈಬರ್ ಅಪರಾಧ ಪ್ರಕರಣಗಳಲ್ಲಿ ರಾಜಧಾನಿ ಬೆಂಗಳೂರು ನಗರವು ದೇಶದಲ್ಲೇ ಮೊದಲ ಸ್ಥಾನ ಪಡೆದಿದೆ ಎಂದು ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊ (ಎನ್‌ಸಿಆರ್‌ಬಿ) ಹೇಳಿದೆ. 2023ರಲ್ಲಿ ಬೆಂಗಳೂರಿನಲ್ಲಿ 17,631 ಸೈಬರ್ ಪ್ರಕರಣಗಳು ದಾಖಲಾಗಿದ್ದವು. ಅದೇ ರೀತಿ 2024ರಲ್ಲಿ 17,561 ಪ್ರಕರಣಗಳು ದಾಖಲಾಗಿದ್ದು, ಈ ಪೈಕಿ 3,632 ಪ್ರಕರಣಗಳು ಇತ್ಯರ್ಥವಾಗಿವೆ. ಇನ್ನೂ 13,929 ಪ್ರಕರಣಗಳು ಬಾಕಿ ಉಳಿದಿವೆ. ಕರ್ನಾಟಕದಲ್ಲಿ 2024ರಲ್ಲಿ 5,096 ಸೈಬರ್ ಅಪರಾಧಿಗಳು ಶಿಕ್ಷೆಗೆ ಗುರಿಯಾಗಿದ್ದಾರೆ. ರಾಜ್ಯದ ಮುಕ್ಕಾಲು ಪ್ರಮಾಣದಷ್ಟು ಸೈಬರ್ ಪ್ರಕರಣಗಳು ಬೆಂಗಳೂರು ನಗರ ಒಂದರಲ್ಲೇ ದಾಖಲಾಗುತ್ತಿವೆ ಎಂದು ಎನ್‌ಸಿಆರ್‌ಬಿ ವರದಿ ಹೇಳಿದೆ.

45 ತಿಂಗಳಲ್ಲಿ 4,341 ಕೋಟಿ ನಷ್ಟ: ಪ್ರಕರಣದಲ್ಲಿ ದಾಖಲಾದ 4,341 ಕೋಟಿ ರು. ನಷ್ಟದಲ್ಲಿ ಪೊಲೀಸರು ತನಿಖೆ ಮೂಲಕ 360 ಕೋಟಿ ರು. ವಾಪಸ್ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅದರಲ್ಲಿ 334 ಕೋಟಿ ರು. ದೂರುದಾರರಿಗೆ ಹಸ್ತಾಂತರವಾಗಿದೆ. ರಿಕವರಿ ಪ್ರಮಾಣ ಶೇ.10ಕ್ಕಿಂತ ಕಡಿಮೆ ಇದೆ. ಸೈಬರ್ ವಂಚನೆಗೆ ಗುರಿಯಾಗುತ್ತಿರುವವರಲ್ಲಿ ಉದ್ಯಮಿಗಳು, ಸಾಫ್ಟ್‌ವೇರ್ ಎಂಜಿನಿಯರ್‌ಗಳು, ಸರಕಾರಿ ನೌಕರರು, ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದಾರೆ.

ಹೂಡಿಕೆ ನೆಪದಲ್ಲಿ ವಂಚನೆ: ಜತೆಗೆ ಹೂಡಿಕೆ ವಂಚನೆ ಪ್ರಕರಣ ಹೆಚ್ಚೆಚ್ಚು ದಾಖಲಾಗುತ್ತಿವೆ. ಇದಕ್ಕೆ ಪೂರಕವೆಂಬಂತೆ ದಾಖಲಾಗುವ ಪ್ರತಿ ಮೂರು ಸೈಬರ್ ಪ್ರಕರಣಗಳಲ್ಲಿ ಒಂದು ಇನ್‌ವೆಸ್ಟ್‌ಮೆಂಟ್ ಫ್ರಾಡ್ ಪ್ರಕರಣವಿದೆ. ಸೈಬರ್ ವಂಚನೆ ಪ್ರಕರಣಗಳ ಪೈಕಿ 1,324 ಪ್ರಕರಣಗಳು ಇನ್‌ವೆಸ್ಟ್ ಸ್ಕ್ಯಾಮ್ ಆಗಿವೆ. 956 ಪ್ರಕರಣಗಳು ಷೇರುಪೇಟೆ, ಟ್ರೇಡಿಂಗ್ ಸಂಬಂಧಿಸಿದರೆ ಪಾರ್ಟ್ ಟೈಮ್ ಕೆಲಸ, ವಿವಿಧ ಟಾಸ್ಕ್ ಮಾಡಿದರೆ ಹಣಗಳಿಸುವ ಆಮಿಷವೊಡ್ಡಿ ವಂಚಿಸಿದ ಪ್ರಕರಣಗಳಾಗಿವೆ. 2023ರಲ್ಲಿ ಹಣ ಹೂಡಿಕೆ ಹಾಗೂ ಕೆಲಸ ಕೊಡಿಸುವ ಸೋಗಿನಲ್ಲಿ ವಂಚನೆ ಪ್ರಕರಣಗಳ ವಿರಳವಾಗಿತ್ತು. ಸುಮಾರು 30 ಪ್ರಕರಣಗಳಿಗೆ ಸೀಮಿತವಾಗಿತ್ತು. 2024ರಲ್ಲಿ ಆಚ್ಚರಿ ಎಂಬಂತೆ 1,821 ಪ್ರಕರಣಗಳಿಗೆ ಏರಿಕೆಯಾಗಿತ್ತು. 2025ರಲ್ಲಿ 6,153 ಪ್ರಕರಣ ದಾಖಲಾಗುವ ಮೂಲಕ ಮೂರು ಪಟ್ಟು ಹೆಚ್ಚಾಗಿತ್ತು. ಈ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ 1,324 ಪ್ರಕರಣ ದಾಖಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.



ಸೈಬರ್ ವಂಚನೆ

ವರ್ಷ	ದಾಖಲೆ ಪ್ರಕರಣಗಳು
2022	9,902
2023	17,797
2024	17,692
2025	7,961

8 ಸೈಬರ್ ಠಾಣೆಗಳಲ್ಲಿ ದಿನಕ್ಕೆ 10ಕ್ಕೂ ಹೆಚ್ಚು ದೂರುಗಳು

ನಗರದಲ್ಲಿ ಕಾರ್ಯನಿರ್ವಹಿಸುತ್ತಿರುವ 8 ಸೈಬರ್ ಠಾಣೆಗಳಿಗೆ ಪ್ರತಿದಿನ ಸರಾಸರಿ 10ಕ್ಕೂ ಹೆಚ್ಚು ಹೊಸ ದೂರುಗಳು ದಾಖಲಾಗುತ್ತಿವೆ. ವಂಚನೆಗಳ ಸ್ವರೂಪವು ಕೂಡ ವಿವಿಧ ರೀತಿಯಲ್ಲಿ ಇದೆ. ಆನ್ಲೈನ್ ಹೂಡಿಕೆ ಮೋಸ, ಹೆಚ್ಚು ಲಾಭ ನೀಡುವುದಾಗಿ ಹೇಳಿ ಬಲೆಗೆ ಬೀಳಿಸುವುದು. ನಕಲಿ ಟ್ರೇಡಿಂಗ್ ಪ್ಲಾಟ್‌ಫಾರ್ಮ್‌ಗಳು, ಕೆವೈಸಿ, ಯುಪಿಐ ಮತ್ತು ಒಟಿಪಿ ವಂಚನೆಗಳು, ಇಂತಹ ತಂತ್ರಗಳನ್ನು ಬಳಸಿಕೊಂಡು ಮತ್ತಷ್ಟು ಜನರನ್ನು ಬಲೆಗೆ ಬೀಳಿಸುವ ಘಟನೆಗಳು ಹೆಚ್ಚಾಗುತ್ತಿವೆ.

47 ಲಕ್ಷ ರು. ಮೌಲ್ಯದ ಬಿಟ್‌ಕಾಯಿನ್ ಜಪ್ತಿ

ಬೆಂಗಳೂರು: ಬಹುಕೋಟಿ ಬಿಟ್‌ಕಾಯಿನ್ ಹಗರಣ ಪ್ರಕರಣಕ್ಕೆ ಇ.ಡಿ ಅಧಿಕಾರಿಗಳು, ಮೂವರು ಪ್ರಮುಖ ಆರೋಪಿಗಳಿಂದ ಲಕ್ಷಾಂತರ ರುಪಾಯಿ ಮೌಲ್ಯದ ಬಿಟ್‌ಕಾಯಿನ್ ಹಾಗೂ ಡಿಜಿಟಲ್ ಉಪಕರಣಗಳನ್ನು ವಶಪಡಿಸಿಕೊಂಡಿದ್ದಾರೆ.

ಬಿಟ್‌ಕಾಯಿನ್ ಪ್ರಕರಣದ ಪ್ರಮುಖ ಆರೋಪಿಗಳಾದ ಶ್ರೀಕೃಷ್ಣ ಅಲಿಯಾಸ್ ಶ್ರೀಕಿ, ರಾಬಿನ್ ಖಂಡೇವಾಲ ಮತ್ತು ಸುನೀಶ್ ಹೆಗ್ಡೆ ಎಂಬುವವರಿಂದ ಸುಮಾರು 50 ಸಾವಿರ ಯುಎಸ್‌ಡಿಟಿ ಮೌಲ್ಯದ ಬಿಟ್‌ಕಾಯಿನ್ ಅನ್ನು ಇ.ಡಿ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ. ಇದರ ಭಾರತೀಯ ಕರೆನ್ಸಿ ಮೌಲ್ಯ ಸುಮಾರು 47,66,275 ರು.ಗಳಾಗಿದೆ ಎಂದು ಅಂದಾಜಿಸಲಾಗಿದೆ. ಬಿಟ್‌ಕಾಯಿನ್ ಮಾತ್ರವಲ್ಲದೆ, ಆರೋಪಿಗಳು ಕೃತ್ಯಕ್ಕೆ ಬಳಸಿದ್ದ ಮೂರು ಲ್ಯಾಪ್‌ಟಾಪ್ ಹಾಗೂ 3 ಮೊಬೈಲ್ ಫೋನ್‌ಗಳನ್ನು ಸಹ ಅಧಿಕಾರಿಗಳು ವಶಕ್ಕೆ ಪಡೆದುಕೊಂಡಿದ್ದಾರೆ.

ಅಮೆರಿಕ ಕಂಪನಿ ಹ್ಯಾಕ್ ಮಾಡಿದ್ದ ಖದೀಮರು: ತನಿಖೆಯ ವೇಳೆ ಆರೋಪಿಗಳು ಅಮೆರಿಕ ಮೂಲದ ಪ್ರತಿಷ್ಠಿತ ಕಂಪನಿಯೊಂದರ ನೆಟ್‌ವರ್ಕ್ ಅನ್ನು ಹ್ಯಾಕ್ ಮಾಡಿರುವುದು ಬೆಳಕಿಗೆ ಬಂದಿದೆ. ಹೀಗೆ ಕಾನೂನುಬಾಹಿರವಾಗಿ ಹ್ಯಾಕ್ ಮಾಡಿದ ಹಣದ ಮೂಲಕವೇ ಆರೋಪಿಗಳು 50 ಸಾವಿರ ಡಾಲರ್ ಮೌಲ್ಯದ ಬಿಟ್ ಕಾಯಿನ್ ಖರೀದಿಸಿದ್ದರು. ಸದ್ಯ ಜಾರಿ ನಿರ್ದೇಶನಾಲಯದ ಬಲೆಯಲ್ಲಿರುವ ಈ ಮೂವರೂ ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಪ್ರಕರಣದ ಕುರಿತು ಇ.ಡಿ ಅಧಿಕಾರಿಗಳು ತನಿಖೆಯನ್ನು ಮತ್ತಷ್ಟು ತೀವ್ರಗೊಳಿಸಿದ್ದಾರೆ.

ಸಂಪಾದಕೀಯ

ಡಿಜಿಟಲ್ ಅರೆಸ್ಟ್ ವಿಶ್ವರೂಪ

ರಾಜ್ಯದಲ್ಲೇ ಅತಿ ದೊಡ್ಡ ಡಿಜಿಟಲ್ ಅರೆಸ್ಟ್ ಪ್ರಕರಣ ಬೆಂಗಳೂರಿನಲ್ಲಿ ವರದಿಯಾಗಿದೆ. ಬೆಂಗಳೂರಿನ ಶಿವಾಜಿನಗರದ ವೃದ್ಧೆಯೊಬ್ಬರಿಂದ 24 ಕೋಟಿ ರುಪಾಯಿಗಳಷ್ಟು ಹಣವನ್ನು ಖದೀಮರು ಸುಲಿದಿದ್ದಾರೆ. ಆಸ್ತಿ ಮಾರಿ ಬಂದ ಹಣದ ಮೇಲೆ ವಂಚಕರು ಕಣ್ಣು ಹಾಕಿ, ಸುಮಾರು ಐದು ತಿಂಗಳಿಂದ ವೃದ್ಧೆಯನ್ನು ಡಿಜಿಟಲ್ ಬಂಧನದಲ್ಲಿ ಸಿಕ್ಕಿಸಿ, ಬೆದರಿಸಿ, ಹಂತಹಂತವಾಗಿ ಹಣವನ್ನು ತಮ್ಮ ಖಾತೆಗಳಿಗೆ ವರ್ಗಾಯಿಸಿಕೊಂಡಿದ್ದರು. ಇಷ್ಟೂ ಸಾಲದೆಂಬಂತೆ, ವೃದ್ಧೆಯ ಬಳಿ ಇದ್ದ ಚಿನ್ನಾಭರಣವನ್ನೂ ಅಡವಿಟ್ಟು ಹಣ ತರುವಂತೆ ಪೀಡಿಸಿದ್ದರು. ಇಂಥ ಅನೇಕ ಪ್ರಕರಣಗಳು ರಾಜ್ಯದಲ್ಲಿ ವರದಿಯಾಗುತ್ತಲೇ ಇವೆ. ಅತಿ ಹೆಚ್ಚು ಡಿಜಿಟಲ್ ಅರೆಸ್ಟ್, ಸೈಬರ್ ವಂಚನೆ ಪ್ರಕರಣಗಳು ಸಿಲಿಕಾನ್ ಸಿಟಿಯಲ್ಲೇ ದಾಖಲಾಗುತ್ತಿರುವುದು ದುರಂತ. ಹೀಗೆ ಕದಿಯಲಾದ ಹಣ ಪಾಕಿಸ್ತಾನ, ಬಾಂಗ್ಲಾ, ಆಫ್ರಿಕಾ ಮೊದಲಾದ ವಿದೇಶಗಳಲ್ಲಿರುವ ಖಾತೆಗಳಿಗೆ ಟ್ರಾನ್ಸ್‌ಫರ್ ಆಗಿಬಿಡುವುದರಿಂದ ಇವುಗಳನ್ನು ರಿಟ್ರೀವ್ ಮಾಡುವುದು ಸುಲಭವಿಲ್ಲ. ಈ ಎಲ್ಲ ವಂಚನೆಗಳ ಕಾರ್ಯವಿಧಾನ ಒಂದೇ ರೀತಿಯಲ್ಲಿರುತ್ತದೆ. ಬಲಿಪಶುಗಳನ್ನು ಗುರುತಿಸಿ ವಿಡಿಯೋ ಕಾಲ್ ಮೂಲಕ 'ನಾವು ಪೊಲೀಸರು. ನೀವು ಅಕ್ರಮ ಹಣ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದೀರಿ, ಬಂಧನಕ್ಕೆ ಒಳಗಾಗದಿರಲು ನಾವು ಹೇಳಿದಂತೆ ಕೇಳಿ' ಎಂದು ಬೆದರಿಸುವುದು ಸಾಮಾನ್ಯ. ಇದಕ್ಕೆ ಬೆದರಿದ ಜನಸಾಮಾನ್ಯರು ತಮ್ಮ ಖಾತೆಯ ವಿವರಗಳನ್ನು ನೀಡಿ, ಹಣವನ್ನು ಖದೀಮರ ಖಾತೆಗೆ ವರ್ಗಾಯಿಸುತ್ತಾರೆ. ಇದಲ್ಲದೇ ಇಮೇಲ್‌ಗಳಿಗೆ ಮಾಲ್‌ವೇರ್‌ಗಳನ್ನು, ವಂಚಕ ಲಿಂಕ್‌ಗಳನ್ನು ಕಳಿಸುವುದು ಸಹ ಇದೆ. ಇದಲ್ಲದೇ ಇಂದು ಸೈಬರ್ ಕ್ರೈಮ್ ಎಂಬುದು ನಾನಾ ಸ್ವರೂಪ ಪಡೆದಿದೆ. ಆದರೆ ಯಾವ ಬ್ಯಾಂಕ್, ಪೊಲೀಸ್‌ನವರೂ ಫೋನ್, ವಾಟ್ಸ್ಯಾಪ್, ಇಮೇಲ್ ಮೂಲಕ ಇಂಥ ಸಂವಹನ ನಡೆಸುವುದಿಲ್ಲ ಎಂದು ತಿಳಿದಿರಬೇಕು. ವಂಚನೆಗೆ ಒಳಗಾದವರು ಸಾಕ್ಷರರೇ. ಆದರೆ ಡಿಜಿಟಲ್ ಶಿಕ್ಷಿತರಲ್ಲ. ಇದಕ್ಕೆ ಒಳಗಾಗದೆ ಇರಲು ಬೇಕಾದುದು ಡಿಜಿಟಲ್ ಜ್ಞಾನ. ಇದನ್ನು ಸರಕಾರ, ಕಾನೂನುಪಾಲಕ ಸಂಸ್ಥೆಗಳು, ಶಾಲೆ ಕಾಲೇಜುಗಳು, ಸಮುದಾಯ ಸಂಘಟನೆಗಳು ಎಲ್ಲರಿಗೆ ತಿಳಿಸಬೇಕು. ಕುಟುಂಬದೊಳಗಿನ ಡಿಜಿಟಲ್ ಸಾಕ್ಷರರು ಕೂಡ ತಮ್ಮಲ್ಲಿನ ವೃದ್ಧರಿಗೆ, ಮಕ್ಕಳಿಗೆ ಈ ಕುರಿತು ಅರಿವು ಮೂಡಿಸಬೇಕು. ಇಲ್ಲದೆ ಹೋದರೆ ಇಂಥ ವಂಚನೆಗಳು ಮುಂದುವರಿಯುತ್ತಲೇ ಇರುತ್ತವೆ. ಸರಕಾರ ಕೂಡ ಸೈಬರ್ ಕ್ರೈಮ್ ಸೆಲ್ ಅನ್ನು ಬಲಪಡಿಸಬೇಕು. ಬೆವರಿನ ಹಣ ಖದೀಮರ ಪಾಲಾಗಬಾರದು.

ಸೊಂಪಾದಕೀಯ

ತಮಿಳ್ ಕನ್ನಡ ಕಾಳಗಂ

ತಮಿಳುನಾಡಿನ ನಟ ದಳಪತಿ ವಿಜಯ್ ಮೊನ್ನೆ ರಾಜ್ಯದ ವಿಧಾನಸಭೆ ಚುನಾವಣೆಯಲ್ಲಿ ಬಿರುಗಾಳಿಯಂತೆ ಸ್ಪರ್ಧಿಸಿ ಗೆದ್ದು ಬಂದು ಮುಖ್ಯಮಂತ್ರಿ ಆಗಿರುವುದು ನಿಜವಷ್ಟೆ. ಇದೀಗ ಅವರ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷ ಬೆಂಗಳೂರಿನಲ್ಲಿ ಮುಂಬರಲಿರುವ ದಿನಗಳಲ್ಲಿ ನಡೆಯಲಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಚುನಾವಣೆಗಳಲ್ಲಿ ಸ್ಪರ್ಧಿಸಲಿದೆ ಎಂಬ ಗಾಳಿಸುದ್ದಿ ಹರಿದಾಡುತ್ತಿದೆ. ಬೆಂಗಳೂರಿನಲ್ಲಿ ಕೆಲವು ಏರಿಯಾಗಳೇ ತಮಿಳುನಾಡು ಆಗಿಬಿಟ್ಟಿರುವುದು ಎಲ್ಲರಿಗೂ ಗೊತ್ತಿದೆ. ಅಲ್ಲಿ ತಮಿಳು ಮಾತನಾಡದೆ ಒಂದು ಹುಲ್ಲು ಕಡ್ಡಿಯೂ ಮಿಸುಕಾಡದು. ಅಲ್ಲಿ ಕನ್ನಡ ಮಾತನಾಡಿದರೆ ನಿಮ್ಮನ್ನು ಗುಮಾನಿಯಿಂದ ನೋಡಲಾಗುತ್ತದೆ. ಕಾವೇರಿ ನೀರಿನ ತಗಾದೆಯ ಸಂದರ್ಭದಲ್ಲಿ ಅಂಥ ಪ್ರದೇಶಗಳಲ್ಲಿ ಕನ್ನಡ ಮಾತನಾಡುವವರು ಎಷ್ಟು ಎಚ್ಚರಿಕೆಯಿಂದ ಇದ್ದರೂ ಸಾಲದು. ಹಾಗೆ ತಮಿಳು ಮಾತನಾಡುವವರು ಹೆಚ್ಚು ಇರುವ ಕಡೆ ವಿಜಯ್ ತಮ್ಮ ಪಕ್ಷದ ಅಭ್ಯರ್ಥಿಗಳನ್ನು ನಿಲ್ಲಿಸಲಿದ್ದಾರೆ ಎಂಬ ಊಹಾಪೋಹಕ್ಕೆ ರೆಕ್ಕೆಗಳು ಮೂಡಿವೆ. ಇದು ಪೂರ್ತಿ ಸುಳ್ಳು ಇರಲಾರದು. ವಿಜಯ್ ಈಗಾಗಲೇ ತವರಿನಲ್ಲಿ ತಮ್ಮ ಭಾರಿ ಗೆಲುವಿನಿಂದ ಉಬ್ಬಿ, ರಾಜ್ಯದಾಚೆಗೂ ಪಕ್ಷವನ್ನು ವಿಸ್ತರಿಸುವ ಕನಸು ಕಟ್ಟುತ್ತಿದ್ದಾರೆ. ಬೆಂಗಳೂರಿನಲ್ಲಿ ಹವಾ ಎಬ್ಬಿಸಿರುವ ರೌಡಿಗಳ ಹಿನ್ನೆಲೆಯೂ ತಮಿಳುನಾಡಿನತ್ತ ಚಾಚುತ್ತದೆ. ಹೀಗಾಗಿ ಟಿವಿಕೆ ಅಭ್ಯರ್ಥಿಗಳು, ದಳಪತಿ ಫ್ಯಾನ್‌ಗಳು ಇಲ್ಲಿ ಸ್ಪರ್ಧಿಸಿದರೆ ಗೆಲ್ಲುವುದು ಕಷ್ಟವಾಗದು. ಆಮೇಲೆ ವಿಧಾನಸಭೆಗೂ ಬಂದಾರು. ಕರ್ನಾಟಕದ ಸರಕಾರಿ ಪಡಸಾಲೆಯಲ್ಲೂ ತಮಿಳು ನಾಟ್ಯವಾಡಬಹುದು. ಈಗಾಗಲೇ ತಮಿಳರು ಸಿಲಿಕಾನ್ ಸಿಟಿಯಲ್ಲಿ ತಮ್ಮ ಹಿತಾಸಕ್ತಿ ರಕ್ಷಿಸಿಕೊಳ್ಳಲು ಸಮರ್ಥರಾಗಿದ್ದಾರೆ. ಮೇಲಿನ ಸುದ್ದಿ ನಿಜವಾದರೆ ಅವರನ್ನು ಹಿಡಿಯುವುದೇ ಕಷ್ಟವಾಗಲಿದೆ. 'ದಳಪತಿ' ವಿಜಯ್ ಬೆಂಗಳೂರಿನಲ್ಲಿ ತಮ್ಮ ದಳ ಊರಿದರೆ, ಕರ್ನಾಟಕದಲ್ಲಿ ಈಗಾಗಲೇ 'ಜನತಾ ದಳ ಪತಿ' ಆಗಿ ಇರುವ ಎಚ್‌ಡಿ ಕುಮಾರಸ್ವಾಮಿ ಕತೆ ಏನು?

ಸಂಪಾದಕರ ಸದ್ಯಶೋಧನೆ

'ಒಂದು ಸಾವಿರ ರನ್' ರಹಸ್ಯ

ಬೇಸ್‌ಬಾಲ್ ಅಥವಾ ಯಾವುದೇ ಕ್ರೀಡೆಯು ನಿಯಮಗಳಿಂದ ಬದ್ಧವಾಗಿದೆ. ಬೇಸ್ ಬಾಲ್‌ನಲ್ಲಿ ನೀವು ಎಷ್ಟೇ ಬಲಿಷ್ಠವಾಗಿ ಚೆಂಡನ್ನು ಹೊಡೆದರೂ, ಗರಿಷ್ಠ ಎಂದರೆ ಒಂದು 'ಹೋಮ್ ರನ್' ಮೂಲಕ ನಾಲ್ಕು ರನ್ ಗಳಿಸಬಹುದು. ಅಂದರೆ, ಅಲ್ಲಿ ಯಶಸ್ಸಿಗೆ ಒಂದು ಮೇಲ್ಮಿತಿ (Cap) ಇದೆ. ಆದರೆ ವ್ಯವಹಾರದಲ್ಲಿ ಪರಿಸ್ಥಿತಿ ಹಾಗಿಲ್ಲ. ಇಲ್ಲಿ 'ಹೋಮ್ ರನ್' ಎಂದರೆ ಕೇವಲ ಲಾಭವಲ್ಲ, ಅದು ಒಂದು ಕ್ರಾಂತಿ. ನೀವು ಒಂದು ಸರಿಯಾದ ನಿರ್ಧಾರ ತೆಗೆದುಕೊಂಡರೆ, ಒಂದು ಹೊಸ ಆವಿಷ್ಕಾರ ಮಾಡಿದರೆ, ಅದರ ಪ್ರತಿಫಲವು ಸಾವಿರ ಪಟ್ಟು ಇರಬಹುದು. ಅಮೆಜಾನ್ ಆರಂಭದಲ್ಲಿ ಕೇವಲ ಪುಸ್ತಕ ಮಾರಾಟದ ಮಳಿಗೆಯಾಗಿತ್ತು. ಆದರೆ ಅವರು 'Cloud Computing' ಎಂಬ ಹೊಸ ಕ್ಷೇತ್ರಕ್ಕೆ ಕೈಹಾಕಿದಾಗ, ಅದು ಅವರಿಗೆ ತಂದುಕೊಟ್ಟದ್ದು 'ಸಾವಿರ ರನ್'ಗಳ ಯಶಸ್ಸನ್ನು' ಎಂದು ಇತ್ತೀಚೆಗೆ ಅಮೆಜಾನ್ ಸಂಸ್ಥಾಪಕ ಜೆಫ್ ಬೆಜೋಸ್ ಹೇಳಿದ್ದನ್ನು ಕೇಳಿದೆ. ವ್ಯವಹಾರದಲ್ಲಿ ಸಾವಿರ ರನ್ ಗಳಿಸಬೇಕೆಂದರೆ ನೀವು ಪದೇ ಪದೆ ಬ್ಯಾಟ್ ಬೀಸಲು ಸಿದ್ಧರಿರಬೇಕು. ಬೆಜೋಸ್ ಅವರ ಈ ತತ್ವದ ಹಿಂದೆ ಒಂದು ಪ್ರಮುಖ ಸಂದೇಶವಿದೆ – ನೀವು ಹೆಚ್ಚು ಬಾರಿ ಸೋಲಲು ಸಿದ್ಧರಿರಬೇಕು ಎಂಬುದು. ನೀವು ಹತ್ತು ಬಾರಿ ಪ್ರಯತ್ನಿಸಿ ಒಂಬತ್ತು ಬಾರಿ ಸೋತರೂ ಪರವಾಗಿಲ್ಲ. ಆ ಒಂಬತ್ತು ಸೋಲುಗಳಿಂದ ಆಗುವ ನಷ್ಟ ಸೀಮಿತವಾಗಿರುತ್ತದೆ. ಆದರೆ ಆ ಹತ್ತನೆಯ ಪ್ರಯತ್ನ 'ಸಾವಿರ ರನ್' ತಂದುಕೊಟ್ಟರೆ, ಅದು ಹಿಂದಿನ ಒಂಬತ್ತು ಸೋಲುಗಳನ್ನಷ್ಟೇ ಅಲ್ಲ, ನಿಮ್ಮ ಇಡೀ ಕಂಪನಿಯ ಭವಿಷ್ಯವನ್ನೇ ಬದಲಿಸುತ್ತದೆ. ಇದನ್ನೇ ಹೂಡಿಕೆದಾರರು 'Optionality' ಎಂದು ಕರೆಯುತ್ತಾರೆ. ಇಲ್ಲಿ ಸೋಲಿನ ನಷ್ಟ ಕೇವಲ ಒಂದು ಪಟ್ಟು ಇರುತ್ತದೆ, ಆದರೆ ಗೆಲುವಿನ ಲಾಭ ಅನಂತವಾಗಿರುತ್ತದೆ. ಬೆಜೋಸ್ ಈ ಮಾತುಗಳನ್ನು ಕೇವಲ ಪ್ರವಚನಕ್ಕಾಗಿ ಹೇಳಲಿಲ್ಲ, ಅವರು ಅದನ್ನು ಅಮೆಜಾನ್‌ನಲ್ಲಿ ಜಾರಿಗೆ ತಂದರು. ಅಮೆಜಾನ್ ಫೋನ್ ತಯಾರಿಸಿ ಭಾರಿ ಸೋಲು ಕಂಡಿತು. ನೂರಾರು ಕೋಟಿ ನಷ್ಟವಾಯಿತು. ಇದು ಬೇಸ್‌ಬಾಲ್‌ನಲ್ಲಿ 'ಔಟ್' ಆದಂತೆ. ಅಮೆಜಾನ್ ಪ್ರೈಮ್ ಆರಂಭದಲ್ಲಿ ಹುಚ್ಚುತನದ ನಿರ್ಧಾರದಂತೆ ಕಂಡಿತು. ಆದರೆ ಇದು ಸಾವಿರ ರನ್ ಹೊಡೆದ ಆಟವಾಯಿತು. ಇಂದು ಅಮೆಜಾನ್‌ನ ಯಶಸ್ಸಿಗೆ ಇದು ಪ್ರಮುಖ ಆಧಾರಸ್ತಂಭ. ವ್ಯವಹಾರದಲ್ಲಿ ಬಲಿಷ್ಠರಾಗಲು ನಮಗೆ ಬೇಕಿರುವುದು ಹೆಚ್ಚಿನ 'ಬ್ಯಾಟಿಂಗ್ ಸರಾಸರಿ' ಅಲ್ಲ, ಬದಲಿಗೆ ಹೆಚ್ಚಿನ 'ಸ್ಲಗಿಂಗ್ ಪರ್ಸೆಂಟೇಜ್' (Slugging Percentage). ಅಂದರೆ ಎಷ್ಟು ಬಾರಿ ಗೆಲ್ಲುತ್ತೇವೆ ಎನ್ನುವುದಕ್ಕಿಂತ, ಗೆದ್ದಾಗ ಎಷ್ಟು ದೊಡ್ಡ ಮಟ್ಟದಲ್ಲಿ ಗೆಲ್ಲುತ್ತೇವೆ ಎಂಬುದು ಮುಖ್ಯ. ಕ್ರೀಡೆಯಲ್ಲಿ ನೀವು ಆಡುವ ಮೈದಾನ ಸಣ್ಣದು. ಆದರೆ ವ್ಯವಹಾರದಲ್ಲಿ ಇಡೀ ಜಗತ್ತೇ ಮೈದಾನ. ಅಂತರ್ಜಾಲದ ಯುಗದಲ್ಲಿ ಒಂದು ಸಣ್ಣ ಐಡಿಯಾವನ್ನು ಕೋಟ್ಯಂತರ ಜನರಿಗೆ ತಲುಪಿಸಬಹುದು. ಒಂದು ಸಾಫ್ಟ್‌ವೇರ್ ತಯಾರಿಸಲು ತಗಲುವ ಶ್ರಮ ಒಂದೇ, ಆದರೆ ಅದನ್ನು ಒಬ್ಬರಿಗೆ ಮಾರಬಹುದು ಅಥವಾ ನೂರು ಕೋಟಿ ಜನರಿಗೆ ಮಾರಬಹುದು. ಇದೇ 'ಒಂದು ಸಾವಿರ ರನ್'ಗಳ ರಹಸ್ಯ. ಒಮ್ಮೆ ಯಶಸ್ವಿಯಾದ ಮಾದರಿಯನ್ನು ಜಗತ್ತಿನಾದ್ಯಂತ ವಿಸ್ತರಿಸಿದಾಗ ಯಶಸ್ಸು exponential ಆಗಿ ಬೆಳೆಯುತ್ತದೆ. ಬೆಜೋಸ್ ಅವರ ಈ ಮಾತು ನಮಗೆ ಮೂರು ಪ್ರಮುಖ ಪಾಠಗಳನ್ನು ಒಳಗೊಂಡಿವೆ. ಮೊದಲನೆಯದು, ಪ್ರಯೋಗ ಮಾಡಲು ಹೆದರಬೇಡಿ. ಅಂದರೆ ಸಣ್ಣ ಸಣ್ಣ ಸೋಲುಗಳು ವ್ಯವಹಾರದ ಭಾಗ. ಅವು ನಿಮ್ಮನ್ನು ದೊಡ್ಡ ಗೆಲುವಿಗೆ ಸಜ್ಜುಗೊಳಿಸುತ್ತವೆ. ಎರಡನೆಯದು, ದೊಡ್ಡದಾಗಿ ಯೋಚಿಸಿ. ನಿಮ್ಮ ಗುರಿ ಕೇವಲ ನಾಲ್ಕು ರನ್ ಗಳಿಸುವುದಾಗಿದ್ದರೆ, ನೀವು ಎಂದಿಗೂ ಒಂದು ಸಾವಿರ ರನ್ ಹೊಡೆಯಲಾರಿರಿ. ನಿಮ್ಮ ವ್ಯವಹಾರದ ಮಾದರಿ ಅಸೀಮಿತವಾಗಿ ಬೆಳೆಯುವಂತಿರಲಿ. ಮೂರನೆಯದು, ಸೋಲಿನ ವೆಚ್ಚ ಮತ್ತು ಗೆಲುವಿನ ಮೌಲ್ಯ. ಸೋತಾಗ ಕಳೆದುಕೊಳ್ಳುವುದು ಕೇವಲ ಹಣ ಮತ್ತು ಸಮಯ, ಆದರೆ ಗೆದ್ದಾಗ ಗಳಿಸುವುದು ಇತಿಹಾಸ. 'ಒಂದು ಸಾವಿರ ರನ್' ಎಂಬುದು ಕೇವಲ ಹಣದ ಸಂಕೇತವಲ್ಲ. ಅದು ಪ್ರಭಾವ (Impact) ಮತ್ತು ನಾವೀನ್ಯದ (Innovation) ಸಂಕೇತ. ನೀವು ವ್ಯವಹಾರದಲ್ಲಿರುವಾಗ, ನೀವು ಕೇವಲ ಬದುಕುಳಿಯಲು ಆಡುತ್ತಿಲ್ಲ, ಬದಲಿಗೆ ಕ್ರೀಡೆಯ ನಿಯಮಗಳನ್ನೇ ಬದಲಾಯಿಸುವ ಒಂದು 'ಮಾಸ್ಟರ್ ಸ್ಟ್ರೋಕ್'ಗಾಗಿ ಕಾಯುತ್ತಿದ್ದೀರಿ. ಆದ್ದರಿಂದ, ಬ್ಯಾಟ್ ಬೀಸುತ್ತಲೇ ಇರಿ. ಒಂದು ಸಣ್ಣ ಹೊಡೆತವೂ ಇಡೀ ಕ್ರೀಡಾಂಗಣವನ್ನೇ ಬೆಚ್ಚಿಬೀಳಿಸುವಂಥ ಯಶಸ್ಸನ್ನು ತಂದುಕೊಡಬಹುದು.

ಲೈಕ್ಸ್-ಕಾಮೆಂಟ್ ಬಿಟ್ಟು, ಬೂತ್ ಸಂಘಟಿಸಿ: ಕಮಲ ಪಾಠ

21 ರಾಜ್ಯದಲ್ಲಿ ಅಧಿಕಾರದ ಗದ್ದುಗೆಯಲ್ಲಿರುವ ಬಿಜೆಪಿ ನಾಯಕರಿಗೆ, ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದರ ಹಿಂದಿನ ಲಾಭದ ಬಗ್ಗೆ ಸ್ಪಷ್ಟನೆಯಿದೆ. ದಕ್ಷಿಣ ಭಾರತದಲ್ಲಿ ತಳವೂರಲು ಈಗಲೂ ಚಡಪಡಿಸುತ್ತಿರುವ ಸಮಯದಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರವನ್ನು ತೆಗೆಯುವುದರಿಂದ ಇತರೆ ರಾಜ್ಯಗಳಲ್ಲಿ ಬಿಜೆಪಿ ಸಂಘಟನೆಗೆ ಒತ್ತು ನೀಡಲು ಆಗಬಹುದಾದ ಲಾಭ-ನಷ್ಟದ ಅರಿವು ದೆಹಲಿ ನಾಯಕರಿಗಿದೆ.

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
vveditoped@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದೇ ರಾಜಕೀಯ ಪಕ್ಷ ಸುದೀರ್ಘ ಅವಧಿಗೆ ಅಸ್ತಿತ್ವದಲ್ಲಿರಬೇಕೆಂದರೆ ಆ ಪಕ್ಷದ ದೂರದೃಷ್ಟಿಯ ಆಲೋಚನೆಗಳು ಪ್ರಮುಖವಾಗುತ್ತದೆ. ದೂರದೃಷ್ಟಿಯ ಜತೆಜತೆ ತಮ್ಮ ಪಕ್ಷದ ಕೇಡರ್‌ಗಳನ್ನು ಭದ್ರಪಡಿಸಿಕೊಂಡಾಗ ಮಾತ್ರ ಸೋಲು-ಗೆಲುವಿನಾಚೆಯ ಬಲವನ್ನು ಪಕ್ಷಗಳು ಹೊಂದುತ್ತವೆ. ಒಂದು ಚುನಾವಣೆಯಲ್ಲಿ ಗೆದ್ದೆ ಎಂದು ಮೈಮರೆಯದೇ, ಸೋತ ಮಾತ್ರಕ್ಕೆ ಭ್ರಮನಿರಸನರಾಗದೇ ಸೋಲು-ಗೆಲುವನ್ನು ಸಮನಾಗಿ ಸ್ವೀಕರಿಸುವ ಮನಸ್ಥಿತಿಯಿದ್ದಾಗ ಮಾತ್ರ ರಾಜಕೀಯ ಹಾದಿಯಲ್ಲಿ ಸುದೀರ್ಘ ಪಯಣ ಸಾಧ್ಯವಾಗುತ್ತದೆ.

ಸದ್ಯ ಈ ವಿಚಾರ ಕರ್ನಾಟಕ ಬಿಜೆಪಿಗೆ ಸೂಕ್ತ ಎನಿಸುತ್ತಿದೆ. 2023ರ ಚುನಾವಣೆಯಲ್ಲಿ ಪಕ್ಷದೊಳಗಿನ ಭಿನ್ನಾಭಿಪ್ರಾಯಗಳಿಂದ ಹೀನಾಯವಾಗಿ ಸೋತಿದ್ದ ಬಿಜೆಪಿ, 2028ರ ಚುನಾವಣೆಗೆ ಎರಡು ವರ್ಷವಿರುವಾಗಲೇ ಸಂಘಟನೆಗೆ ವೇಗ ನೀಡಲು ದೆಹಲಿ ವರಿಷ್ಠರು ಮುಂದಾಗಿದ್ದಾರೆ. ಬಿಎಸ್‌ವೈ ಅಭಿಮಾನೋತ್ಸವದ ನೆಪದಲ್ಲಿ ಗೃಹ ಸಚಿವ ಅಮಿತ್ ಶಾ ಆಗಮಿಸಿದ್ದರೆ, ಅದರ ಮರುದಿನವೇ ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿನಲ್ಲಿ ಬಹಿರಂಗ ಸಭೆ ನಡೆಸಿದರು. ಇದಾಗಿ ಎರಡು ವಾರ ಕಳೆಯುವ ಮೊದಲೇ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ನಿತಿನ್ ನಬೀನ್ ಕರ್ನಾಟಕ ಪ್ರವಾಸ ಕೈಗೊಂಡು, ರಾಜ್ಯ ಘಟಕದ ನಟ್ಟು-ಬೋಲ್ಟ್‌ಗಳನ್ನು ಯಾರಿಗೂ ನೋವಾಗದಂತೆ ಟೈಟ್ ಮಾಡಿದ್ದಾರೆ.

ಪಶ್ಚಿಮ ಬಂಗಾಳದ ಗೆಲುವಿನ ಬಳಿಕ ಕರ್ನಾಟಕವನ್ನು ಬಿಜೆಪಿ ವರಿಷ್ಠರು ಟಾರ್ಗೆಟ್ ಮಾಡಿರುವುದು ಎಲ್ಲರಿಗೂ ಗೊತ್ತಿರುವ ವಿಷಯ. ದೇಶಾದ್ಯಂತ ನೆಲಕಚ್ಚುತ್ತಿರುವ ಕಾಂಗ್ರೆಸ್ ಪಾಲಿಗೆ ಕರ್ನಾಟಕ ಮರುಭೂಮಿಯಲ್ಲಿರುವ ಓಯಾಸಿಸ್ ಆಗಿದೆ. ಈ ಓಯಾಸಿಸ್ ಅನ್ನು ಮುಚ್ಚಿದರೆ ಅಲ್ಲಿಗೆ ರಾಷ್ಟ್ರಮಟ್ಟದಲ್ಲಿಯೂ ಕಾಂಗ್ರೆಸ್‌ಗೆ ಬಹುದೊಡ್ಡ ಹೊಡೆತ ಕೊಡಬಹುದು ಎನ್ನುವುದು ಬಿಜೆಪಿ ದೆಹಲಿ ನಾಯಕರ ಆಲೋಚನೆಯಾಗಿದೆ. ಆ ಕಾರಣಕ್ಕಾಗಿಯೇ ಪಂಚ ರಾಜ್ಯ ಚುನಾವಣೆ ಮುಗಿಯುತ್ತಿದ್ದಂತೆ, ನಿತಿನ್ ನಬೀನ್ ಕರ್ನಾಟಕವನ್ನು ಕೈಗೆತ್ತಿಕೊಂಡಿದ್ದಾರೆ.

ಇದರ ಭಾಗವಾಗಿಯೇ ಭಾನುವಾರದ ಸಂವಾದದಲ್ಲಿ ಹಾಗೂ ಕೋರ್ ಕಮಿಟಿ ಸಭೆಯಲ್ಲಿ, 'ಕಾಂಗ್ರೆಸ್ ಸರಕಾರವನ್ನು ಮಾಧ್ಯಮಗಳ ಮುಂದೆ ಅಥವಾ ಸಾಮಾಜಿಕ ಜಾಲತಾಣದಲ್ಲಿ ವಿರೋಧಿಸುವುದನ್ನು ಬಿಟ್ಟು ಏನು ಮಾಡಿದ್ದೀರಾ? ಸಂಘಟನೆಯ ವಿಷಯದಲ್ಲಿ ಯಾರ ಕೊಡುಗೆ ಎಷ್ಟಿದೆ? ಎನ್ನುವ ಪ್ರಶ್ನೆಗಳ ಮೂಲಕ ಶಾಲು ಸುತ್ತಿ ಹೊಡೆದಿದ್ದಾರೆ. ಶಾಸಕರು, ಸಂಸದರು, ಪದಾಧಿಕಾರಿ ಹಾಗೂ ಜಿಲ್ಲಾಧ್ಯಕ್ಷರೊಂದಿಗೆ ನಡೆದ 100 ನಿಮಿಷದ ಸಂವಾದದಲ್ಲಿ ನಿತಿನ್, ಏನೇನು ಮಾಡುತ್ತಿದ್ದೀರಾ ಎನ್ನುವ ಮಾಹಿತಿಯನ್ನು ಪಡೆದುಕೊಂಡಿದ್ದಾರೆ. ಈ ವೇಳೆ ಬೂತ್ ಮಟ್ಟದಿಂದ ಪಕ್ಷವನ್ನು ಸಂಘಟಿಸಿ ಎನ್ನುವ ಸಂದೇಶ ರವಾನಿಸಿದ್ದಾರೆ. ಇದಾದ ಬಳಿಕ ನಡೆದ ಕೋರ್ ಕಮಿಟಿ ಸಭೆಯಲ್ಲಿ, ಪಕ್ಷದಲ್ಲಿರುವ ಆಂತರಿಕ ಭಿನ್ನಾಭಿಪ್ರಾಯವನ್ನು ಪ್ರಸ್ತಾಪಿಸುವ ಜತೆಗೆ, ಕಾಂಗ್ರೆಸ್ ಅನ್ನು ಟೀಕಿಸುವುದರಿಂದಲೇ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ, ತಳಮಟ್ಟದಲ್ಲಿ ಪಕ್ಷದ ಬೇರುಗಳನ್ನು ಗಟ್ಟಿಗೊಳಿಸಿಕೊಳ್ಳಿ ಎಂದಿದ್ದಾರೆ.

ಕಾಂಗ್ರೆಸ್ ಸರಕಾರದ ವಿರುದ್ಧ ಆಡಳಿತ ವಿರೋಧಿ ಅಲೆಯನ್ನೇ ಮುಂದಿಟ್ಟುಕೊಂಡು ಮುಂದಿನ ಚುನಾವಣೆಯಲ್ಲಿ ದಡ ಸೇರಬಹುದು ಎನ್ನುವ ಲೆಕ್ಕಾಚಾರದಲ್ಲಿದ್ದ ಅನೇಕ ನಾಯಕರಿಗೆ ಮೊದಲ ಭೇಟಿಯಲ್ಲಿಯೇ ಕ್ಲಾಸ್ ತೆಗೆದುಕೊಂಡಿರುವ ನಿತಿನ್ ನಬೀನ್ ಸೋಷಿಯಲ್ ಮೀಡಿಯಾದ ಲೈಕ್ಸ್, ಕಾಮೆಂಟ್‌ಗಳು ವೋಟ್‌ಗಳಾಗುವುದಿಲ್ಲ. ಸಂಘಟನೆಯನ್ನೇ ಮರೆತು, ಮಾಧ್ಯಮಗಳ ಮುಂದೆ ಹೇಳಿಕೆ, ಸೋಷಿಯಲ್ ಮೀಡಿಯಾದ ಪೋಸ್ಟ್‌ಗಳನ್ನು ಬಿಟ್ಟು ತಳಹಂತದಲ್ಲಿ ಸಂಘಟನೆಯ ಬಲ ಗಟ್ಟಿಮಾಡಿಕೊಳ್ಳಿ. ಬೂತ್‌ಮಟ್ಟದಿಂದ ಹೋರಾಟ ರೂಪಿಸಿ ಎನ್ನುವ ಸಂದೇಶ ರವಾನಿಸಿದ್ದಾರೆ. ಇದರೊಂದಿಗೆ ಗ್ರಾಮ ಪಂಚಾಯಿತಿಯಿಂದ ರಾಷ್ಟ್ರಮಟ್ಟದವರೆಗೆ ಕೇಂದ್ರ ಸರಕಾರದ ಸಾಧನೆಗಳೇ ನಮ್ಮ ಅಸ್ತ್ರಗಳಾಗಬಾರದು. ನಿಮ್ಮ ಸಂಘಟನಾ ಶಕ್ತಿಯನ್ನು ತೋರಿಸಿ ಎನ್ನುವ ಜತೆಗೆ ಪಕ್ಷವನ್ನು ಅಧಿಕಾರಕ್ಕೆ ತರುವುದು ಮಾತ್ರ ಮುಖ್ಯವೇ ಹೊರತು ಯಾರು ಅಧಿಕಾರವಹಿಸಿಕೊಳ್ಳಲಿದ್ದಾರೆ ಎನ್ನುವುದಲ್ಲ ಎನ್ನುವ ಮೂಲಕ ನಾಯಕತ್ವದ ಸುಳಿವನ್ನು ಬಿಟ್ಟುಕೊಟ್ಟಿಲ್ಲ.

ಇನ್ನು ನಿತಿನ್ ನಬೀನ್ ಅವರು ಶಾಸಕರು, ಸಂಸದರು, ಪದಾಧಿಕಾರಿಗಳೊಂದಿಗೆ ನಡೆಸಿದ ಸಭೆಯಲ್ಲಿ, ಬೂತ್‌ಗಳನ್ನು ಗಟ್ಟಿಗೊಳಿಸಿಕೊಳ್ಳುವ ಜತೆಗೆ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗಿ ಎನ್ನುವ ಸಂದೇಶವನ್ನು ರವಾನಿಸಿದ್ದಾರೆ. ಏಕೆಂದರೆ, ಸ್ಥಳೀಯ ಸಂಸ್ಥೆಗಳ ಮೇಲಿನ ಹಿಡಿತ ಗಟ್ಟಿಯಾದಷ್ಟು, 2028ರ ಗುರಿ ಸಾಧಿಸುವುದು ಸುಲಭ ಎನ್ನುವುದು ಬಿಜೆಪಿ ವರಿಷ್ಠರ ಲೆಕ್ಕಾಚಾರ. ಏಕೆಂದರೆ, ಯಾವುದೇ ರಾಜ್ಯ ಗೆಲ್ಲುವ ಮೊದಲು ಅಲ್ಲಿನ ಸ್ಥಳೀಯ ಸಂಸ್ಥೆಗಳನ್ನು ಗೆಲ್ಲಬೇಕು ಎನ್ನುವುದು ರಾಜಕೀಯ ತಂತ್ರಗಾರಿಕೆ ಭಾಗ. ಈಗ ರಾಜಕೀಯದ ಆಯಕಟ್ಟಿನ ಹುದ್ದೆಯಲ್ಲಿರುವ ಬಹುತೇಕ ನಾಯಕರು, ದಶಕಗಳ ಹಿಂದೆ ಗ್ರಾಮ ಪಂಚಾಯಿತಿಗೋ, ನಗರಸಭೆಗೋ ಅಥವಾ ಬೆಂಗಳೂರಿನ ಶಾಸಕರು ಬಿಬಿಎಂಪಿ ಕಾರ್ಪೋರೇಟರ್‌ಗಳಾಗಿಯೋ ರಾಜಕೀಯಕ್ಕೆ ಕಾಲಿಟ್ಟವರು. ಅಧಿಕಾರ ವಿಕೇಂದ್ರೀಕರಣದ ಭಾಗವಾಗಿ ಕರ್ನಾಟಕದಲ್ಲಿ 31 ಜಿಲ್ಲಾ ಪಂಚಾಯಿತಿ, 226 ತಾಲೂಕು ಪಂಚಾಯಿತಿ ಮತ್ತು 6022 ಗ್ರಾಮ ಪಂಚಾಯಿತಿಗಳೊಂದಿಗೆ, 10 ಮಹಾನಗರ ಪಾಲಿಕೆ, 61 ನಗರಸಭೆ, 123 ಪುರಸಭೆ, 117 ಪಟ್ಟಣ ಪಂಚಾಯಿತಿಗಳಿವೆ. ಈ ಎಲ್ಲ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆದಾಗ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಆಯ್ಕೆಯಾಗುತ್ತಾರೆ. ಗ್ರಾಮ ಪಂಚಾಯಿತಿಗಳಿಗೆ ಪಕ್ಷದ ಚಿಹ್ನೆ ಸಿಗದಿದ್ದರೂ, ಪಕ್ಷದ ಬೆಂಬಲದೊಂದಿಗೆ ಚುನಾವಣೆ ನಡೆಯುವುದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದ್ದರಿಂದ ಈ ಎಲ್ಲ ಚುನಾವಣೆಗಳು ಪಕ್ಷಗಳ ಬಲಾಬಲವನ್ನು ತೋರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಕೇವಲ ತೋರಿಸುವುದಷ್ಟೇ ಅಲ್ಲದೇ, ಬಲವನ್ನು ಹೆಚ್ಚಿಸಿಕೊಳ್ಳುವಲ್ಲಿ, ಕಾರ್ಯಕರ್ತರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆದರೆ, ಪಕ್ಷದ ಬಲಾಬಲ ಸ್ಪಷ್ಟವಾಗುತ್ತದೆ ಎನ್ನುವುದು ನಿತಿನ್ ನಬೀನ್ ಸೂಚನೆಯ ಒಳಮರ್ಮ.

ಸ್ಥಳೀಯ ಸಂಸ್ಥೆ ಚುನಾವಣೆ ನಡೆಸುವುದಾಗಿ ಘೋಷಿಸಿಕೊಂಡೇ ಅಧಿಕಾರದ ಗದ್ದುಗೆ ಏರಿದ್ದ ಕಾಂಗ್ರೆಸ್ ಅನೇಕರಿಗೆ ಸ್ಥಳೀಯ ಸಂಸ್ಥೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಚುನಾವಣೆ ನಡೆಸಲು ಇಷ್ಟವಿಲ್ಲ. ಈ ಕಾರಣಕ್ಕಾಗಿಯೇ ಅನೇಕ ಕಾರ್ಯಕರ್ತರು ರಾಜಕೀಯದಿಂದ ನಿಷ್ಕ್ರಿಯರಾಗಿದ್ದಾರೆ. ಕೆಲ ದಿನಗಳ ಹಿಂದೆ ಕಾಂಗ್ರೆಸ್ ಕಾರ್ಯಕರ್ತರೊಬ್ಬರು ಮಾತನಾಡುತ್ತಾ, 'ನಿತ್ಯ ಮನೆ ಮುಂದೆ ಹತ್ತಾರು ಜನ ಬರುತ್ತಾರೆ. ಅವರಿಗೆ ಕಾಫಿ-ಟೀ ಎಂದರೂ ತಿಂಗಳಿನಿಂದ ಲಕ್ಷಕ್ಕೂ ಹೆಚ್ಚು ಖರ್ಚಾಗುತ್ತದೆ. ಇಷ್ಟು ಖರ್ಚು ಮಾಡಿದರೂ ಯಾವುದೇ ಲಾಭವಿಲ್ಲ ಎಂದಾಗ ನಾವೇಕೆ ಕೆಲಸ ಮಾಡಬೇಕು?' ಎನ್ನುವ ಹತಾಶೆಯ ಭಾವನೆಯಲ್ಲಿದ್ದಾರೆ. ಇದೇ ಕಾರಣಕ್ಕೆ ಅನೇಕ ಕಾರ್ಯಕರ್ತರು ಮೌನಕ್ಕೆ ಶರಣಾಗಿದ್ದಾರೆ.

ಹಾಗೇ ನೋಡಿದರೆ, ಈ ಹಿಂದೆಯಿದ್ದ ಬಿಜೆಪಿ ಸರಕಾರದ ವಿರುದ್ಧದ ಭ್ರಷ್ಟಾಚಾರದ ಆರೋಪ, ಒಳ ಜಗಳದ ಲಾಭ ಪಡೆದು ಅಧಿಕಾರದ ಗದ್ದುಗೆ ಏರಿದ್ದ ಕಾಂಗ್ರೆಸ್‌ನಲ್ಲಿಯೂ ಸದ್ಯದ ಸ್ಥಿತಿ ಭಿನ್ನವಾಗಿಲ್ಲ. ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿದ ಬಳಿಕ ಪಕ್ಷದಲ್ಲಿ ಶುರುವಾದ ಆಂತರಿಕ ತಿಕ್ಕಾಟ, ನಾಯಕರ ನಡುವಿನ ಸಮನ್ವಯ ಕೊರತೆಯಿಂದ ಪಕ್ಷದ ಅನೇಕ ಕಾರ್ಯಕರ್ತರು ರಾಜಕೀಯವಾಗಿ 'ತಟಸ್ಥ'ರಾದರು. ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ, ಪಕ್ಷದ ಕಾರ್ಯಕರ್ತರಿಗಿಂತ ಆಪರೇಷನ್ ಕಮಲದಿಂದ ಪಕ್ಷಕ್ಕೆ ಆಗಮಿಸಿದವರು ಹಾಗೂ ಅವರ ಹಿಂಬಾಲಕರಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಪಕ್ಷದ ಕಟ್ಟರ್ ಕಾರ್ಯಕರ್ತರಿಗೆ ಕಿಮ್ಮತ್ತು ಸಿಗುತ್ತಿಲ್ಲವೆಂದು ಅನೇಕರು ಮೌನಕ್ಕೆ ಶರಣಾಗಿ, ಚುನಾವಣೆ ಸಮಯದಲ್ಲಿಯೂ ಅಂತರ ಕಾಯ್ದುಕೊಂಡರು. ಚುನಾವಣೆಯಲ್ಲಿ ಹೀನಾಯ ಸ್ಥಿತಿಗೆ ಬಿಜೆಪಿ ತಲುಪಲು ಇದು ಪ್ರಮುಖ ಕಾರಣವಾಗಿತ್ತು. ಅಂದು ಬಿಜೆಪಿ

ಪಕ್ಷದಲ್ಲಿ ಕಾರ್ಯಕರ್ತರ ಮುನಿಸಿನಿಂದಾದ ಎಡವಟ್ಟಿನ ಲಾಭ ಪಡೆದಿದ್ದ ಕಾಂಗ್ರೆಸ್, ಈಗ ಅದೇ ಎಡವಟ್ಟನ್ನು ಮಾಡಲು ಶುರು ಮಾಡಿದೆ ಎಂದರೆ ತಪ್ಪಾಗುವುದಿಲ್ಲ.

ಬಿಜೆಪಿಯ ವೈಫಲ್ಯಗಳನ್ನೇ ಅಸ್ತ್ರವಾಗಿಸಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಆರಂಭಿಕ ದಿನಗಳಲ್ಲಿ ಪಕ್ಷದ ಕಾರ್ಯಕರ್ತರನ್ನು ಕಡೆಗಣಿಸುವುದಿಲ್ಲ ಎನ್ನುವ ಸಂದೇಶ ರವಾನಿಸಿತ್ತು. ಅದಕ್ಕಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹತ್ತು ಹಲವು ರೀತಿಯ ತಂತ್ರಗಾರಿಕೆಗಳನ್ನು ಮಾಡಿದ್ದರು. ಅದರಲ್ಲಿಯೂ ನಿಗಮ-ಮಂಡಳಿ ಅಧ್ಯಕ್ಷರ ನೇಮಕಕ್ಕೆ ಅರ್ಜಿ ಆಹ್ವಾನ, ಸ್ಥಳೀಯ ನಿಗಮಗಳ ನಿರ್ದೇಶಕ, ಸದಸ್ಯತ್ವ ಸ್ಥಾನಕ್ಕೆ ನೇಮಿಸುವುದಕ್ಕೆ ಗೃಹ ಸಚಿವ ಡಾ.ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ತಾಲೂಕು ಮಟ್ಟದಿಂದ ರಾಜ್ಯ ಮಟ್ಟದವರೆಗೆ ಇರುವ ನಿರ್ದೇಶಕ, ಸ್ಥಾನಗಳ ಸಂಖ್ಯೆಯನ್ನು ಸರಿಯಾಗಿ ತುಂಬಿದರೆ ಎಂಟೊಬ್ಬತ್ತು ಸಾವಿರ ಕಾರ್ಯಕರ್ತರಿಗೆ ಅವಕಾಶ ನೀಡಲು ಸಾಧ್ಯವಿದೆ. ಆ ಕಾರಣಕ್ಕಾಗಿಯೇ ಪಕ್ಷಕ್ಕಾಗಿ ದುಡಿದ ಕಾರ್ಯಕರ್ತರಿಗೆ ಈ ಅವಕಾಶ ನೀಡಬೇಕು ಎಂದು ಜಿಲ್ಲಾಧ್ಯಕ್ಷರು, ಶಾಸಕರು, ಪರಾಜಿತ ಅಭ್ಯರ್ಥಿಗಳಿಗೆ ನಿಮ್ಮ ನಿಮ್ಮ ಕ್ಷೇತ್ರದ ನಿಷ್ಠಾವಂತ ಕಾರ್ಯಕರ್ತರನ್ನು ಶಿಫಾರಸು ಮಾಡಿ ಎಂದು ಸೂಚನೆ ನೀಡಿದ್ದರು. ಇದಾದ ಬಳಿಕ ಪರಂ ಸಮಿತಿಯೂ ಈ ಎಲ್ಲ ಅರ್ಜಿಗಳನ್ನು ನೋಡಿ ಅಂತಿಮ ಪಟ್ಟಿಯನ್ನು ತಯಾರಿಸಿದೆ. ಆದರೆ ಪಟ್ಟಿಗೆ ಮಾತ್ರ ಅಂತಿಮ ಮುದ್ರೆ ಬಿದ್ದಿಲ್ಲ. ಗ್ಯಾರಂಟಿ ಅನುಷ್ಠಾನ ಸಮಿತಿ ರಚಿಸಿಕೊಂಡು, ಅದಕ್ಕೆ ಅಧ್ಯಕ್ಷ, ಉಪಾಧ್ಯಕ್ಷ, ಸದಸ್ಯರನ್ನು ನೇಮಿಸಿಕೊಂಡಿರುವುದು ಬಿಟ್ಟರೆ ಉಳಿದ ನಿಗಮ-ಮಂಡಳಿಗಳ ಸದಸ್ಯ, ನಿರ್ದೇಶಕ ಸ್ಥಾನಗಳಿಗೆ ಆಯ್ಕೆ ಪ್ರಕ್ರಿಯೆ ನಿಂತಲ್ಲೇ ನಿಂತಿದೆ.

ಈ ಪಟ್ಟಿಯನ್ನು ಅಂತಿಮಗೊಳಿಸಬೇಕು ಎನ್ನುವ ಹೊತ್ತಿಗೆ ನಾಯಕತ್ವ ಬದಲಾವಣೆ, ಸಚಿವ ಸಂಪುಟ ಪುನಾರಚನೆ ಗದ್ದಲ ಜೋರಾಗಿದ್ದರಿಂದ ಕಾರ್ಯಕರ್ತರಿಗೆ ಸಿಗಬೇಕಿದ್ದ ಹುದ್ದೆಗಳ ಬಗ್ಗೆ ಯೋಚಿಸಲು ನಾಯಕರಿಗೆ ಸಮಯವಿಲ್ಲವಾಗಿದೆ. ಈ ಹುದ್ದೆಗಳಿಂದ ಬಹುದೊಡ್ಡ ಲಾಭವಾಗುತ್ತದೆ ಎನ್ನುವುದಕ್ಕಿಂತ, ಪಕ್ಷದ ಅಧಿಕಾರದಲ್ಲಿದ್ದಾಗ ಗುರುತಿಸುವ ಕಾರ್ಯವಾಗಿದೆ ಎನ್ನುವುದೇ ಕಾರ್ಯಕರ್ತನಿಗೆ ಸಿಗುವ ಬಹುದೊಡ್ಡ ಮನ್ನಣೆ. ಆದರೆ ನಾಯಕರಲ್ಲಿನ ಕಿತ್ತಾಟದಿಂದ ಇಡೀ ಪ್ರಕ್ರಿಯೆ ನಿಂತಲ್ಲೇ ನಿಂತಿರುವುದು ಕಾರ್ಯಕರ್ತರ ಬೇಸರಕ್ಕೆ ಕಾರಣವಾಗಿದೆ. ಭರ್ಜರಿ ಬಹುಮತದೊಂದಿಗೆ ಸರಕಾರವನ್ನು ರಚಿಸಿದ ಬಳಿಕ ಕಳೆದ ಆರು ತಿಂಗಳುಗಳಿಂದ ನಡೆಯುತ್ತಿದ್ದ ಕಿತ್ತಾಟ, ಗೊಂದಲ, ಈ ಗೊಂದಲಕ್ಕೆ ಪರಿಹಾರ ನೀಡಬೇಕಾದ ಪಕ್ಷದ ಹೈಕಮಾಂಡ್ ಒಬ್ಬರ ಮೇಲೊಬ್ಬರು ಹಾಕಿಕೊಂಡು ಸಮಯದೂಡುತ್ತಿರುವುದು ಪಕ್ಷದ ಕಾರ್ಯಕರ್ತರಿಗೆ ಬೇಸರ ಮೂಡಿಸಿದೆ. ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ಕಾರ್ಯಕರ್ತರಲ್ಲಿದ್ದ ಅಸಮಾಧಾನ, ಬೇಸರವೇ ಈಗಿನ ಕಾಂಗ್ರೆಸ್ ಸರಕಾರದಲ್ಲಿ ಶುರುವಾಗಿರುವುದು ಪಕ್ಷಕ್ಕೆ ಎಚ್ಚರಿಕೆ ಗಂಟೆ ಎಂದರೆ ತಪ್ಪಾಗುವುದಿಲ್ಲ.

ದೇಶದ 21 ರಾಜ್ಯದಲ್ಲಿ ಅಧಿಕಾರದ ಗದ್ದುಗೆಯಲ್ಲಿರುವ ಬಿಜೆಪಿ ನಾಯಕರಿಗೆ, ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವುದರ ಹಿಂದಿನ ಲಾಭದ ಬಗ್ಗೆ ಸ್ಪಷ್ಟನೆಯಿದೆ. ಅದರಲ್ಲಿಯೂ ದಕ್ಷಿಣ ಭಾರತದಲ್ಲಿ ತಳವೂರಲು ಈಗಲೂ ಚಡಪಡಿಸುತ್ತಿರುವ ಸಮಯದಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರವನ್ನು ತೆಗೆಯುವುದರಿಂದ ಇತರೆ ರಾಜ್ಯಗಳಲ್ಲಿ ಬಿಜೆಪಿ ಸಂಘಟನೆಗೆ ಒತ್ತು ನೀಡಲು ಆಗಬಹುದಾದ ಲಾಭ-ನಷ್ಟದ ಅರಿವು ದೆಹಲಿ ನಾಯಕರಿಗಿದೆ. ವಿಧಾನಸಭಾ ಚುನಾವಣೆ ಎರಡು ವರ್ಷವಿರುವಾಗಲೇ, ಸಿದ್ಧತೆ ಆರಂಭಿಸಿ ಕರ್ನಾಟಕವನ್ನು ಮರಳಿ ಪಡೆದರೆ 2029ರಲ್ಲಿ ಎದುರಾಗುವ ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಚಂದ್ರಬಾಬು ನಾಯ್ಡು ಜತೆ ಜಂಟಿ ಕಾರ್ಯಾಚರಣೆ ನಡೆಸಿ ಅಧಿಕಾರವನ್ನು ವಿಸ್ತರಿಸಿಕೊಳ್ಳುವ ಆಲೋಚನೆಯಿದೆ. ಸದ್ಯದ ಕಾಂಗ್ರೆಸ್ ಪಕ್ಷದ ಪರಿಸ್ಥಿತಿ ಹಾಗೂ ಬಿಜೆಪಿಯ ಸಂಘಟನಾ ಶಕ್ತಿಯನ್ನು ನೋಡಿದರೆ ಮೇಲ್ನೋಟಕ್ಕೆ ಈ ಆಲೋಚನೆಯೇನು ಬಹುದೊಡ್ಡ ಸವಾಲಿನದ್ದಾಗಿಲ್ಲ. ಪಶ್ಚಿಮ ಬಂಗಾಳದ ರೀತಿ ಸಂಘಟನೆಯೇ ಇಲ್ಲದಿದ್ದರೂ, ಕಟ್ಟಿ ಬೆಳೆಸಲು ಅವಕಾಶವಿರುತ್ತದೆ. ಆದರೆ ಕರ್ನಾಟಕದಲ್ಲಿ ಬಿಜೆಪಿ ಕಾರ್ಯಕರ್ತರಿಗೇನು ಕೊರತೆ ಇಲ್ಲ. ಆದರೆ ಇರುವುದು ಪಕ್ಷದೊಳಗೆ ಆಗ್ಗಿದ್ದಾಗೆ ಕಾಣಿಸಿಕೊಳ್ಳುವ ಒಳಜಗಳ. ಈ ಒಳಜಗಳಗಳನ್ನು ಸರಿಪಡಿಸಿಕೊಳ್ಳದೇ, ಅದೆಷ್ಟೇ ಸಂಘಟನೆಗೆ ಒತ್ತು ಹಾಗೂ ತಂತ್ರಗಾರಿಕೆ ಮಾಡಿದರೂ ಅದರ ಪೂರ್ಣಫಲ ಸಿಗುವುದು ಭಾರಿ ಕಷ್ಟ ಎನ್ನುವ ವಾಸ್ತವತೆ ದೆಹಲಿ ನಾಯಕರಿಗಿದೆ.

ಬಿಜೆಪಿ ವರಿಷ್ಠರಿಗೂ ಇರುವ ತೊಡಕು ಸಹ ಇದೇ ಆಗಿದೆ. ಕರ್ನಾಟಕದ ಗೆಲುವಿಗೆ 'ಅಶ್ವಮೇಧ' ಕಟ್ಟುವುದು ದೊಡ್ಡ ವಿಷಯವಲ್ಲ. ಆದರೆ ಈ ಅಶ್ವಮೇಧದ ನೇತೃತ್ವ ವಹಿಸುವುದು ಯಾರು? ಎಲ್ಲರನ್ನೂ ಒಟ್ಟಿಗೆ ಕರೆದುಕೊಂಡು ಹೋಗುವ ನಾಯಕನ್ಯಾರು ಎನ್ನುವುದೇ ದೆಹಲಿ ವರಿಷ್ಠರ ಮುಂದಿರುವ ಬಹುದೊಡ್ಡ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಶೀಘ್ರವೇ ಉತ್ತರ ಹುಡುಕದಿದ್ದರೆ ಅಥವಾ ಹುಡುಕಾಟ ಆರಂಭಿಸದೇ ಹೋದರೆ ಕಾಂಗ್ರೆಸ್ ವಿರುದ್ಧದ ಆಡಳಿತ ವಿರೋಧಿ ಅಲೆ, ಬೂತ್‌ಮಟ್ಟದಲ್ಲಿ ಬಿಜೆಪಿ ಸಂಘಟನೆ ಸೇರಿದಂತೆ ಯಾವುದೇ ಡ್ರಿಲ್‌ಗಳು ಬಹುದೊಡ್ಡ ಯಶಸ್ಸನ್ನು ಬಿಜೆಪಿ ತಂದುಕೊಡುವುದಿಲ್ಲ.

ಜೀವನಪಾಠ ಕಲಿಸುವ ಶಾಕ್ ಕೊಡುವ ಸ್ಟೋರಿಗಳು!

ಟೆಕ್ಸಾಸ್‌ನ ನಾಲ್ಕು ಕಾಲಿನ ಹುಡುಗಿ ಎಂಬ ಜಾಹೀರಾತಿನ ಅಡಿಯಲ್ಲಿ ಮರ್ಟಲ್‌ಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಯಿತು. ನಗುನಗುತ್ತಾ ಜನರೆದುರು ಕೂತು ತನ್ನ ನಾಲ್ಕು ಕಾಲುಗಳ ದೇಹವನ್ನು ಪ್ರದರ್ಶಿಸುತ್ತಿದ್ದ ಮರ್ಟಲ್ ಕೆಲವೇ ದಿನಗಳಲ್ಲಿ ಸೆನ್ಸೇಶನ್ ಆದಳು. ನಾಲ್ಕು ಕಾಲುಗಳ ಹುಡುಗಿ ಎಂಬುದು ಆಕೆಯನ್ನು ನೋಡಲು ಬರುವತನಕ ವಿಶೇಷವಾಗಿರುತ್ತಿತ್ತು.

ಪದಸಾಗರ
ನವೀನ್ ಸಾಗರ್
vveditoped@gmail.com

ಇತ್ತೀಚೆಗೆ ಹೀಗೇ ಫೇಸ್‌ಬುಕ್ ಸ್ಕ್ರೋಲ್ ಮಾಡ್ತಾ ಇದ್ದಾಗ, 'ಇದೇನಿದು ಪ್ರಕೃತಿಯ ವೈಚಿತ್ರ್ಯ.... ಈ ಹುಡುಗಿಗೆ ನಾಲ್ಕು ಕಾಲುಗಳು.. ಪೂರ್ತಿ ಕಥೆ ಓದಿದ್ರೆ ಶಾಕ್!' ಹೀಗೇನೋ ಕ್ಯಾಪ್ಷನ್ ಕಂಡಿತು. ಜಗತ್ತಿನ ಎಷ್ಟೆಲ್ಲ ಗಿಮಿಕ್‌ಗಳನ್ನು ಕಂಡ ನಂತರವೂ, ಸೋಷಿಯಲ್ ಮೀಡಿಯಾದ ಅಗ್ಗದ ಥಂಬ್ ನೇಲ್‌ಗಳ ಅಸಲೀಯತ್ತು ಗೊತ್ತಾದ ಮೇಲೂ ಮನಸು ಇಂಥ ಕಥೆಗಳಿಗೆ ತಂತಾನೇ ಬಲಿಯಾಗಿಬಿಡುತ್ತದಲ್ಲ. ನಾನು ಯಾವುದೇ ಶಾಕ್‌ನ ನಿರೀಕ್ಷೆ ಇಲ್ಲದೆಯೂ ಅದನ್ನು ಓಪನ್ ಮಾಡಿದೆ.

ಮನಸು ಮಾತ್ರ ಬಾಲ್ಯದಲ್ಲಿ ಕಂಡಿದ್ದ ಊರಿನ ಜಾತ್ರೆಗಳತ್ತ ನಾಲ್ಕು ಕಾಲುಗಳಲ್ಲಿ ಅಂಬೆಗಾಲಿಟ್ಟು ಹಿಮ್ಮುಖ ಚಲಿಸತೊಡಗಿತ್ತು. ಜಾತ್ರೆಗಳಲ್ಲಿ ಹತ್ತು ಹಲವು ಆಟಗಳ ನಡುವೆ ಒಂದಷ್ಟು ಸ್ಟಾಲ್‌ಗಳಿರುತ್ತಿದ್ದವು. ಎರಡು ತಲೆಯ ಬಾಲಕಿ, ಕೈಕಾಲೇ ಇಲ್ಲದ ವ್ಯಕ್ತಿ ತಾನೇ ಕಾಫಿ ಮಾಡುತ್ತಾನೆ, ಮಾತನಾಡುವ ಕೋತಿ, ಹಣೆಯ ಮೇಲೆ ಮೂರನೇ ಕಣ್ಣಿರುವ ಮಗು, ಹೀಗೆ ವಿಚಿತ್ರ ದೇಹ ಹೊಂದಿರುವ ಮನುಷ್ಯರು, ಪ್ರಾಣಿಗಳು ಜಾತ್ರೆಗಳಲ್ಲಿ ಪ್ರದರ್ಶನದ ಸರಕಾಗಿರುತ್ತಿದ್ದವು. ಅವರನ್ನು ನೋಡಲು ನೂಕುನುಗ್ಗಲು. ಸೃಷ್ಟಿಯ ವೈಚಿತ್ರ್ಯದಿಂದ ಅಥವಾ ಯಾವುದೋ ವೈಜ್ಞಾನಿಕ ಎಡವಟ್ಟಿನಿಂದ ಆಗುವ ದೇಹದ ವೈಕಲ್ಯ ಪ್ರದರ್ಶನಕ್ಕೆ ಮಾರಾಟಕ್ಕೆ ವಸ್ತುವಾಗಿಬಿಡುತ್ತದಲ್ಲ ಅಂತ ಇಂದು ಅನಿಸುತ್ತಿದೆ. ಆದರೆ ನಮ್ಮ ಬಾಲ್ಯಕಾಲದ ಆ ಅಚ್ಚರಿ ನೋಡುವ ಸರತಿಯಲ್ಲಿ ನಾವೂ ಟಿಕೆಟ್ ಹೊಂದಿದವರೇ. ಆ ರೀತಿ ವಿಚಿತ್ರವಾಗಿ ಹುಟ್ಟಿದರೆ ಇದ್ದದ್ದು ಅದೊಂದೇ ಆಯ್ಕೆ. ಭಿಕ್ಷೆ ಬೇಡುವುದು ಅಥವಾ ಪ್ರದರ್ಶನಗಳಲ್ಲಿ ತಮ್ಮನ್ನು ತಾವು ವ್ಯಾಪಾರಕ್ಕಿಟ್ಟುಕೊಳ್ಳುವುದು. ಬಹುತೇಕ ಕೇಸ್‌ಗಳಲ್ಲಿ ಯಾವನೋ ಇಂಥ ಸೃಷ್ಟಿಗಳನ್ನು ಇಟ್ಟುಕೊಂಡು ತನ್ನ ಜೇಬಿಗೆ ಹಣ ಇಳಿಸಿಕೊಳ್ಳುತ್ತಿರುತ್ತಾನೆ. ಚಿನ್ನದ ಮೊಟ್ಟೆ ಇಡುವ ಕೋಳಿಯಂತೆ ಬಳಸಿಕೊಳ್ಳುತ್ತಿರುತ್ತಾನೆ. ಇಂಥ ವೈಕಲ್ಯಗಳೊಂದಿಗೆ ಹುಟ್ಟಿದ ಆ ಜೀವ ಯಾರನ್ನೋ ಉದ್ಧರಿಸಿ ಅಕಾಲಮೃತ್ಯುವಿಗೆ ಒಳಗಾಗಿ ಇಹಲೋಕದ ನಂಟು ಕಳೆದುಕೊಂಡು ಮುಕ್ತಿ ಹೊಂದುತ್ತದೆ.

ಬಾಲ್ಯದಿಂದ ಈತನಕ ಕಂಡ ಇಂಥ ವಿಚಿತ್ರ ಸೃಷ್ಟಿಗಳೆಲ್ಲವನ್ನು ನೆನಪಿಸಿಕೊಳುತ್ತಾ, ಇವರ ಬದುಕೆಲ್ಲ ಇಷ್ಟೇನಾ ಅಂತ ಯೋಚಿಸುತ್ತಾ, ಫೇಸ್ ಬುಕ್‌ನ ಈ ಪೋಸ್ಟ್ ಓಪನ್ ಮಾಡಿದಾಗ ಕಂಡದ್ದು ಒಂದು ಸ್ಫೂರ್ತಿದಾಯಕ ಕಥೆ.

1868, ಮೇ 12. ಅಮೆರಿಕದ ಟೆನ್ನೆಸ್ಸೀ ರಾಜ್ಯದ ಲಿಂಕನ್ ಕೌಂಟಿಯಲ್ಲಿ ವಿಲಿಯಂ ಮತ್ತು ನ್ಯಾನ್ಸಿ ಎಂಬ ದಂಪತಿಗೆ ಒಂದು ಹೆಣ್ಣು ಮಗು ಜನಿಸಿತು. ಸಹಜ ಹೆರಿಗೆಯಲ್ಲಿ ಹೊರಬಂದ ಹೆಣ್ಮಗುವನ್ನು ಕಂಡು ವೈದ್ಯರಿಗೆ ನರ್ಸ್‌ಗಳಿಗೆ ಆಘಾತ. ಆ ಮಗು ನಾಲ್ಕು ಕಾಲುಗಳೊಂದಿಗೆ ಹುಟ್ಟಿತ್ತು. ಆ ಮಗುವಿನ ಹೆಸರು ಜೋಸೆಫೀನ್ ಮರ್ಟಲ್ ಕಾರ್ಬಿನ್.

ವೈದ್ಯಕೀಯ ಪರಿಭಾಷೆಯಲ್ಲಿ ಇದನ್ನು ಡೈಪೈಗಸ್ ಅಂತಾರಂತೆ. ಭ್ರೂಣದ ಬೆಳವಣಿಗೆ ಹಂತದಲ್ಲಿ, ಸೊಂಟದ ಕೆಳಗಿನ ಭಾಗ ಎರಡಾಗಿ ಹೋಗಿ, ಬೆಳೆಯುವ ಅತ್ಯಂತ ಅಪರೂಪದ ಕೇಸ್ ಇದು. ಮರ್ಟಲ್‌ಗೆ ಸೊಂಟದ ಮೇಲ್ಭಾಗ ಸಂಪೂರ್ಣ ಸಹಜವಾಗಿತ್ತು. ಸೊಂಟದ ಕೆಳಗೆ ಎರಡು ಸೊಂಟ, ಅದರಿಂದ ನಾಲ್ಕು ಕಾಲುಗಳು! ಹೊರಗಿನ ಎರಡು ಕಾಲುಗಳು ಸಂಪೂರ್ಣ ಬೆಳೆದಿದ್ದವು. ಆದರೆ ಒಳಗಿನ ಎರಡು ಕಾಲುಗಳು ಚಿಕ್ಕದಾಗಿದ್ದವು. ಪ್ರತಿ ಕಾಲಿಗೆ ಮೂರೇ ಬೆರಳುಗಳಿದ್ದವು. ಒಳಗಿನ ಕಾಲುಗಳನ್ನು ಸ್ವಲ್ಪ ಮಟ್ಟಿಗೆ ಅಲುಗಾಡಿಸಬಹುದಿತ್ತು. ಆದರೆ ಅವು ಪೋಲಿಯೋ ಪೀಡಿತವೋ ಎಂಬಂತಿದ್ದವು.

ಮಗುವನ್ನು ನೋಡಿದ ವೈದ್ಯರು, ಈ ಮಗು ಬದುಕುವುದು ಕಷ್ಟ, ಇದರ ಬಗ್ಗೆ ಹೋಪ್ ಇಟ್ಕೋಬೇಡಿ ಅಂದುಬಿಟ್ಟರು. ಆದರೆ ಡಾಕ್ಟರ್‌ಗೆ ಅಚ್ಚರಿಯಾಗುವ ಹಾಗೆ ಮಗು, ಮೂರು ವಾರಗಳ ವೇಳೆಗೆ ಹತ್ತು ಪೌಂಡ್ ತೂಕ ತಲುಪಿಬಿಟ್ಟಿತು. ಕಾಲಿನ ವೈಚಿತ್ರ್ಯವೊಂದನ್ನು ಬಿಟ್ಟರೆ ಅದೊಂದು ಆರೋಗ್ಯಕರ ಮಗು.

ಕೆಲವು ವಿಚಾರಗಳಲ್ಲಿ ಪಾಶ್ಚಾತ್ಯ ಜಗತ್ತು ಕೂಡ ನಮ್ಮ ದೇಶಕ್ಕಿಂತ ಭಿನ್ನವಾಗಿರಲಿಲ್ಲ. ಇನ್ ಫ್ಯಾಕ್ಟ್ ನಮಗಿಂತ ಹೆಚ್ಚು ಮೂಢನಂಬಿಕೆಗಳನ್ನು ಹೊತ್ತು ಆಡಿಸುತ್ತಿತ್ತು. ಆ ಮಗುವನ್ನು ಕೆಲವರು ದೇವರ ಶಾಪದ ಫಲ ಅಂತಲೂ, ಕೆಲವರು ಅಪಶಕುನ ಅಂತಲೂ, ಸಮಾಜಕ್ಕೆ ಮಾರಕ ಅಂತಲೂ ದೂರವಿಡಿಸುವ ಪ್ರಯತ್ನ ಮಾಡಿದರು. ಸಾಯಿಸಿಬಿಡಿ ಎಂಬ ಸಲಹೆಗಳೂ ಬಂದವು.

ಆದರೆ ವಿಲಿಯಂ ಮತ್ತು ನ್ಯಾನ್ಸಿ ಯಾರ ಮಾತಿಗೂ ಕಿವಿಗೊಡುವುದಿಲ್ಲ. ವಿಲಿಯಂ-ನ್ಯಾನ್ಸಿಗೆ ಈ ಮಗು ಹುಟ್ಟುವ ಮುನ್ನ ಒಂದು ಮಗುವಿತ್ತು. ನ್ಯಾನ್ಸಿಯ ಮೊದಲ ಪತಿಯಿಂದ ಬಂದಿದ್ದ ಇನ್ನೊಂದು ಮಗುವೂ ಇತ್ತು. ಆದರೂ ಈ ಮಗುವನ್ನು ನಿರ್ಲಕ್ಷಿಸಲಿಲ್ಲ. ಅವರಿಬ್ಬರಿಗೆ ಕೊಟ್ಟ ಪ್ರೀತಿಗಿಂತ ಹೆಚ್ಚೇ ಪ್ರೀತಿ ಕೊಟ್ಟರು. ಜೋಸೆಫೀನ್ ಮರ್ಟಲ್ ಎಂಬ ಹೆಸರಿಟ್ಟು ತುಂಬ ಅಕ್ಕರೆಯಿಂದ ಸಾಕತೊಡಗಿದನು ವಿಲಿಯಂ.

ತಂದೆ ವಿಲಿಯಂ ಒಬ್ಬ ಸೈನಿಕ. ಅಮೆರಿಕದ ಅಂತರ್ಯುದ್ಧದಲ್ಲಿ ಗಾಯಗೊಂಡಿದ್ದ ಯೋಧ. ಅವನ ಕುಟುಂಬ ಆರ್ಥಿಕವಾಗಿ ಬಹಳ ಸಂಕಷ್ಟದಲ್ಲಿತ್ತು. ಆದರೂ ಮಗಳನ್ನು ಬೀದಿಗೆ ಬಿಡಲಿಲ್ಲ. ಆಕೆಯ ದೇಹದ ವಿಚಿತ್ರ ರಚನೆಯ ಕಾರಣಕ್ಕೆ, ಪದೇಪದೆ ಆರೋಗ್ಯ ಕೈಕೊಡುತ್ತಿತ್ತು. ಆದರೆ ದೇವರು ಆಕೆಯೊಳಗೊಂದು ಭಯಂಕರ ಆತ್ಮವಿಶ್ವಾಸ ಮತ್ತು ಚೈತನ್ಯ ತುಂಬಿ ಕಳಿಸಿದ್ದ. ತಂದೆಗೇ ಧೈರ್ಯ ತುಂಬುವ ಮಾತುಗಳನ್ನಾಡಿ ನಾನು ನಿನಗೆ ಹೊರೆಯಾಗುವುದಿಲ್ಲ ಡೋಂಟ್ ವರಿ ಅನ್ನುತ್ತಿದ್ದಳು.

ಮರ್ಟಲ್‌ಗೆ ಹದಿಮೂರು ವರ್ಷವಿದ್ದಾಗ, ವಿಲಿಯಂ ಬಹಳ ಅನಿವಾರ್ಯವೆನಿಸಿ, ಮಗಳನ್ನು ಪ್ರದರ್ಶನಕ್ಕಿಡುವ ನಿರ್ಧಾರಕ್ಕೆ ಬಂದುಬಿಡುತ್ತಾನೆ. ಜೋಸೆಫೀನ್ ಮರ್ಟಲ್ ಅದನ್ನು ವಿರೋಧಿಸುವುದಿಲ್ಲ. ಒಪ್ಪವಾಗಿ ತಯಾರಾಗಿಬಿಡುತ್ತಾಳೆ. ಅಂದಿನ ಅಮೆರಿಕದಲ್ಲಿ ಫ್ರೀಕ್ ಶೋ ಎಂಬುದು ಬಹಳ ಪ್ರಖ್ಯಾತ ಎಕ್ಸಿಬಿಷನ್. ದೈಹಿಕ ವೈಚಿತ್ರ್ಯಗಳಿರುವ ವ್ಯಕ್ತಿಗಳನ್ನು ಪ್ರದರ್ಶಿಸಲೆಂದೇ ಆ ಎಕ್ಸಿಬಿಷನ್ ನಡೆಯುತ್ತಿತ್ತು.

ಟೆಕ್ಸಾಸ್‌ನ ನಾಲ್ಕು ಕಾಲಿನ ಹುಡುಗಿ ಎಂಬ ಜಾಹೀರಾತಿನ ಅಡಿಯಲ್ಲಿ ಮರ್ಟಲ್‌ಳನ್ನು ಸಾರ್ವಜನಿಕ ಪ್ರದರ್ಶನಕ್ಕೆ ಇಡಲಾಯಿತು. ನಗುನಗುತ್ತಾ ಜನರೆದುರು ಕೂತು ತನ್ನ ನಾಲ್ಕು ಕಾಲುಗಳ ದೇಹವನ್ನು ಪ್ರದರ್ಶಿಸುತ್ತಿದ್ದ ಮರ್ಟಲ್ ಕೆಲವೇ ದಿನಗಳಲ್ಲಿ ಸೆನ್ಸೇಶನ್ ಆದಳು. ನಾಲ್ಕು ಕಾಲುಗಳ ಹುಡುಗಿ ಎಂಬುದು ಆಕೆಯನ್ನು ನೋಡಲು ಬರುವತನಕ ವಿಶೇಷವಾಗಿರುತ್ತಿತ್ತು. ಆದರೆ ಜನರು ಆಕೆಯನ್ನು ನೋಡಿದ ಕ್ಷಣದಿಂದ ಆಕೆಯ ವ್ಯಕ್ತಿತ್ವದ ಬಗ್ಗೆ ಮಾತನಾಡಲಾರಂಭಿಸಿದರು. ಅವಳ ಖ್ಯಾತಿ ದಿನೇದಿನೆ ಹೆಚ್ಚಲಾರಂಭಿಸಿತು. ಪಿ.ಟಿ. ಬಾರ್ನಮ್ ಎಂಬ ಅಮೆರಿಕದ ಪ್ರಖ್ಯಾತ ಸರ್ಕಸ್ ಉದ್ಯಮಿ ಈಕೆಯನ್ನು ತನ್ನ ಸರ್ಕಸ್ ಪ್ರದರ್ಶನಗಳಲ್ಲಿ ತೋರಿಸಿ ಹಣ ಮಾಡತೊಡಗಿದ. ನ್ಯೂಯಾರ್ಕ್‌ನ ಹ್ಯೂಬರ್ ಮ್ಯೂಸಿಯಂ, ರಿಂಗ್ಲಿಂಗ್ ಬ್ರದರ್ಸ್ ಸರ್ಕಸ್, ಕೋನಿ ಐಲ್ಯಾಂಡ್ ಸೇರಿದಂತೆ ಹಲವೆಡೆ ಮರ್ಟಲ್ ವಿಶೇಷ ಆಕರ್ಷಣೆಯಾಗಿ ಕಾಣಿಸಿಕೊಳ್ಳತೊಡಗಿದಳು. ಇಂದಿನ ಮೌಲ್ಯದಲ್ಲಿ ವಾರಕ್ಕೆ ಸುಮಾರು 14,000 ಡಾಲರ್ ದುಡಿಯತೊಡಗಿದಳು ಮರ್ಟಲ್. ಆಕೆಯನ್ನು ವಿಚಿತ್ರ ದೇಹವೆಂದು ನೋಡುವ ಬದಲು ಅಪರೂಪದ ಕಲಾವಿದೆ ಎಂಬಂತೆ ಅಮೆರಿಕ ನೋಡತೊಡಗಿತು.

ಮರ್ಟಲ್ ಯಾವ ಪರಿ ಜನಪ್ರಿಯಳಾದಳು ಅಂದ್ರೆ, ಒಂದಷ್ಟು ಸರ್ಕಸ್ ಉದ್ಯಮಿಗಳು ಮರ್ಟಲ್‌ನ ನಕಲುಗಳನ್ನು ಸೃಷ್ಟಿಸತೊಡಗಿದರು. ಎರಡು ಕಾಲಿನ ಹುಡುಗಿಯರಿಗೆ ಕೃತಕವಾಗಿ ಇನ್ನೆರಡು ಕಾಲು ಅಂಟಿಸಿ, ಜನರನ್ನು ಯಾಮಾರಿಸಿ ಸೆಳೆಯಲು ಪ್ರಯತ್ನಿಸಿದರು. ಆರುಕಾಲಿನ ಹುಡುಗಿ, ನಾಲ್ಕು ಕೈ ನಾಲ್ಕು ಕಾಲುಗಳ ಹುಡುಗಿ ಅಂತೆಲ್ಲ ಕೃತಕವಾಗಿ ರೆಡಿ ಮಾಡಿ ಮರ್ಟಲ್ ಜತೆಗೆ ಸ್ಪರ್ಧೆಗೂ ಬಿದ್ದರು. ಆದರೆ ಜನರು ಮರ್ಟಲ್‌ಳ ಸಹಜ

ವೈಚಿತ್ರ್ಯ ಮತ್ತು ವ್ಯಕ್ತಿತ್ವದ ಮುಂದೆ ಮಿಕ್ಕೆಲ್ಲ ನಕಲುಗಳನ್ನು ಸಾರಾಸಗಟಾಗಿ ತಿರಸ್ಕರಿಸಿಬಿಟ್ಟರು.

ತಂದೆಯ ಕಷ್ಟಕ್ಕೆ ನೆರವಾಗಲು, ಕುಟುಂಬಕ್ಕೆ ಭಾರವಾಗದಿರಲು ತನ್ನನ್ನು ತಾನು ಪ್ರದರ್ಶನಕ್ಕಿಟ್ಟುಕೊಂಡಿದ್ದ ಮರ್ಟಲ್ ಅಂತರ್ಯದಲ್ಲಿ ಇದನ್ನು ಎಂಜಾಯ್ ಮಾಡುತ್ತಿರಲಿಲ್ಲ. ಭಾವುಕ ಹುಡುಗಿಯಾಗಿದ್ದ ಆಕೆಗೆ ವಯೋಸಹಜವಾಗಿ ಪ್ರೀತಿ ಪ್ರೇಮ ಸಾಂಗತ್ಯ ಇವೆಲ್ಲವೂ ಬೇಕನಿಸುತ್ತಿತ್ತು. ಸ್ವತಂತ್ರವಾಗಿ ಬದುಕುವ ಕನಸುಗಳು ಹುಟ್ಟಿಕೊಂಡಿದ್ದವು.

1886, ಜೂನ್ 12ರಂದು ಮರ್ಟಲ್ ತನ್ನ 18ನೇ ವಯಸ್ಸಿನಲ್ಲಿ ಜೇಮ್ಸ್ ಕ್ಲಿಂಟನ್ ಬಿಕ್ನೆಲ್ ಎಂಬ ಯುವಕನನ್ನು ಪ್ರೀತಿಸಿ ವಿವಾಹವಾದಳು. ಕ್ಲಿಂಟನ್ ವೃತ್ತಿಯಿಂದ ವೈದ್ಯ. ಮರ್ಟಲ್‌ಳ ದೇಹ ಆತನಲ್ಲಿ ಯಾವುದೇ ಅಸಹ್ಯ ಹುಟ್ಟಿಸಲಿಲ್ಲ, ಆಕೆಯ ಮನಸಿಗೆ, ವ್ಯಕ್ತಿತ್ವಕ್ಕೆ ಸೋತಿದ್ದ ಕ್ಲಿಂಟನ್‌ಗೆ, ನಾಲ್ಕು ಕಾಲುಗಳ ದೇಹವೊಂದು ವಿಶೇಷ ಸಂಗತಿಯೇ ಅನಿಸಲಿಲ್ಲ.

ಮರ್ಟಲ್‌ಳನ್ನು ಈ ಪಬ್ಲಿಕ್ ಎಕ್ಸಿಬಿಷನ್, ಸರ್ಕಸ್ ಎಲ್ಲದರಿಂದ ಹೊರತರುತ್ತಾನೆ ಪತಿ ಜೇಮ್ಸ್ ಕ್ಲಿಂಟನ್. ಟೆಕ್ಸಾಸ್‌ನ ಜಾನ್ಸನ್ ಕೌಂಟಿಗೆ ತೆರಳಿ ಇಬ್ಬರೂ ಕೃಷಿ ಜಗತ್ತಿಗೆ ತೆರೆದುಕೊಳ್ಳುತ್ತಾರೆ. ಮನೆ ಕಟ್ಟುತ್ತಾರೆ. ದಂಪತಿಗೆ ಐದು ಮಕ್ಕಳಾಗುತ್ತಾರೆ. ಯಾವ ಮಗುವೂ ತನ್ನಂತಾಗುವುದು ಬೇಡ ಎಂಬುದೊಂದೇ ಆಕೆಯ ಪ್ರಾರ್ಥನೆಯಾಗಿತ್ತು. ದೇವರು ತಥಾಸ್ತು ಅಂತಲೂ ಅಂದಿದ್ದನು. ದೈಹಿಕವಾಗಿ ಎಲ್ಲವೂ ಸರಿ ಇರುವವರಿಗಿಂತಲೂ ಅದ್ಭುತ ಕೌಟುಂಬಿಕ ಜೀವನ ನಡೆಸಿ ತೋರಿಸುತ್ತಾಳೆ ಮರ್ಟಲ್.

ಮರ್ಟಲ್ ಎಕ್ಸಿಬಿಷನ್ ಮತ್ತು ಸರ್ಕಸ್ ಪ್ರದರ್ಶನಗಳಿಂದ ದೂರ ಉಳಿದು ದಶಕಗಳೇ ಉರುಳಿದರೂ, ಆಕೆಯನ್ನು ಅಮೆರಿಕದ ಜನತೆ ಮರೆಯುವುದೇ ಇಲ್ಲ. ಯಾವುದೇ ಪ್ರದರ್ಶನ ನಡೆದರೂ ಮರ್ಟಲ್‌ಳನ್ನು ನೆನಪಿಸಿಕೊಳ್ಳುವುದು, ಆಕೆಯೊಂದಿಗೆ ಇತರರನ್ನು ಹೋಲಿಸುವುದು, ಮಾಧ್ಯಮಗಳಲ್ಲಿ ಆಕೆಯನ್ನು ನೆನಪಿಸಿಕೊಳ್ಳುವುದು ನಡೆದೇ ಇತ್ತು. 1909ರಲ್ಲಿ, ಅಂದರೆ ಮದುವೆಯಾಗಿ ಎರಡು ದಶಕಗಳ ನಂತರ, ಮರ್ಟಲ್ ಆರ್ಥಿಕ ಮುಗ್ಗಟ್ಟಿಗೆ ಒಳಗಾದಾಗ, ಮತ್ತೆ ತನ್ನನ್ನು ತಾನು ಪ್ರದರ್ಶನಕ್ಕಿಟ್ಟುಕೊಳ್ಳಲು ನಿರ್ಧರಿಸಿದಳು. ನ್ಯೂಯಾರ್ಕ್‌ನ ಹ್ಯೂಬರ್ ಮ್ಯೂಸಿಯಂನಲ್ಲಿ ಆಕೆ ಕಾಣಿಸಿಕೊಂಡ ಕ್ಷಣ ಅಮೆರಿಕದಲ್ಲಿ ಭಾರಿ ಸಂಚಲನವಾಯಿತು. ಅದೇ ರೀತಿ ರಿಂಗ್ಲಿಂಗ್ ಬ್ರದರ್ಸ್ ಸರ್ಕಸ್ ಮತ್ತು ಕೋನಿ ಐಲ್ಯಾಂಡ್‌ನಲ್ಲಿ ಅವಳ ಪ್ರದರ್ಶನಗಳಿಗೆ ಜನ ಮುಗಿಬಿದ್ದರು. ಈ ಬಾರಿ ಆಕೆ ಹಳೆಯ ಮರ್ಟಲ್ ಆಗಿರಲಿಲ್ಲ, ನಾಲ್ಕು ಕಾಲಿನ ಹುಡುಗಿ, ಮದುವೆ ಆಗಿರುವುದು, ಐದು ಮಕ್ಕಳ ತಾಯಿಯಾಗಿರುವುದು, ಸ್ವಾವಲಂಬಿಯಾಗಿ ಮನೆ ಕಟ್ಟಿ, ಕೃಷಿಜೀವನ ನಡೆಸಿರುವುದು ಎಲ್ಲವೂ ಆಕೆಯನ್ನು ಇನ್ನಷ್ಟು ವಿಶೇಷವಾಗಿಸಿದ್ದವು. ಮತ್ತೆ ಹಣ ಹರಿದುಬರತೊಡಗಿತು. ಮರ್ಟಲ್ ಒಂದು ದಿನವೂ ಯಾರಿಗೂ ಹೊರೆಯಾಗದಂತೆ, ಕೇವಲ ಅನುಕಂಪಕ್ಕೆ ಒಳಗಾಗದಂತೆ ಬದುಕಿ, ಸಾರ್ಥಕ್ಯ ಕಂಡಿದ್ದಳು.

59 ವರ್ಷದ ಹೊಸ್ತಿಲಲ್ಲಿ, ಆಕೆಯ ಕಾಲೊಂದು ಚರ್ಮದ ಸೋಂಕಿಗೆ ಒಳಗಾಯಿತು. ಅಂದಿನ ವೈದ್ಯಲೋಕದಲ್ಲಿ ಅದಕ್ಕೆ ಔಷಧಿಯೇ ಸಿಗಲಿಲ್ಲ. ಸೋಂಕು ಹೆಚ್ಚಾಗಿ, ಇಡೀ ದೇಹದಲ್ಲಿ ಹರಡಿ ಆಕೆ ಕೊನೆಯುಸಿರು ಎಳೆದಳು.

ಜಗತ್ತು ಹೇಗಿದೆ ನೋಡಿ. ಆಕೆ ಸಾಯುತ್ತಿದ್ದ ಹಾಗೇ ವೈದ್ಯರು, ಸಂಶೋಧಕರು ಆಕೆಯ ದೇಹಕ್ಕಾಗಿ ರಣಹದ್ದುಗಳಂತೆ ಎರಗಿದರು. ದೊಡ್ಡ ಮೊತ್ತ ಕೊಡಲು ಸಿದ್ಧ, ಈ ದೇಹ ತಮಗೆ ಬೇಕು ಎಂದು ಡಿಮ್ಯಾಂಡಿಗೆ ನಿಂತರು. ಇವರು ಶವವನ್ನೂ ಬಿಡುವುದಿಲ್ಲ ಎಂದು ಖಾತರಿಯಾಯ್ತು ಕುಟುಂಬಕ್ಕೆ. ಮರ್ಟಲ್‌ಳನ್ನು ಹೂಳಿ ಸಮಾಧಿಯ ಮೇಲೆ ಗಾರೆ ಮಾಡಲಾಯ್ತು. ಅದು ಗಟ್ಟಿಯಾಗುವ ತನಕ ಕುಟುಂಬ ಕಾವಲು ನಿಂತಿತು. ಟೆಕ್ಸಾಸ್‌ನ ಕ್ಲೆಬರ್ನ್ ಮೆಮೋರಿಯಲ್ ಸ್ಮಶಾನದಲ್ಲಿ ಅವಳ ಕಾಂಕ್ರೀಟ್ ಸಮಾಧಿ ಇಂದೂ ಇದೆಯಂತೆ.

ಎಲ್ಲ ಸರಿಯಾಗಿರುವ ನಾವು ಬದುಕಲು ನೂರು ದೂರು ಹೇಳುತ್ತೇವೆ. ಆದರೆ ಇಂಥ ವೈಕಲ್ಯದ ನಡುವೆ ಆಕೆ ಜವಾಬ್ದಾರಿಯುತ ಮಗಳಾಗಿ, ಪ್ರೀತಿಸೋ ತಾಯಿಯಾಗಿ, ಒಳ್ಳೆಯ ಪತ್ನಿಯಾಗಿ, ಒಬ್ಬ ಧೈರ್ಯಶಾಲಿ ಮಹಿಳೆಯಾಗಿ ಬರೋಬ್ಬರಿ ಅರವತ್ತು ವರ್ಷ ಜೀವಿಸಿ ಹೋದಳಲ್ಲ, ವಾಹ್ ಅನ್ನದೇ ಇರಲಾದೀತೇ?

ಭಟ್ಟರ್ ಸ್ಕಾಚ್

- **ಗಂಗಾಧರ ಹೂಡಲಿ, ಕೊಪ್ಪಳ**
ಭಟ್ರೇ, ವೈದ್ಯರು ಆಪರೇಷನ್ ಮಾಡುವಾಗ ಮುಖಕ್ಕೆ ಮಾಸ್ಕ್ ಯಾಕೆ ಹಾಕಿಕೊಳ್ಳುತ್ತಾರೆ?
- **ಒಂದು ವೇಳೆ ಆಪರೇಷನ್ ಫೇಲ್ ಆದ್ರೆ, ಪೇಷೆಂಟ್ ಮನೇಲಿ ಯಾರೂ ಅವರನ್ನ ಗುರುತು ಹಿಡಿಯಬಾರದು ಅಂತ!**

- **ಶಂಕರ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಮದುವೆಗೂ, ಯುದ್ಧಕ್ಕೂ ಸಾಮ್ಯತೆ ಏನು?
- **ಎರಡರಲ್ಲೂ ಶತ್ರುಗಳು ನಮಗೆ ಗೊತ್ತಿರುತ್ತಾರೆ!**

- **ಪರಮೇಶ್ವರ ಸಂಕಿ, ತುಮಕೂರು**
ಭಟ್ರೇ, ಇತಿಹಾಸ ಮತ್ತು ಪತ್ನಿಯ ನಡುವೆ ಇರುವ ವ್ಯತ್ಯಾಸವೇನು?
- **ಇತಿಹಾಸ ಹಳೆಯ ವಿಷಯಗಳನ್ನು ನೆನಪಿಸುತ್ತದೆ, ಆದರೆ ಪತ್ನಿ ಹಳೆಯ ತಪ್ಪುಗಳನ್ನು ನೆನಪಿಸುತ್ತಾಳೆ!**

- **ರಾಜೇಶ ಬಾಡ, ಕಂಪ್ಲಿ**
ಭಟ್ರೇ, ಒಬ್ಬ ಸೋಮಾರಿ ವ್ಯಕ್ತಿ ತನ್ನ ಜೀವನದಲ್ಲಿ ಸಾಧಿಸಿದ ದೊಡ್ಡ ಸಾಧನೆ ಯಾವುದು?
- **ಮುಂಜಾನೆ ಅಲಾರಾಂ ಹೊಡೆದಾಗ ಕಣ್ಣು ಬಿಡದೆಯೇ ಅದನ್ನು ಆಫ್ ಮಾಡುವುದು!**

- **ಸುಂದರೇಶ, ಬಾಳೆಹೊನ್ನೂರು**
ಭಟ್ರೇ, ಟ್ರಾಫಿಕ್ ಸಿಗ್ನಲ್‌ನಲ್ಲಿ 'ಕೆಂಪು ದೀಪ'ದ ನಿಜವಾದ ಅರ್ಥವೇನು?
- **ವಾಟ್ಸಾಪ್ ಮೆಸೇಜ್‌ಗಳನ್ನು ಚೆಕ್ ಮಾಡಲು ಸಿಕ್ಕ ಒಂದು ಪುಟ್ಟ ಬ್ರೇಕ್!**

- **ಹರೀಶ ಗೌಡ, ಮದ್ದೂರು**
ಭಟ್ರೇ, ಒಬ್ಬ ಮನುಷ್ಯ ಎಷ್ಟೇ ದೊಡ್ಡವನಾದರೂ, ಯಾರ ಮುಂದೆ ತಲೆ ತಗ್ಗಿಸಲೇಬೇಕು?
- **ಕ್ಷೌರಿಕನ ಮುಂದೆ!**

- **ಕೆ.ಜೈಶಂಕರ, ಹಾಸನ**
ಭಟ್ರೇ, 'ಅನುಭವ' ಅಂದರೆ ಏನು?
- **ತಲೆ ಕೂದಲೆಲ್ಲ ಉದುರಿ ಹೋದ ಮೇಲೆ ದೇವರು ನಮಗೆ ಕೊಡುವ 'ಬಾಚಣಿಗೆ'!**

- **ದೀಪಾ ವಸಂತ, ಬೆಂಗಳೂರು**
ಭಟ್ರೇ, ಸಾಲಗಾರನಿಗೂ, ಚಂದ್ರನಿಗೂ ಇರುವ ವ್ಯತ್ಯಾಸವೇನು?
- **ಚಂದ್ರ ಅಮಾವಾಸ್ಯೆಗೆ ಒಂದು ದಿನ ಮಾತ್ರ ಕಾಣಿಸಿಕೊಳ್ಳುವುದಿಲ್ಲ, ಆದರೆ ಸಾಲಗಾರ ಎಂದಿಗೂ ಕಾಣಿಸಿಕೊಳ್ಳುವುದಿಲ್ಲ!**

- **ಸುಷ್ಮಾ ರಾಮು, ಮೈಸೂರು**
ಭಟ್ರೇ, ವಿಮಾನದಲ್ಲಿ ಪ್ರಯಾಣಿಸುವಾಗ ನಮಗೆ ಸಿಗುವ ಅತ್ಯಂತ ದೊಡ್ಡ ಸುಳ್ಳು ಯಾವುದು?
- **ನಿಮ್ಮ ಫೋನ್ ಅನ್ನು ಏರೋಪ್ಲೇನ್ ಮೋಡ್‌ನಲ್ಲಿ ಇರಿಸಿ, ಇದರಿಂದ ವಿಮಾನಕ್ಕೆ ತೊಂದರೆಯಾಗುವುದಿಲ್ಲ!**

ನಮ್ಮ ಡೆಮಾಕ್ರಸಿಗೆ ಬೇಕಿದೆ ಮೇಜರ್ ಸರ್ಜರಿ!

ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಕಡ್ಡಾಯವಾಗಿ ವೋಟ್ ಮಾಡಬೇಕು ಎನ್ನುವ ಕಾನೂನು ಇಲ್ಲದೆ ಇರುವುದು ಅತಿ ದೊಡ್ಡ ದೋಷ. ಈ ಕಾರಣದಿಂದ ವೋಟ್ ಮಾಡುವ ಜನ, ವೋಟ್ ಮಾಡದೆ ಇರುವ ಜನರ ಹಣೆಬರಹವನ್ನು ಬರೆಯುವ ಹಂತಕ್ಕೆ ಬೆಳೆದಿದ್ದಾರೆ. ಸಂಖ್ಯೆ ಮುಖ್ಯ ಎಂದಾದ ಮೇಲೆ ಒಂದು ವರ್ಗದ ಜನ ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುತ್ತ ಹೋಗುತ್ತಾರೆ. ಅವರ ವೋಟು ಇಲ್ಲದೆ ಯಾರೊಬ್ಬರೂ ಗೆಲ್ಲಲು ಸಾಧ್ಯವಿಲ್ಲ ಎಂದಾದಾಗ ಏನಾಗುತ್ತದೆ?

ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ನಾವು ಪ್ರಜಾಪ್ರಭುತ್ವಕ್ಕೆ ಎಷ್ಟು ಅರ್ಹರು? ಈ ಪ್ರಶ್ನೆ ನನ್ನ ಮನಸ್ಸಿನಲ್ಲಿ ಹಲವಾರು ಬಾರಿ ಬಂದು ಹೋಗಿದೆ. ಕಳೆದ ಒಂದು ವಾರದಲ್ಲಿ ಈ ಪ್ರಶ್ನೆ ಮನಸ್ಸಿನಲ್ಲಿ ಹೆಚ್ಚು ಬಾರಿ ಹುಟ್ಟಿದೆ. ಇದಕ್ಕೆ ಕಾರಣಗಳು ಹಲವು. ಅವುಗಳಲ್ಲಿ ಮುಖ್ಯವಾದ ಮೂರು ಅಂಶಗಳನ್ನು ಹೇಳುವೆ. ಎಲ್ಲಕ್ಕಿಂತ ಮೊದಲಿಗೆ ಇವತ್ತಿಗೆ ಜಗತ್ತು ಅದೆಷ್ಟು ದೊಡ್ಡ ಮಟ್ಟದ ಸಂಕಟದಲ್ಲಿದೆ ಎನ್ನುವುದನ್ನು ಅರಿತು ಕೊಳ್ಳದೆ ವಿರೋಧಿಸಬೇಕು ಎಂದು ವಿರೋಧಿಸುವುದು ನೋಡಿದಾಗ ಹುಟ್ಟಿದ್ದು.

ಪ್ರಧಾನಿ ನರೇಂದ್ರ ಮೋದಿಯವರು ವಿದೇಶ ಪ್ರಯಾಣ ಮಾಡಬೇಡಿ ಎಂದರು. ಹೆಚ್ಚು ತೈಲವನ್ನು ಬಳಸಬೇಡಿ ಎಂದರು. ವರ್ಕ್ ಫ್ರಮ್ ಹೋಮ್ ಮಾಡಿ ಎಂದರು. ಚಿನ್ನ ಖರೀದಿ ಬೇಡ ಎಂದರು. ಸಾಧ್ಯವಾದಷ್ಟು ಅಡುಗೆ ಎಣ್ಣೆಯನ್ನು ಸಹ ಕಡಿಮೆ ಬಳಸಿ ಎನ್ನುವ ಮನವಿಯನ್ನು ಮಾಡಿದರು. ನೆನಪಿರಲಿ ಇದ್ಯಾವುದೂ ಕಡ್ಡಾಯವಲ್ಲ. ಇದೊಂದು ಮನವಿಯಾಗಿತ್ತು ಅಷ್ಟೆ. ಮೊದಲೇ ಪ್ಲಾನ್ ಮಾಡಿಕೊಂಡವರು ವಿದೇಶ ಪ್ರಯಾಣ ಮಾಡಿದ್ದಾರೆ. ಅದು ತಪ್ಪಲ್ಲ. ಹಾಗೆ ತೀರಾ ಈ ತಿಂಗಳು ಅಥವಾ ಮುಂದಿನ ತಿಂಗಳು ಮದುವೆ ಇಟ್ಟುಕೊಂಡವರು ಚಿನ್ನ ಖರೀದಿಸುತ್ತಾರೆ. ಅದು ಕೂಡ ತಪ್ಪಲ್ಲ. ಹಾಗೆ ಮನೆಯಿಂದ ಕೆಲಸ ಮಾಡಲಾಗದ ಕೆಲವರು ಪ್ರಯಾಣ ಮಾಡಲೇಬೇಕು! ಹೀಗಾಗಿ ಇದೂ ಕೂಡ ತಪ್ಪಲ್ಲ. ಪ್ರಧಾನಿಯವರು ಹೇಳಿದ್ದು ಸಾಧ್ಯವಾದರೆ ಎನ್ನುವ ಮಾತು, ಆದಷ್ಟೂ ಕಡಿಮೆ ಮಾಡಿ ಎನ್ನುವ ಮನವಿ. ಆದರೆ, ನಮ್ಮಲ್ಲಿ ಒಂದಷ್ಟು ಜನ ಮೋದಿಯವರು ಹೇಳಿದ್ದಕ್ಕೆಲ್ಲ ವಿರುದ್ಧ ಹೇಳಬೇಕು ಎನ್ನುವ ಹಪಹಪಿಗೆ ಬಿದ್ದಿರುವುದು ನೋಡಿದಾಗ ಇಂತಹವರಿಗೆ ಯಾವ ಮುಲಾಜು ತೋರಿಸದೆ ಹೆಡೆಮುರಿ ಕಟ್ಟಬೇಕು ಎನ್ನಿಸುತ್ತದೆ. ಆಗೆಲ್ಲಾ 'ಪ್ರಜಾಪ್ರಭುತ್ವ' ಇದಕ್ಕೆ ಅಡ್ಡಿ ಬರುತ್ತದೆ.

ಮಾನ್ಯ ಪ್ರಧಾನಿಗಳು ಹೀಗೆ ಹೇಳಲು ಕಾರಣವೇನು ಗೊತ್ತೇ? ಭಾರತೀಯ ರುಪಾಯಿ ಜಾಗತಿಕ ಮಟ್ಟದಲ್ಲಿ ಕುಸಿತವನ್ನು ಕಾಣುತ್ತಿದೆ. ಕೇವಲ ಮೂರು ತಿಂಗಳಲ್ಲಿ ಭಾರತ ಮೂವತ್ತು ಶತಕೋಟಿ ಅಮೆರಿಕನ್ ಡಾಲರ್ ಕಳೆದುಕೊಂಡಿದೆ. ಭಾರತೀಯ ರುಪಾಯಿ ಕುಸಿತವನ್ನು ತಪ್ಪಿಸಲು ನಮ್ಮ ಸೆಂಟ್ರಲ್ ಬ್ಯಾಂಕ್ ಅಂದರೆ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪ್ರಮುಖವಾಗಿ ಮೂರು ಹಂತದಲ್ಲಿ ಕಾರ್ಯಕ್ಕೆ ಇಳಿಯುತ್ತದೆ.

ಮೊದಲನೇಯದು ತನ್ನಲ್ಲಿರುವ ಡಾಲರ್ ರಿಸರ್ವ್ ಮಾರಾಟ ಮಾಡುವುದರ ಮೂಲಕ ಡಾಲರ್ ಮಾರುಕಟ್ಟೆಯಲ್ಲಿ ಹೆಚ್ಚು ಲಭ್ಯವಿರುವಂತೆ ನೋಡಿಕೊಳ್ಳುತ್ತದೆ. ಹೀಗಾಗಿ ಸಪ್ಲೈ ಹೆಚ್ಚಾಗುತ್ತದೆ. ಆಗ ಡಿಮ್ಯಾಂಡ್ ಕುಸಿತವಾಗುತ್ತದೆ. ಇದರ ಕಾರಣದಿಂದ ಡಾಲರ್ ಎದುರು ರುಪಾಯಿ ಚೇತರಿಕೆ ಕಾಣುತ್ತದೆ. ಕಳೆದ ಮೂರು ತಿಂಗಳಲ್ಲಿ ಆರ್‌ಬಿಐ ಮಾಡಿದ ಈ ಕೆಲಸದಿಂದ ನಮ್ಮ ಫಾರಿನ್ ರಿಸರ್ವ್ ಕಡಿಮೆ ಆಯ್ತು. ಆದರೆ ರುಪಾಯಿ ಮಾತ್ರ ಚೇತರಿಕೆ ಕಾಣಲಿಲ್ಲ.

ಎರಡನೇ ಹಂತದಲ್ಲಿ ದೊಡ್ಡ ದೊಡ್ಡ ಸಂಸ್ಥೆಗಳು, ಎನ್‌ಆರ್‌ಐಗಳು ಇತರೆ ಸಂಸ್ಥೆಗಳು ರುಪಾಯಿ ಕುಸಿತದ ಬಗ್ಗೆ ಟ್ರೇಡ್ ಮಾಡುವುದನ್ನು, ಹೆಡ್ಜ್ ಮಾಡುವುದನ್ನು ನಿಲ್ಲಿಸುತ್ತದೆ. ಇದರಿಂದ ಮಾರುಕಟ್ಟೆಯಲ್ಲಿ ಅಷ್ಟರಮಟ್ಟಿಗೆ ಏರಿಳಿತ ಕಡಿಮೆಯಾಗುತ್ತದೆ. ಇದರಲ್ಲೂ ಫಲಿತಾಂಶ ಸಿಗಲಿಲ್ಲ.

ಮೂರನೇಯದಾಗಿ ದೊಡ್ಡ ತೈಲ ಸಂಸ್ಥೆಗಳು ಸ್ಟಾಕ್ ಮಾರ್ಕೆಟಿನಲ್ಲಿ ಡಾಲರ್ ಕೊಳ್ಳುವುದಕ್ಕೆ ನಿರ್ಬಂಧವನ್ನು ಹೇರಲಾಗಿದೆ. ಇದರಿಂದ ಡಾಲರ್ ಡಿಮ್ಯಾಂಡ್ ಕುಸಿತವಾಗುತ್ತದೆ ಮತ್ತು ರುಪಾಯಿ ಚೇತರಿಕೆ ಕಾಣು ತ್ತದೆ. ಆದರೆ, ಈ ತೈಲ ಸಂಸ್ಥೆಗಳಿಗೆ ಲಿಕ್ವಿಡಿಟಿ ಸಮಸ್ಯೆಯಾಗುತ್ತದೆ. ಈ ಕಾರಣಕ್ಕೆ ಬ್ಯಾಂಕಿನಲ್ಲಿ ಇವರಿಗೆ ಪ್ರತ್ಯೇಕ ಕ್ರೆಡಿಟ್ ಲಿಮಿಟ್ ಸೃಷ್ಟಿಸಲಾಗಿದೆ. ಈ ಮೂರು ಅಂಶಗಳನ್ನು ಆರ್‌ಬಿಐ ಒಮ್ಮೆಲೇ ಬಳಸಿದ ಉದಾಹರಣೆ ಬಹಳ ಕಡಿಮೆ.

ಆದರೆ ಇವತ್ತಿಗೆ ಜಾಗತಿಕ ಕಚ್ಚಾ ತೈಲದ ಸಮಸ್ಯೆ ಅದೆಷ್ಟು ದೊಡ್ಡದಾಗಿದೆ ಎಂದರೆ ನೂರು ಲೀಟರ್ ಸಿಗುವ ಜಾಗದಲ್ಲಿ ಕೇವಲ ನಲವತ್ತು ಲೀಟರ್ ಮಾತ್ರ ಸಿಗುತ್ತಿದೆ. ಸಿಗುವ ಈ ಕಡಿಮೆ ತೈಲಕ್ಕೆ ಜಗತ್ತಿನಲ್ಲಿ ಹೊಡೆದಾಟ ಶುರುವಾಗಿದೆ. ಹೀಗಾಗಿ ತೈಲ ಬೆಲೆ ದಿನದಿಂದ ದಿನಕ್ಕೆ ಗಗನಕ್ಕೆ ಏರುತ್ತಿದೆ. ತೈಲವು ಡಾಲರಿನಲ್ಲಿ ಅಳೆಯಲಾಗುತ್ತದೆ. ಹೀಗಾಗಿ ಡಾಲರ್ ಬಲವರ್ಧನೆಯಾಗುತ್ತಿದೆ. ರುಪಾಯಿ ಸೊರಗುತ್ತಿದೆ. ಆರ್‌ಬಿಐ ತನ್ನ ಕೈಲಿರುವ ಎಲ್ಲ ಅಸ್ತ್ರಗಳನ್ನು ಬಳಸಿದರು ಕೂಡ ರುಪಾಯಿ ಕುಸಿತವನ್ನು ತಡೆಯಲಾಗದೆ ಕೊನೆಯ ಅಸ್ತ್ರವಾಗಿ ಪ್ರಧಾನಿಯವರ ವರ್ಚಸ್ಸನ್ನು ಬಳಸಿಕೊಳ್ಳಲು ಮುಂದಾಯ್ತು. ಈ ಕಾರಣದಿಂದ ಪ್ರಧಾನಿಯವರು ದೇಶದ ಜನರದಲ್ಲಿ ಸ್ವಲ್ಪ ಅಡ್ಜಸ್ಟ್ ಮಾಡಿಕೊಳ್ಳಿ ಎಂದು ಮನವಿ ಮಾಡಿದ್ದು.

ನಮ್ಮ ದೇಶದ ರುಪಾಯಿ ಬಲವರ್ಧನೆ ಆಗಬೇಕು ಎಂದರೆ ಹೊರಗಡೆಯಿಂದ ಬರುವ ಪದಾರ್ಥಗಳ ಮೇಲೆ ಅವಲಂಬನೆ ಕಡಿಮೆಯಾಗಬೇಕು. ನಮ್ಮ ದೇಶದ ಖಜಾನೆ ಖಾಲಿ ಮಾಡುವ ಮೂರು ಮುಖ್ಯ ಹೊರಗಿನಿಂದ ಆಮದಾಗುವ ವಸ್ತುಗಳಲ್ಲಿ ಪ್ರಥಮ ಸ್ಥಾನ ಕಚ್ಚಾ ತೈಲಕ್ಕೆ ಸಿಗುತ್ತದೆ. ಎರಡನೇಯದಾಗಿ ಚಿನ್ನ ಮತ್ತು ಮೂರನೇಯ ಸ್ಥಾನದಲ್ಲಿ ಅಡುಗೆ ಎಣ್ಣೆ ಕುಳಿತಿವೆ. ಈ ಮೂರು ಎಷ್ಟು ಸಾಧ್ಯವೋ ಅಷ್ಟು ಬಳಕೆ ಕಡಿಮೆ ಮಾಡಿದರೆ ಅಷ್ಟರ ಮಟ್ಟಿಗೆ ರುಪಾಯಿ ಬಲವನ್ನು ಪಡೆದುಕೊಳ್ಳುತ್ತದೆ. ಇದು ನಿಜವಾದ ಕಾರಣ, ಭಾರತದ ಸದ್ಯದ ಸನ್ನಿವೇಶ. ಇದನ್ನು ಅರಿತುಕೊಳ್ಳದೆ ಸುಮ್ಮನೆ ಅರಚಾಡುವ ಸ್ವಾತಂತ್ರ್ಯ ಕೊಡುವ ಪ್ರಜಾಪ್ರಭುತ್ವ ಏಕೆ ಬೇಕು? ಜಗತ್ತಿನ ಬೇರಾವ ದೇಶದಲ್ಲೂ ದೇಶದ ಒಳಿತಿಗೆ, ಉಳಿವಿಗಾಗಿ ಮನವಿ ಮಾಡಿದಾಗ ಈ ರೀತಿಯ ಅಪಸ್ವರಗಳು ಕೇಳಿ ಬರುವುದಿಲ್ಲ. ಇಷ್ಟೊಂದು ವಾಕ್ ಸ್ವಾತಂತ್ರ್ಯದ ಅವಶ್ಯಕತೆಯಿದೆಯೇ? ಪ್ರಜಾಪ್ರಭುತ್ವ ಬೇಕು ಆದರೆ ಅದರ ರೀತಿ ಖಂಡಿತ ಬದಲಾಗಬೇಕು!

ಎರಡನೇಯದಾಗಿ ಮಾನ್ಯ ಪ್ರಧಾನಿಗಳು ವಿದೇಶ ಪ್ರವಾಸ ಮಾಡಿದ್ದಾರೆ, ಅವರು ಮಾತ್ರ ವಿದೇಶ ಪ್ರವಾಸ ಮಾಡಬಹುದು ಅಂಟಿಗೆ ಚಾಕಲೇಟ್ ಕೊಡಬಹುದು ಜನ ಸಾಮಾನ್ಯ ಮಾತ್ರ ಮಾಡುವಂತಿಲ್ಲ ಎನ್ನುವ ವಿಚಿತ್ರ, ವಿತಂಡವಾದಗಳು ಕೇಳಿ ಬರುತ್ತಿವೆ. ಮೋದಿಯವರ ಇತ್ತೀಚಿನ UAE, ನೆದರ್‌ಲ್ಯಾಂಡ್, ಸ್ವೀಡನ್, ನಾರ್ವೆ ಮತ್ತು ಇಟಲಿ ಪ್ರವಾಸಗಳ ಕಾರಣ ಸರಿಸುಮಾರು 40 ಶತಕೋಟಿ ಅಮೆರಿಕನ್ ಡಾಲರ್ ಅಂದರೆ ಮೂರುವರೆ ಲಕ್ಷ ಕೋಟಿ ರುಪಾಯಿ ವಿದೇಶಿ ಬಂಡವಾಳ ಹರಿದು ಬರಲಿದೆ. ಜಾಗತಿಕ ವಿತ್ತ ಜಗತ್ತು ರಿಸೆಷನ್ ಕರಿನೆರಳಿಗೆ ತುತ್ತಾಗುವ ಸಂಭವವಿರುವ ಈ ಸಮಯದಲ್ಲಿ ಇದೆಷ್ಟು ದೊಡ್ಡ ಮೊತ್ತ ಎನ್ನುವ ಅರಿವಿಲ್ಲದ ತೀರಾ ಕೆಟ್ಟ ಕೊಳಕು ಮನಸ್ಸಿನ ಜನರು ಇದರಲ್ಲೂ ಹುಳುಕು ಹುಡುಕುವುದು, ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿ ಅವರಿಗೆ ಚಾಕಲೇಟ್ ನೀಡಿದಕ್ಕೆ ಕೆಟ್ಟ ಕೊಳಕು ಭಾಷೆ ಬಳಸುವುದು, ಇಲ್ಲ ಸಲ್ಲದ ಸಂಬಂಧ ಬೆಸೆಯುವುದು, ಟ್ರೋಲ್ ಮಾಡುವುದಕ್ಕೆ ಅವಕಾಶ ನೀಡುವ ಪ್ರಜಾಪ್ರಭುತ್ವ ಏಕೆ ಬೇಕು? ಸೋಶಿಯಲ್ ಮೀಡಿಯಾದಲ್ಲಿ ಯಾರ ಅಪ್ಪಣೆ ಬೇಡ ಎನ್ನುವ ಕಾರಣಕ್ಕೆ ಬೇಕಾಬಿಟ್ಟಿ ಚಿಂತನೆಗಳನ್ನು, ದಾರಿತಪ್ಪಿಸುವ ಅಂಕಿ-ಅಂಶಗಳನ್ನು ಹೇಳುವುದಕ್ಕೆ ಅಂಕುಶ ಹಾಕಲೇಬೇಕು. ನಮ್ಮದು ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ, ಆದರೆ ಈ ಪ್ರಜಾಪ್ರಭುತ್ವಕ್ಕೆ ಸರ್ಜರಿ ಬೇಕು. ಬದಲಾವಣೆ ಖಂಡಿತ ಬೇಕೇ ಬೇಕು.

ಮೂರನೇಯದಾಗಿ ಅದ್ಯಾವುದೂ ಕಾಕ್ರೋಚ್ ಪಾರ್ಟಿಯಂತೆ! ಸೋಶಿಯಲ್ ಮೀಡಿಯಾ ಬಳಸುವ ಪುಟಾಣಿ ಮಕ್ಕಳಿಗೂ ಹಣ ನೀಡಿ ಲೈಕು, ಫಾಲೋವರ್ಸ್ ಖರೀದಿ ಮಾಡಬಹುದು ಎನ್ನುವುದು ಗೊತ್ತಿದೆ. ಎರಡು ಮೂರು ದಿನದಲ್ಲಿ ನೂರಾರು ವರ್ಷಗಳ ಇತಿಹಾಸವಿರುವ ಪಾರ್ಟಿಗಳ ಹಿಂಬಾಲಕರಿಗಿಂತ ಹೆಚ್ಚು ಹಿಂಬಾಲಕರನ್ನು ಈ ಪಾರ್ಟಿ ಪಡೆದುಕೊಳ್ಳುತ್ತದೆ ಎಂದರೆ ಸಂಶಯ ಬಾರದೆ ಇರುತ್ತದೆಯೇ? ಸಂಶಯ ನಿಜ ಕೂಡ ಆಯ್ತು. ಇದನ್ನು ಹಿಂಬಾಲಿಸುವ ಅರ್ಧದಷ್ಟು ಜನ ಕಂಡು ಬಂದದ್ದು ಪಾಕಿಸ್ತಾನದಿಂದ ಎನ್ನುವುದು ಸಾಬೀತಾಗಿದೆ. ಆನ್ಲೈನ್ ಮೂಲಕ ಭಾರತದಲ್ಲಿ ಅರಾಜಕತೆ ಸೃಷ್ಟಿ ಮಾಡಬಹುದು ಎನ್ನುವ ಉದ್ಧಟತನ ತೋರಿಸಿದವರಿಗೆ



ಕಠಿಣ ಶಿಕ್ಷೆಯಾಗಬೇಕು. ಭಾರತ ಆ ರೀತಿಯ ದಂಗೆಗೆ ತುತ್ತಾಗಲು ನೇಪಾಳ, ಬಾಂಗ್ಲಾ ಅಥವಾ ಶ್ರೀಲಂಕಾವಲ್ಲ ಎನ್ನುವುದನ್ನು ಅವರಿಗೆ ಮನದಟ್ಟು ಮಾಡಿಸಬೇಕು. ಇವತ್ತು ಇವರು ಮಾಡಿದ ಹುಚ್ಚಾಟವನ್ನು ನಾಳೆ ಇನ್ನೊಬ್ಬರು ಮಾಡುವುದಿಲ್ಲ ಎನ್ನುವುದಕ್ಕೆ ಯಾವ ಗ್ಯಾರಂಟಿಯೂ ಇಲ್ಲ, ಎಲ್ಲವನ್ನೂ ಸಹಿಸಿ ಕೊಳ್ಳುವ ಪ್ರಜಾಪ್ರಭುತ್ವ ಬಹುಕಾಲ ಉಳಿಯುವುದಿಲ್ಲ. ಪ್ರಜಾಪ್ರಭುತ್ವ ನೀಡುವ ಅತಿಯಾದ ಸ್ವಾತಂತ್ರ್ಯವನ್ನು ಬಳಸಿಕೊಂಡು ಅದೇ ಪ್ರಜಾಪ್ರಭುತ್ವವನ್ನು ಉರುಳಿಸುವ ಹುನ್ನಾರಗಳು ನಡೆಯುತ್ತವೆ. ಅವರ ಉದ್ದೇಶವೇ ಭಾರತದಲ್ಲಿ ಅರಾಜಕತೆ ಸೃಷ್ಟಿಸುವುದು. ಇಂತಹ ಪ್ರಚೋದನೆಗಳಿಗೆ ಅವಕಾಶ ನೀಡುವ ಪ್ರಜಾಪ್ರಭುತ್ವ ಏಕೆ ಬೇಕು? ಈಗಿರುವ ಪ್ರಜಾಪ್ರಭುತ್ವದಲ್ಲಿ ದೊಡ್ಡ ಅಂದರೆ ಅತಿ ದೊಡ್ಡ ಬದಲಾವಣೆ ಖಂಡಿತ ಅವಶ್ಯವಿದೆ.

ಕೊನೆಯದಾಗಿ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಪ್ರಜಾಪ್ರಭುತ್ವದಲ್ಲಿರುವ ಅತಿ ದೊಡ್ಡ ದೋಷದ ಬಗ್ಗೆ ಮಾತಾಡೋಣ.

ಇವತ್ತಿಗೆ ಯೂರೋಪಿನ ಬಹಳಷ್ಟು ದೇಶಗಳು ಕೂಡ ಈ ದೋಷದ ಕಾರಣ ನಲುಗುತ್ತಿವೆ. ಪ್ರಜಾಪ್ರಭುತ್ವವಿರುವ ಎಲ್ಲ ದೇಶಗಳ ಹಣೆಬರಹವಿದು. ಪ್ರಜಾಪ್ರಭುತ್ವದಲ್ಲಿ ಸಂಖ್ಯೆಗೆ ಅತಿ ಹೆಚ್ಚು ಮಹತ್ವವನ್ನು ನೀಡಲಾಗುತ್ತದೆ. ಮೆಜಾರಿಟಿ ವೋಟು ಯಾರಿಗೆ ಸಿಗುತ್ತದೆ ಅವರಿಗೆ ಅಧಿಕಾರ ಸಿಗುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಕಡ್ಡಾಯವಾಗಿ ವೋಟ್ ಮಾಡಬೇಕು ಎನ್ನುವ ಕಾನೂನು ಇಲ್ಲದೆ ಇರುವುದು ಅತಿ ದೊಡ್ಡ ದೋಷ. ಈ ಕಾರಣದಿಂದ ವೋಟ್ ಮಾಡುವ ಜನ, ವೋಟ್ ಮಾಡದೆ ಇರುವ ಜನರ ಹಣೆಬರಹವನ್ನು ಬರೆಯುವ ಹಂತಕ್ಕೆ ಬೆಳೆದಿದ್ದಾರೆ. ಸಂಖ್ಯೆ ಮುಖ್ಯ ಎಂದಾದ ಮೇಲೆ ಒಂದು ವರ್ಗದ ಜನ ತಮ್ಮ ಸಂಖ್ಯೆಯನ್ನು ಹೆಚ್ಚು ಮಾಡಿಕೊಳ್ಳುತ್ತ ಹೋಗುತ್ತಾರೆ.

ಅವರ ವೋಟು ಇಲ್ಲದೆ ಯಾರೊಬ್ಬರೂ ಗೆಲ್ಲಲು ಸಾಧ್ಯವಿಲ್ಲ ಎಂದಾದಾಗ ಏನಾಗುತ್ತದೆ? ಓಲೈಕೆ ರಾಜಕಾರಣ ಶುರುವಾಗುತ್ತದೆ. ಇಂಗ್ಲೆಂಡ್, ಜರ್ಮನಿ ಸಹಿತ ಯೂರೋಪಿನಲ್ಲಿ ಕೂಡ ಓಲೈಕೆ ರಾಜಕಾರಣ ಶುರುವಾಗಿದೆ. ಭಾರತದ ವಿಚಾರದಲ್ಲಿ ಇದು ದಶಕಗಳಿಂದ ಆಗುತ್ತಾ ಬರುತ್ತಿದೆ. ಭಾರತೀಯರನ್ನು ನೋಡಿ ನಗುತ್ತಿದ್ದ ಅಥವಾ ಅದು ಭಾರತದ ಸಮಸ್ಯೆ ಎನ್ನುವಂತೆ ನೋಡುತ್ತಿದ್ದ ಪಾಶ್ಚಾತ್ಯರಿಗೆ ಈಗ ಬಿಸಿ ತಟ್ಟುತ್ತಿದೆ.

ಎಲ್ಲರಿಗೂ ಒಂದು ವೋಟು ಎನ್ನುವುದು ಪ್ರಜಾಪ್ರಭುತ್ವದ ಇನ್ನೊಂದು ಅತಿ ದೊಡ್ಡ ದೋಷ. ಎಲ್ಲರೂ ಸಮಾನರು ಎನ್ನುವುದು ಸುಂದರ ಕಲ್ಪನೆ. ಆದರೆ, ಅನುಷ್ಠಾನಕ್ಕೆ ತರಲಾಗದ ಕಲ್ಪನೆ. ಆದರೆ ಇದನ್ನು ಅಸ್ತ್ರವನ್ನಾಗಿ ಬಳಸಿಕೊಂಡು ಡೆಮಾಕ್ರಸಿಯ ಆಶಯವನ್ನು ಬುಡಮೇಲು ಮಾಡಲು ಹೊರಟ ದುಷ್ಟ ಶಕ್ತಿಗಳಿಗೆ ಕಡಿವಾಣ ಹಾಕಬೇಕು ಎಂದರೆ ನಮ್ಮ ಇವತ್ತಿನ ಡೆಮಾಕ್ರಸಿಯ ರೂಪ ಬದಲಾಗಬೇಕು.

ನೂರಾರು, ಸಾವಿರಾರು ಜನರಿಗೆ ಉದ್ಯೋಗ ಕೊಟ್ಟಿರುವ ಉದ್ಯಮಪತಿಗೂ ಒಂದೇ ವೋಟು, ಜೀವ ಉಳಿಸುವ ವೈದ್ಯನಿಗೂ, ಜೀವತೆಗೆಯುವ ಕಿಡಿಕೇಡಿಗೂ ಒಂದೇ ವೋಟು! ಇದ್ಯಾವ ನ್ಯಾಯ? ಲಕ್ಷಾಂತರ ರುಪಾಯಿ ತೆರಿಗೆ ಕಟ್ಟುವವರಿಗೂ, ಯಾವ ತೆರಿಗೆ ಕಟ್ಟದೆ ಸರಕಾರದ ಹಣದಲ್ಲಿ ಬದುಕುವವರಿಗೂ ಒಂದೇ ವೋಟು ಇದು ಯಾವ ನ್ಯಾಯ? ನಮ್ಮ ಡೆಮಾಕ್ರಸಿಗೆ ಮೇಜರ್ ಸರ್ಜರಿ ಬೇಕಿದೆ. ಇದ್ಯಾವುದೂ ಓಬಿರಾಯನ ಕಾಲದ ನೀತಿಗಳನ್ನು ಇಟ್ಟುಕೊಂಡು ವೇಗವಾಗಿ ಬದಲಾದ ಇವತ್ತಿನ ಕಾಲಘಟ್ಟದಲ್ಲಿ ಬದುಕುವುದು ಸಾಧ್ಯವಿಲ್ಲ. ಅವರವರ ಯೋಗ್ಯತೆಗೆ ಅನುಗುಣವಾಗಿ ವೇತನ ನೀಡುವುದು ಸರಿಯಾದರೆ, ಯೋಗ್ಯತೆಗೆ ತಕ್ಕಂತೆ ಸೋಶಿಯಲ್ ಪಾಯಿಂಟ್ ಸಿಸ್ಟಮ್ ಏಕೆ ಜಾರಿಗೆ ತರಬಾರದು? ಅವರವರ ಪಾಯಿಂಟಿಗೆ ತಕ್ಕಂತೆ ವೋಟಿಂಗ್ ರೈಟ್ ಕೂಡ ಜಾರಿಗೆ ಬರಲಿ. ಅದು ಕೇವಲ ಹಣದ ಆಧಾರದ ಮೇಲೆ ಆಗದೆ ಒಳ್ಳೆಯ ಗುಣ, ನಡೆತೆಗೂ ಒಂದಷ್ಟು ಪಾಯಿಂಟ್ ನೀಡಲಿ. ಇಷ್ಟು ಪಾಯಿಂಟ್ ಪಡೆದುಕೊಂಡವರಿಗೆ ಮಾತ್ರ ವೋಟಿಂಗ್ ರೈಟ್ ಎನ್ನಿ. ಇಲ್ಲವೇ ಪ್ರತಿ ನೂರು ಪಾಯಿಂಟಿಗೆ ಒಂದು ವೋಟ್ ಎನ್ನಿ.

ಪ್ರಜಾಪ್ರಭುತ್ವದಲ್ಲಿ ಬಹಳಷ್ಟು ಲೋಪದೋಷವಿದೆ. ಅದರಲ್ಲಿ ಅತ್ಯಂತ ದೊಡ್ಡದು ಎಲ್ಲರಿಗೂ ಒಂದು ವೋಟು ಎನ್ನುವುದು. ರಾಜಕೀಯ ಪಕ್ಷಗಳಿಗೆ, ನೇತಾರರಿಗೆ ಬೇಕಿರುವುದು ಕೇವಲ ಅಧಿಕಾರ ಮಾತ್ರ. ಅದನ್ನು ಪಡೆಯಲು ಅವರು ಓಲೈಕೆಗೆ ಇಳಿಯುತ್ತಾರೆ. ಇವತ್ತಿನ ಪ್ರಜಾಪ್ರಭುತ್ವ ಹೇಗಿದೆ ಎಂದರೆ ಹಗಲು-ರಾತ್ರಿ, ಒಳ್ಳೆಯವರು-ಕೆಟ್ಟವರು ಎಲ್ಲರೂ ಒಂದೇ ಎನ್ನುವಂತಿದೆ. ಎಲ್ಲರೂ ಒಂದೇ ಅಲ್ಲ ಎನ್ನುವುದನ್ನು ಹೇಳುವುದಕ್ಕೆ ಇದಕ್ಕಿಂತ ಉತ್ತಮ ಸಮಯ ಬೇರಾವುದಿದೆ?

ಒದುಗರ ಒಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ರಾಜ ತಾಂತ್ರಿಕತೆಯ 'ಮೆಲೋಡಿ' ಮತ್ತು ರಾಜಕಾರಣದ ಅಪಸ್ವರ!

ಕಿರಣ ಉಪಾಧ್ಯಾಯ ಅವರ ವಿದೇಶವಾಸಿ ಅಂಕಣದಲ್ಲಿ ಮೆಲೋಡಿ ಕೊಟ್ಟಿದ್ದಕ್ಕೆ ಹೀಗೆ, ಇನ್ನು ಅದನ್ನು ಕೊಟ್ಟಿದ್ದರೆ? ಎನ್ನುವ ತಲೆಬರಹದ ಅಡಿಯಲ್ಲಿ ಪ್ರಕಟವಾದ ಲೇಖನ ತುಂಬಾ ಮಾರ್ಮಿಕವಾಗಿ ಮೂಡಿ ಬಂದಿದೆ. ನಮ್ಮ ಪ್ರಧಾನಿ ಮೋದಿಯವರು ತಮ್ಮ ಇತ್ತೀಚಿನ ಇಟಲಿ ಪ್ರವಾಸದಲ್ಲಿ ಅಲ್ಲಿಯ ಪ್ರಧಾನಿ ಜಾರ್ಜಿಯಾ ಮೆಲೋನಿಯವರನ್ನು ಭೇಟಿಯಾದಾಗ ಕೆಲವು ಉಡುಗೊರೆಗಳೊಂದಿಗೆ ಪಾರ್ಲೆ ಕಂಪನಿಯ ಮೆಲೋಡಿ



ಚಾಕಲೇಟ್ ಸಹ ಉಡುಗೊರೆಯಾಗಿ ಕೊಟ್ಟರು. ಈ ಭೇಟಿಯಲ್ಲಿ ಎರಡೂ ದೇಶಗಳ ನಡುವೆ ಸುಮಾರು 15 ಒಪ್ಪಂದಗಳಾದವು. ಇದೊಂದು ಫಲಪ್ರದ ಭೇಟಿ. ಆದರೆ, ಕೆಲವು ರಾಜಕಾರಣಿಗಳಿಗೆ ಇದಾವುದೂ ಮುಖ್ಯವಾಗದೇ ಕೇವಲ ಮೆಲೋಡಿ ಚಾಕ್ಲೇಟ್ ಕೊಟ್ಟಿದ್ದೆ ಒಂದು ಅಪರಾಧ ಎಂಬಂತೆ ಬಿಂಬಿತವಾಯಿತು. ಅದನ್ನೇ ಇಟ್ಟುಕೊಂಡು ಕರ್ನಾಟಕದ ರಾಜಕಾರಣಿಯೊಬ್ಬರು ದೇಶದ ಪ್ರಧಾನಿಯನ್ನು 75 ವರ್ಷದ ಮುದುಕ ಎಂದು ಸಂಬೋಧಿಸಿ ಲಘುವಾಗಿ ಮಾತನಾಡಿರುವುದು ರಾಜಕೀಯದ ಸೌಜನ್ಯದ ಎಲ್ಲೆಗಳನ್ನು ಮೀರಿ ನಿಲ್ಲುತ್ತದೆ. ತಮ್ಮ ಅಂಕಣದಲ್ಲಿ ಲೇಖಕರು ಪಾರ್ಲೆ ಕಂಪನಿಯ ಹುಟ್ಟು ಹಾಗೂ ಮೋದಿ - ಮೇಲೋನಿಯವರ ರಾಜಕೀಯದಲ್ಲಿ ಕಷ್ಟಪಟ್ಟು ನಡೆದು ಬಂದ ದಾರಿ ಎಲ್ಲವನ್ನೂ ವಿವರಿಸಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ದೇಶದ ಘನತೆಯನ್ನು ಎತ್ತಿಹಿಡಿಯುವ ಇಂತಹ ಭೇಟಿಗಳನ್ನು ಮತ್ತು ಅಲ್ಲಿನ ಹಾಸ್ಯ ಪ್ರಸಂಗಗಳನ್ನು ರಾಜತಾಂತ್ರಿಕ ನವಿರೇಳುತನದಿಂದ ನೋಡಬೇಕೇ ವಿನಃ, ವೈಯಕ್ತಿಕ ನಿಂದನೆಗೆ ಬಳಸಿಕೊಳ್ಳುವುದು ಸರಿಯಲ್ಲ. ರಾಜಕೀಯ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಏನೇ ಇರಲಿ, ವಯಸ್ಸು ಮತ್ತು ವ್ಯಕ್ತಿತ್ವವನ್ನು ಗುರಿಯಾಗಿಸಿ ಮಾತನಾಡುವುದು ನಮ್ಮ ರಾಜಕೀಯ ಸಂಸ್ಕೃತಿಯ ಅವನತಿಯನ್ನು ತೋರಿಸುತ್ತದೆ. ಸಾಮಾಜಿಕ ಜಾಲತಾಣಗಳ 'ಮೆಲೋಡಿ' ಟ್ರೋಲ್‌ಗಳಲ್ಲಿ ಒಂದು ಮುಗ್ಧ ನಗುವಿದೆ. ಆದರೆ, ನಮ್ಮ ರಾಜಕಾರಣಿಗಳ ಹೇಳಿಕೆಗಳಲ್ಲಿ ಕೇವಲ ಕಹಿ ಮತ್ತು ಅಸೂಯೆ ಎದ್ದು ಕಾಣುತ್ತದೆ. ಜಾಗತಿಕ ವೇದಿಕೆಯಲ್ಲಿ ಭಾರತದ ವರ್ಚಸ್ಸು ವೃದ್ಧಿಯಾಗುತ್ತಿರುವುದನ್ನು ಅರಗಿಸಿಕೊಳ್ಳಲಾಗದೆ ಇಂತಹ ಲಘು ಹೇಳಿಕೆಗಳನ್ನು ನೀಡುವುದು ದುರದೃಷ್ಟಕರ. ವಿಷಯದ ಸಿಹಿ-ಕಹಿ ಎರಡೂ ಮುಖಗಳನ್ನು ಓದುಗರಿಗೆ ತಲುಪಿಸಿದ ಅಂಕಣಕಾರರಿಗೆ ಹಾಗೂ ಇದನ್ನು ಪ್ರಕಟಿಸಿದ ವಿಶ್ವವಾಣಿಗೆ ಧನ್ಯವಾದಗಳು.

- ಬಾಲಚಂದ್ರ ಹೆಗಡೆ, ಬೆಂಗಳೂರು

ಮೂವತ್ತಮೂರರ ಮಹಾತ್ಮೆಯ ಲೇಖನ ಶ್ಲಾಘನೀಯ

ಪತ್ರಿಕೆಯಲ್ಲಿ ಶ್ರೀವತ್ಸ ಜೋಶಿ ಅವರು ಮೂವತ್ತಮೂರರ ಮಹಾತ್ಮೆಯನ್ನು ತಮ್ಮ ತಳಿರು ತೋರಣ ಅಂಕಣದಲ್ಲಿ ಬಹಳ ವಿಸ್ತೃತವಾಗಿ ತಿಳಿಸಿದ್ದಾರೆ. ಹಿಂದೂ ಪಂಚಾಂಗದ ಪ್ರಕಾರ ಸರಾಸರಿ 33 ತಿಂಗಳಿಗೊಮ್ಮೆ ಆಗಮಿಸುವ ಈ 'ಅಧಿಕ ಮಾಸದ' ಶಾಸ್ತ್ರೀಯ ಉಗಮ, ಅದರ ಹಿಂದಿನ ವೈಜ್ಞಾನಿಕ ಕಾರಣ, ಮಹತ್ವ, ಎಲ್ಲವನ್ನೂ ಇಂದಿನ ನಮ್ಮ ಪೀಳಿಗೆಗೆ ತಿಳಿಯುವಂತೆ ಹೇಳಿದ್ದಾರೆ. ಅಂತೆಯೇ, ಈ ಅಧಿಕ ಮಾಸ ಬಂದಾಗ ನಾವು ಕೊಡುವ ದಾನ, ಅದರ ಫಲ, ಅದರಲ್ಲಿ ಇರಬೇಕಾದ ಪದಾರ್ಥಗಳ ಪಟ್ಟಿ, ಯಾವ ಸತ್ಪಾತ್ರರಿಗೆ ಅದನ್ನು ಕೊಡಬೇಕು ಎಂಬೆಲ್ಲ ವಿವರಗಳನ್ನು ತಿಳಿಸಿದ್ದಾರೆ. ಈ 33ರ ಮಹಾತ್ಮೆಯನ್ನು ಇಷ್ಟೊಂದು ಶಾಸ್ತ್ರೋಕ್ತವಾಗಿ, ಅತ್ಯಂತ ಸರಳ ಭಾಷೆಯಲ್ಲಿ ಬರೆದು ಹೇಳಿದ ಲೇಖಕರಿಗೆ ಹಾಗೆಯೇ ಪ್ರಕಟಿಸಿದ ಪತ್ರಿಕೆಗೆ ಧನ್ಯವಾದಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಒದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ದೂರಶಿಕ್ಷಣ ನಕಲಿಗೆ ಮುಕ್ತವಾಗದಿರಲಿ

ಮುಕ್ತಶಿಕ್ಷಣ
ತುರುವೇಕೆರೆ ಪ್ರಸಾದ್
vveditoped@gmail.com

ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ನೀಡಿರುವ ದೂರಶಿಕ್ಷಣದ ಮೂಲಕ ಪದವಿ ಪಡೆಯುವ ಏಕಮೇವ ಸೌಲಭ್ಯ ಹಾಗೂ ಮಾನ್ಯತೆಯನ್ನು ಇತರೆ ಎಲ್ಲಾ ವಿಶ್ವವಿದ್ಯಾಲಯಗಳಿಗೆ ವಿಸ್ತರಿಸುವುದಾಗಿ ಹೇಳಿದೆ. ರಾಜ್ಯ ಮುಕ್ತ ವಿವಿ ಆಡಳಿತ ಮತ್ತು ಸರ್ಕಾರದ ಸಂಘರ್ಷದ ಹಿನ್ನಲೆಯಲ್ಲಿ ಸರ್ಕಾರ ಈ ಕ್ರಮಕ್ಕೆ ಮುಂದಾಗಿರುವುದಾಗಿ ತಿಳಿದುಬಂದಿದೆ. ಇದಕ್ಕೆ ಸರ್ಕಾರ ನೀಡಿರುವ ಕಾರಣ ಇತರೆ ವಿಶ್ವವಿದ್ಯಾಲಯಗಳಿಗೆ ಪೂರಕ ಅನುದಾನ ನೀಡಲು ಸಾಧ್ಯವಾಗದಿರುವುದು! ಸರ್ಕಾರ ದುಡುಕಿ ಸೇಡಿನ ಕ್ರಮ ಕೈಗೊಳ್ಳುವ ಮುಂಚೆ, ಮತ್ತೆ ಹಿಂದಿನ ವ್ಯವಸ್ಥೆಗೆ ಮರಳುವ ಮುನ್ನ ಇದರ ಸಾಧಕ ಬಾಧಕಗಳ ಬಗ್ಗೆ ಶಿಕ್ಷಣ ತಜ್ಞರೊಂದಿಗೆ ಚರ್ಚಿಸಿ ಒಂದು ತೀರ್ಮಾನಕ್ಕೆ ಬರುವುದು ಒಳ್ಳೆಯದು ಎನಿಸುತ್ತದೆ.

ಕರಾಮುವಿ ಹೊರತುಪಡಿಸಿ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ (ಎಲ್ಲವೂ ಅಲ್ಲದಿರಬಹುದು) ದೂರ ಶಿಕ್ಷಣದ ಗುಣಮಟ್ಟ, ಪರೀಕ್ಷಾ ಕ್ರಮ, ಫಲಿತಾಂಶ ಪ್ರಕಟಣೆ ಈ ಎಲ್ಲಾ ಪ್ರಕ್ರಿಯೆಗಳು ಅದೆಷ್ಟು ಹದಗೆಟ್ಟಿದ್ದವು ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ನೆನಪಿಸಿಕೊಳ್ಳಬೇಕಿದೆ. ಅದೊಂದು ಪದವಿಯನ್ನು ಹರಾಜು ಹಾಕುವ ದಂಧೆಯಾಗಿ ಹೋಗಿತ್ತು. ವಿಶ್ವವಿದ್ಯಾಲಯದ ಸ್ಟಡಿ ಸೆಂಟರ್‌ಗಳು ಕಮಿಶನ್ ಏಜೆಂಟ್‌ಗಳಿಗಿಂತ ಕಡೆಯಾಗಿದ್ದವು. ಇನ್ನು ಪರೀಕ್ಷಾ ಕೇಂದ್ರಗಳ ಬಗ್ಗೆಯಂತೂ ಹೇಳುವುದೇ ಬೇಡ. ಅಸಹ್ಯ ಮೂಡುವಷ್ಟು ಅವ್ಯವಹಾರಗಳು ನಡೆಯುತ್ತಿದ್ದವು. ವಿಶ್ವವಿದ್ಯಾಲಯಗಳ ಪರೀಕ್ಷಾ ಕೇಂದ್ರಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಶಿಸ್ತು ಮತ್ತು ಪರೀಕ್ಷಾ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಇತರೆ ಊರುಗಳ ಎಷ್ಟೋ ಪರೀಕ್ಷಾ ಕೇಂದ್ರಗಳು ಎಲ್ಲಾ ನಿಯಮ, ಮೌಲ್ಯಗಳನ್ನು ಗಾಳಿಗೆ ತೂರಿ ಪದವಿಗಳನ್ನು ಅಗ್ಗಕ್ಕೆ ಮಾರುವ ಗೂಡಂಗಡಿಗಳಾಗಿದ್ದವು. ಇಲ್ಲಿ ಮೂರು ಹಂತದ ಸುಲಿಗೆ ನಡೆಯುತ್ತಿತ್ತು. ಪರೀಕ್ಷಾ ಕೇಂದ್ರದಲ್ಲಿ ನೊಂದಣಿ ಮಾಡಿಕೊಂಡಾಗ, ಪ್ರವೇಶ ಪತ್ರ ಬಂದಾಗ ಮತ್ತು ಫಲಿತಾಂಶ ಬಂದಾಗ- ಹೀಗೆ ಮೂರು ಕೊಕ್ಕೆಯಲ್ಲಿ ವಿದ್ಯಾರ್ಥಿಗಳನ್ನು ಸಿಕ್ಕಿಸಿ ಸಾವಿರಗಟ್ಟಲೆ ದುಡ್ಡು ಕೀಳುತ್ತಿದ್ದರು. ಒಟ್ಟಾರೆ ಈ ಮೊತ್ತ ಕೆಲವೊಮ್ಮೆ ರೂ.25,000 ಮೀರಿದ್ದೂ ಉಂಟು. ಈ ಪರೀಕ್ಷಾ ಕೇಂದ್ರಗಳಲ್ಲಿ ಯಾವುದೇ ಎಗ್ಗಿಲ್ಲದೆ ರಾಜಾರೋಷವಾಗಿ ಕಾಪಿ ಹೊಡೆಯಲು ಅವಕಾಶ ನೀಡಲಾಗುತ್ತಿತ್ತು. ಪರೀಕ್ಷಾ ಕೇಂದ್ರದೊಳಗೆ ಮತ್ತು ಕೊಠಡಿಗಳೊಳಗೆ ಮೊಬೈಲ್, ಬೋಧನ ಸಾಮಾಗ್ರಿ, ನೋಟ್ಸ್ ತೆಗೆದುಕೊಂಡು ಹೋಗಲು ಅವಕಾಶ ನೀಡಲಾಗುತ್ತಿತ್ತು. ಪರೀಕ್ಷಾರ್ಥಿಗಳು ಪರಸ್ಪರ ಮಾತಾಡಿಕೊಂಡು, ಚರ್ಚಿಸಿಕೊಂಡು ಪುಸ್ತಕದಲ್ಲಿ ಸಿಗದಿದ್ದರೆ ಗೂಗಲ್ ಸರ್ಚ್ ಮಾಡಿ ಉತ್ತರ ಹುಡುಕಿ ಬರೆಯುತ್ತಿದ್ದರು. ಪರೀಕ್ಷಾ ಮೇಲ್ವಿಚಾರಕರು ಹುಡುಗರನ್ನು ಕಾಯುತ್ತಿರಲಿಲ್ಲ, ಆಚೆ ಕಡೆ ಜಾಗೃತದಳದವರು ಬಂದಾರೆಯೇ ಎಂದು ನೋಡಲು ಬಾಗಿಲು ಕಾಯುತ್ತಿದ್ದರು. ಅಪ್ಪಿತಪ್ಪಿ ಜಾಗೃತದಳದವರೇನಾದರೂ ಬಂದರೆ ಕಾಪಿ ಹೊಡೆಯುತ್ತಿದ್ದ ವಿದ್ಯಾರ್ಥಿಗಳನ್ನು ಎಚ್ಚರಿಸುತ್ತಿದ್ದರು. ಇನ್ನು ಬಹುತೇಕ ಜಾಗೃತದಳದ ಸದಸ್ಯರೂ ಅಷ್ಟೇ, ಯಾವ ಕೋಣೆಯಲ್ಲೂ ಕಣ್ ಹಾಯಿಸದೆ ಕಚೇರಿಯಲ್ಲೇ ಕುಳಿತು ತಿಂಡಿ, ಕಾಫಿ, ಬಕ್ಷೀಸು ಸ್ವೀಕರಿಸಿ ಹಾಗೇ ಹೊರಟುಹೋಗುತ್ತಿದ್ದರು.

ವಿಪರ್ಯಾಸದ ಸಂಗತಿಯೆಂದರೆ ಈ ಕಾಪಿಚಟ್ ಪರೀಕ್ಷಾ ಕೇಂದ್ರಗಳಲ್ಲಿ ಪಾಸಾಗಲು ಯಾರೂ ಬರುತ್ತಿರಲಿಲ್ಲ. ಎಲ್ಲಾ ಶೇ.55 ಮೀರಿ ಅಂಕ ಗಳಿಸಿ ದೊಡ್ಡ ದೊಡ್ಡ ಹುದ್ದೆ ಗಿಟ್ಟಿಸಬೇಕೆಂಬ ಆಕಾಂಕ್ಷೆಯುಳ್ಳವರೇ! ಎಲ್ಲಾ ವಿಷಯಗಳಲ್ಲೂ ಆಂತರಿಕ ಮೌಲ್ಯಮಾಪನಕ್ಕೆಂದೇ 20-30 ಅಂಕಗಳಿರುತ್ತಿದ್ದವು. ಇದನ್ನು ವಿದ್ಯಾರ್ಥಿಗಳು ಮನೆಯಲ್ಲೇ ಕೂತು ಬರೆದು ಕಳಿಸುತ್ತಿದ್ದರು. ಇಲ್ಲೂ ಅವ್ಯವಹಾರ, ವಶೀಲುಬಾಜಿ. ವಿವಿ ಸಿಬ್ಬಂದಿ, ಪ್ರಾಧ್ಯಾಪಕರೇ ಪ್ರತಿಭಾವಂತ ವಿದ್ಯಾರ್ಥಿಗಳಿಂದ ಉತ್ತರ ಬರೆಸಿ ಮಿಕ್ಕವರಿಗೆ ದುಡ್ಡಿಗೆ ಮಾರಿಕೊಳ್ಳುತ್ತಿದ್ದರು.(ನನಗೆ ಗೊತ್ತಿರುವಂತೆ ಬೆಂಗಳೂರು ವಿಶ್ವವಿದ್ಯಾಲಯ ಇದಕ್ಕೆ ಅಪವಾದವಾಗಿತ್ತು. 2013-14ನೇ ಸಾಲಿನಲ್ಲೂ ಅಲ್ಲಿ ಈ ಆಂತರಿಕ ಅಂಕಗಳಿಗೂ ಚಿಕ್ಕದೊಂದು ಪರೀಕ್ಷೆಯನ್ನು ನೇರವಾಗಿ ಸೆಂಟ್ರಲ್ ಕಾಲೇಜಿಗೆ ಬಂದು ಬರೆಯಬೇಕಿತ್ತು. ಅಲ್ಲಿನ ವಿದ್ಯಾರ್ಥಿಯಾಗಿದ್ದ ನನಗೆ ಅಲ್ಲಿ ಯಾವ ವಶೀಲಿಬಾಜಿಯೂ ನಡೆದದ್ದು ಗಮನಕ್ಕೆ ಬಂದಿಲ್ಲ. ಪರೀಕ್ಷೆಗಳು ಶಿಸ್ತುಬದ್ಧವಾಗಿ ನಡೆಯುತ್ತಿದ್ದವು). ಆಂತರಿಕ ಮೌಲ್ಯಮಾಪನದಲ್ಲಿ ಬಹುತೇಕ ಎಲ್ಲರಿಗೂ ಗರಿಷ್ಠ ಅಂಕ ಸಿಕ್ಕೇ ಸಿಗುತ್ತಿತ್ತು. ಇನ್ನು ಪ್ರಥಮ ದರ್ಜೆಗೆ ಬೇಕಾದ ಉಳಿದ 30-35 ಅಂಕಗಳಿಗಾಗಿ ವಿದ್ಯಾರ್ಥಿಗಳು ಈ ನಕಲು ಪರೀಕ್ಷಾಕೇಂದ್ರಗಳ ಮೊರೆ ಹೋಗುತ್ತಿದ್ದರು. ಕಲೆ, ವಾಣಿಜ್ಯ ವಿಷಯಗಳಿರಲಿ ಅನ್ವಯಿಕ ವಿಜ್ಞಾನ ವಿಷಯಗಳಾದ ಭೌತಶಾಸ್ತ್ರ, ಜೀವಶಾಸ್ತ್ರ, ರಸಾಯನ ಶಾಸ್ತ್ರ, ಕಂಪ್ಯೂಟರ್ ವಿಜ್ಞಾನ, ಗಣಿತಶಾಸ್ತ್ರ, ಸ್ನಾತಕೋತ್ತರ ಪರೀಕ್ಷೆಯಲ್ಲೂ ಕಾಪಿ ಹೊಡೆಸಿದರೆ ಶಿಕ್ಷಣದ ಗುಣಮಟ್ಟ ಏನಾಗಬಹುದು? ಈ ರೀತಿ ಶಿಕ್ಷಣದ ಮೌಲ್ಯ, ಶ್ರಮ ಗೊತ್ತಿಲ್ಲದೆ ಕಾಸಿಗೆ ಪದವಿ ಪಡೆದವರೇ ಬಹುಶಃ ಮುಂದೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲೂ ಓಎಂಆರ್ ಶೀಟ್ ತಿದ್ದುವುದರಿಂದ ಹಿಡಿದು ಎಲ್ಲಾ ಪರೀಕ್ಷಾ ಅವ್ಯವಹಾರಗಳಲ್ಲಿ ಭಾಗಿಯಾಗಿರಬಹುದು. ಅವರಲ್ಲಿ ಎಷ್ಟು ಜನ ಪ್ರೊಫೆಸರ್‌ಗಳಾಗಿ ನಮ್ಮ ಮಕ್ಕಳಿಗೆ ಅನ್ವಯಿಕ ವಿಜ್ಞಾನ ಇಲ್ಲವೇ ನೈತಿಕ ಶಿಕ್ಷಣದ ಶಂಖ ಊದುತ್ತಿದ್ದಾರೋ ದೇವರೇ ಬಲ್ಲ!

ದೂರಶಿಕ್ಷಣದ ಉದ್ದೇಶ ನೇರವಾಗಿ ವಿವಿಗಳಲ್ಲಿ ದಾಖಲಾಗಿ ಓದು ಮುಂದುವರೆಸಲಾಗದವರು ಪದವಿ ಪಡೆಯಲು, ಉದ್ಯೋಗದಲ್ಲಿರುವವರು ತಮ್ಮ ಶೈಕ್ಷಣಿಕ ಅರ್ಹತೆಯನ್ನು ಹೆಚ್ಚಿಸಿಕೊಳ್ಳಲು ನೆರವಾಗುವುದೇ ಆಗಿದೆ. ಹಿಂದೆಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಕಡಿಮೆ ಇದ್ದಾಗ ದೂರದೂರಿಗೆ ಹೋಗಿ ಓದಲಾಗದ ಅಸಹಾಯಕತೆಗೆ ಹಾಗೂ ಚಿಕ್ಕವಯಸ್ಸಿನಲ್ಲೇ ಮದುವೆಯಾಗಿ ಸಂಸಾರದ ಜವಾಬ್ದಾರಿಗೆ ಸಿಕ್ಕಿಕೊಳ್ಳುವ ಹೆಣ್ಣುಮಕ್ಕಳಿಗೆ ಇದೊಂದು ನಿಜಕ್ಕೂ ವರವಾಗಿತ್ತು. ಉದ್ಯೋಗ ನೇಮಕಾತಿಗೆ ದೂರಶಿಕ್ಷಣದ ಪ್ರಮಾಣಪತ್ರ ಪರಿಗಣಿಸದ ಕಾಲವೂ ಇತ್ತು. ಆಗಂತೂ ಈ ದೂರಶಿಕ್ಷಣ ನಾಮಕೇವಾಸ್ಥೆ ಆಟಕ್ಕೆ ಉಂಟು ಲೆಕ್ಕಕ್ಕೆ ಇಲ್ಲ ಎನ್ನುವಂತಾಗಿತ್ತು. ಉದ್ಯೋಗಕ್ಕೂ ದೂರಶಿಕ್ಷಣದ ಪದವಿ ಪ್ರಮಾಣಪತ್ರಗಳನ್ನು ಪರಿಗಣಿಸುವಂತಾದ ಮೇಲೆ ಹಲವು ಕಡೆ ಈ ಪಠ್ಯಗಳ ಹಾಗೂ ಪರೀಕ್ಷಾ ವಿಧಾನಗಳ ಗುಣಮಟ್ಟವನ್ನು ಉನ್ನತೀಕರಿಸಿದ್ದೂ ನಿಜ! ಪ್ರಾಯೋಗಿಕ ತರಗತಿಗಳನ್ನು ಕಡ್ಡಾಯ ಮಾಡಲಾಯಿತು. ಮುಂಚೆ ಕಾಟಾಚಾರಕ್ಕೆ ಇದ್ದ ಸಂಪರ್ಕ ಕಾರ್ಯಕ್ರಮಗಳನ್ನು (ಕಾಂಟ್ಯಾಕ್ಟ್ ಪ್ರೋಗ್ರಾಮ್ಸ್) ಕಡ್ಡಾಯಗೊಳಿಸಲಾಯಿತು. ದಕ್ಷತೆ, ನ್ಯೂನತೆ ಒಂದೇ ನಾಣ್ಯದ ಎರಡು ಮುಖಗಳು. ಒಂದೆಡೆ ಗುಣಮಟ್ಟ ಸುಧಾರಣೆ ಅದರೆ ಅದು ನಗಣ್ಯ ಎನ್ನುವಷ್ಟರ ಮಟ್ಟಿಗೆ ಇದೊಂದು ಬೃಹತ್ ದಂಧೆಯಾಗಿ ಬದಲಾಯಿತು. ಹಿಂದಿನ ಸರ್ಕಾರ ಎಲ್ಲಾ ವಿವಿಗಳ ದೂರಶಿಕ್ಷಣ ವಿಭಾಗ ಮುಚ್ಚಿ ಕರಾಮುವಿಗೆ ವಹಿಸಿದ್ದರ ಹಲವು ಉದ್ದೇಶಗಳಲ್ಲಿ ಇದೇ ಪ್ರಮುಖವಾದ ಕಾರಣ ಇರಬಹುದು.

ಒಂದು ವೇಳೆ ಸರ್ಕಾರ ಈ ಹಿಂದಿನಂತೆ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ದೂರಶಿಕ್ಷಣ ಪದವಿ, ಸ್ನಾತಕೋತ್ತರ ಪದವಿ ನೀಡಲು ಅವಕಾಶ ನೀಡಿದರೆ ಈ ಎಲ್ಲಾ ಕೊಳೆತ ಮಂಡಲಗಳು ಮತ್ತೆ ಹೆಡೆಯೆತ್ತಿ ನಿಲ್ಲುತ್ತವೆ. ಬಹಳಷ್ಟು ವಿಶ್ವವಿದ್ಯಾಲಯಗಳ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ಹಲವು ವಿಶ್ವವಿದ್ಯಾಲಯಗಳಲ್ಲಿ ಸಿಬ್ಬಂದಿಗೆ, ಪ್ರಾಧ್ಯಾಪಕರಿಗೆ ಸಂಬಳ ಕೊಡಲೂ ದುಡ್ಡಿಲ್ಲ. ಹಲವು ವಿವಿಗಳನ್ನು (ಸುಮಾರು 9 ವಿವಿಗಳು) ಸರ್ಕಾರವೇ ಮುಚ್ಚಲು ಹೊರಟಿದೆ ಎಂದು ಈ ಹಿಂದೆ ವರದಿಯಾಗಿತ್ತು. ಇದೆಲ್ಲಾ ಸರಿಯೇ! ಆದರೆ ವಿಶ್ವವಿದ್ಯಾಲಯಗಳ ಪುನಶ್ಚೇತನಕ್ಕೆಂದು ದೂರಶಿಕ್ಷಣಕ್ಕೆ ಅವಕಾಶ ಮಾಡಿಕೊಡುವ ಮುನ್ನ ಸರ್ಕಾರ ಕೆಲವು ಹೊಸ ನೀತಿ, ನಿಯಮಗಳನ್ನು ಪ್ರಕಟಿಸಬೇಕು. ಮುಖ್ಯವಾಗಿ ಶಿಕ್ಷಣದ ಗುಣಮಟ್ಟದೊಂದಿಗೆ ಯಾವುದೇ ರಾಜಿ ಮಾಡಿಕೊಳ್ಳದೆ ಕ್ರಮಬದ್ಧ ಮತ್ತು ನ್ಯಾಯಸಮ್ಮತ ಪರೀಕ್ಷೆಗಳು ನಡೆಯುವ ಖಾತರಿ ಸಿಗಬೇಕು. ಕರಾಮುವಿ ಹಿಡಿತದಿಂದ ದೂರಶಿಕ್ಷಣವನ್ನು ಹಿಂದಿನಂತೆ ವಿಕೇಂದ್ರೀಕರಣಗೊಳಿಸುವುದು ತಪ್ಪೇನಲ್ಲ, ಆದರೆ ತಕ್ಕಮಟ್ಟಿಗೆ ದೂರಶಿಕ್ಷಣದ ಮಾನಮರ್ಯಾದೆ ಕಾಪಾಡಿರುವ ಕರಾಮುವಿ ತೆಕ್ಕೆಯಿಂದ ಏಕಸ್ವಾಮ್ಯವನ್ನು ಕಿತ್ತುಕೊಳ್ಳುವ ಮೊದಲು ಸರ್ಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮಾದರಿಯಲ್ಲಿ 'ದೂರಶಿಕ್ಷಣ ಪರೀಕ್ಷಾ ಪ್ರಾಧಿಕಾರ' ಸ್ಥಾಪಿಸಿ ಎಲ್ಲಾ ವಿವಿಗಳು ಅದರಡಿ ಕಾರ್ಯನಿರ್ವಹಿಸುವಂತೆ ಮಾಡಿ ಪದವಿಗಳು ಬಿಕರಿಯಾಗದಂತೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು.

ಸುವೇಂದು ದ್ವೇಷ ರಾಜಕೀಯ ಮಾಡುತ್ತಿದ್ದಾರೆಯೆ?

ವಂಗಭಂಗ
ಗ.ನಾ. ಭಟ್ಟ
vveditoped@gmail.com

ಹಾಗೆಂದು ಕೆಲವರು ಗುಲ್ಲೆಬ್ಬಿಸುತ್ತಿದ್ದಾರೆ. ಟಿಎಂಸಿ ನೆಲಕಚ್ಚಿ ಮಮತಾ ಬ್ಯಾನರ್ಜಿಗೆ ಮುಖ-ಮುಸುಡೂ ಇಲ್ಲವಾಗಿ ಆಕೆ ನೇಪಥ್ಯಕ್ಕೆ ಸರಿದ ಹಿನ್ನೆಲೆಯಲ್ಲಿ ಮತ್ತು ಬಿಜೆಪಿ ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಸುವೇಂದು ಅಧಿಕಾರಿ ಯಾರೂ ಊಹಿಸಲಾಗದಿದ್ದ ಗಡಿನಿಯಂತ್ರಣ ರೇಖೆಗೆ ಸಂಬಂಧಪಟ್ಟಂತೆ ಕಠಿಣ ನಿರ್ಧಾರ ತೆಗೆದುಕೊಂಡಿರುವುದು, ಬೇಲಿ ಹಾಕುವುದಕ್ಕಾಗಿ 600 ಎಕರೆ ಜಮೀನನ್ನು ಮತ್ತು ಸಿಲಿಗುರಿಯ ಚಿಕನ್ ನೆಕ್ ಪ್ರದೇಶದ 120 ಎಕರೆ ಜಾಗವನ್ನು ಈಗಲೇ ಕೇಂದ್ರ ಸರಕಾರಕ್ಕೆ ವರ್ಗಾಯಿಸಿರುವುದು, 'ಶಾಂತಿ ಬಾಂಧವ'ರಿಗೆ ನಡುಕ ಹುಟ್ಟಿಸಿದೆ. ಈ ಮಮತಾ ಬ್ಯಾನರ್ಜಿ ಎಂತಹ ದೇಶದ್ರೋಹಿ ಹೆಂಗಸೆಂದರೆ ಅವರ ಆಡಳಿತದ ಸಮಯದಲ್ಲಿ ಗಡಿಪ್ರದೇಶದಲ್ಲಿ ಬೇಲಿ ಹಾಕುವುದಕ್ಕಾಗಿ ಕೇಂದ್ರ ಸರಕಾರ ಆ ಜಾಗವನ್ನು ಕೇಳಿದಾಗ ಆಕೆ ಕೊಟ್ಟಿರಲಿಲ್ಲ. ಈಗ ಸುವೇಂದು ಅಧಿಕಾರಿ ಕೇವಲ ಒಂದು ಸಹಿ ಮೂಲಕ ಆ ಭೂಪ್ರದೇಶ ವರ್ಗಾಯಿಸಿದ್ದಾರೆ.

ಸುವೇಂದು ಅಧಿಕಾರ ವಹಿಸಿಕೊಂಡ ಮೇಲೆ ಬಂಗಾಲದಲ್ಲಿ ಅದೆಂತಹ ಬದಲಾವಣೆಗಳಾಗುತ್ತಿವೆಯೆಂದರೆ ಜನ ಅದನ್ನು ಊಹಿಸಲೂ ಆಗದು. ಭಾರತಾದ್ಯಂತ ರಸ್ತೆ ವಿಭಜಕಗಳಿಗೆ, ವೇಗನಿಯಂತ್ರಕಗಳಿಗೆ ಯಾವ ಬಣ್ಣ ಬಳಿಯುತ್ತಾರೆ ಎಂದು ಎಲ್ಲರಿಗೂ ಗೊತ್ತು. ಆದರೆ ಈಕೆ ತನಗೆ ಇಷ್ಟ ಎಂಬ ಕಾರಣಕ್ಕೆ ನೀಲಿ ಬಣ್ಣವನ್ನು ಬಳಿಸಿದ್ದಳು. ಈಗ ಅದಕ್ಕೆ ರಸ್ತೆ ನಿಯಮದ ಪ್ರಕಾರ ಹಳದಿ ಬಿಳಿ ಬಣ್ಣ ಬಳಿಯಲು ಅಧಿಕಾರಿ ಆದೇಶಿಸಿದ್ದಾರೆ.

ಜಗತ್ತು ಯಂತ್ರಾನುಸಂಧಾನ, ತಂತ್ರಜ್ಞಾನ, ಆರ್ಥಿಕತೆ, ಸೇನಾಭದ್ರತೆ, ಸುಸ್ಥಿರತೆ ಮೊದಲಾದವುಗಳಿಂದ ಮುಂದುರಿಯಬೇಕು ಎಂದು ಎಲ್ಲ ದೇಶಗಳೂ ಬಯಸುತ್ತವೆ. ಆದರೆ ಮಮತಾ ಇದಕ್ಕೆ ಹೊರತಾಗಿದ್ದರು. ನೆಟ್‌ವರ್ಕ್‌ಗಳು ಚೆನ್ನಾಗಿ ಕೆಲಸ ಮಾಡಿದರೆ ಎಲ್ಲವೂ ಪಾರದರ್ಶಕವಾಗಿಬಿಡುತ್ತವೆ ಮತ್ತು ಅದರಿಂದ ಕಾಳಸಂತೆಕೋರರಿಗೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಆಕೆ ನೆಟ್‌ವರ್ಕ್ ನಿಧಾನವಾಗುವಂತೆ ಮಾಡಿಬಿಟ್ಟಿದ್ದಳು. ಈಗ ಪ.ಬಂಗಾಲದಲ್ಲಿ ನೆಟ್‌ವರ್ಕ್ ವೇಗವಾಗಿ ಕೆಲಸ ಮಾಡುವಂತೆ ಅನುಷ್ಠಾನಗೊಳಿಸಲಾಗಿದೆ.

ಎಲ್ಲದಕ್ಕಿಂತ ಹೆಚ್ಚಾಗಿ ಇಡೀ ಪಶ್ಚಿಮ ಬಂಗಾಲವನ್ನೇ ನುಂಗಿ ನೊಣೆಯಲು ಹೊರಟಿದ್ದ ಭ್ರಷ್ಟರಿಗೆ, ಟಿಎಂಸಿ ಗೂಂಡಾಗಳಿಗೆ, ಮಾಫಿಯಾಗಳಿಗೆ ನಡುಕ ಹುಟ್ಟುವಂತೆ ಅವರ ಆಸ್ತಿ-ಪಾಸ್ತಿಗಳ ಲೆಕ್ಕ ಕೊಡುವಂತೆ ಅವರೆಲ್ಲರಿಗೂ ನೋಟಿಸ್ ಜಾರಿಗೊಳಿಸಲಾಗಿದೆ. ನಮ್ಮ ದೇಶದಲ್ಲಿ ರಾಜಕಾರಣಿಗಳದೊಂದು ವಿಚಿತ್ರ ಮನಃಸ್ಥಿತಿಯಿದೆ. ಅಧಿಕಾರಾವಧಿಯಲ್ಲಿ ತಾನು ಏನು ಮಾಡಿದರೂ ನಡೆಯುತ್ತದೆ ಎಂದು ಭಾವಿಸಿ ಮನಸೋ ಇಚ್ಛೆ ನಡೆದುಕೊಳ್ಳುತ್ತಾರೆ. ಚುನಾವಣೆಯಲ್ಲಿ ಸೋತಾಗ ಅವರ ಬಣ್ಣ ಬಯಲಿಗೆ ಬರುತ್ತದೆ.

ಅಂತಹವರಲ್ಲಿ ಒಬ್ಬ ಮಮತಾಳ ಸೋದರಳಿಯ ಅಭಿಷೇಕ ಬ್ಯಾನರ್ಜಿ. ಎಂತಹ ಭ್ರಷ್ಟ ಎಂದರೆ- ಅಕ್ರಮವಾಗಿ ಕಲೆ ಹಾಕಿರುವ ಆಸ್ತಿ ನೋಡಿದರೆ ತಲೆ ತಿರುಗುತ್ತದೆ. ಬರೀ ಒಂದು ಮನೆ ಕಟ್ಟಿಸುವುದಕ್ಕೆ ಈತ ಖರ್ಚು ಮಾಡಿದ್ದು 75 ಕೋಟಿ ರೂಪಾಯಿ! ಈತ ಇಡೀ ಪಶ್ಚಿಮ ಬಂಗಾಲವೇ ತನ್ನ ಸ್ವಂತ ಆಸ್ತಿ ಎಂದು ಭಾವಿಸಿದಂತಿದೆ. ಸುವೇಂದು ಅವನಿಗೆ ತಕ್ಕ ಶಾಸ್ತಿ ವಿಧಿಸಿದ್ದಾರೆ. ಸರಕಾರಿ ಜಾಗದಲ್ಲಿ ಐಷಾರಾಮಿ ಮನೆ ಕಟ್ಟಿಸಿ ರಸ್ತೆಯನ್ನೂ ಒತ್ತುವರಿ ಮಾಡಿದ್ದ. ಅವನಿಗೆ ನೋಟಿಸ್ ನೀಡಲಾಗಿದೆ. ಅವನ ಹಲವಾರು ಅಪರಾಧಕ್ಕಾಗಿ ಮೊಕದ್ದಮೆ ಹೂಡಲಾಗಿದೆ.

ಇಂಥಾದ್ದೇ ಅಪರಾಧವೆಸಗಿ ನೂರಾರು ಪ್ರಾಪರ್ಟಿ ಮಾಡಿ ಕಲ್ಕತ್ತಾ ಜನತೆಗೆ ಮಣ್ಣೆರಚಿ, ಮೆರೆಯುತ್ತಿದ್ದ ರಾಜಾ ನಾಸ್ಕರ್, ಸೋನಾ ಪಪ್ಪು, ಫೈದ್ ಅಹಮ್ಮದ್, ಸಯಾನಿ ಘೋಷ್ ಮೊದಲಾದ ಕ್ರಿಮಿನಲ್‌ಗಳಿಗೆ ಕೋಲ್ಕತ್ತಾ ಮುನ್ಸಿಪಲ್ ಕಾರ್ಪೋರೇಷನ್ ಆಯುಕ್ತರು ನೋಟಿಸ್ ನೀಡಿ ತನಿಖೆಗೆ ಆದೇಶಿಸಿದ್ದಾರೆ.

ಸುವೇಂದು ಅಧಿಕಾರಿಯವರ ಈ ವೇಗದ, ನ್ಯಾಯಯುತ, ದಿಟ್ಟಕ್ರಮವನ್ನು ನೋಡಿ ತಥಾಕಥಿತ ಕಾಂಗ್ರೆಸ್ಸಿಗರು, ಕಮ್ಯೂನಿಸ್ಟ್‌ಗಳು, ಟಿಎಂಸಿ ತರಲೆಗಳು ಇದೊಂದು ದ್ವೇಷದ ರಾಜಕಾರಣವೆಂದು ಆರೋಪಿಸತೊಡಗಿದ್ದಾರೆ.

ವಾಸ್ತವವಾಗಿ ರಾಮಾಯಣ, ಮಹಾಭಾರತದಂತಹ ಕಾವ್ಯಗಳನ್ನು ಓದಿದವರಿಗೆ, ನಮ್ಮ ಇತಿಹಾಸವನ್ನು ಹೃದ್ಗತ ಮಾಡಿಕೊಂಡವರಿಗೆ ಸುವೇಂದು ಅಧಿಕಾರಿಯವರ ಈ ದಿಟ್ಟಕ್ರಮ, ಕ್ಷಾತ್ರ ರೀತಿ ಹೊಸದಾಗೇನೂ ಕಾಣುವುದಿಲ್ಲ. ಹಿಂದೆ ರಾಮಾಯಣ, ಮಹಾಭಾರತದ ಕಾಲದಲ್ಲೂ ಅಪರಾಧಿಗಳಿಗೆ, ಭಯೋತ್ಪಾದಕರಿಗೆ, ಕ್ರಿಮಿನಲ್‌ಗಳಿಗೆ ಉಗ್ರವಾದ ಶಿಕ್ಷೆಯೇ ಕಾದಿರುತ್ತಿತ್ತು. ಖರ-ದೂಷಣ, ರಾವಣ, ವಾಲಿ, ಮಾರೀಚನಂತಹ ರಾಕ್ಷಸರನ್ನು ರಾಮ ಕೊಂದು ಕಳೆದಿದ್ದ. ಇತ್ತ ಮಹಾಭಾರತದಲ್ಲಿ ದುರ್ಯೋಧನ, ಕರ್ಣ, ಜರಾಸಂಧ, ಬಕಾಸುರನಂತಹ ಸಮಾಜಪೀಡಕರನ್ನು ಪಾಂಡವರು ಕೊಂದು ಮುಗಿಸಿದ್ದರು. ಕೃಷ್ಣನೂ ಅದೇ ಕೆಲಸ ಮಾಡಿದ್ದ. ಇಲ್ಲಿ ಹೊಸದಾಗಿ ಕಾಣುವುದೆಂದರೆ ಸುವೇಂದು ಅಧಿಕಾರಿ ರಾಮ, ಕೃಷ್ಣರಂತೆ ಅವರ ಲೋಕಕ್ಷೇಮ ನೀತಿಯನ್ನು ಅಳವಡಿಸಿಕೊಂಡು ದುಷ್ಟರನ್ನು ಮರ್ದಿಸುತ್ತಿರುವುದು. ಬಹುಪಾಲು ಇಂದಿನ ಯಾವ ರಾಜಕಾರಣಿಗಳೂ ಇಂತಹ ಕ್ಷಾತ್ರಗುಣವನ್ನು ಮೆರೆಯುತ್ತಿಲ್ಲ. ಅದನ್ನು ಸುವೇಂದು ಅಧಿಕಾರಿ ಅನುಷ್ಠಾನಕ್ಕೆ ತರುತ್ತಿದ್ದಾರೆ.

ರಾಮಾಯಣದಲ್ಲಿ ಒಂದು ಮಾತು ಬರುತ್ತದೆ- 'ನಾಸ್ಯಕ್ರೋಧಃ ಪ್ರಸಾದಶ್ಚ ನಿರರ್ಥೋಸ್ತಿ ಕದಾಚನ । ಹನ್ತ್ಯೇವ ನಿಯಮಾತ್ ವಧ್ಯಾತ್ ಅವಧ್ಯೇಷು ನ ಕುಪ್ಯತಿ' (ಅಯೋಧ್ಯಾ: 2-45) 'ಶ್ರೀರಾಮನ ಕೋಪಕ್ಕೂ ಅನುಗ್ರಹಕ್ಕೂ ಒಂದು ಅರ್ಥವಿರುತ್ತಿತ್ತು. ಅವು ಎಂದೂ ವ್ಯರ್ಥವಾಗುತ್ತಿರಲಿಲ್ಲ. ವಧೆಗೆ ಅರ್ಹರಾದ ಪಾತಕಿಗಳನ್ನು ಆತ ನಿಯಮ ತಪ್ಪದೇ ಗಲ್ಲಿಗೇರಿಸುತ್ತಿದ್ದ. ನಿರಪರಾಧಿಗಳ ಮೇಲೆ ಆತ ಎಂದೂ ಕೋಪಗೊಂಡಿದ್ದೇ ಇಲ್ಲ'. ಇದು ನ್ಯಾಯಪ್ರಭುವಿನ ಆಡಳಿತದ ರೀತಿ. ಇದನ್ನೇ ಸುವೇಂದು ಅಧಿಕಾರಿ ಅಳವಡಿಸಿಕೊಂಡಿದ್ದು. ಇದರಲ್ಲಿ ದ್ವೇಷ ರಾಜಕಾರಣ ಎಲ್ಲಿಂದ ಬಂತು? ಅಪರಾಧಿಗಳಿಗೆ ಶಿಕ್ಷೆಯಾಗಬಾರದು ಎಂಬುದು ಯಾವ ನೀತಿ? ನಮ್ಮ ರಾಜಕಾರಣಿಗಳು ಹೀಗೆ ನಡೆದುಕೊಂಡು ಬಂದಿದ್ದರಿಂದಲೇ ನಮ್ಮ ದೇಶ ಇಂತಹ ಅವನತಿಯತ್ತ ಸಾಗುತ್ತಿರುವುದು; ಭ್ರಷ್ಟಾಚಾರದ ಕೊಂಪೆಯಾಗಿರುವುದು; ಕ್ರಿಮಿನಲ್‌ಗಳಿಗೆ ತವರುಮನೆಯಾಗಿರುವುದು; ಭಯೋತ್ಪಾದಕರ ಅಡಗುತಾಣವಾಗಿರುವುದು. ಇವು ನಾಶವಾಗದೆ ದೇಶ ಉದ್ಧಾರವಾಗದು.

ನಮ್ಮ ಪ್ರಾಚೀನ ಗ್ರಂಥಗಳು ನ್ಯಾಯಸಾಧನೆಗೆ ನಾಲ್ಕು ಉಪಾಯಗಳನ್ನು ಕಂಡುಕೊಂಡಿವೆ. ಅವೇ ಸಾಮ, ದಾನ, ಭೇದ ಮತ್ತು ದಂಡ. ಇವುಗಳಲ್ಲಿ ಸಾಮ ಮತ್ತು ದಂಡ ಹೆಚ್ಚು ಶ್ರೇಷ್ಠಗಳು. ಈ ಎರಡರಲ್ಲಿ ದಂಡವು ಇನ್ನೂ ಶ್ರೇಷ್ಠ. 'ಕಾರ್ಯಸಿದ್ಧ್ಯತಿಶಯಾತ್'.-'ಕಾರ್ಯಸಿದ್ಧಿಯಾಗುವುದು ದಂಡದಿಂದಲೇ ಹೊರತು ಮಿಕ್ಕಿದ್ದರಿಂದ ಅಲ್ಲ' ಎಂದು ಮನುಸ್ಮೃತಿ ಹೇಳುತ್ತದೆ. 'ಸಾಮಾದೀನಾಮುಪಾಯಾನಾಂ ಚತುರ್ಣಾಮಪಿ ಪಂಡಿತಾಃ । ಸಾಮದಂಡೌ ಪ್ರಶಂಸಂತಿ ನಿತ್ಯ ರಾಷ್ಟ್ರಾಭಿವೃದ್ಧಯೇ' (ಮನುಸ್ಮೃತಿ: 7-109) ರಾಷ್ಟ್ರಾಭಿವೃದ್ಧಿಗೆ ದಂಡವೇ ಹೆಚ್ಚು ಶ್ರೇಯಸ್ಕರ. ಅದನ್ನು ಸುವೇಂದು ಅಧಿಕಾರಿ ಮಾಡುತ್ತಿದ್ದಾರೆ. ಇಲ್ಲಿ ಯಾವ ದ್ವೇಷ ರಾಜಕಾರಣವೂ ಇಲ್ಲ. ತಪ್ಪಿತಸ್ಥರಿಗೆ ಶಿಕ್ಷೆಯಾಗುವುದು ಹೊಸ ವಿಚಾರವೇನೂ ಅಲ್ಲ. ಅದು ಅನಾದಿಯಾದುದು.

ಮನುಷ್ಯನ ಕ್ರೌರ್ಯ ಭಯಾನಕ ಮತ್ತು ಊಹಾತೀತ. ಅದಕ್ಕೆ ಮಮತಾ, ಅವಳ ಗೂಂಡಾಗಳೇ ಸಾಕ್ಷಿ. ದುಷ್ಟರಿಗೆ ದಂಡ ಸಲ್ಲಲೇಬೇಕು. ಅಂತಹವರಿಗೆ ಶಿಕ್ಷೆಯಾಗದಿದ್ದರೆ ರಕ್ತಬೀಜಾಸುರನಂತೆ ಮತ್ತೆ ಮತ್ತೆ ಹುಟ್ಟಿಕೊಳುತ್ತಾರೆ. ಅದನ್ನು ಬೇರು ಸಹಿತ ಕಿತ್ತೆಸೆಯಲು ಚಾಮುಂಡಿಯಂತೆ ಸುವೇಂದು ಅಧಿಕಾರಿ ಬಂದಂತೆ ಕಾಣುತ್ತದೆ. ಅವರ ವೀರಸಂಕಲ್ಪಕ್ಕೆ ಜಯವಾಗಲಿ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue:130

ಸಮಾಚಾರ ಸಣ್ಣದಲ್ಲ

ಪಾಠ ಕಲಿಯದ ಎನ್‌ಟಿಎ ಸುಪ್ರೀಂ ಅಸಮಾಧಾನ

ದೆಹಲಿ: ವೈದ್ಯಕೀಯ ಶಿಕ್ಷಣದ ಪ್ರವೇಶ ಪರೀಕ್ಷೆ 'ನೀಟ್-ಯುಜಿ' ಪ್ರಶ್ನೆ ಪತ್ರಿಕೆ ಈ ಬಾರಿಯೂ ಸೋರಿಕೆ ಆಗಿರುವುದಕ್ಕೆ ಸುಪ್ರೀಂ ಕೋರ್ಟ್ ಅಸಮಾಧಾನ



ವ್ಯಕ್ತಪಡಿಸಿದೆ. ಎನ್‌ಟಿಎ ದುರ್ಬಲವಾಗಿದೆ. ಅದನ್ನು ಬಲಿಷ್ಠಗೊಳಿಸಲು ಪುನರ್ ರಚಿಸಬೇಕಿದೆ. ಸ್ವಾಯತ್ತಗೊಳಿಸಬೇಕಿದೆ. ಇಲ್ಲವಾದರೆ ಪೂರ್ಣ ಬದಲಾಯಿಸಬೇಕಿದೆ. ಈ ಸಂಬಂಧ ಆದೇಶ ಹೊರಡಿಸಬೇಕು ಎಂದು 'ಅಖಿಲ ಭಾರತ ವೈದ್ಯಕೀಯ ಸಂಸ್ಥೆಗಳ ಒಕ್ಕೂಟ'(ಎಫ್‌ಎಐಎಂಎ) ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಈ ಅರ್ಜಿಯನ್ನು ಸೋಮವಾರ ವಿಚಾರಣೆಗೆತ್ತಿಕೊಂಡ ಸುಪ್ರೀಂ ಕೋರ್ಟ್, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ) ಇನ್ನೂ ಪಾಠವನ್ನೇ ಕಲಿತಿಲ್ಲ ಎಂದು ಬೇಸರ ವ್ಯಕ್ತಪಡಿಸಿದೆ. ಕೇಂದ್ರ, ಸರಕಾರ, ಎನ್‌ಎಟಿ, ಸಿಬಿಐಗೆ ನೋಟಿಸ್ ನೀಡಿರುವ ದ್ವಿಸದಸ್ಯ ಪೀಠ, ಪ್ರತಿಕ್ರಿಯೆ ಸಲ್ಲಿಸಲು ಸೂಚಿಸಿದೆ.

ಬಿಜೆಡಿ ತೊರೆದ ಸಂಸದ ದೇಬಶಿಶ್ ಬಿಜೆಪಿಯತ್ತ

ಭುವನೇಶ್ವರ: ಒಡಿಶಾ ರಾಜ್ಯದ ಪ್ರಮುಖ ಪ್ರಾದೇಶಿಕ ಪಕ್ಷವಾದ 'ಬಿಜು ಜನತಾ ದಳ'(ಬಿಜೆಡಿ)ದಿಂದ

ರಾಜ್ಯಸಭೆಗೆ ಆಯ್ಕೆಯಾಗಿರುವ ಸಂಸದ ದೇಬಶಿಶ್ ಸಮಂತರಾಯ್ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಸೋಮವಾರ ರಾಜೀನಾಮೆ ನೀಡಿದ್ದಾರೆ. ತಮ್ಮ ಈ ನಡೆಗೆ, ಪಕ್ಷದೊಳಗೆ ತಮ್ಮನ್ನು ಬಲು ವ್ಯವಸ್ಥಿತವಾಗಿ ಕಡೆಗಣಿಸಲಾಗುತ್ತಿದೆ ಎಂಬುದೇ ಕಾರಣ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ್ದಾರೆ. ದೇಬಶಿಶ್ ಅವರು ಶೀಘ್ರದಲ್ಲೇ ಬಿಜೆಪಿ ಸೇರಲಿದ್ದಾರೆ ಎಂಬ ಮಾತುಗಳೂ ಕೇಳಿಬರುತ್ತಿವೆ.

ಎಐಎಡಿಎಂಕೆ ಪಕ್ಷದ 3 ಶಾಸಕರ ಪದತ್ಯಾಗ

ಚೆನ್ನೈ: ಏಪ್ರಿಲ್‌ನಲ್ಲಿ ನಡೆದ ವಿಧಾನಸಭೆ ಚುನಾವಣೆಯಲ್ಲಿ ಎಐಎಡಿಎಂಕೆ ಪಕ್ಷಕ್ಕೆ ಸೋಲಾಗಿದೆ. ಬಳಿಕ ವಿಧಾನಸಭೆಯಲ್ಲಿ ತಮಿಳಗ ವೆಟ್ರಿ ಕಳಗಂ ಪಕ್ಷದ ವಿಶ್ವಾಸಮತ ಯಾಚನೆ ವೇಳೆ ಎಐಎಡಿಎಂಕೆ ಪಕ್ಷದ 25 ಶಾಸಕರು ವಿಪ್ ಉಲ್ಲಂಘಿಸಿ ಟಿವಿಕೆ ಪಕ್ಷದ ಪರವಾಗಿಯೇ ಮತ ಚಲಾಯಿಸಿ ಪಕ್ಷವನ್ನು ಇಬ್ಭಾಗಗೊಳಿಸಿದ್ದರು. ಈಗ ಆ ಬಂಡಾಯ ಬಣದಲ್ಲಿನ ಮೂವರು ಶಾಸಕರು ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಟಿವಿಕೆ ಪಕ್ಷವನ್ನು ಸೇರಿಕೊಂಡಿದ್ದಾರೆ. ಶಾಸಕಿಯರಾದ ಮರಗತಂ ಕುಮಾರವೇಲ್, ಸತ್ಯಭಾಮ ಮತ್ತು ಶಾಸಕ ಜಯಕುಮಾರ್ ಅವರು ವಿಧಾನಸಭೆ ಸ್ಪೀಕರ್ ಜೆಸಿಡಿ ಪ್ರಭಾಕರ್ ಅವರಿಗೆ ಸೋಮವಾರ ಬೆಳಗ್ಗೆ ರಾಜೀನಾಮೆ ಪತ್ರ ಸಲ್ಲಿಸಿದರು. ಈ ಮಧ್ಯೆ, ಬಂಡಾಯ ಬಣದ ಐವರು ಶಾಸಕರು ಎಡಪ್ಪಾಡಿ ಪಳನಿಸ್ವಾಮಿ ನೇತೃತ್ವದ ಬಣಕ್ಕೆ ಮರಳಿದ್ದಾರೆ. ಇದರಿಂದಾಗಿ 25 ಶಾಸಕರ ಬಂಡಾಯ ಬಣದ ಶಾಸಕ ಬಲ ಈಗ 17ಕ್ಕೆ ಇಳಿದಿದೆ.

ಭಾರತ ನನ್ನನ್ನು ಪೂರ್ಣ ನಂಬಬಹುದು: ಟ್ರಂಪ್

ದೆಹಲಿ: ನಾನು ಪ್ರಧಾನಿ ನರೇಂದ್ರ, ಮೋದಿ ಅವರ ದೊಡ್ಡ ಅಭಿಮಾನಿ. ಭಾರತ ಬಯಸಿದ್ದೆಲ್ಲವೂ ಅವರಿಗೆ

ಸಿಗುತ್ತದೆ, ಭಾರತ ದೇಶ ನನ್ನನ್ನು ಪೂರ್ಣವಾಗಿ ನಂಬಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಅಮೆರಿಕದ 250ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನೆಲೆ ದೆಹಲಿಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದ ಅತಿಥಿಗಳನ್ನು ಉದ್ದೇಶಿಸಿ ಮಾತನಾಡಿದ ಭಾರತದಲ್ಲಿನ ಅಮೆರಿಕ ರಾಯಭಾರಿ ಸೆರ್ಗಿಯೊ ಗೋರ್ ಅವರು ಕಾರ್ಯಕ್ರಮದಲ್ಲಿದ್ದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಅಮೆರಿಕದ ವಿದೇಶಾಂಗ ಸಚಿವ ಮಾರ್ಕೊ ರುಬಿಯೊ ಹಾಗೂ ರಾಜತಾಂತ್ರಿಕರು, ಅಧಿಕಾರಿಗಳು ಮತ್ತು ವಾಣಿಜ್ಯೋದ್ಯಮಿಗಳ ಎದುರೇ ಸ್ಪೀಕರ್ ಫೋನ್ ಮೂಲಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಕರೆ ಮಾಡಿದರು. ಆಗ ಟ್ರಂಪ್, ಭಾರತ ಮತ್ತು ಪ್ರಧಾನಿ ಮೋದಿ ಅವರನ್ನು ಪ್ರಶಂಸಿಸಿ ಮಾತನಾಡಿದರು. ಭಾರತಕ್ಕೆ ಸಹಾಯ ಬೇಕಾದರೆ ಎಲ್ಲಿಗೆ ಕರೆ ಮಾಡಬೇಕೆಂದು ಅವರಿಗೆ ತಿಳಿದಿದೆ. ಅವರು ಇಲ್ಲಿಗೇ ಕರೆ ಮಾಡುತ್ತಾರೆ ಎಂದೂ ಟ್ರಂಪ್ ಹೇಳಿದರು.

{ರಾಹುಲ್ ಗಾಂಧಿ}
ಪ್ರತಿಪಕ್ಷ ನಾಯಕ

ಹಿಂದೂ-ಮುಸ್ಲಿಂ ಧ್ರುವೀಕರಣದ ಬಿಜೆಪಿ ಆಟ ಹೆಚ್ಚು ಕಾಲ ನಡೆಯದು. ದೇಶದ ಜನರು ಸದ್ಯ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಬಿಜೆಪಿಯ ಹಿಂದೂ-ಮುಸ್ಲಿಂ ಧ್ರುವೀಕರಣ ಆಟವನ್ನು ಮರೆಗೆ ಸರಿಸಲಿದೆ. ದೇಶದಲ್ಲಿ ಸಿರಿವಂತ-ಬಡವ ನಡುವಿನ ಅಂತರ ಹೆಚ್ಚುತ್ತಿದೆ. ಜನರು ಸದ್ಯದಲ್ಲೇ 'ಎಲ್ಲಿ ಆಹಾರ' ಎಂದು ಸರಕಾರವನ್ನು ಕೇಳಲಿದ್ದಾರೆ.

ಇಬ್ಬರಿಗೆ ಪದ್ಮವಿಭೂಷಣ, 6 ಮಂದಿಗೆ ಪದ್ಮಭೂಷಣ, 58 ಪದ್ಮಶ್ರೀ ಪ್ರಶಸ್ತಿ ಪ್ರಧಾನ ಮಾಡಿದ ರಾಷ್ಟ್ರಪತಿ ಮುರ್ಮು | ಶಾಸ್ತ್ರೀಯ ಸಂಗೀತ ಕ್ಷೇತ್ರದ ಸಾಧನೆಗೆ ಪಿಟೀಲು ವಾದಕಿ ಎನ್.ರಾಜಂ ಅವರಿಗೆ ಪದ್ಮವಿಭೂಷಣ | ನಟ ಧರ್ಮೇಂದ್ರ ಪರ (ಮರಣೋತ್ತರ) ಪದ್ಮವಿಭೂಷಣ ಪ್ರಶಸ್ತಿ ಸ್ವೀಕರಿಸಿದ ಪತ್ನಿ ಹೇಮಮಾಲಿನಿ | ರಾಷ್ಟ್ರಪತಿ ಭವನದ ಗಣತಂತ್ರ ಮಂಟಪ ಸಭಾಂಗಣದಲ್ಲಿ ಆಕರ್ಷಕ ಸಮಾರಂಭದಲ್ಲಿ ಉಪ ರಾಷ್ಟ್ರಪತಿ, ಪ್ರಧಾನಿ ಹಾಜರಿ

66 ಗಣ್ಯರಿಗೆ ಪದ್ಮ ಪ್ರಶಸ್ತಿ ಪ್ರದಾನ

ದೆಹಲಿ: 2026ನೇ ಸಾಲಿನಲ್ಲಿ ಘೋಷಿಸಲಾಗಿದ್ದ 5 ಪದ್ಮ ವಿಭೂಷಣ, 13 ಪದ್ಮಭೂಷಣ ಮತ್ತು 113 ಪದ್ಮಶ್ರೀ ಪ್ರಶಸ್ತಿಗಳು ಸೇರಿ 131 ಪದ್ಮ ಪ್ರಶಸ್ತಿಗಳಲ್ಲಿ ಮೊದಲ ಕಂತಿನಲ್ಲಿ 66 ಪದ್ಮ ಪ್ರಶಸ್ತಿಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸೋಮವಾರ ಸಂಜೆ ಪ್ರದಾನ ಮಾಡಿದರು. ಇಬ್ಬರು ಪದ್ಮವಿಭೂಷಣರು, 6 ಮಂದಿ ಪದ್ಮಭೂಷಣರು ಹಾಗೂ 58 ಮಂದಿ ಪದ್ಮಶ್ರೀ ಪುರಸ್ಕೃತರು ಪ್ರಶಸ್ತಿಗಳನ್ನು ರಾಷ್ಟ್ರಪತಿ ಭವನದ ಗಣತಂತ್ರ ಮಂಟಪ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸ್ವೀಕರಿಸಿದರು.

ಶಾಸ್ತ್ರೀಯ ಸಂಗೀತ ಕ್ಷೇತ್ರದಲ್ಲಿನ ಹಿರಿಯ ಪಿಟೀಲು ವಾದಕಿಯಾದ ಎನ್.ರಾಜಂ ಅವರಿಗೆ ಪದ್ಮವಿಭೂಷಣ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರದಾನ ಮಾಡಿದರು. 'ಗಾಯಕಿ ಅಂಗ್' ಶೈಲಿಯ (ಗಾಯನ ಶೈಲಿಯನ್ನೇ ಸಂಗೀತ ಉಪಕರಣದಲ್ಲಿ ಹೊಮ್ಮಿಸುವ) ಮೂಲಕ ದೇಶದ ಶಾಸ್ತ್ರೀಯ ಶೈಲಿಯ ಸಂಗೀತ ಕ್ಷೇತ್ರದಲ್ಲಿ ಎನ್.ರಾಜಂ ಅವರು ಕ್ರಾಂತಿಯನ್ನೇ ಉಂಟು ಮಾಡಿದ್ದರು. ಭಾರತದ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅಪಾರ ಎಂದು ಬಣ್ಣಿಸಲಾಗಿದೆ.

ಬಾಲಿವುಡ್ ಚಿತ್ರರಂಗದ ಹಿರಿಯ ನಟ, ದಿವಂಗತ ಧರ್ಮೇಂದ್ರ ಅವರಿಗೆ ಘೋಷಣೆಯಾಗಿದ್ದ ಪದ್ಮವಿಭೂಷಣ ಪ್ರಶಸ್ತಿಯನ್ನು ಪತ್ನಿ, ಹಿರಿಯ ನಟಿ, ಬಿಜೆಪಿ ಸಂಸದೆಯೂ ಆಗಿರುವ ಹೇಮಮಾಲಿನಿ ಅವರು ಸ್ವೀಕರಿಸಿದರು. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪ್ರಶಸ್ತಿ ಸ್ವೀಕರಿಸುವಾಗ ಪತಿ ಧರ್ಮೇಂದ್ರ ಅವರನ್ನು ನೆನೆದು ಹೇಮಮಾಲಿನಿ ತುಸು ಭಾವುಕರಾಗಿದ್ದರು. ಸಭಿಕರ ಸಾಲಿನಲ್ಲಿದ್ದ ಪುತ್ರಿ ಆಹಾನಾ ಡಿಯೋಲ್ ಅವರು ತಂದೆಯನ್ನು ನೆನೆದು ಕಣ್ಣೀರಾದರು.

ಪಂಜಾಬ್ ಮೂಲದ ನಟ, 300ಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿದ್ದ, ದೇಶ-ವಿದೇಶಗಳಲ್ಲಿ ಅಸಂಖ್ಯ ಅಭಿಮಾನಿಗಳನ್ನು ಗಳಿಸಿದ ಕಲಾವಿದ, 'ಭಾರತ ಚಿತ್ರರಂಗದ ಹಿ ಮ್ಯಾನ್' ಎಂದೇ ಹೆಸರಾಗಿದ್ದ ಧರ್ಮೇಂದ್ರ 2025ರ ನವೆಂಬರ್‌ನಲ್ಲಿ ನಿಧನರಾದರು. ಅವರಿಗೆ ಮರಣೋತ್ತರವಾಗಿ ಪದ್ಮವಿಭೂಷಣ ಪ್ರಶಸ್ತಿ ಘೋಷಿಸಲಾಗಿತ್ತು. 2012ರಲ್ಲಿ ಅವರಿಗೆ ಪದ್ಮಭೂಷಣ ಪ್ರಶಸ್ತಿ ಸಂದಿತ್ತು.

ಜಾಹೀರಾತು ಪ್ರಪಂಚದ ದಿಗ್ಗಜ ಎನಿಸಿಕೊಂಡಿದ್ದ ದಿ.ಪಿಯೂಶ್ ಪಾಂಡೆ(ಮರಣೋತ್ತರ) ಅವರ ಪರವಾಗಿ ಪತ್ನಿ ನೀತಾ ಪಾಂಡೆ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು.

ನಟ ಧರ್ಮೇಂದ್ರ ಅವರಿಗೆ ಘೋಷಣೆಯಾಗಿದ್ದ ಪದ್ಮವಿಭೂಷಣ ಪ್ರಶಸ್ತಿಯನ್ನು ಪತ್ನಿ-ನಟಿ-ಸಂಸದೆ ಹೇಮಮಾಲಿನಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಸ್ವೀಕರಿಸಿದರು.

ಜಾಹೀರಾತು ಲೋಕದ ದಿಗ್ಗಜನೆನಿಸಿಕೊಂಡಿದ್ದ ಪಿಯೂಶ್ ಪಾಂಡೆ(ಮರಣೋತ್ತರ) ಅವರ ಪರವಾಗಿ ಪತ್ನಿ ನೀತಾ ಪಾಂಡೆ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು.

ಕರ್ನಾಟಕದ ಸಾಧಕರಿಗೆ ಪದ್ಮ ಪ್ರಶಸ್ತಿ

ಈ ಬಾರಿ ಕರ್ನಾಟಕದ ಒಟ್ಟು 8 ಮಂದಿಗೆ ಪದ್ಮ ಪ್ರಶಸ್ತಿಗಳು ಘೋಷಣೆ ಆಗಿವೆ. ಅದರಲ್ಲಿ ಒಂದು ಪದ್ಮಭೂಷಣ, ಉಳಿದ 7 ಪದ್ಮಶ್ರೀ ಪ್ರಶಸ್ತಿಗಳಾಗಿವೆ. ಸಂಸ್ಕೃತ ಮತ್ತು ಬಹುಭಾಷಾ ಕ್ಷೇತ್ರದಲ್ಲಿನ ಸಾಧನೆಗಾಗಿ ಶತಾವಧಾನಿ ಗಣೇಶ್ ಅವರು ಸೋಮವಾರ ಸಂಜೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು. ಉಳಿದಂತೆ ಮಂಡ್ಯ ಜಿಲ್ಲೆಯವರಾದ 'ಪುಸ್ತಕ ಮನೆ' ಸಂಸ್ಥಾಪಕ ಅಂಕೇಗೌಡ ಮತ್ತು ಬೆಂಗಳೂರಿನ ಹೆಸರಾಂತ ಸಮಾಜಸೇವಕಿ, ಸುಮಂಗಲಿ ಸೇವಾ ಆಶ್ರಮದ ಸಾಧಕಿ ಎಸ್.ಜಿ.ಸುಶೀಲಮ್ಮ ಅವರು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದರು.ಶಿಕ್ಷಣ ತಜ್ಞ, ಉತ್ತರ ಕರ್ನಾಟಕ ಭಾಗದಲ್ಲಿ 'ಕೆಎಲ್‌ಇ' ಶಿಕ್ಷಣ ಸಂಸ್ಥೆಗಳ ಸಮೂಹ ಸ್ಥಾಪಿಸಿದ ಡಾ.ಪ್ರಭಾಕರ ಕೋರೆ, ಶಿಕ್ಷಣ-ಸಮಾಜ ಸೇವಾ ಕ್ಷೇತ್ರದ ಶಶಿಶೇಖರ್ ವೇಂಪಟಿ, ಬಾಹ್ಯಾಕಾಶ ವಿಜ್ಞಾನ ಕ್ಷೇತ್ರದ ಸಾಧಕಿ ಶುಭ ವೆಂಕಟೇಶ ಅಯ್ಯಂಗಾರ್, ಕರ್ನಾಟಕ ಹೆಮೊಫೀಲಿಯ ಸೊಸೈಟಿ ಸಂಸ್ಥಾಪಕ, ಔಷಧ ಕ್ಷೇತ್ರದ ಡಾ.ಸುರೇಶ್ ಹನಗವಾಡಿ ಮತ್ತು ವಾಣಿಜ್ಯೋದ್ಯಮ ಕ್ಷೇತ್ರದ ಟಿಟಿ ಜಗನ್ನಾಥನ್(ಮರಣೋತ್ತರ) ಅವರಿಗೆ 2ನೇ ಹಂತದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ ಎಂದು ತಿಳಿದುಬಂದಿದೆ.

ಎಸ್.ಜಿ.ಸುಶೀಲಮ್ಮ

ಅಂಕೇಗೌಡ

ಮಲಯಾಳಂ ಚಿತ್ರರಂಗದ ಹಿರಿಯ ನಟ ಮಮ್ಮೂಟಿ, ಖ್ಯಾತ ಹಿನ್ನೆಲೆ ಗಾಯಕಿ ಅಲ್ಕಾ ಯಾಗ್ನಿಕ್ ಪದ್ಮಭೂಷಣ ಪ್ರಶಸ್ತಿ ಸ್ವೀಕರಿಸಿದರು.

ವಿವಿಧ ಭಾಷೆಗಳ ಚಿತ್ರರಂಗದ ನಟರಾದ ಪ್ರೊಸೇನ್‌ಜಿತ್ ಚಟರ್ಜಿ, ಸತೀಶ್ ಶಾ, ಮುರಳಿ ಮೋಹನ್, ರಾಜೇಂದ್ರ ಪ್ರಸಾದ್ ಅವರುಗಳು ಪದ್ಮಶ್ರೀ ಪ್ರಶಸ್ತಿ ಸ್ವೀಕರಿಸಿದರು.

ಉಳಿದ 65 ಪದ್ಮ ಪ್ರಶಸ್ತಿಗಳನ್ನು 2ನೇ ಹಂತದಲ್ಲಿ ಪ್ರದಾನ ಮಾಡಲಾಗುವುದು ಎಂದು ರಾಷ್ಟ್ರಪತಿ ಭವನದ ಮೂಲಗಳು ತಿಳಿಸಿವೆ.

ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮತ್ತಿತರರು ಸಮಾರಂಭದಲ್ಲಿದ್ದರು.

ವರ್ಷಾಂತ್ಯಕ್ಕೆ 3.72 ಲಕ್ಷ ಕೋಟಿ ರು. ವೆಚ್ಚದ ಒಪ್ಪಂದ
114ರಲ್ಲಿ 90 ಯುದ್ಧವಿಮಾನ ಭಾರತದಲ್ಲೇ ಜೋಡಣೆ

ಫ್ರಾನ್ಸ್‌ನಿಂದ ಮತ್ತೆ 114 ರಫೇಲ್ ಖರೀದಿ

ದೆಹಲಿ: ಫ್ರಾನ್ಸ್‌ನಿಂದ ಹೆಚ್ಚುವರಿಯಾಗಿ 114 ರಫೇಲ್ ಯುದ್ಧ ವಿಮಾನಗಳ ಖರೀದಿಗೆ ಭಾರತ ಸರಕಾರ ಮುಂದಾಗಿದ್ದು, 3900 ಕೋಟಿ



ಡಾಲರ್(3.72 ಲಕ್ಷ ಕೋಟಿ ರು.) ವೆಚ್ಚದ ಈ ಅತಿದೊಡ್ಡ ಖರೀದಿ ಒಪ್ಪಂದಕ್ಕೆ ಸದ್ಯದಲ್ಲೇ ಸಹಿ ಹಾಕಲಿದೆ. ಇದರಲ್ಲಿ 90 ಯುದ್ಧ ವಿಮಾನಗಳನ್ನು 'ಮೇಕ್ ಇನ್ ಇಂಡಿಯ' ಪರಿಕಲ್ಪನೆಯಡಿ ಭಾರತದಲ್ಲೇ ಜೋಡಿಸಲಾಗುತ್ತದೆ. ಈ ಒಪ್ಪಂದದಿಂದಾಗಿ ಭಾರತೀಯ ವಾಯುಸೇನೆ ಮತ್ತಷ್ಟು ಬಲಿಷ್ಠಗೊಳ್ಳಲಿದೆ. ಯುದ್ಧ ವಿಮಾನಗಳ ಕೊರತೆ ನೀಗಲಿದೆ. ದೇಶೀಯವಾಗಿ ರಕ್ಷಣಾ ಸಲಕರಣೆಗಳ ಉತ್ಪಾದನಾ ಉದ್ಯಮಕ್ಕೂ ದೊಡ್ಡ ಮಟ್ಟದಲ್ಲಿ ಉತ್ತೇಜನ ನೀಡಿದಂತಾಗಲಿದೆ. ಈ ಖರೀದಿ ಸಂಬಂಧ ಭಾರತ ಔಪಚಾರಿಕ ವಿನಂತಿ ಪತ್ರವನ್ನು ಸಿದ್ಧಪಡಿಸಿದ್ದು, ಮುಂದಿನ ಕೆಲವು ವಾರಗಳಲ್ಲಿ ಫ್ರಾನ್ಸ್‌ಗೆ ಈ ಪತ್ರವನ್ನು ಕಳುಹಿಸಲಾಗುವುದು. ಫ್ರಾನ್ಸ್‌ನ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಮಾನಗಳ ತಯಾರಿಕಾ ಸಂಸ್ಥೆಯಾದ ಡಸಾಲ್ಟ್ ಏವಿಯೇಷನ್ ಭಾರತದ ಕಂಪನಿ ಜತೆಗೂಡಿ 90 ಯುದ್ಧ ವಿಮಾನಗಳನ್ನು ಭಾರತದಲ್ಲೇ ತಯಾರಿಸಲಿದೆ. ಉಳಿದಂತೆ 24 ಯುದ್ಧ ವಿಮಾನಗಳನ್ನು ಫ್ರಾನ್ಸ್‌ನಿಂದಲೇ ತರಿಸಿಕೊಳ್ಳಲಾಗುತ್ತದೆ.

ಈ ಖರೀದಿಯ ಬಳಿಕ ಭಾರತದ ವಾಯುಪಡೆಯಲ್ಲಿನ ರಫೇಲ್ ಯುದ್ಧವಿಮಾನಗಳ ಸಂಖ್ಯೆ 150ಕ್ಕೆ ಮುಟ್ಟಲಿದೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿಯು ಈಗಾಗಲೇ ಈ ಪ್ರಸ್ತಾವನೆಗೆ ಪ್ರಾಥಮಿಕ ಅನುಮೋದನೆ ನೀಡಿದೆ. ಈ 114 ರಫೇಲ್ ಯುದ್ಧ ವಿಮಾನಗಳಲ್ಲಿ ಶೇ. 50ರಷ್ಟು ಬಿಡಿಭಾಗಗಳನ್ನು ಭಾರತದಲ್ಲೇ ತಯಾರಾಗಿರುವುದನ್ನು ಬಳಸಿಕೊಳ್ಳಲು ಉದ್ದೇಶಿಸಲಾಗಿದೆ.

ಅಷ್ಟೇ ಅಲ್ಲದೆ, ಭಾರತದ ಹೆಮ್ಮೆಯ ಶಕ್ತಿಶಾಲಿ ಕ್ಷಿಪಣಿಗಳಾದ 'ಅಸ್ತ್ರ' ಮತ್ತು 'ಬ್ರಹ್ಮೋಸ್-ಎನ್‌ಜಿ'ಗಳನ್ನು ರಫೇಲ್ ಯುದ್ಧ ವಿಮಾನಗಳಲ್ಲಿ ಬಳಸಲು ಅನುವು ಮಾಡಿಕೊಡುವ ಇಂಟರ್‌ಫೇಸ್ ಕಂಟ್ರೋಲ್ ಡಾಕ್ಯುಮೆಂಟ್ (ಐಸಿಡಿ) ಪಡೆಯುವುದಕ್ಕೂ ಭಾರತ ಸರಕಾರ ಫ್ರಾನ್ಸ್ ಸರಕಾರದ ಜತೆ ಮಾತುಕತೆ ನಡೆಸುತ್ತಿದೆ.

ಜೂನ್‌ಗೆ ಮೋದಿ ಫ್ರಾನ್ಸ್‌ಗೆ

ವಾಯುಸೇನೆ ಮುಖ್ಯಸ್ಥ ಏರ್‌ಚೀಫ್ ಮಾರ್ಷಲ್ ಎ.ಪಿ. ಸಿಂಗ್ ಜೂನ್‌ನಲ್ಲಿ ಫ್ರಾನ್ಸ್‌ಗೆ ಭೇಟಿ ನೀಡಲಿದ್ದಾರೆ.ಪ್ರಧಾನಿ ನರೇಂದ್ರ ಮೋದಿ ಅವರೂ ಜೂನ್ ತಿಂಗಳಲ್ಲೇ ಫ್ರಾನ್ಸ್ ಪ್ರವಾಸ ಕೈಗೊಳ್ಳಲಿದ್ದಾರೆ. ಅದಕ್ಕೂ ಮುನ್ನ ರಫೇಲ್ ಖರೀದಿ ಪ್ರಕ್ರಿಯೆ ಸಿದ್ಧವಾಗಿಟ್ಟುಕೊಳ್ಳಲು ಪ್ರಕ್ರಿಯೆಯನ್ನು ವೇಗಗೊಳಿಸಲಾಗಿದೆ. ವರ್ಷಾಂತ್ಯ ವೇಳೆಗೆ ವಾಣಿಜ್ಯ ಮಾತುಕತೆಗಳನ್ನು ಮುಗಿಸಿ ಅಂತಿಮ ಒಪ್ಪಂದಕ್ಕೆ ಸಹಿ ಹಾಕುವ ಗುರಿಯನ್ನು ಎರಡೂ ಸರಕಾರಗಳು ಹೊಂದಿವೆ. ಪ್ರಸ್ತುತ ಭಾರತೀಯ ವಾಯುಸೇನೆಯಲ್ಲಿ 36 ರಫೇಲ್ ವಿಮಾನಗಳು ಯಶಸ್ವಿಯಾಗಿ ಕಾರ್ಯಾಚರಣೆ ನಡೆಸುತ್ತಿವೆ. ಹೆಚ್ಚುವರಿಯಾಗಿ 114 ರಫೇಲ್ ಯುದ್ಧ ವಿಮಾನ ಖರೀದಿಯಿಂದ ಭಾರತೀಯ ವಾಯುಪಡೆಯಲ್ಲಿನ ರಫೇಲ್ ಸಂಖ್ಯೆ 150ಕ್ಕೆ ಮುಟ್ಟಲಿದೆ. ನೌಕಾಸೇನೆಗಾಗಿಯೂ 26 ರಫೇಲ್-ಎಂ ವಿಮಾನಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಕಾಕ್ರೋಚ್ ಬಗ್ಗೆ ಸಿಬಿಐ ತನಿಖೆ: ಸುಪ್ರೀಂಗೆ ಅರ್ಜಿ

ದೆಹಲಿ: ಕಾಕ್ರೋಚ್ ಜನತಾ ಪಾರ್ಟಿ(ಸಿಜೆಪಿ)ಗೆ ಸಂಬಂಧಿಸಿದ ವಿಷಯಗಳನ್ನು ಸಿಬಿಐ ತನಿಖೆಗೆ ವಹಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ತುರ್ತು ವಿಚಾರಣೆಗೆತ್ತಿಕೊಳ್ಳಬೇಕೆಂಬ ಮನವಿಯನ್ನು ಸೋಮವಾರ ತಿರಸ್ಕರಿಸಿದ ಸುಪ್ರೀಂ ಕೋರ್ಟ್, ವಿಷಯವನ್ನು ಅಷ್ಟೊಂದು ಭಾವನಾತ್ಮಕವಾಗಿ ತೆಗೆದುಕೊಳ್ಳದಿರಿ ಎಂದು ಅರ್ಜಿದಾರರಿಗೆ ಕಿವಿಮಾತು ಹೇಳಿದೆ.

ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾ.ಜೋಯ್‌ಮಲ್ಯ ಬಾಗ್ಚಿ ಅವರಿದ್ದ ಪೀಠ, ಈ ಅರ್ಜಿಯ ವಿಷಯದಲ್ಲಿ ಅಂತಹ ಗಂಭೀರತೆ ಕಾಣುತ್ತಿಲ್ಲ. ತುರ್ತು ವಿಚಾರಣೆ ನಡೆಸಬೇಕು ಎಂಬುದೂ ಕಾಣುತ್ತಿಲ್ಲ. ನಂತರ ವಿಚಾರಣೆ ನಡೆಸೋಣ ಎಂದು ತಿಳಿಸಿದೆ.

ಅರ್ಜಿಗೆ ಸಂಬಂಧಿಸಿದ ಮತ್ತೊಬ್ಬ ವಕೀಲರು, ನಕಲಿ ವಕೀಲರ ಪದವಿ ಹಾಗೂ ಕೋರ್ಟ್ ಒಳಗಿನ ಮಾತುಗಳನ್ನು ವಾಣಿಜ್ಯ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಮೇ 15ರಂದು ಹಿರಿಯ ವಕೀಲ ಸ್ಥಾನಮಾನ ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ ವೇಳೆ 'ಸಿಜೆಐ' ಸೂರ್ಯ ಕಾಂತ್ ಅವರು ಕೆಲವು ನಕಲಿ ಪದವೀಧರ ನಿರುದ್ಯೋಗಿ ಯುವಕರು 'ಜಿರಳೆ'ಗಳಂತೆ ತೊಂದರೆ ಉಂಟು ಮಾಡುತ್ತಾರೆ, ವ್ಯವಸ್ಥೆಯ ಮೇಲೆ ದಾಳಿ ಮಾಡಲು ಆರಂಭಿಸುತ್ತಾರೆ ಎಂದು ಹೇಳಿದ್ದನ್ನೇ ಆಧರಿಸಿ ಅಭಿಜಿತ್ ದೀಪ್ಕೆ ಎಂಬ ಯುವಕ ಅಮೆರಿಕದಲ್ಲಿದ್ದುಕೊಂಡು 'ಕಾಕ್ರೋಚ್ ಜನತಾ ಪಾಟಿ' ವೆಬ್ ತಾಣ ಹುಟ್ಟು ಹಾಕಿದ್ದಾನೆ. ಇದು ವಿವಾದಕ್ಕೆ ಕಾರಣವಾಗಿದೆ.

ಸಾರ್ವಜನಿಕರು ಊಹಾಪೋಹಗಳಿಗೆ ಒಳಗಾಗದಿರಿ | ಸಾಕ್ಷ್ಯ-ಹೇಳಿಕೆ ಪ್ರಕಟಿಸದಿರಿ: ಮಾಧ್ಯಮಗಳಿಗೆ ಸುಪ್ರೀಂ ಸೂಚನೆ

ತ್ರಿಷಾ ಶರ್ಮಾ ಶಂಕಾಸ್ಪದ ಸಾವು: ಸಿಬಿಐ ತನಿಖೆಗೆ ಸುಪ್ರೀಂ ಅಸ್ತು

ದೆಹಲಿ: ಸದ್ಯ ದೇಶಾದ್ಯಂತ ಬಹಳ ಚರ್ಚೆಗೊಳಗಾಗಿರುವ ನಟಿ ಮತ್ತು ರೂಪದರ್ಶಿಯಾಗಿದ್ದ ವಿವಾಹಿತೆ ತ್ರಿಷಾ ಶರ್ಮಾ ಶಂಕಾಸ್ಪದ ಸಾವು ವಿಚಾರವಾಗಿ ಸುಪ್ರೀಂ ಕೋರ್ಟ್ ಸ್ವಯಂ ಪ್ರೇರಿತ ಪ್ರಕರಣ ದಾಖಲಿ



ಸಿಕೊಂಡು ಸೋಮವಾರ ವಿಚಾರಣೆ ನಡೆಸಿದ್ದು, ಪ್ರಕರಣದ ತನಿಖೆಯನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐಗೆ) ಒಪ್ಪಿಸಲು ಒಪ್ಪಿಗೆ ಸೂಚಿಸಿದೆ. ಭಾರತದ ಮುಖ್ಯ ನ್ಯಾಯ ಮೂರ್ತಿ(ಸಿಜೆಐ) ಸೂರ್ಯ ಕಾಂತ್, ನ್ಯಾ.ಜೊಯ್‌ಮಲ್ಯ ಬಾಗ್ಚಿ ಮತ್ತು ನ್ಯಾ.ವಿಪುಲ್ ಎಂ.ಪಂಚೋಲಿ ಅವರ ನೇತೃತ್ವದ ತ್ರಿಸದಸ್ಯ ಪೀಠ ಪ್ರಕರಣದ ನಿಷ್ಪಕ್ಷಪಾತ ತನಿಖೆಗಾಗಿ ಪ್ರಕರಣವನ್ನು ಸಿಬಿಐಗೆ ವಹಿಸಿ ಆದೇಶ ಹೊರಡಿಸಿದೆ. ಅಲ್ಲದೆ, ದೇಶದ ಪ್ರಮುಖ ತನಿಖಾ ಸಂಸ್ಥೆ ಸಿಬಿಐ ಮೇಲೆ ಸಾರ್ವಜನಿಕರು ವಿಶ್ವಾಸ ಇಡಬೇಕು ಎಂದು ಪೀಠ ಹೇಳಿದೆ. ಮಧ್ಯಪ್ರದೇಶ ಸರಕಾರವೂ ಈ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಶಿಫಾರಸು ಮಾಡಿತ್ತು.



ತ್ರಿಷಾ ಶರ್ಮಾ
ಸಮರ್ಥ್ ಶರ್ಮಾ

ಗಿರಿಬಾಲಾ

ಈ ಪ್ರಕರಣ ದೇಶಾದ್ಯಂತ ಭಾವನಾತ್ಮಕ ಚರ್ಚೆಗೆ ಕಾರಣವಾಗಿರುವ ಹಿನ್ನೆಲೆಯಲ್ಲಿ, ಸಾರ್ವಜನಿಕರು ಊಹಾಪೋಹಗಳಿಗೆ ಒಳಗಾಗದೆ ತನಿಖಾ ಸಂಸ್ಥೆಗಳ ಮೇಲೆ ನಂಬಿಕೆ ಇಡಬೇಕು ಎಂದು ಸುಪ್ರೀಂ ಕೋರ್ಟ್ ಮನವಿ ಮಾಡಿದೆ. ತ್ರಿಷಾ ಪ್ರಕರಣವನ್ನು ಸಿಬಿಐಗೆ ವಹಿಸುವ ವಿಚಾರವಾಗಿ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಜತೆ ಚರ್ಚಿಸಿ ಶೀಘ್ರ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಾಲಿಸಿಟರ್ ಜನರಲ್ ಅವರು ನ್ಯಾಯಾಲಯಕ್ಕೆ ಮಾಹಿತಿ ನೀಡಿದರು.

ಮಾಧ್ಯಮಗಳ ಹಸ್ತಕ್ಷೇಪದಿಂದ ಪ್ರಕರಣದಲ್ಲಿ ಕೆಲ ಮಹತ್ವದ ಬೆಳವಣಿಗೆಗಳಾಗಿವೆ ಎಂದು ಮಧ್ಯಪ್ರದೇಶ ಸರಕಾರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ಹೇಳಿದರು. ಸುದ್ದಿವಾಹಿನಿಗಳಲ್ಲಿನ ಕೆಲವು ನಡೆ ಗಳು ಸಂತ್ರಸ್ತ ಕುಟುಂಬಕ್ಕೆ ಮತ್ತಷ್ಟು ನೋವು ಉಂಟು ಮಾಡಿವೆ. ತ್ರಿಷಾ ಪೋಷಕರ ಹೇಳಿಕೆಗಳನ್ನು ಸೌಂಡ್ ಬೈಟ್‌ಗಳಾಗಿ ಪರಿವರ್ತಿಸಿ ಪ್ರಸಾರ ಮಾಡುವುದು ಸರಿಯಲ್ಲ ಎಂದು ಹೇಳಿದ ಪೀಠ, ಸಾಕ್ಷಿದಾರರಾಗುವ ಸಾಧ್ಯತೆ ಇರುವವರ ಹೇಳಿಕೆಗಳನ್ನು ನಿರಂತರ ವಾಗಿ ಪ್ರಸಾರ ಮಾಡಬಾರದು. ಇದು ತನಿಖೆಯ ದಿಕ್ಕಿನ ಮೇಲೆ ಪರಿಣಾಮ ಬೀರುತ್ತದೆ ಎಂದು ಎಚ್ಚರಿಸಿತು.

ಸಂತ್ರಸ್ತ ಮತ್ತು ಆರೋಪಿ ಕುಟುಂಬದವರು ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡುವುದಕ್ಕಿಂತ ತನಿಖಾ ಸಂಸ್ಥೆ ಮತ್ತು ಕೋರ್ಟ್ ಮುಂದೆ ತಮ್ಮ ಹೇಳಿಕೆಗಳನ್ನು ದಾಖಲಿಸಬೇಕು ಎಂದು ಪೀಠ ಸೂಚಿಸಿತು. ಮಧ್ಯಪ್ರದೇಶ ಹೈಕೋರ್ಟ್ 2ನೇ ಮರಣೋತ್ತರ ಪರೀಕ್ಷೆಗೆ ತ್ವರಿತವಾಗಿ ಆದೇಶ ನೀಡಿದ್ದನ್ನೂ ಸುಪ್ರೀಂ ಕೋರ್ಟ್ ಶ್ಲಾಘಿಸಿತು.

ಸುಮೋಟೊ ಪ್ರಕರಣ

'ಮಿಸ್ ಪುಣೆ' ಎನಿಸಿಕೊಂಡಿದ್ದ ನಟಿ ತ್ರಿಷಾ ಶರ್ಮಾ ಅವರು ಮದುವೆಯಾದ 5 ತಿಂಗಳಲ್ಲೇ, ಅಂದರೆ ಮೇ 12ರಂದು ಮಧ್ಯಪ್ರದೇಶದ ಭೋಪಾಲ್‌ನಲ್ಲಿರುವ ತಮ್ಮ ಪತಿಯ ಮನೆಯ ತಾರಸಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ತ್ರಿಷಾ ಪೋಷಕರು ಇದು ವರದಕ್ಷಿಣೆ ಕಿರುಕುಳ ಮತ್ತು ಕೊಲೆ ಎಂದು ಆರೋಪಿಸಿ ದೂರು ದಾಖಲಿಸಿದ್ದಾರೆ. ತ್ರಿಷಾ ಪತಿ, ವಕೀಲ ಸಮರ್ಥ್ ಸಿಂಗ್ ಮತ್ತು ಆತನ ತಾಯಿ ಗಿರಿಬಾಲಾ ಸಿಂಗ್(ನಿವೃತ್ತ ಜಿಲ್ಲಾ ನ್ಯಾಯಾಧೀಶೆ) ಪ್ರಕರಣದ ಪ್ರಮುಖ ಆರೋಪಿಗಳಾಗಿದ್ದಾರೆ. ಪತಿ ಸಮರ್ಥ್ ಸಿಂಗ್ ಸದ್ಯ ಪೊಲೀಸ್ ಕಸ್ಟಡಿಯಲ್ಲಿದ್ದಾರೆ. ಆರೋಪಿಗಳ ಕುಟುಂಬ ಕಾನೂನು ತಜ್ಞರಾಗಿರುವುದರಿಂದ ಸ್ಥಳೀಯ ತನಿಖೆಯಲ್ಲಿ ಸಾಂಸ್ಥಿಕ ಪಕ್ಷಪಾತ ಕಂಡು ಬಂದಿದೆ ಮತ್ತು ಭಾರೀ ಲೋಪಗಳಾಗಿವೆ ಎಂಬ ಆರೋಪ ಕೇಳಿಬಂದ ಹಿನ್ನೆಲೆ ಸುಪ್ರೀಂಕೋರ್ಟ್ ಶನಿವಾರ 'ಸುಮೋಟೊ'(ಸ್ವಯಂಪ್ರೇರಿತ) ಪ್ರಕರಣ ದಾಖಲಿಸಿಕೊಂಡು, ಸೋಮವಾರ ವಿಚಾರಣೆ ಆರಂಭಿಸಿದೆ.

4 ವರ್ಷದ ಯುದ್ಧ: 6 ಜನ ಕಾಣೆ, 23 ಮಂದಿ ಮಾಹಿತಿಯೆ ಇಲ್ಲ | 139 ಯುವಕರನ್ನು ಭಾರತಕ್ಕೆ ವಾಪಸ್ ಕರೆತರಲು ಪ್ರಯತ್ನ | ಸುಪ್ರೀಂಕೋರ್ಟ್‌ಗೆ ಹೆಚ್ಚುವರಿ ಸಾಲಿಸಿಟರ್ ಜನರಲ್ ಹೇಳಿಕೆ

ರಷ್ಯಾ ಸೇನೆ ಸೇರಿದ್ದ ಭಾರತದ 217 ಯುವಕರಲ್ಲಿ 49 ಸಾವು

ದೆಹಲಿ: ರಷ್ಯಾ-ಉಕ್ರೇನ್ ನಡುವೆ ಕಳೆದ 4 ವರ್ಷಗಳಿಂದ ನಡೆಯುತ್ತಿರುವ ಯುದ್ಧದ ಅವಧಿಯಲ್ಲಿ ಒಟ್ಟು 217 ಭಾರತೀಯರು ರಷ್ಯಾ ಸೇನೆಗೆ ಸೇರ್ಪಡೆಗೊಂಡಿದ್ದು, ಅವರಲ್ಲಿ 49 ಮಂದಿ ಯುದ್ಧ ಅವಧಿಯಲ್ಲಿ ಹತರಾಗಿದ್ದಾರೆ, 6 ಮಂದಿ ಕಾಣೆಯಾಗಿದ್ದಾರೆ ಮತ್ತು 23 ಜನರ ಬಗ್ಗೆ ಯಾವುದೇ ಮಾಹಿತಿ

ಲಭ್ಯವಿಲ್ಲ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಉಳಿದ 139 ಭಾರತೀಯರನ್ನು ರಷ್ಯಾ ಸೇನೆಯಿಂದ ಬಿಡುಗಡೆಗೊಳಿಸುವಲ್ಲಿ ಯಶಸ್ವಿಯಾಗಿರುವ ರಷ್ಯಾದಲ್ಲಿನ ಭಾರತದ ಧೂತಾವಾಸ ಕಚೇರಿ, ವಾಪಸ್ ದೇಶಕ್ಕೆ ಕರೆತರಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ ಎಂದು ವಿವರವನ್ನು ಕೇಂದ್ರ ಸರಕಾರದ ವಿದೇಶಾಂಗ ಸಚಿವಾಲಯ ನ್ಯಾಯಾಲಯಕ್ಕೆ ನೀಡಿದೆ.

ವಿದೇಶಾಂಗ ಸಚಿವಾಲಯದ ಪರವಾಗಿ ಸುಪ್ರೀಂ ಕೋರ್ಟ್‌ಗೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾತಿ ಅವರು, ಹೆಚ್ಚಿನ ಸಂಬಳ-ಭತ್ಯೆಯ ಆಸೆಯಿಂದ ರಷ್ಯಾ ಸೇನೆಗೆ ಸೇರ್ಪಡೆಯಾಗಿದ್ದ ಭಾರತೀಯರ ಬಗ್ಗೆ ಹಾಗೂ ಅವರ ಸದ್ಯದ ಸ್ಥಿತಿಗತಿಯ ಬಗ್ಗೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ನೇತೃತ್ವದ ಪೀಠಕ್ಕೆ ಅಧಿಕೃತ ಹೇಳಿಕೆ ದಾಖಲಿಸಿದರು.

ರಷ್ಯಾದಲ್ಲಿ ಸೇನೆಗೆ ಸೇರಿಕೊಂಡು ಬಳಿಕ ಸಂಕಷ್ಟಕ್ಕೆ ಸಿಲುಕಿರುವ ಭಾರತೀಯ ಯುವಕರಿಗೆ ಭಾರತ ಸರಕಾರ ಯಾವುದೇ ರೀತಿಯಲ್ಲಿಯೂ ನೆರವು ಒದಗಿಸುತ್ತಿಲ್ಲ ಎಂದು ಯುವಕರ ಕುಟುಂಬದವರು ದೂರುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಐಶ್ವರ್ಯ ಭಾತಿ, ಮಾಸ್ಕೋದಲ್ಲಿರುವ ಭಾರತದ ದೂತವಾಸವು ಸೇನೆಗೆ ಸೇರ್ಪಡೆಯಾಗಿರುವ ಭಾರತದ ಯುವಕರ ವಿಚಾರವಾಗಿ ರಷ್ಯಾ ಸರಕಾರದ ಜತೆಗೆ ನಿರಂತರ ಮಾತುಕತೆ ನಡೆಸುತ್ತಿದೆ. ಕಾಣೆಯಾಗಿರುವ ಯುವಕರ ಕುರಿತು ಮಾಹಿತಿ ಒದಗಿಸುವಂತೆ ಒತ್ತಡ ಹಾಕಿದೆ. ಉಳಿದವರನ್ನು ಭಾರತಕ್ಕೆ ವಾಪಸ್ ಕಳುಹಿಸಿಕೊಡಲು ಶ್ರಮಿಸುತ್ತಿದೆ. ಈವರೆಗೆ ಸಮುದಾಯದ ಆರ್ಥಿಕ ನೆರವು ನಿಧಿಯಡಿ 48 ಯುವಕರಿಗೆ ವಿಮಾನ ಟಿಕೆಟ್ ಖರೀದಿಸಿಕೊಡಲಾಗಿದೆ ಎಂದು ಹೇಳಿಕೆ ನೀಡಿದರು.

ಭಾರತದ ಯುವಕರು ರಷ್ಯಾ ಸೇನೆ ಸೇರಿದ್ದೇಕೆ?

ಭಾರತದ ಯುವಕರಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯ ಜನರು ರಷ್ಯಾ ಸೇನೆ ಸೇರುತ್ತಿರುವುದೇಕೆ? ಎಂಬ ಪ್ರಶ್ನೆಗೆ, 'ಮಾಸಿಕ 2500 ಅಮೆರಿಕನ್ ಡಾಲರ್(2.39 ಲಕ್ಷ ರು.) ವೇತನ, 5000 ಡಾಲರ್‌ಗಳ(4.78 ಲಕ್ಷ ರು.) ವಾರ್ಷಿಕ ಬೋನಸ್, ಒಂದೊಮ್ಮೆ ಯುದ್ಧದಲ್ಲಿ ಸಾವಿಗೀಡಾದರೆ ಕುಟುಂಬದವರಿಗೆ 1.68 ಲಕ್ಷ ಡಾಲರ್(1.61 ಕೋಟಿ ರು.) ಪರಿಹಾರದ ಹಣ ಸಿಗುತ್ತದೆ ಎಂಬ ಕಾರಣಕ್ಕೆ ಬಹಳಷ್ಟು ಯುವಕರು ರಷ್ಯಾ ಸೇನೆಗೆ ಸೇರಿಕೊಂಡು ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಭಾಗಿಯಾಗುತ್ತಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ ಎಂದು ಐಶ್ವರ್ಯಾ ಭಾತಿ ವಿವರಿಸಿದ್ದಾರೆ. ಕಾಡಿನಲ್ಲಿ ಮರ ಕತ್ತರಿಸುವ ಕೆಲಸಕ್ಕೆಂದು ಮಾಸ್ಕೊಗೆ ಹೋಗಿದ್ದ ಉತ್ತರ ಪ್ರದೇಶದ ಅಜಂಗಢದ ಐವರು ಬಳಿಕ ಹೆಚ್ಚಿನ ಸಂಬಳ-ಭತ್ಯೆಯ ಆಸೆಯಿಂದ ರಷ್ಯಾ ಸೇನೆ ಸೇರಿದರು. ರಾಕೇಶ್ ಯಾದವ್ ಉಕ್ರೇನ್ ವಿರುದ್ಧದ ಯುದ್ಧದಲ್ಲಿ ಗಾಯಗೊಂಡ ಕಾರಣಕ್ಕೆ ಸೇನೆಯಿಂದ ಬಿಡುಗಡೆಗೊಂಡು ಭಾರತಕ್ಕೆ ಮರಳಿದ್ದಾನೆ. ಉಳಿದ ನಾಲ್ವರೂ ಯೋಗೇಂದ್ರ ಯಾದವ್, ಧೀರೇಂದ್ರಕುಮಾರ್, ವಿನೋದ್ ಯಾದವ್, ಅರವಿಂದ್ ಕುಮಾರ್ ಕಾಣೆಯಾಗಿದ್ದು, ಈವರೆಗೂ ಅವರ ಇರುವಿಕೆ ಬಗ್ಗೆ ಮಾಹಿತಿ ಸಿಕ್ಕಿಲ್ಲ.ಯುದ್ಧರಂಗದಲ್ಲಿ ಹತರಾಗಿರುವ ಭಾರತೀಯ ಯುವಕರ ಕುಟುಂಬದವರಿಗೆ ರಷ್ಯಾ ಸರಕಾರದಿಂದ ಪರಿಹಾರ ಧನ ಕೊಡಿಸಿಕೊಡುವುದಕ್ಕೂ ಭಾರತ ಸರಕಾರ ಮಾತುಕತೆ ನಡೆಸುತ್ತಿದೆ. ಇಂಥ 4 ಅರ್ಜಿಗಳನ್ನು ಸಲ್ಲಿಸಲಾಗಿದ್ದು, ಒಂದು ಕುಟುಂಬಕ್ಕೆ ಈಗಾಗಲೇ ಪರಿಹಾರದ ಹಣ ಸಿಕ್ಕಿದೆ. ಮೃತರಲ್ಲಿ 21 ಮಂದಿಯ ಗುರುತು ಪತ್ತೆಯಾಗದ ಕಾರಣ ಭಾರತದಲ್ಲಿನ ಅವರ ಕುಟುಂಬಗಳ ಸದಸ್ಯರಿಂದ ಡಿಎನ್‌ಎ ಮಾದರಿ ಸಂಗ್ರಹಿಸಿ ಮಾಸ್ಕೊಗೆ ಕಳುಹಿಸಿಕೊಡಲಾಗಿದೆ ಎಂದು ಪೀಠಕ್ಕೆ ವಿವರ ನೀಡಿದರು.

ಫೋಟೊದಲ್ಲಿ ಕೆಂಪುಕೈಗವಸು ಧರಿಸಿರುವಾತ ರಾಕೇಶ್ ಯಾದವ್ ಭಾರತಕ್ಕೆ ಮರಳಿದ್ದರೆ, ಉಳಿದ ನಾಲ್ವರೂ ಕಣ್ಮರೆಯಾಗಿದ್ದಾರೆ.

ಜೈಲು ಶಿಕ್ಷೆ ತಪ್ಪಿಸಿಕೊಳ್ಳಲು ರಷ್ಯಾ ಸೇನೆಗೆ ಸೇರ್ಪಡೆ

ಇದಲ್ಲದೇ, ಕೆಲವು ಅಪರಾಧ ಪ್ರಕರಣಗಳಲ್ಲಿ ಬಂಧಿತರಾಗಿ ರಷ್ಯಾ ಸೆರೆಮನೆಯಲ್ಲಿರುವ ಭಾರತೀಯ ಯುವಕರೂ ಜೈಲಿನಿಂದ ಬಿಡುಗಡೆ ಹೊಂದುವ ಆಸೆಯಿಂದ ರಷ್ಯಾ ಸೇನೆಗೆ ಸೇರಿಕೊಂಡಿದ್ದಾರೆ. ಕಿಶೋರ್ ಸರವಣನ್ ಮತ್ತು ಸಾಹಿಲ್ ಮಹಾಮಧುಸೇನ್ ಮಜೋಥಿ ಎಂಬ ಇಬ್ಬರು ಯುವಕರು ಮಾದಕದ್ರವ್ಯ ಪ್ರಕರಣದಲ್ಲಿ ಬಂಧಿತರಾಗಿ ರಷ್ಯಾ ಜೈಲು ಸೇರಿದ್ದರು.ಜೈಲಿನಿಂದ ಸದ್ಯಕ್ಕೆ ಬಿಡುಗಡೆ ಆಗುವುದಿಲ್ಲ ಎಂದು ಈ ಯುವಕರಿಗೆ ಆತಂಕವಿತ್ತು. ಹಾಗಾಗಿಯೇ ಅವರು ಜೈಲಿನಿಂದ ಹೊರಬರುವ ಉದ್ದೇಶದಿಂದಲೇ ರಷ್ಯಾ ಸೇನೆಗೆ ಸೇರಿಕೊಂಡರು. ಭಾರತ ಸರಕಾರದ ಮಧ್ಯಪ್ರವೇಶದ ಕಾರಣ ಸರವಣನ್‌ನನ್ನು ರಷ್ಯಾ ಸೇನೆಯಿಂದ ಬಿಡುಗಡೆ ಮಾಡಿಸಲಾಯಿತು. ಆದರೆ ಆತ ಮಾಸ್ಕೋದಲ್ಲೇ ನೆಲೆಸುವ ನಿರ್ಧಾರ ಮಾಡಿದ, ರಷ್ಯಾ ಪೌರತ್ವವನ್ನೂ ಪಡೆದುಕೊಂಡ. ಇನ್ನು ಮಜೋಥಿ ಯುದ್ಧಭೂಮಿಗೆ ಕಳುಹಿಸಿದಾಗ ಉದ್ದೇಶಪೂರ್ವಕವಾಗಿಯೇ ಉಕ್ರೇನ್ ಸೇನೆಯೆದುರು ಶರಣಾದ. ಸದ್ಯ ಉಕ್ರೇನ್ ಸೇನೆ ವಶದಲ್ಲಿರುವ ಮಜೋಥಿಯನ್ನು ಭಾರತಕ್ಕೆ ಕರೆತರುವ ಪ್ರಯತ್ನ ನಡೆದಿದೆ. ಇನ್ನೊಂದು ಪ್ರಕರಣದಲ್ಲಿ ಕೋಲ್ಕತ್ತದ ಯುವಕ ಆಶಿಮ್ ಕುಮಾರ್ ಚಟರ್ಜಿ ಎಂಬಾತ ಇನ್ನೇನು ರಷ್ಯಾ ಸೇನೆಗೆ ಸೇರಲಿದ್ದಾನೆ ಎಂಬ ಸಂದರ್ಭದಲ್ಲಿ ಭಾರತ ಸರಕಾರ ಮಧ್ಯಪ್ರವೇಶಿಸಿದ್ದ ರಷ್ಯಾ ಸೇನೆ ಆತನನ್ನು ನೇಮಿಸಿಕೊಳ್ಳುವುದನ್ನು ಕೈಬಿಟ್ಟಿದೆ ಎಂದು ಐಶ್ವರ್ಯಾ ಭಾತಿ ನ್ಯಾಯಾಲಯಕ್ಕೆ ಮಾಹಿತಿ ನೀಡಿದ್ದಾರೆ.

ಸೆಬಿಯಿಂದ ವರ್ಕ್ ಫ್ರಂ ಹೋಂ ಜಾರಿ



ಮುಂಬೈ: ಭಾರತದಲ್ಲಿನ ಷೇರು ಮಾರುಕಟ್ಟೆ ನಿಯಂತ್ರಣಕ್ಕೆ ಸಂಬಂಧಿಸಿದ ಅಧಿಕೃತ ಸಂಸ್ಥೆಯಾದ 'ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬ್ಯೂರೊ ಆಫ್ ಇಂಡಿಯ'(ಎಸ್‌ಇಬಿಐ-ಸೆಬಿ) ತನ್ನ ಉದ್ಯೋಗಿಗಳನ್ನು ಸೋಮವಾರದಿಂದ ಕಚೇರಿ ಕೆಲಸವನ್ನು ಮನೆಯಿಂದಲೇ ಮಾಡುವಂತೆ ಹೇಳಿದೆ. ಆ ಮೂಲಕ ಪ್ರಧಾನಿ ನರೇಂದ್ರ ಮೋದಿ ಅವರ ಇಂಧನ ಮಿತವ್ಯಯ ಕರೆಗೆ 'ಸೆಬಿ' ಓಗೊಟ್ಟಿದೆ.

ಮುಖ್ಯವಾಗಿ ಗ್ರೇಡ್ ಎ ನಿಂದ ಗ್ರೇಡ್ ಸಿವರೆಗಿನ ಉದ್ಯೋಗಿಗಳಿಗೆ ವಾರದಲ್ಲಿ ಒಂದು ದಿನ ವರ್ಕ್ ಫ್ರಮ್ ಹೋಮ್ ಅನುಮತಿಸಲಾಗಿದೆ. ಇಂಧನ ಪೂರೈಕೆ ಪರಿಸ್ಥಿತಿ ಸುಧಾರಿಸುವವರೆಗೂ 'ವರ್ಕ್ ಫ್ರಮ್ ಹೋಮ್' ನೀತಿ ಜಾರಿಗೊಳಿಸಿರುವುದಾಗಿ ಸೆಬಿ ತನ್ನ ಉದ್ಯೋಗಿಗಳಿಗೆ ತಿಳಿಸಿದೆ.

ಕಚೇರಿಗೆ ಬರಲೇಬೇಕಿರುವ ಸಿಬ್ಬಂದಿಗಳಿಗೆ ಈ ನಿಯಮ ಅನ್ವಯಿಸುವುದಿಲ್ಲ. ಹಿರಿಯ ಅಧಿಕಾರಿಗಳು ಸೇರಿದಂತೆ ಕೆಲ ಉದ್ಯೋಗಿಗಳು ಸಾರ್ವಜನಿಕ ಸಾರಿಗೆ ಬಳಸಿಕೊಂಡು ಕಚೇರಿಗೆ ಆಗಮಿಸಬೇಕಿದೆ. ಶೇ.50ರಷ್ಟು ಉದ್ಯೋಗಿಗಳು ಕಚೇರಿಯಲ್ಲಿರುವಂತೆ ನೋಡಿಕೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದೂ ಸೆಬಿ ಸುತ್ತೋಲೆ ಸ್ಪಷ್ಟಪಡಿಸಿದೆ.

ಕಾನ್ಫರೆನ್ಸ್ ಕೊಠಡಿಯಲ್ಲಿನ ಕಚೇರಿ ಸಭೆಗಳನ್ನು ಆನ್‌ಲೈನ್ ಮೂಲಕ(ವರ್ಚುವಲ್) ನಡೆಸಲೂ ಸೆಬಿ ನಿರ್ಧರಿಸಿದೆ. ಕೆಲ ತರಬೇತಿ ಕಾರ್ಯಾಗಾರಗಳನ್ನು ಮುಂದೂಡಲಾಗಿದೆ.

ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕುತ್ತಿರುವ ಕೇಂದ್ರ ಸರಕಾರ: ಸುರ್ಜೇವಾಲಾ ಆಕ್ರೋಶ

ಕೇಂದ್ರದಿಂದ ಇಂಧನದ ಹೆಸರಲ್ಲಿ ಲೂಟಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು



ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗುತ್ತಿದ್ದರೂ, ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರವನ್ನು ನಿರಂತರವಾಗಿ ಹೆಚ್ಚಿಸುವ ಮೂಲಕ ಕೇಂದ್ರದ ಬಿಜೆಪಿ ಸರಕಾರ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ಬಿಜೆಪಿ ಸರಕಾರಕ್ಕೆ ಲೂಟಿ ಹೊಡೆಯುವುದಕ್ಕೆ ಕೊನೆ ಎಂಬುದೇ ಇಲ್ಲದಂತಾಗಿದೆ. ಸಾರ್ವಜನಿಕರನ್ನು ನಿರಂತರವಾಗಿ ಲೂಟಿ ಮಾಡುತ್ತಿರುವ ಈ ನಡೆ ಸಂಪೂರ್ಣ ದೇಶ ವಿರೋಧಿಯಾಗಿದೆ. ಬಿಜೆಪಿ ನಾಯಕರಾದ ನಿತೀನ್ ನಬಿನ್ ಬೆಂಗಳೂರಿಗೆ ಬಂದು ಹೋಗಿದ್ದಾರೆ. ಅವರು ಬಂದ ಬೆನ್ನಲ್ಲೇ ರಾಜ್ಯದಲ್ಲಿ ಬೆಲೆ ಏರಿಕೆಯ ಬರೆ ಎಳೆಯಲಾಗಿದೆ. ಇದು ಕನ್ನಡಿಗರಿಗೆ ಬಿಜೆಪಿ ನೀಡಿದ ಅಪ್ಪಟ ಕೊಡುಗೆಯಾಗಿದೆ. ಇಷ್ಟೆಲ್ಲಾ ದರ ಹೆಚ್ಚಳ ಮಾಡಿ ಜನರ ಜೀವನದ ಜತೆ ಆಟವಾಡುತ್ತಿದ್ದರೂ, ಬಿಜೆಪಿ ನಾಯಕರು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಟೀಕಿಸಿದರು.

ಯುಪಿಎ ಸರಕಾರದ ಅವಧಿಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ 108 ಡಾಲರ್ ಇತ್ತು. ಆದರೂ ಆಗ ಜನ ಸಾಮಾನ್ಯರ ಮೇಲೆ ಹೊರೆ ಹಾಕಿರಲಿಲ್ಲ. ಸದ್ಯ ಕಚ್ಚಾತೈಲ ಬೆಲೆ ಬ್ಯಾರಲ್‌ಗೆ 97.06 ಡಾಲರ್ ಆಸುಪಾಸಿನಲ್ಲಿದೆ. ಹೀಗಿದ್ದೂ ದೇಶದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 110 ರು.ದಾಟಿದೆ. ಕಳೆದ 11 ದಿನಗಳಲ್ಲೇ ಸತತ 4 ಬಾರಿ ಬೆಲೆ ಏರಿಕೆ ಮಾಡಲಾಗಿದ್ದು, ಇದು 70 ವರ್ಷಗಳ ಇತಿಹಾಸದಲ್ಲೇ ಅತಿ ದೊಡ್ಡ ಏರಿಕೆಯಾಗಿದೆ ಎಂದು ಆರೋಪಿಸಿದರು.

ಮೋದಿಯಿಂದ ಜನಸಾಮಾನ್ಯರ ಲೂಟಿ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೋದಿಯವರು ಪ್ರಧಾನಿ ಆದ ಬಳಿಕ ಸತತವಾಗಿ ಪೆಟ್ರೋಲ್ ಡೀಸೆಲ್ ಬೆಲೆ ಏರಿಸುವುದನ್ನು ರೂಢಿ ಮಾಡಿಕೊಂಡಿದ್ದು ಈ ಬಾರಿ ಸತತ ನಾಲ್ಕನೇ ದಿನ ಇಂಧನ ದರ ಏರಿಕೆ ಮಾಡಿ ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದಾರೆ. ಕೇಂದ್ರ ಸರಕಾರ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ದರಗಳ ಏರಿಸಿದ್ದು, ದೇಶದ ಇತಿಹಾಸದಲ್ಲಿ ಹೀಗೆ ಏರಿಕೆಯಾಗಿರಲಿಲ್ಲ. ಜನ ಸಾಮಾನ್ಯರು, ಮಧ್ಯಮ ವರ್ಗದ ಜನರ ಜೀವನ ದುಸ್ತರವಾಗಿದೆ. ಬೆಲೆಯೇರಿಕೆಯಿಂದ ಜನ ತತ್ತರಿಸಿದ್ದಾರೆ ಎಂದು ಟೀಕಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರಕಾರ ಬರುತ್ತದೆ, ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಕಳೆದ 11 ದಿನಗಳಿಂದ 4 ಬಾರಿ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ದರ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110.93 ರು.ಗಳಾಗಿವೆ. ಡೀಸೆಲ್ ದರ 98.89 ರು.ಗಳಾಗಿವೆ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2014ರ ಮೇ ತಿಂಗಳಲ್ಲಿ 71.41 ರು. ಪೆಟ್ರೋಲ್ ಲೀ. ಒಂದಕ್ಕೆ ಬೆಲೆಯಿದ್ದರೆ, ಡೀಸೆಲ್ 56.71 ಪೈಸೆಯಿತ್ತು. ಅಂದು 412 ರು. ಆಗಿದ್ದ ಗ್ಯಾಸ್ ಸಿಲಿಂಡರ್ ಬೆಲೆ , ಇಂದು 915 ರು. ಆಗಿದೆ , ಇದು ದುಪ್ಪಟ್ಟಿಗಿಂತ ಹೆಚ್ಚಾಗಿದೆ. ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಹೋಲಿಸಿದರೆ ಪ್ರಸ್ತುತ ಬೆಲೆ ಇಳಿದಿದ್ದರೂ ಕೂಡ, ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚುತ್ತಿದೆ. 65ರಿಂದ 75 ಡಾಲರ್ ಬೆಲೆ ಇದ್ದಾಗ, ಈ ಕಡಿಮೆ ಬೆಲೆಯ ಲಾಭ, ಗ್ರಾಹಕರಿಗೆ ದೊರೆಯಲಿಲ್ಲ. ಪ್ರಸ್ತುತ ಕಚ್ಚಾ ತೈಲದ ಬೆಲೆ 100 ಡಾಲರ್ ಮಿತಿಯೊಳಗಿದ್ದರೂ, ಕೇಂದ್ರ ಸರಕಾರ ಪೆಟ್ರೋಲ್ ಡೀಸೆಲ್ ಬೆಲೆಯನ್ನು ಸತತ ನಾಲ್ಕು ಬಾರಿ ಏರಿಕೆ ಮಾಡಿದೆ. ಇದರಿಂದಾಗಿ ಗ್ರಾಹಕರಿಗೆ, ರೈತರಿಗೆ, ಜನಸಾಮಾನ್ಯರಿಗೆ ಈ ಬೆಲೆ ಏರಿಕೆಯ ಬಿಸಿ ತಟ್ಟಲಿದೆ. ಮೋದಿಯವರು ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

> ಕೇಂದ್ರ ಸರಕಾರದ ಬೆಲೆ ಏರಿಕೆ ವಿರುದ್ಧ ಸುಲಿಗೆ ಎಂದು ಟೀಕೆ ಮಾಡಿದೆವು, 100 ನಾಟೌಟ್ ಎಂದು ಪ್ರತಿಭಟನೆ ಮಾಡಿದೆವು. ನಿಘಂಟಿನಲ್ಲಿರುವ ಎಲ್ಲಾ ಪದ ಪ್ರಯೋಗ ಮಾಡಿ ಟೀಕೆ ಮಾಡಿದರೂ ಮಾನ ಮರ್ಯಾದೆ ಇಲ್ಲದೆ, ರಾಜ್ಯ ಸರಕಾರ ತೆರಿಗೆ ಕಡಿಮೆ ಮಾಡಬೇಕು ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಮೊದಲು ನೀವು ಕೇಂದ್ರ ಸರಕಾರದ ಸುಲಿಗೆ ನಿಲ್ಲಿಸಿ.
>
> **-ಡಿ.ಕೆ.ಶಿವಕುಮಾರ್**
> ಉಪಮುಖ್ಯಮಂತ್ರಿ

ಬಿಜೆಪಿಯಿಂದ ಬೆಲೆ ಏರಿಕೆ, ಕಾಂಗ್ರೆಸ್‌ನಿಂದ ಗ್ಯಾರಂಟಿ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬಿಜೆಪಿಯ ಕೇಂದ್ರ ಸರಕಾರ ಬೆಲೆ ಏರಿಕೆ ಮೂಲಕ ಜನರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದರೆ, ರಾಜ್ಯ ಕಾಂಗ್ರೆಸ್ ಸರಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಆರ್ಥಿಕ ಹೊರೆ ಇಳಿಸುತ್ತಿದೆ. ಕಾಂಗ್ರೆಸ್ ಗ್ಯಾರಂಟಿ ಇಲ್ಲವಾಗಿದ್ದರೆ ಪರಿಸ್ಥಿತಿ ಯಾವ ರೀತಿ ಇರುತ್ತಿತ್ತು ಎಂದು ಆಲೋಚನೆ ಮಾಡಿ ಎಂದರು. ನಮ್ಮ ಗ್ಯಾರಂಟಿ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶವೇ ಮೆಚ್ಚಿದೆ. ವಿಶ್ವಸಂಸ್ಥೆಯೇ ಪ್ರಶಂಸೆ ನೀಡಿದೆ. ಬೆಲೆ ಏರಿಕೆ ಗಗನಕ್ಕೆ, ಆದಾಯ ಪಾತಾಳಕ್ಕೆ ಕುಸಿಯುತ್ತಿದೆ. ಅನೇಕ ಹೊಟೇಲ್ ಗಳು ಸಿಲಿಂಡರ್ ದರ ಏರಿಕೆ ಹಾಗೂ ಅಭಾವದಿಂದ ಅರ್ಧ ಬಂದ್ ಮಾಡಿದ್ದಾರೆ. ಈ ವರ್ಷ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಮಾರ್ಚ್ 1ರಂದು 28 ರು., ಮಾರ್ಚ್ 7ರಂದು 114.50 ರು., ಮಾರ್ಚ್ 23ರಂದು 49 ರು., ಏಪ್ರಿಲ್ 1ರಂದು 195ರಿಂದ 218 ರು.ರವರೆಗೆ, ಮೇ 1ರಂದು 993 ರು.ನಷ್ಟು ಏರಿಕೆ ಮಾಡಿದ್ದಾರೆ ಎಂದು ವಿವರಿಸಿದರು. ಈ ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರಕಾರ ನಿತ್ಯ ಒಂದು ಸಾವಿರ ಕೋಟಿ ಸಂಗ್ರಹಿಸುತ್ತಿದೆ. ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಬೆಲೆ ಏರಿಕೆಯಾಗಿಲ್ಲ, ಕಳೆದ 11 ದಿನಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು 7.52 ರೂ. ಹೆಚ್ಚಳ ಮಾಡಲಾಗಿದೆ. ಇದರಿಂದ ಜನಸಾಮಾನ್ಯರ ಮೇಲೆ ಪರಿಣಾಮ ಬೀರಿದೆ ಎಂದು ತಿಳಿಸಿದರು.

ಬಡವನೆಂಬ ಕೀಳರಿಮೆ ಬೇಡ: ನ್ಯಾ.ದಾಸ್

ಬೆಂಗಳೂರು: ಬಡವರು, ಹಿಂದುಳಿದವರು ಹಾಗೂ ದಲಿತರು ಎಂಬ ಕೀಳರಿಮೆ ಬೇಡ. ಶಿಸ್ತನ್ನು ಬೆಳೆಸಿಕೊಂಡು, ಮೌಲ್ಯಯುತ ಜೀವನದ ಮೂಲಕ ಸರಳ ಜೀವನ ನಡೆಸಿದಾಗ ಬದುಕಿನಲ್ಲಿ ಬೆಳವಣಿಗೆ, ಬೆಳಕು ಕಾಣಲು ಸಾಧ್ಯ ಎಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ತಿಳಿಸಿದರು.

ಬ್ಯಾಡರಹಳ್ಳಿ ಪೊಲೀಸ್ ಠಾಣೆ ಮುಂಭಾಗದಲ್ಲಿ ಕರ್ನಾಟಕ ಜೈಭೀಮ್ ಸೇವಾಸಂಘ (ರಿ.) ಹೇರೋಹಳ್ಳಿ ವತಿಯಿಂದ ಹಮ್ಮಿಕೊಂಡಿದ್ದ ಅಂಬೇಡ್ಕರ್ ಹಬ್ಬ ಡಾ. ಬಿ.ಆರ್.ಅಂಬೇಡ್ಕರ್, ಜಗಜ್ಯೋತಿ ಬಸವಣ್ಣ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತ್ಯುತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಅಂಬೇಡ್ಕರ್, ಬಸವಣ್ಣ ಸೇರಿದಂತೆ ಹಲವು ಮಹನೀಯರು ಜಾಗೃತಿಗಾಗಿ ಹೋರಾಟ ಮಾಡಿದವರಲ್ಲ, ದೇಶಕ್ಕಾಗಿ, ಮನುಕುಲದ ಒಳಿತಿಗಾಗಿ ಶ್ರಮಿಸಿದರು ಎಂದರು. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಅಕ್ಷರಸ್ಥರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ. ಆದರೆ ಉನ್ನತ ವ್ಯಾಸಂಗ ಪಡೆಯುವಲ್ಲಿ ವಿಫಲರಾಗಿದ್ದೇವೆ. ಎಲ್ಲದಕ್ಕೂ ಸರ್ಕಾರ ನಂಬಿ ಕೂತರೆ ಸಾಧ್ಯವಿಲ್ಲ, ನಿಮ್ಮಗಳ ಬೆಳವಣಿಗೆ ನಿಮ್ಮ ಕೈಯಲ್ಲಿದೆ. ಸ್ಪರ್ಧಾತ್ಮಕ ಯುಗದಲ್ಲಿ ಸ್ಪರ್ಧೆಗೆ ಸಿದ್ಧರಾಗಿ ಎಂದು ಕರೆ ನೀಡಿದರು.

ಚಿತ್ರ ನಟ ಪ್ರೇಮ್, ಮುಖ್ಯ ಅತಿಥಿಗಳಾದ ಬಂಡಾಯ ಸಾಹಿತಿ ಡಾ. ಎಲ್. ಹನುಮಂತಯ್ಯ, ಡಿಎಸ್‌ಎಸ್ ಮುಖಂಡ ಮಾವಳ್ಳಿ ಶಂಕರ್, ಚಿತ್ರ ನಟ ಪ್ರೇಮ್, ನಿರ್ದೇಶಕ ಸಿಂಪಲ್ ಸುನಿ , ಬೆಂಗಳೂರು ವಿಶ್ವವಿದ್ಯಾಲಯದ ಲಕ್ಷ್ಮೀ ನಾರಾಯಣ್, ಡಿಎಸ್‌ಎಸ್ ಹೋರಾಟಗಾರ ವೆಂಕಟಸ್ವಾಮಿ ಇದ್ದರು.

ಕರ್ನಾಟಕ ಸಂಘಟಕರ ಸಮಾವೇಶ ಕಾರ್ಯಕ್ರಮದಲ್ಲಿ ಬರಗೂರು ರಾಮಚಂದ್ರಪ್ಪ

ಸಾಂಸ್ಕೃತಿಕ ಸಂಘಟನೆಗಳೇ ಪ್ರಜಾಪ್ರಭುತ್ವದ ಜೀವಾಳ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಸಂಘಟನೆಗಳ ಶಕ್ತಿ ಮುಂದೆ ಯಾವುದೇ ಆಡಳಿತವೂ ಮಣಿಯಲೇಬೇಕು. ಆದರೆ ಸಂಘಟನೆಗಳ ಉದ್ದೇಶ ಕೇವಲ ಮಣಿಸುವುದಲ್ಲ, ಸಮಾಜದ ಆಶಯಗಳನ್ನು ಪ್ರತಿನಿಧಿಸಿ ಪ್ರಜಾಪ್ರಭುತ್ವವನ್ನು ಜಾಗೃತವಾಗಿಡುವುದಾಗಿದೆ ಎಂದು ನಾಡೋಜ ಬರಗೂರು ರಾಮಚಂದ್ರಪ್ಪ ತಿಳಿಸಿದರು.

ನಗರದ ಕನ್ನಡ ಭವನದ ನಯನ ರಂಗಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ ಕರ್ನಾಟಕ ಸಂಘಟಕರ ಸಮಾವೇಶ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದಿನ ಕಾಲಘಟ್ಟದಲ್ಲಿ ಸಂಘಟನೆಗಳ ಪಾತ್ರ ಮತ್ತು ಸಾಂಸ್ಕೃತಿಕ ಚಳುವಳಿಗಳ ಅಗತ್ಯವಿದೆ. ಇಪ್ಪತ್ತನೇ ಶತಮಾನ ಸಂಘಟನೆಗಳ ಶತಮಾನವಾಗಿದ್ದರೆ, ಇಪ್ಪತ್ತೊಂದನೇ ಶತಮಾನ ವಿಘಟನೆಗಳ ಶತಮಾನವಾಗಿದೆ. ಜಾಗತೀಕರಣ, ಖಾಸಗೀಕರಣ ಮತ್ತು ಬದಲಾಗುತ್ತಿರುವ ಆರ್ಥಿಕ ವ್ಯವಸ್ಥೆಗಳು ಜನರ ಮನೋಧರ್ಮವನ್ನೇ ಬದಲಾಯಿಸಿವೆ. ಕೈಗಾರಿಕೀಕರಣದ ಯುಗದಲ್ಲಿ ಕಾರ್ಮಿಕರು, ರೈತರು, ಮಹಿಳೆಯರು ಹಾಗೂ ದಲಿತ ಚಳುವಳಿಗಳು ಸಾಮೂಹಿಕ ಹೋರಾಟಗಳ ಮೂಲಕ ಸಮಾನತೆಯ ಆಶಯಗಳನ್ನು ಮುಂದಿಟ್ಟಿದ್ದವು. ಆದರೆ ಇಂದಿನ ಜಾಗತೀಕರಣದ ಪರಿಸ್ಥಿತಿಯಲ್ಲಿ ಸಾಮೂಹಿಕತೆ ಕುಂದುತ್ತಿದ್ದು, ವೈಯಕ್ತಿಕತೆ ಮತ್ತು ಸ್ವಾರ್ಥ ಹೆಚ್ಚುತ್ತಿದೆ ಎಂದರು.

ಸಂಘಟನೆಗಳಿಗೆ ವಿಶ್ವಾಸಾರ್ಹತೆ ಅತ್ಯಂತ ಮುಖ್ಯ. ಒಗ್ಗಟ್ಟು ಕುಂದಿದರೆ ಅಥವಾ ಒಳಜಗಳಗಳು ಹೆಚ್ಚಾದರೆ, ಅದು ಆಳುವ ವರ್ಗಕ್ಕೆ ಅನುಕೂಲವಾಗುತ್ತದೆ. ಸರಕಾರಗಳು ಜನರ ಮಾತು ಕೇಳಬೇಕಾದರೆ ಸಂಘಟನೆಗಳು ಬಲಿಷ್ಠವಾಗಿರಬೇಕು. ಕರ್ನಾಟಕದಲ್ಲಿ ಅಕಾಡೆಮಿಗಳು, ಪ್ರಾಧಿಕಾರಗಳು ಹಾಗೂ ಸಾಂಸ್ಕೃತಿಕ ಸಂಸ್ಥೆಗಳ ಸ್ಥಾಪನೆ ಮೂಲಕ ಬಹುತ್ವದ ಸಂಸ್ಕೃತಿಗೆ ಉತ್ತೇಜನ ನೀಡಲಾಗಿದೆ. ಸರಕಾರಗಳು ಈ ಸಂಸ್ಥೆಗಳಿಗೆ ಎಷ್ಟರ ಮಟ್ಟಿಗೆ ಸ್ವಾಯತ್ತತೆ ನೀಡಿವೆ ಎಂಬ ಪ್ರಶ್ನೆಯೂ ಮುಖ್ಯ.ಆಡಳಿತ ವ್ಯವಸ್ಥೆಯಲ್ಲಿ ಕಿವಿ ಮತ್ತು ಕಣ್ಣು ಅಗತ್ಯ, ಜನರ ಮಾತು ಕೇಳುವ ಗುಣ ಮತ್ತು ಸಮಸ್ಯೆಗಳನ್ನು ನೋಡುವ ದೃಷ್ಟಿ ಇರುವ ಆಡಳಿತವೇ ನಿಜವಾದ ಪ್ರಜಾಪ್ರಭುತ್ವದ ಲಕ್ಷಣ. ಆದರೆ ಇಂದಿನ ಕಾಲದಲ್ಲಿ ಕಿವಿ-ಕಣ್ಣಿಗಿಂತ ನಾಲಿಗೆಯೇ ಹೆಚ್ಚು ಕೆಲಸ ಮಾಡುತ್ತಿದೆ. ಕಾಗದರಹಿತ ಕಚೇರಿಗಳನ್ನು ಮಾಡಬಹುದು. ಆದರೆ ಭ್ರಷ್ಟಾಚಾರರಹಿತ ಕಚೇರಿಗಳನ್ನು ಯಾವಾಗ ಮಾಡುತ್ತೀರಿ ಎಂಬ ಪ್ರಶ್ನೆ ಇನ್ನೂ ಉಳಿದಿದೆ ಎಂದರು.ಹಿರಿಯ ಸಂಘಟಕ ಶ್ರೀನಿವಾಸ್ ಜಿ.ಕಪ್ಪಣ್ಣ ಮಾತನಾಡಿ, ಸರಕಾರವೇ ಅನುಮೋದಿಸಿ ಗಜೆಟ್ ಮಾಡಿರುವ ಸಾಂಸ್ಕೃತಿಕ ನೀತಿಯೇ ಜನರಿಗೆ ತಲುಪಿಲ್ಲ. ಗಜೆಟ್‌ನಲ್ಲಿ ಆದ ನೀತಿ ಜನರಿಗೆ ಯಾಕೆ ತಲುಪಲಿಲ್ಲ ಯಾಕೆ. ಯಾರು ಇದರ ಹೊಣೆ ಎಂಬುದನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕುರಿತು ಉತ್ತರಿಸಬೇಕು. ಇಂದಿನ ಪರಿಸ್ಥಿತಿಯಲ್ಲಿ ಸಾಮಾನ್ಯ ಸಾಹಿತಿ ಅಥವಾ ಕಾರ್ಯಕರ್ತರಿಗೆ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದೇ ಅಸಾಧ್ಯ. ಪ್ರತಿ ಜಿಲ್ಲೆಯಲ್ಲಿ ಸದಸ್ಯರಿಂದ ಜಿಲ್ಲಾ ಅಧ್ಯಕ್ಷರನ್ನು ಆಯ್ಕೆ ಮಾಡಿ, ಆ ಜಿಲ್ಲಾ ಅಧ್ಯಕ್ಷರೇ ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡುವ ವ್ಯವಸ್ಥೆ ತರಬೇಕು. ಹೀಗೆ ಮಾಡಿದರೆ ಜಾತಿ ಮತ್ತು ರಾಜಕೀಯದ ಪ್ರಭಾವ ಕಡಿಮೆಯಾಗಬಹುದು ಎಂದರು. ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಬಿಎಸ್.ಮಂಜುನಾಥ್‌ಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ, ಕರ್ನಾಟಕ ನಾಟಕ ಅಕಾಡಮಿ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ, ಕರ್ನಾಟಕ ಜಾನಪದ ಅಕಾಡಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್‌ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕ ಸಂಘಟಕರ ಸಮಾವೇಶ ಕಾರ್ಯಕ್ರಮವನ್ನು ನಾಡೋಜ ಬರಗೂರು ರಾಮಚಂದ್ರಪ್ಪ ಉದ್ಘಾಟಿಸಿದರು. ಈ ವೇಳೆ ಹಿರಿಯ ಸಂಘಟಕ ಶ್ರೀನಿವಾಸ್ ಜಿ.ಕಪ್ಪಣ್ಣ, ಕನ್ನಡ ಸಾಹಿತ್ಯ ಅಕಾಡಮಿ ಅಧ್ಯಕ್ಷ ಎಲ್.ಎನ್.ಮುಕುಂದರಾಜ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಬಿಎಸ್.ಮಂಜುನಾಥ್‌ಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

> ಸಾಂಸ್ಕೃತಿಕ ಸಂಘಟಕರು ಯಾವಾಗಲೂ ಪ್ರಾಮಾಣಿಕತೆ, ನಿಸ್ವಾರ್ಥತೆ ಹಾಗೂ ಜನಪರ ನಿಲುವುಗಳನ್ನು ಉಳಿಸಿಕೊಳ್ಳಬೇಕು. ಸಾಂಸ್ಕೃತಿಕ ಕ್ಷೇತ್ರದ ಜನರು ನೇರವಾಗಿ ಸಮಾಜದ ಸಮಸ್ಯೆಗಳ ಬಗ್ಗೆ ಮಾತನಾಡುವುದರಿಂದ ಕೋಮುವಾದಿ ಹಾಗೂ ಜಾತಿವಾದಿ ಮನೋಭಾವದವರಿಗೆ ಅಸಹನೆ ಉಂಟಾಗುತ್ತದೆ. ಇದೇ ಕಾರಣಕ್ಕೆ ನಾಟಕಕಾರರ ಮೇಲಿನ ದಾಳಿ, ಚಿಂತಕರು ಹಾಗೂ ಪ್ರಗತಿಪರ ಲೇಖಕರ ಹತ್ಯೆಗಳಂತಹ ಘಟನೆಗಳು ನಡೆದಿವೆ.
>
> **-ಎಲ್.ಎನ್.ಮುಕುಂದರಾಜ್,**
> ಕನ್ನಡ ಸಾಹಿತ್ಯ ಅಕಾಡಮಿ ಅಧ್ಯಕ್ಷ

ಯಲಹಂಕ ಕೆರೆಯಲ್ಲಿ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ ವಿಪತ್ತು ನಿರ್ವಹಣೆ ಕುರಿತು ಪೂರ್ವ ಸಿದ್ಧತಾ ಅಣಕು ಪ್ರದರ್ಶನ ನಡೆಸಿದರು.

ಯಲಹಂಕ ಕೆರೆಯಲ್ಲಿ ಮುಂಗಾರು ಪ್ರವಾಹ ನಿರ್ವಹಣೆ ಸನ್ನದ್ಧತೆ ಅಣಕು ಪ್ರದರ್ಶನ

ಬೆಂಗಳೂರು: ಮುಂಗಾರು ಮಳೆಯ ಹಿನ್ನೆಲೆ ವಿಪತ್ತು ನಿರ್ವಹಣೆ ಹಾಗೂ ತುರ್ತು ಪರಿಸ್ಥಿತಿಗಳಿಗೆ 24/7 ಸನ್ನದ್ಧರಾಗಿರಲು ಬೆಂಗಳೂರು ಉತ್ತರ ನಗರ ಪಾಲಿಕೆ ವತಿಯಿಂದ ಯಲಹಂಕ ಕೆರೆಯಲ್ಲಿ ಪೂರ್ವ ಸಿದ್ಧತಾ ಅಣಕು ಪ್ರದರ್ಶನ ಹಾಗೂ ತುರ್ತು ಕಾರ್ಯಾಚರಣೆಗಳ ಪ್ರಾಯೋಗಿಕ ಪ್ರದರ್ಶನ ನಡೆಯಿತು.

ಈ ಕುರಿತು ಉತ್ತರ ಪಾಲಿಕೆ ಅಧ್ಯಕ್ಷ ಪೊಮ್ಮಲ್ ಸುನೀಲ್ ಕುಮಾರ್ ಮಾತನಾಡಿ, ಮಳೆಗಾಲದಲ್ಲಿ ಸಂಭವಿಸಬಹುದಾದ ಪ್ರವಾಹ ಹಾಗೂ ನೀರಿನಲ್ಲಿ ಮುಳುಗುವ ಅವಘಡಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ ರಕ್ಷಣಾ ಕಾರ್ಯಾಚರಣೆಗಳ ಪ್ರಾಯೋಗಿಕ ಪ್ರದರ್ಶನ ನೀಡಿದರು. ಸಂಪರ್ಕ ಪಾರುಗಾಣಿಕಾ ಮತ್ತು ಸಂಪರ್ಕ-ಅಲ್ಲದ ಪಾರುಗಾಣಿಕಾ ವಿಧಾನಗಳ ಮೂಲಕ ನೀರಿನಲ್ಲಿ ಸಿಲುಕಿದವರನ್ನು ಸುರಕ್ಷಿತವಾಗಿ ರಕ್ಷಿಸುವ ವಿಧಾನಗಳನ್ನು ತೋರಿಸಲಾಗಿದೆ. ತುರ್ತು ಪರಿಸ್ಥಿತಿಯಲ್ಲಿ ಮನೆಯಲ್ಲಿ ಬಳಸುವ ಖಾಲಿ ಬಾಟಲಿಗಳು, ಥರ್ಮಕೋಲ್ ಮತ್ತು ತೆಂಗಿನಕಾಯಿಗಳನ್ನು ತಾತ್ಕಾಲಿಕ ಲೈಫ್ ಜಾಕೆಟ್ ತಯಾರಿಸುವ ವಿಧಾನಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಜತೆಗೆ ಗೋಲ್ಡನ್ ಟೈಮ್ ಕುರಿತು ಸಿಪಿಆರ್ ಪ್ರದರ್ಶನ ನಡೆಸಿ, ಮಗು, ಮಹಿಳೆ ಹಾಗೂ ಪುರುಷರಿಗೆ ನೀಡಬೇಕಾದ ವಿಭಿನ್ನ ವಿಧಾನಗಳು ವಿವರಿಸಲಾಗಿದೆ.

ಮಳೆಗಾಲದ ಅವಧಿಯಲ್ಲಿ ಸಾರ್ವಜನಿಕರಿಂದ ಬರುವ ದೂರುಗಳಿಗೆ ತ್ವರಿತ ಸ್ಪಂದನೆ ನೀಡಲು ಶಾಶ್ವತ ಹಾಗೂ ತಾತ್ಕಾಲಿಕ ನಿಯಂತ್ರಣ ಕೊಠಡಿಗಳ ಮೂಲಕ ಕಾರ್ಯಾಚರಣೆಯ ಸೂಚನೆ ನೀಡಲಾಗಿದೆ. ರಸ್ತೆ ಬದಿಯ ಚರಂಡಿಗಳು, ಗ್ರೇಟಿಂಗ್ ಪ್ರದೇಶಗಳು ಶೋಲ್ಡರ್ ಡ್ರೇನ್‌ಗಳಲ್ಲಿ ಸಂಗ್ರಹವಾಗಿರುವ ಹೂಳು ಮತ್ತು ತ್ಯಾಜ್ಯ ಸೂಚನೆ ನೀಡಲಾಯಿತು ಎಂದರು.

ದೇಶದಲ್ಲೇ ಪ್ರಪ್ರಥಮ ಬಾರಿಗೆ ಅತ್ಯಾಧುನಿಕ ಕೇಂದ್ರೀಕೃತ ತುರ್ತು ಆರೋಗ್ಯ ನಿರ್ವಹಣಾ ವ್ಯವಸ್ಥೆ ರಾಜ್ಯದಲ್ಲಿ ಜಾರಿ

ಆರೋಗ್ಯ ಕವಚ ಕಮಾಂಡ್ ಕೇಂದ್ರಕ್ಕೆ ಸಿಎಂ ಹಸಿರು ನಿಶಾನೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ತುರ್ತು ಆರೋಗ್ಯ ಸೇವೆಗಳನ್ನು ಇನ್ನಷ್ಟು ಚುರುಕುಗೊಳಿಸುವ ಮತ್ತು ಜನಸಾಮಾನ್ಯರಿಗೆ ಸಕಾಲದಲ್ಲಿ ಚಿಕಿತ್ಸೆ ಒದಗಿಸುವ ಮಹತ್ತರ ಉದ್ದೇಶದಿಂದ, ಸಿಎಂ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 108 'ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರ'ವನ್ನು ಉದ್ಘಾಟಿಸಿದರು.

ಈ ಮೂಲಕ ಕರ್ನಾಟಕವು ದೇಶದಲ್ಲೇ ಪ್ರಪ್ರಥಮ ಬಾರಿಗೆ ಇಂತಹ ಅತ್ಯಾಧುನಿಕ ಕೇಂದ್ರೀಕೃತ ತುರ್ತು ಆರೋಗ್ಯ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತಂದ ರಾಜ್ಯವಾಗಿ ಹೊರಹೊಮ್ಮಿದೆ. ಕಳೆದ 18 ವರ್ಷಗಳಿಂದ ರಾಜ್ಯದಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿರುವ 108 ಆ್ಯಂಬುಲೆನ್ಸ್ ಸೇವೆಗೆ ಇದೀಗ ಅತ್ಯಾಧುನಿಕ ತಂತ್ರಜ್ಞಾನದ ಸ್ಪರ್ಶ ಸಿಕ್ಕಿದೆ. 2025-26ರ ರಾಜ್ಯ ಬಜೆಟ್‌ನಲ್ಲಿ ನೀಡಿದ ಭರವಸೆಯಂತೆ, ತುರ್ತು ಸೇವೆಯನ್ನು ವ್ಯವಸ್ಥಿತವಾಗಿ ಮತ್ತು ಪಾರದರ್ಶಕವಾಗಿ ನಿರ್ವಹಿಸಲು ಈ ಕಮಾಂಡ್ ಸೆಂಟರ್ ಸ್ಥಾಪಿಸಲಾಗಿದೆ.

ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಈ ವ್ಯವಸ್ಥೆಯು ಕೇವಲ ತಂತ್ರಜ್ಞಾನದ ಅಳವಡಿಕೆಯಲ್ಲ, ಇದು ಪ್ರತಿಯೊಬ್ಬ ನಾಗರಿಕನ ಜೀವವನ್ನು ಉಳಿಸುವ ಕವಚ. ತುರ್ತು ಸಂದರ್ಭಗಳಲ್ಲಿ, ಅದರಲ್ಲೂ ಅಪಘಾತ ಅಥವಾ ತೀವ್ರ ಅನಾರೋಗ್ಯದ ಸಮಯದಲ್ಲಿ ಪ್ರತಿ ಸೆಕೆಂಡು ಅತ್ಯಮೂಲ್ಯ. ಇಂತಹ ಸಂದರ್ಭಗಳಲ್ಲಿ ಈ ಕಂಟ್ರೋಲ್ ಸೆಂಟರ್ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲಿದೆ ಎಂದು ವಿವರಿಸಿದರು.

ಹಿಂದೆ 108 ಆ್ಯಂಬುಲೆನ್ಸ್ ಸೇವೆ ಖಾಸಗಿ ಸಂಸ್ಥೆಗಳ ನಿರ್ವಹಣೆಯಲ್ಲಿದ್ದಾಗ, ಅವುಗಳ ಮೇಲೆ ಸಮರ್ಪಕ ನಿಯಂತ್ರಣ ಸಾಧಿಸಲು ಅಥವಾ ಹೊಣೆಗಾರಿಕೆಯನ್ನು ಪ್ರಶ್ನಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಈಗ ಈ ಸಂಪೂರ್ಣ ವ್ಯವಸ್ಥೆ ಸರಕಾರದ ನೇರ ಅಧೀನಕ್ಕೆ ಬಂದಿದೆ. ಸರಕಾರದ ಅಧೀನದಲ್ಲಿ ಸೇವೆ ಇರುವುದರಿಂದ ಹೊಣೆಗಾರಿಕೆ ಹೆಚ್ಚಾಗಿದೆ. ಜನರಿಗೆ ತಲುಪುವ ಸೇವೆಯಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳುವುದು ಇಲಾಖೆಯ ಆದ್ಯ ಕರ್ತವ್ಯ ಎಂದು ಸ್ಪಷ್ಟಪಡಿಸಿದರು.

ಸಾರ್ವಜನಿಕರು ಖಾಸಗಿ ಆಸ್ಪತ್ರೆಗಳ ದುಬಾರಿ ಚಿಕಿತ್ಸೆಯ ಮೊರೆ ಹೋಗುವ ಬದಲು, ಸರಕಾರಿ ಆಸ್ಪತ್ರೆಗಳ ಕಡೆ ಮುಖ ಮಾಡಬೇಕು. ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳಿಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುವುದು ಮಧ್ಯಮ ವರ್ಗದ ಜನರಿಗೆ ಆರ್ಥಿಕ ಹೊರೆಯನ್ನು ಉಂಟು ಮಾಡುತ್ತದೆ. ನಮ್ಮ ಸರಕಾರಿ ಆಸ್ಪತ್ರೆಗಳಲ್ಲಿ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳಿವೆ. ಸಾಮಾನ್ಯ ಜನರಿಗೆ ಕೈಗೆಟುಕುವ ದರದಲ್ಲಿ ಮತ್ತು ಉಚಿತವಾಗಿ ಅತ್ಯುತ್ತಮ ಚಿಕಿತ್ಸೆ ನೀಡುವುದೇ ಸರಕಾರದ ಗುರಿ ಎಂದು ಹೇಳಿದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ 108 'ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರ'ವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು.

108 ಆಂಬ್ಯುಲೆನ್ಸ್ ಸೇವೆ ಸರಕಾರದ ಸುಪರ್ದಿಗೆ: ದಿನೇಶ್ ಗುಂಡೂರಾವ್

ಒಂದು ಕರೆ ನಮಗೆ, ತುರ್ತು ಸೇವೆ ನಿಮಗೆ ಎಂಬ ಘೋಷವಾಕ್ಯದಡಿಯಲ್ಲಿ 108 ಆಂಬ್ಯುಲೆನ್ಸ್ ಸೇವೆ ಸರಕಾರದ ಸುಪರ್ದಿಯಲ್ಲಿ ಕಾರ್ಯನಿರ್ವಹಿಸಲಿದ್ದು, ದೇಶದಲ್ಲೇ ಪ್ರಥಮ ಬಾರಿಗೆ ಕರ್ನಾಟಕ ಸರಕಾರದ ಆರೋಗ್ಯ ಇಲಾಖೆ ಈ ಕ್ರಮ ಕೈಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲ, ಪ್ರೋತ್ಸಾಹದೊಂದಿಗೆ ಈ ಯೋಜನೆ ಜಾರಿಗೆ ಬಂದಿದೆ. 2008ರಲ್ಲಿ ಜನರ ಅನುಕೂಲಕ್ಕಾಗಿ 108 ಆಂಬ್ಯುಲೆನ್ಸ್ ಸೇವೆ ಪ್ರಾರಂಭಿಸಲಾಗಿತ್ತು. ಈವರೆಗೆ ಖಾಸಗಿ ಸಂಸ್ಥೆ ಇದನ್ನು ನಡೆಸುತ್ತಿತ್ತು. 2025-26ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮುಖ್ಯಮಂತ್ರಿಗಳು ಇದನ್ನು ಉನ್ನತೀಕರಣ ಮಾಡಲಾಗುವುದು ಎಂದು ಹೇಳಿದ್ದರು. ಇದೀಗ ಸರಕಾರವೇ ಇದನ್ನು ನಡೆಸಬೇಕು. ಅತ್ಯಾಧುನಿಕ ವ್ಯವಸ್ಥೆ ಅಳವಡಿಸಬೇಕು ಎಂದು ತೀರ್ಮಾನಿಸಿ, ಈ ನಿರ್ಧಾರ ಕೈಗೊಂಡಿದೆ ಎಂದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

> ಆರೋಗ್ಯ ಕವಚ ಕಮಾಂಡ್ ಮತ್ತು ಕಂಟ್ರೋಲ್ ಸೆಂಟರ್‌ನಲ್ಲಿ ಅತ್ಯಾಧುನಿಕ ಸಾಫ್ಟ್‌ವೇರ್ ಮತ್ತು ಜಿಪಿಎಸ್ ತಂತ್ರಜ್ಞಾನವನ್ನು ಅಳವಡಿಸಲಾಗಿದ್ದು, ರಾಜ್ಯದ ಯಾವ ಭಾಗದಲ್ಲಿ ಆ್ಯಂಬುಲೆನ್ಸ್ ಇದೆ ಮತ್ತು ಎಷ್ಟು ನಿಮಿಷದಲ್ಲಿ ಅಪಘಾತ ಸ್ಥಳಕ್ಕೆ ತಲುಪಲಿದೆ ಎಂಬ ಮಾಹಿತಿಯನ್ನು ಕ್ಷಣಾರ್ಧದಲ್ಲಿ ತಿಳಿಯಬಹುದು. ಇದು ತುರ್ತು ಸೇವೆಯನ್ನು ವಿಳಂಬವಾಗದಂತೆ ನೋಡಿಕೊಳ್ಳಲು ದೊಡ್ಡ ಸಹಕಾರಿಯಾಗಿದೆ.
>
> **-ಸಿದ್ದರಾಮಯ್ಯ**, ಮುಖ್ಯಮಂತ್ರಿ

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ – 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (ಎಸ್ ಸಿ ಎಲ್) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್) (ಐ ಎಚ್ ಎಫ್ ಎಲ್)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **05.12.2023** ರಂದು ಕರೆದು ಸಾಲಗಾರ**ನದೀಮ್ ಷರೀಫ್ ಮತ್ತು ಶೈಸ್ತಾ ರೂಮನಾ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 58,55,961.87 (ಐವತ್ತೆಂಟು ಲಕ್ಷ ಐವತ್ತು ಐದು ಸಾವಿರದ ಒಂಬೈ ನೂರ ಅರವತ್ತೊಂದು ರೂಪಾಯಿಗಳು ಮತ್ತು ಎಂಬತ್ತೇಳು ಪೈಸೆ ಮಾತ್ರ)** ಸಾಲ ಖಾತೆ ನಂ. **HHLBGM00502917** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.11.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಇದಲ್ಲದೆ, **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**, ಮೇಲಿನ ಸಾಲದ ಖಾತೆಯ ಎಲ್ಲಾ ಹಕ್ಕುಗಳು, ಶೀರ್ಷಿಕೆ ಮತ್ತು ಬಡ್ಡಿಯನ್ನು **23.06.2025** ರಂದು ನಡೆದ ನಿಯೋಜನೆ ಒಪ್ಪಂದದ ಮೂಲಕ **ಎಸಿಆರ್‌ಇ** 180 ಟ್ರಸ್ಟ್‌ನ ಟ್ರಸ್ಟಿಯಾಗಿ ಕಾರ್ಯ **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್**ಗೆ ನಿಯೋಜಿಸಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.05.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ ನ ಬಾಕಿ ಇರುವ ಮೊತ್ತ ರೂ. 58,55,961.87 (ಐವತ್ತೆಂಟು ಲಕ್ಷ ಐವತ್ತು ಐದು ಸಾವಿರದ ಒಂಬೈ ನೂರ ಅರವತ್ತೊಂದು ರೂಪಾಯಿಗಳು ಮತ್ತು ಎಂಬತ್ತೇಳು ಪೈಸೆ ಮಾತ್ರ) 30.11.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ ಅಲ್ಲಿಂದ ಸಂಗ್ರಹಗೊಂಡ ಬಡ್ಡಿ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಬೆಂಗಳೂರು - 560066, ಕರ್ನಾಟಕ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ತುಬರಹಳ್ಳಿ ಗ್ರಾಮದಲ್ಲಿ ನೆಲೆಗೊಂಡಿರುವ, ವಸತಿ ಪರಿವರ್ತಿತ ಭೂ ಬೇರಿಂಗ್ ಸರ್ವೆ ಸಂಖ್ಯೆ 44/2 ನಲ್ಲಿ ನಿರ್ಮಿಸಲಾದ ''ಅಗತ್ಯ ಗೇಬಲ್‌ಗಳು'' ಎಂದು ಕರೆಯಲ್ಪಡುವ ಕಟ್ಟಡದಲ್ಲಿ 3ನೇ ಮಹಡಿಯಲ್ಲಿರುವ ಅಪಾರ್ಟ್ಮೆಂಟ್ ಸಂಖ್ಯೆ ಬಿ -305, ಸಾಮಾನ್ಯ ಪ್ರದೇಶದ 223 ಚದರ ಅಡಿಗಳ ಜೊತೆಗೆ 1239 ಚದರ ಅಡಿ ನಿರ್ಮಿತ ಪ್ರದೇಶವನ್ನು ಅಳೆಯುತ್ತದೆ, ಸೂಪರ್ ಬಿಲ್ಟ್-ಅಪ್ ಪ್ರದೇಶದ ಒಟ್ಟು ಅಳತೆ 1462 ಚದರ ಅಡಿಗಳು. ಈ ಕಟ್ಟಡವು ಒಂದು ಮುಚ್ಚಿದ ಕಾರು ಪಾರ್ಕಿಂಗ್ ಸ್ಥಳ ಮತ್ತು 625 ಚದರ ಅಡಿ ಅವಿಭಜಿತ ಪಾಲನ್ನು ಹೊಂದಿದೆ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.05.2026 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್**
ಸ್ಥಳ : ಬೆಂಗಳೂರು (180 ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in. ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

Karnataka Bank Ltd.
Your Family Bank. Across India.

Branch: Bengaluru R T Nagar
No. 6, 80 ft Road, Opp H M T Playground,
H M T Layout, R T Nagar Main Road,
BANGALORE-560 032
Phone : 080-229558889-890
E-Mail : blr.rtnagar@ktkbank.com
Website : www.karnatakabank.com
CIN : L85110KA1924PLC001128

PUBLIC NOTICE

This is to inform you that the locker holders of our branch located at No 6, 80 Ft Road, Opp H M T Playground, HMT Layout, R T Nagar Main Road Bangalore-560032 having Sol ID 120, relating to the following lockers have failed and neglected to pay the prescribed locker rent for a long time inspite of various notices and demands made to them. As per the Terms and Conditions agreed to by the locker holder, the bank will be at liberty to break open the said lockers on **30.05.2026** by serving the formalities. The respective locker holders are advised to approach the branch on or before **30.05.2026** and settle the dues to avoid action. The charges for break open would be borne by the renters. Further the bank reserves the right to take legal action for recovery of the same along with rent arrears/ other charges etc.

Sl. No	Locker Number	Due From	Address
1.	133	31.03.2022	Nagarathna, 119 S S A Road,1st Main, 1 Cross Kuntigrama R T Nagar Bengaluru 560032
2.	135	31.03.2022	Divyakumari K and Vishwaraj Rao P, 13/4 KHM Block, 1 Main, 3rd Cross, R T Nagar Bengaluru 560032
3.	59	31.03.2022	Srinivas Babu V and Sabita Babu, 44, Gundappa Layout Cholanayakanahalli, R T Nagar, Bengaluru - 560032
4.	86	31.03.2015	Bojji Gururajachar and Vanaja B, 17/465, 2nd Floor, 2nd Cross, SSA Road, Cholanayakanahalli, R T Nagar, Bengaluru – 560032 Sowmya N, 19, Guru Nilaya, Amar Jyothi Layout, opp BDA Park, Cholanagar, Bengaluru 560032

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (CIN:L65922DL2005PLC136029) (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **19.02.2026** ರಂದು ಕರೆದು ಸಾಲಗಾರ **ಎಸ್ ಎಂ ರಾಮಾನಂದಸ್ವಾಮಿ ಅಲಿಯಾಸ್ ರಾಮಾನಂದಸ್ವಾಮಿ ಎಸ್ ಎಂ ಮತ್ತು ಸವಿತಾ ಎಸ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 23,56,014.73 (ಇಪ್ಪತ್ತಮೂರು ಲಕ್ಷ ಐವತ್ತಾರು ಸಾವಿರದ ಹದಿನಾಲ್ಕು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ)** ಸಾಲ ಖಾತೆ ನಂ. **HLAPMYS00270416** ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **16.02.2026** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಸಾಂಕೇತಿಕ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **21.05.2026** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್ (**ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)** ನ ಬಾಕಿ ಇರುವ ಮೊತ್ತ **ರೂ. 23,56,014.73 (ಇಪ್ಪತ್ತಮೂರು ಲಕ್ಷ ಐವತ್ತಾರು ಸಾವಿರದ ಹದಿನಾಲ್ಕು ರೂಪಾಯಿಗಳು ಮತ್ತು ಎಪ್ಪತ್ತಮೂರು ಪೈಸೆ ಮಾತ್ರ) 16.02.2026** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆಸ್ತಿಯ ಎಲ್ಲಾ ಭಾಗ ಮತ್ತು ಪಾರ್ಸೆಲ್ ಸಂಖ್ಯೆ. 307, ಚಿಕ್ಕಹರದನಹಳ್ಳಿ ಲೇಔಟ್, ಅರವಿಂದ ನಗರ, 1 ನೇ ಹಂತ, ಚಾಮರಾಜ ಮೊಹಲ್ಲಾ, ಮೈಸೂರು ನಗರ, ಮೈಸೂರು - 570023, ಕರ್ನಾಟಕ, ಪೂರ್ವದಿಂದ ಪಶ್ಚಿಮಕ್ಕೆ 6 ಮೀಟರ್ ಅಳತೆ ಮತ್ತು ಉತ್ತರದಿಂದ ದಕ್ಷಿಣಕ್ಕೆ 9 ಮೀಟರ್ ಅಳತೆ, ಮನೆ ಆಸ್ತಿ ಸೇರಿದಂತೆ ಮತ್ತು ಈ ಕೆಳಗಿನಂತೆ ಸೀಮಿತವಾಗಿದೆ:

ಪೂರ್ವ : ಆಸ್ತಿ ಸಂಖ್ಯೆ 308
ಪಶ್ಚಿಮದಲ್ಲಿ : ಆಸ್ತಿ ಸಂಖ್ಯೆ 306
ಉತ್ತರದಲ್ಲಿ : ಸಿಐಟಿಬಿ ಆಸ್ತಿ
ದಕ್ಷಿಣದಲ್ಲಿ : ರಸ್ತೆ

ಅಧಿಕಾರವಿರುವ ಅಧಿಕಾರಿ
ದಿನಾಂಕ: 21.05.2026 **ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್**
ಸ್ಥಳ : ಮೈಸೂರು (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್)**

ಸಮಾಚಾರ ಸಣ್ಣದಲ್ಲ

ಹಜ್ ಯಾತ್ರೆ ಆರಂಭ: 15 ಲಕ್ಷ ಭಕ್ತರ ಭೇಟಿ



ಮೆಕ್ಕಾ: ವಾರ್ಷಿಕ ಹಜ್ ಯಾತ್ರೆ ಸೋಮವಾರದಿಂದ ಆರಂಭವಾಗಿದ್ದು, 15 ಲಕ್ಷಕ್ಕೂ ಹೆಚ್ಚಿನ ಯಾತ್ರಿಕರು ಸೌದಿ ಅರೇಬಿಯಾಕ್ಕೆ ಭೇಟಿ ನೀಡಿದ್ದಾರೆ. ಪಶ್ಚಿಮ ಏಷ್ಯಾ ಸಂಘರ್ಷದ ಕದನ ವಿರಾಮ, ಪ್ರಾದೇಶಿಕ ಉದ್ವಿಗ್ನತೆ ಹಾಗೂ ಅನಿಶ್ಚಿತತೆ ನಡುವೆಯೂ ಯಾತ್ರಾರ್ಥಿಗಳು ಹಜ್ ಯಾತ್ರೆ ಕೈಗೊಂಡಿದ್ದಾರೆ. ಮೊದಲ ದಿನ ಅನೇಕ ಯಾತ್ರಿಕರು ಮೆಕ್ಕಾ ಸಮೀಪದ ಮರುಭೂಮಿಯಲ್ಲಿರುವ ವಿಶಾಲವಾದ ಡೇರೆಗಳಲ್ಲಿ ಒಟ್ಟುಗೂಡಿದರು. ಇದಕ್ಕೂ ಮುನ್ನ, ಗ್ರ್ಯಾಂಡ್ ಮಸೀದಿ ಸಂಕೀರ್ಣದಲ್ಲಿರುವ ಮುಸ್ಲಿಮರ ಪವಿತ್ರ ಕಾಬಾವನ್ನು ಒಂದು ಸುತ್ತು ಬಂದು ಪ್ರಾರ್ಥನೆ ಸಲ್ಲಿಸಿದರು. ಬಿಸಿಲ ಬೇಗೆಯಿಂದ ಬಸವಳಿಯುತ್ತಿರುವ ಯಾತ್ರಿಕರು ಛತ್ರಿಗಳು ಹಾಗೂ ಬ್ಯಾಟರಿ ಚಾಲಿತ ಸಣ್ಣ ಫ್ಯಾನ್‌ಗಳ ಮೊರೆ ಹೋಗಿದ್ದಾರೆ. ಭಕ್ತರಿಗೆ ಸ್ವಯಂ ಸೇವಕರು ನೀರಿನ ಬಾಟಲಿಗಳನ್ನು ವಿತರಿಸುತ್ತಿದ್ದಾರೆ. ಇದಲ್ಲದೆ, ದೊಡ್ಡ ಗಾತ್ರದ ಫ್ಯಾನ್‌ಗಳ ಮೂಲಕ ನೀರಿನ ಹನಿಗಳ ಸಿಂಪಡಣೆ ಮಾಡಲಾಗುತ್ತಿದೆ.

ತೈಲ ಕಂಪನಿಗಳ ಷೇರಿನ ಬೆಲೆ ಏರಿಕೆ

ದೆಹಲಿ: ಕಚ್ಚಾ ತೈಲದ ದರ ಇಳಿಕೆ ಮತ್ತು ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿನ ಹೆಚ್ಚಳದಿಂದ ಸೋಮವಾರ ಸರಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆ ಆಗಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ಷೇರಿನ ಮೌಲ್ಯವು ಶೇ.4.3ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ 308.25 ರು.ಗೆ ತಲುಪಿದೆ. ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿಸಿಎಲ್) ಷೇರಿನ ಮೌಲ್ಯ ಶೇ.3.52 ಮತ್ತು ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ಷೇರಿನ ಮೌಲ್ಯ ಶೇ.3.15ರಷ್ಟು ಹೆಚ್ಚಳವಾಗಿದೆ. ಪ್ರತಿ ಷೇರಿನ ಬೆಲೆ ಕ್ರಮವಾಗಿ ರು. 403.40 ಮತ್ತು ರು. 143.90ಕ್ಕೆ ಏರಿಕೆ ಆಗಿದೆ.

ಸಿಯುಇಟಿ - ಯುಜಿ ಪರೀಕ್ಷೆ ಮುಂದೂಡಿಕೆ

ದೆಹಲಿ: ಬಕ್ರೀದ್ ಹಬ್ಬದ ರಜಾ ದಿನ ಬದಲಾಗಿರುವ ಕಾರಣ, ಮೇ 28ರಂದು ನಡೆಯಬೇಕಿದ್ದ ವಿಶ್ವವಿದ್ಯಾಲಯ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ-ಯುಜಿ) 2026 ಅನ್ನು ಮುಂದೂಡಲಾಗಿದೆ. ಈ ಬಗ್ಗೆ ಪ್ರಕಟಣೆ ನೀಡಿರುವ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ, ಪರಿಷ್ಕೃತ ದಿನಾಂಕವನ್ನು ಘೋಷಿಸಲಾಗುವುದು ಎಂದು ತಿಳಿಸಿದೆ. ಬಕ್ರೀದ್ ಹಬ್ಬದ ಪ್ರಯುಕ್ತ ನೀಡಲಾಗುವ ರಜಾ ದಿನವನ್ನು ಪರಿಷ್ಕರಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆಯು ಅಧಿಸೂಚನೆ ಹೊರಡಿಸಿರುವುದರಿಂದ ಈ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಅಭ್ಯರ್ಥಿಗಳು ಅಧಿಕೃತ ವೆಬ್‌ಸೈಟ್ ಗಮನಿಸಬೇಕು ಮತ್ತು ಮಾಹಿತಿ ಬೇಕಾದಲ್ಲಿ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಎನ್‌ಟಿಎ ಸಲಹೆ ನೀಡಿದೆ.

6 ವರ್ಷದ ಬಾಲಕಿ ಮೇಲೆ ಅತ್ಯಾಚಾರ

ಅಗರ್ತಲ: 9ನೇ ತರಗತಿಯ ಬಾಲಕನೊಬ್ಬ ತನ್ನ ನೆರೆಮನೆಯ 6 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಆಘಾತಕಾರಿ ಘಟನೆ ತ್ರಿಪುರಾದ ಖೋವಾಯ್ ಜಿಲ್ಲೆಯಲ್ಲಿ ನಡೆದಿದೆ. ಹೂವುಗಳನ್ನು ತೋರಿಸುವುದಾಗಿ ಆಮಿಷವೊಡ್ಡಿ ಬಾಲಕ ಈ ಕೃತ್ಯ ಎಸಗಿದ್ದಾನೆ ಎನ್ನಲಾಗಿದ್ದು, ಆರೋಪಿ ಬಾಲಕನನ್ನು ಬಂಧಿಸಲಾಗಿದೆ. ದೂರಿನ ಪ್ರಕಾರ, ಪೋಷಕರು ಮನೆಯಲ್ಲಿ ಇಲ್ಲದ ಸಮಯದಲ್ಲಿ ಈ ಘಟನೆ ನಡೆದಿದೆ. ಅವರು ಹಿಂತಿರುಗಿದಾಗ ಖಾಸಗಿ ಭಾಗಗಳಲ್ಲಿ ನೋವು ಇದೆ ಎಂದು ಬಾಲಕಿ ಹೇಳಿದ್ದಾಳೆ. ಆಕೆಯ ತಾಯಿ ಪರೀಕ್ಷಿಸಿದಾಗ ಬಾಲಕಿಯ ದೇಹದಲ್ಲಿ ಗಾಯಗಳು ಕಂಡುಬಂದಿವೆ. ನಂತರ ಈ ವಿಚಾರವನ್ನು ತನ್ನ ಪತಿಗೆ ಬಾಲಕಿಯ ತಾಯಿ ತಿಳಿಸಿದ್ದಾರೆ. ಮರುದಿನ ಆರೋಪಿಯ ಕುಟುಂಬಕ್ಕೂ ಘಟನೆ ವಿಚಾರ ತಿಳಿಸಲಾಗಿದೆ. ಅವರು ತಮ್ಮ ಮಗನನ್ನು ಕ್ಷಮಿಸುವಂತೆ ಸಂತ್ರಸ್ತ ಕುಟುಂಬ ತಿಳಿಸಿದೆ.

{ಕೇಶವ್ ಪ್ರಸಾದ್ ಮೌರ್ಯ} ಉ.ಪ್ರದೇಶ ಡಿಸಿಎಂ

ಕಳೆದ 12 ವರ್ಷಗಳಿಂದ ದೇಶದ ಜನರ ವಿಶ್ವಾಸ ಗಳಿಸುವಲ್ಲಿ ಸತತವಾಗಿ ವಿಫಲರಾಗಿರುವ ರಾಹುಲ್ ಗಾಂಧಿ, ಈಗ ವಿದೇಶಿ ಟೂಲ್‌ಕಿಟ್ ಗ್ಯಾಂಗ್ ಮೂಲಕ ದೇಶವನ್ನು ಅರಾಜಕತೆಯತ್ತ ತಳ್ಳಲು ಪ್ರಯತ್ನಿಸುತ್ತಿದ್ದಾರೆ. ವಾಸ್ತವವಾಗಿ, ಅವರ ಇಂದಿನ ಪರಿಸ್ಥಿತಿ ಹೇಗಿದೆಯೆಂದರೆ, ಮಗುವೊಂದಕ್ಕೆ ತಾನು ಕೇಳಿದ ಆಟಿಕೆ ಕೊಡದಿದ್ದರೆ, ಅದು ಆ ಆಟಿಕೆಯನ್ನೇ ಮುರಿದು ಹಾಕಲು ಪ್ರಯತ್ನಿಸುತ್ತದಲ್ಲ ಹಾಗೆ ಆಗಿದೆ.

ಬಂಡಾ ಜಿಲ್ಲೆಯಲ್ಲಿ 47.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲು

ಉ.ಪ್ರದೇಶದಲ್ಲಿ ಉರಿ ಬಿಸಿಲು

ದೆಹಲಿ: ದೇಶದ ಹಲವು ರಾಜ್ಯಗಳು ಬಿಸಿಲಿನ ಬೇಗೆಯಿಂದ ತತ್ತರಿಸುತ್ತಿದ್ದು, ಉತ್ತರ ಪ್ರದೇಶದ ಬಂಡಾ ಜಿಲ್ಲೆಯಲ್ಲಿ ತಾಪಮಾನವು 47.6 ಡಿಗ್ರಿ ಸೆಲ್ಸಿಯಸ್‌ಗೆ ತಲುಪಿದೆ. ಈ ಮೂಲಕ ದೇಶದಲ್ಲೇ ಅತ್ಯಂತ ಉಷ್ಣಾಂಶ ದಾಖಲಾದ ಪ್ರದೇಶವಾಗಿ ಹೊರಹೊಮ್ಮಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಮೇ 29ರಿಂದ ಬಿಸಿಲಿನ ತೀವ್ರತೆ ದೇಶದಲ್ಲಿ ಹಂತ ಹಂತವಾಗಿ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಕಚೇರಿ ಮುನ್ಸೂಚನೆ ನೀಡಿದೆ. ಮುಂದಿನ 7 ದಿನಗಳವರೆಗೆ ಕೇಂದ್ರ ಮತ್ತು ವಾಯವ್ಯ ಭಾರತದಲ್ಲಿ ಅತಿಯಾದ ಉಷ್ಣಗಾಳಿ ಮುಂದುವರಿಯಲಿದೆ. ಅದೇ ರೀತಿ, ಪೂರ್ವ ಮತ್ತು ದಕ್ಷಿಣ ಭಾರತದಲ್ಲಿ ಮುಂದಿನ 3 ರಿಂದ 5 ದಿನಗಳವರೆಗೆ ತೀವ್ರ ಬಿಸಿಲು ಇರಲಿದೆ ಎಂದು ಇಲಾಖೆ ವರದಿಯಲ್ಲಿ ತಿಳಿಸಿದೆ.

ರಾಜಧಾನಿ ದೆಹಲಿಯಲ್ಲಿ ಗರಿಷ್ಠ ತಾಪಮಾನ 43.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದು, ಇದು ಸಾಮಾನ್ಯಕ್ಕಿಂತ 3.4 ಡಿಗ್ರಿ ಹೆಚ್ಚಾಗಿದೆ. ಅಯಾನಗರ್ ಮತ್ತು ರಿಡ್ಜ್ ಹವಾಮಾನ ಕೇಂದ್ರಗಳಲ್ಲಿ ತಲಾ 44.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಲೋಧಿ ರೋಡ್‌ನಲ್ಲಿ 43.8 ಡಿಗ್ರಿ, ಪಾಲಂನಲ್ಲಿ 43.7 ಡಿಗ್ರಿ, ಸಫ್ದರ್‌ಜಂಗ್‌ನಲ್ಲಿ 43.6 ಡಿಗ್ರಿ ಸೆಲ್ಸಿಯಸ್, ಬ್ರಹ್ಮಪುರಿಯಲ್ಲಿ 47.2 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ದಾಖಲಾಗಿದೆ. ಲಖನೌನಲ್ಲಿ 42.6 ಡಿಗ್ರಿ ಸೆಲ್ಸಿಯಸ್ ದಾಟಿದೆ.

ರಾಜಸ್ಥಾನದಲ್ಲಿ ತಾಪಮಾನ 47 ಡಿಗ್ರಿಗೆ ಏರುವ ಸಾಧ್ಯತೆ

ರಾಜಸ್ಥಾನದಲ್ಲೂ ತಾಪಮಾನ 45 ರಿಂದ 46 ಡಿಗ್ರಿ ಸೆಲ್ಸಿಯಸ್ ಆಸುಪಾಸಿನಲ್ಲಿದೆ. ರಾಜ್ಯದ ಶ್ರೀಗಂಗಾನಗರದಲ್ಲಿ 46 ಡಿಗ್ರಿ, ವನಸ್ಥಲಿಯಲ್ಲಿ 45.1 ಡಿಗ್ರಿ, ಚುರುವಿನಲ್ಲಿ 44.9 ಡಿಗ್ರಿ ಮತ್ತು ಜೈಪುರದಲ್ಲಿ 43.6 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಮುಂದಿನ 3 ರಿಂದ 4 ದಿನಗಳ ಕಾಲ ರಾಜಸ್ಥಾನದ ಬಹುತೇಕ ಭಾಗಗಳಲ್ಲಿ ಒಣ ಹವೆ ಮುಂದುವರಿಯಲಿದೆ.

ಮೇಕೆದಾಟು: ಕಾನೂನು ಹೋರಾಟ ಚುರುಕಿಗೆ ಸಿಎಂ ವಿಜಯ್ ಸೂಚನೆ

ಚೆನ್ನೈ: ಕರ್ನಾಟಕ ಸರಕಾರವು ಕಾವೇರಿ ನದಿಗೆ ಅಡ್ಡವಾಗಿ ನಿರ್ಮಿಸಲು ಉದ್ದೇಶಿಸಿರುವ ಮೇಕೆದಾಟು ಯೋಜನೆಗೆ ಭೂಮಿ ಪೂಜೆ ನೆರವೇರಿಸಲು ಸಿದ್ಧತೆ ನಡೆಸುತ್ತಿರುವ ಬೆನ್ನಲ್ಲೇ, ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್ ಅವರು ಉನ್ನತ ಮಟ್ಟದ ಸಭೆ ನಡೆಸಿದ್ದಾರೆ.

ಮೇಕೆದಾಟು ಯೋಜನೆಗೆ ತಮಿಳುನಾಡು ಮೊದಲಿನಿಂದಲೂ ತೀವ್ರ ವಿರೋಧ ವ್ಯಕ್ತಪಡಿಸುತ್ತಾ ಬಂದಿದ್ದು, ಆ ನಿಟ್ಟಿನಲ್ಲಿ ರಾಜ್ಯದ ಹಕ್ಕುಗಳನ್ನು ಮರುಸ್ಥಾಪಿಸಲು ಮತ್ತು ರೈತರ ಹಿತಾಸಕ್ತಿಯನ್ನು ಕಾಯಲು ಪರಿಶೀಲನಾ ಸಭೆ ಆಯೋಜಿಸಲಾಗಿತ್ತು ಎಂದು ತಮಿಳುನಾಡು ಸರಕಾರದ ಅಧಿಕೃತ ಪ್ರಕಟಣೆ ತಿಳಿಸಿದೆ.

ಮೇಕೆದಾಟು ವಿವಾದಕ್ಕೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳ ಕುರಿತು ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಲಾಯಿತು. ಈ ಹಿಂದೆ, ಸುಪ್ರೀಂಕೋರ್ಟ್‌ನ ಕಾನೂನು ವ್ಯಾಪ್ತಿಯನ್ನು ಕೇವಲ ಕೇಂದ್ರದ ತಜ್ಞರ ಸಮಿತಿಯಷ್ಟೇ ನಿರ್ಧರಿಸಬಹುದು ಎಂಬ ತೀರ್ಪಿನ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿತ್ತು.

ನ್ಯಾಯಾಲಯದ ಈ ಹಿಂದಿನ ಆದೇಶವನ್ನು ಗಮನದಲ್ಲಿಟ್ಟುಕೊಂಡು, ಹಿರಿಯ ವಕೀಲರೊಂದಿಗೆ ಸಮಾಲೋಚನೆ ನಡೆಸಿ ಕಾನೂನು ಹೋರಾಟದ ಮುಂದಿನ ಕ್ರಮಗಳನ್ನು ಚುರುಕುಗೊಳಿಸುವಂತೆ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಮುಖ್ಯಮಂತ್ರಿ ವಿಜಯ್ ನೇತೃತ್ವದಲ್ಲಿ ನಡೆದ ಈ ಮಹತ್ವದ ಸಭೆಯಲ್ಲಿ ಸಚಿವರಾದ ಎನ್. ಆನಂದ್, ಆಧವ್ ಅರ್ಜುನ, ಆರ್.ನಿರ್ಮಲ್ ಕುಮಾರ್ ಮತ್ತು ತಮಿಳುನಾಡು ಸರಕಾರದ ಅಡ್ವೊಕೇಟ್ ಜನರಲ್ ವಿಜಯ್ ನಾರಾಯಣ್ ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಗೋ ರಕ್ಷಣೆಗಾಗಿ ಒಎಲ್‌ಎಕ್ಸ್ ರೀತಿ ಗೋಎಲ್‌ಎಕ್ಸ್

ವಾರಾಣಸಿ: ಕೇಂದ್ರ ಸರಕಾರವು ಗೋವನ್ನು 'ರಾಷ್ಟ್ರಮಾತೆ' ಎಂದು ಘೋಷಿಸಬೇಕು ಮತ್ತು ಅದರ ರಕ್ಷಣೆಯನ್ನು ಖಚಿತಪಡಿಸಬೇಕು ಎಂದು ಅಭಿಯಾನ ಆರಂಭಿಸಿರುವ ಸ್ವಾಮಿ ಅವಿಮುಕ್ತೇಶ್ವರಾನಂದ ಅವರು ಇದೀಗ ಹೊಸ ಹೆಜ್ಜೆ ಇಟ್ಟಿದ್ದಾರೆ. ಒಎಲ್‌ಎಕ್ಸ್ ಆನ್‌ಲೈನ್ ಮಾರಾಟ ತಾಣದ ರೀತಿ ಗೋಎಲ್‌ಎಕ್ಸ್ ಎಂಬ ವೆಬ್‌ಸೈಟ್ ಆರಂಭಿಸುವುದಾಗಿ ಘೋಷಿಸಿದ್ದಾರೆ.

ವಾರಾಣಸಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗೋವುಗಳನ್ನು ಕಸಾಯಿಖಾನೆಗಳಿಗೆ ಕಳಿಸುವುದನ್ನು ತಡೆಯಲು ನಾವು ಗೋ ಎಲ್‌ಎಕ್ಸ್ ವೆಬ್‌ಸೈಟ್ ಆರಂಭಿಸುತ್ತಿದ್ದೇವೆ. ಇದು ಒಎಲ್‌ಎಕ್ಸ್ ರೀತಿ ಕೆಲಸ ಮಾಡಲಿದೆ. ಗೋವುಗಳನ್ನು ಮಾರುವವರು-ಕೊಳ್ಳುವ ಹಿಂದೂಗಳ ನಡುವೆ ಸಂಪರ್ಕ ಕಲ್ಪಿಸಲಾಗುತ್ತದೆ. ಇದರಿಂದ ಕಸಾಯಿಖಾನೆಗೆ ಗೋವುಗಳು ಹೋಗದಂತೆ ತಡೆಯಲಾಗುತ್ತದೆ ಎಂದು ಹೇಳಿದ್ದಾರೆ.

ಕಸಾಯಿಖಾನೆಗೆ ಗೋವುಗಳನ್ನು ಸಾಗಿಸುವುದನ್ನು ತಡೆದರೆ ಹಿಂದೂಗಳಿಗೆ ನಷ್ಟವಾಗುತ್ತದೆ ಎನ್ನುವುದು ಆಧಾರರಹಿತ. ನಿಜವಾದ ಹಿಂದೂಗಳು ಗೋವುಗಳನ್ನು ಕಸಾಯಿಖಾನೆಗೆ ಕಳಿಸುವುದಿಲ್ಲ. ನಾವೊಬ್ಬರೆ ಗೋ ಎಲ್‌ಎಕ್ಸ್ ಆರಂಭಿಸುತ್ತಿಲ್ಲ. ಗೋ ರಕ್ಷಣೆಗೆ ದೇಶದಾದ್ಯಂತ ತೊಡಗಿಸಿಕೊಂಡಿರುವವರು ಇದರ ಹಿಂದೆ ಕೆಲಸ ಮಾಡಲಿದ್ದಾರೆ. ಗೋವಿನ ರಕ್ಷಣೆಗಾಗಿ ಈ ಅಭಿಯಾನವು ಅತ್ಯುತ್ತಮವಾಗಿದೆ ಎಂದು ವಿವರಿಸಿದರು.

ಸ್ವಾಮಿ ಅವಿಮುಕ್ತೇಶ್ವರಾನಂದ ಸರಸ್ವತಿ.

ಕಾಕ್ರೋಚ್ ಜನತಾ ಪಾರ್ಟಿ ಬಗ್ಗೆ ಪರೋಕ್ಷವಾಗಿ ಹಣಕಾಸು ಸಚಿವೆ ಕಿಡಿ

ಭಯ ಹುಟ್ಟಿಸುವ ಪ್ರಚಾರ ತಂತ್ರಗಳನ್ನು ದೇಶ ಸಹಿಸುವುದಿಲ್ಲ: ಸಚಿವೆ ನಿರ್ಮಲಾ

ಮುಂಬೈ: ದೇಶದ ಆರ್ಥಿಕತೆಯ ಬಗ್ಗೆ ಕೆಲವರು ನಕಾರಾತ್ಮಕ, ನಿರಾಶಾದಾಯಕ ವಾತಾವರಣವನ್ನು ಸೃಷ್ಟಿಸುತ್ತಿದ್ದಾರೆ. ಭಯ ಹುಟ್ಟಿಸುವ ಇಂತಹ ಪ್ರಚಾರ ತಂತ್ರಗಳನ್ನು ಭಾರತ ಎಂದಿಗೂ ಸಹಿಸುವುದಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾ ರಾಮನ್ ಕಿಡಿಕಾರಿದ್ದಾರೆ.

ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ 37ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸದ್ಯದ ಜಾಗತಿಕ ಅನಿಶ್ಚಿತತೆಯ ಕೆಟ್ಟ ಪರಿಣಾಮದ ಹೊರತಾಗಿಯೂ ಭಾರತದ ಆರ್ಥಿಕತೆ ಉತ್ತಮವಾಗಿದೆ. ಟೀಕಾ ಕಾರರು ಇದನ್ನು ಗಮನಿಸುವುದಿಲ್ಲ. ನಮ್ಮ ಮಾತು, ಕೆಲಸಗಳು ಜಾಗತಿಕ ಪರಿಣಾಮ ಗಳಿಂದ ಆತಂಕಗೊಂಡಿರುವ ಜನರಲ್ಲಿ ವಿಶ್ವಾಸ ತುಂಬುವ ಕೆಲಸ ಮಾಡಬೇಕೇ ಹೊರತು ನಿರಾಶಾವಾದವನ್ನಲ್ಲ ಎಂದು ಅವರು ಇತ್ತೀಚೆಗಿನ ಕಾಕ್ರೋಚ್ ಜನತಾ ಪಾರ್ಟಿ ಅಭಿಯಾನದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಮೂರು ಎಫ್‌ಗಳ ಬಗ್ಗೆ ಜಾಗರೂಕರಾಗಬೇಕು

ಇರಾನ್-ಇಸ್ರೇಲ್ ಯುದ್ಧದ ಅತ್ಯಂತ ಗಂಭೀರ ಪರಿಣಾಮದ ಹೊರತು ಭಾರತದ ಆರ್ಥಿಕತೆ ಸ್ಥಿತಿಸ್ಥಾಪಕತ್ವವನ್ನು ಕಾಯ್ದುಕೊಂಡಿದೆ. ಇಂತಹ ಸಂದರ್ಭದಲ್ಲಿ ನಾನು ಮೂರು ಎಫ್‌ಗಳ ಬಗ್ಗೆ ದೇಶದ ಜನ ಜಾಗರೂಕರಾಗಬೇಕೆಂದು ಮನವಿ ಮಾಡುತ್ತೇನೆ ಎಂದರು. ಫ್ಯೂಯಲ್, ಫಾರಿನ್ ಎಕ್ಸ್‌ಚೇಂಜ್, ಫರ್ಟಿಲೈಜರ್ ಎಂಬ ಮೂರು ಎಫ್‌ಗಳ ಬಗ್ಗೆ ಜನ ಅತ್ಯಂತ ಜಾಗರೂಕವಾಗಿದ್ದು, ಅವುಗಳ ಸಮರ್ಪಕ ಬಳಕೆಯನ್ನು ಅರ್ಥ ಮಾಡಿಕೊಳ್ಳಬೇಕು. ಆ ಮೂಲಕ ಬಿಕ್ಕಟ್ಟಿನ ಸಮಯದಲ್ಲಿ ಜನ ಜವಾಬ್ದಾರಿತನದಿಂದ ವರ್ತಿಸಬೇಕು ಎಂದು ನಿರ್ಮಲಾ ಸೀತಾರಾಮನ್ ಅವರು ಪರೋಕ್ಷವಾಗಿ ಕರೆ ನೀಡಿದರು.

ಬಾಲಕಿ ಅತ್ಯಾಚಾರ-ಹತ್ಯೆ: ಹಂತಕನಿಗೆ 2 ಗಲ್ಲು ಶಿಕ್ಷೆ

ಚೆನ್ನೈ: ತಮಿಳುನಾಡಿನ ವಿಲಾತಿಕುಲಂನ 12ನೇ ತರಗತಿ ವಿದ್ಯಾರ್ಥಿನಿ, 17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಕೊಲೆ ಮಾಡಿದ್ದ ಕಾಮುಕ ಧರ್ಮ ಮುನೀಶ್ವರನಿಗೆ ತೂತುಕುಡಿ ಜಿಲ್ಲೆಯ ಪೋಕ್ಸೋ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ವಿಶೇಷವೆಂದರೆ ಅಪರಾಧ ನಡೆದ 77 ದಿನಗಳ ಒಳಗೇ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸಿದ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಅಪಾದಿತನಿಗೆ ಗಲ್ಲು ಶಿಕ್ಷೆ ವಿಧಿಸಿದ್ದಾರೆ. ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಹಾಗೂ ಕೊಲೆ, ಎರಡನ್ನೂ ಪ್ರತ್ಯೇಕ ಪ್ರಕರಣಗಳಾಗಿ ಪರಿಗಣಿಸಿ ವಿಚಾರಣೆ ನಡೆಸಿದ ನ್ಯಾಯಾಧೀಶರು, ಧರ್ಮ ಎರಡೂ ಪ್ರಕರಣಗಳಲ್ಲೂ ಅಪರಾಧಿ ಎಂಬುದು ಸಾಬೀತಾಗಿದೆ. ಆತನಿಗೆ ಎರಡೂ ಪ್ರಕರಣಗಳನ್ನೂ ಗಲ್ಲು ಶಿಕ್ಷೆ ವಿಧಿಸಿ ನ್ಯಾಯಾಲಯ ಆದೇಶಿಸಿದೆ.

ಬಾಲಕಿ ಮಾರ್ಚ್ ತಿಂಗಳಲ್ಲಿ ನಾಪತ್ತೆಯಾಗಿದ್ದಳು. ಹುಡುಕಾಟ ನಡೆಸಿದಾಗ ಆಕೆಯ ಶವ ಮನೆ ಸಮೀಪದ ಕುರುಚಲು ಗಿಡಗಳ ನಿರ್ಜನ ಪ್ರದೇಶದಲ್ಲಿ ಪತ್ತೆಯಾಗಿತ್ತು. ಅಪರಾಧಿ ಪತ್ತೆಗಾಗಿ ಪೊಲೀಸ್ ಇಲಾಖೆಯ 10 ವಿಶೇಷ ತಂಡಗಳು ಹರಸಾಹಸ ಪಟ್ಟಿದ್ದವು. ಈ ಬಗ್ಗೆ ತನಿಖೆ ನಡೆಸಿದಾಗ ದ್ವಿಚಕ್ರ ವಾಹನ ಕದ್ದು ನಂಬರ್ ಪ್ಲೇಟ್ ತಿರುಚಲಾಗಿದೆ ಎಂಬುದು ಪತ್ತೆಯಾಗಿತ್ತು. ಇದೇ ಆಧಾರದ ಮೇಲೆ ಅಪರಾಧಿಯನ್ನು ಪತ್ತೆಹಚ್ಚಿದ್ದರು.

ವಕ್ಫ್‌ಬೋರ್ಡ್ ವಕೀಲ ಖ್ವಾಜಾಗೆ ಕಾರು ಡಿಕ್ಕಿ ಹೊಡಿಸಿ ಕೊಲೆ: ಶಂಕೆ

ಹೈದರಾಬಾದ್: ಭೂಮಿ ಅತಿಕ್ರಮಣ ಪ್ರಕರಣಗಳಲ್ಲಿ ವಕ್ಫ್‌ಬೋರ್ಡ್‌ನ ಪರವಾಗಿ ವಕಾಲತು ವಹಿಸುತ್ತಿದ್ದ ತೆಲಂಗಾಣ ರಾಜಧಾನಿ ಹೈದರಾಬಾದ್‌ನ ಹಿರಿಯ ವಕೀಲ ಖ್ವಾಜಾ ಮೊಯಿಜುದ್ದೀನ್ (63) ಅವರಿಗೆ ಮೇ 23ರಂದು ಕಾರು ಡಿಕ್ಕಿ ಹೊಡೆಸಿ ಕೊಲ್ಲಲಾಗಿದೆ.

ಇದೊಂದು ಪೂರ್ವಯೋಜಿತ ಕೊಲೆ ಪ್ರಕರಣದಂತೆಯೇ ಕಾಣುತ್ತಿದೆ ಎಂದೂ ಹೈದರಾಬಾದ್ ಪೊಲೀಸರು ಶಂಕಿಸಿದ್ದಾರೆ.

ಖ್ವಾಜಾ ಮೊಯಿಜುದ್ದೀನ್ ಮನೆಯಿಂದ ಹೊರಬಂದು ತಮ್ಮ ಕಾರಿನ ಹಿಂದಿನ ಆಸನದ ಮೇಲೆ ಕೈಚೀಲವನ್ನಿಟ್ಟು ಬಳಿಕ ಚಾಲಕನ ಕಡೆಯ ಬಾಗಿಲು ತೆಗೆದು ಕಾರನ್ನು ಹತ್ತಲು ಸಿದ್ಧರಾಗುತ್ತಿದ್ದಾಗಲೇ ಅದೇ ರಸ್ತೆಯಲ್ಲಿ ನಿಲುಗಡೆಯಾಗಿದ್ದ ಹಸಿರು ಬಣ್ಣದ ಸ್ಕಾರ್ಪಿಯೋ ಕಾರು, ತಕ್ಷಣವೇ ವೇಗವಾಗಿ ಬಂದು ಖ್ವಾಜಾ ಅವರಿಗೆ ಡಿಕ್ಕಿ ಹೊಡೆದು ಅದೇ ವೇಗದಲ್ಲಿ ಸ್ಥಳದಿಂದ ಪರಾರಿಯಾಗಿದೆ. ಈ ದೃಶ್ಯಗಳು ಖ್ವಾಜಾ ಮನೆಯ ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾಗಿವೆ.

ಅದೇ ರಸ್ತೆಯಲ್ಲಿ ಒಂದೆಡೆ ಕಾರನ್ನು ಬಹಳ ಸಮಯದಿಂದ ನಿಲ್ಲಿಸಿಕೊಂಡು ಹೊಂಚು ಹಾಕುತ್ತಿದ್ದ ದುಷ್ಕರ್ಮಿಗಳು, ಖ್ವಾಜಾ ಅವರು ಮನೆಯಿಂದ ಹೊರಬರುತ್ತಿದ್ದಂತೆಯೇ ಸ್ಕಾರ್ಪಿಯೋ ವಾಹನವನ್ನು ಚಾಲನೆಗೊಳಿಸಿರುವುದು, ಖ್ವಾಜಾ ಅವರು ಚಾಲಕನ ಕಡೆಯ ಬಾಗಿಲು ತೆರೆಯಲು ಮುಂದಾಗುತ್ತಲೇ ವೇಗವಾಗಿ ಬಂದು ಖ್ವಾಜಾ ಅವರಿಗೆ ತಮ್ಮ ವಾಹನದಿಂದ ಗುದ್ದಿಸಿದ್ದಾರೆ.

ಸ್ಕಾರ್ಪಿಯೋ ಅಪ್ಪಳಿಸಿದ ರಭಸಕ್ಕೆ ಖ್ವಾಜಾ ಹತ್ತಾರು ಮೀಟರ್ ದೂರಕ್ಕೆ ಎಸೆಯಲ್ಪಟ್ಟಿದ್ದಾರೆ. ವಾಹನ ರಭಸವಾಗಿ ಗುದ್ದಿರುವುದು ಮತ್ತು ರಸ್ತೆಯ ಮೇಲಕ್ಕೆ ಅಪ್ಪಳಿಸಿದಂತೆ ಬಿದ್ದಿದ್ದರಿಂದ 63 ವರ್ಷದ ಖ್ವಾಜಾ ಗಂಭೀರವಾಗಿ ಗಾಯಗೊಂಡು ರಸ್ತೆಯಂಚಲ್ಲಿ ಬಿದ್ದು ಕೆಲವು ಕ್ಷಣ ನರಳಾಡಿ ಪ್ರಾಣ ಬಿಟ್ಟಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ.

ಸ್ಕಾರ್ಪಿಯೋ ವಾಹನ ಸಾಗಿ ಹೋಗಲು ರಸ್ತೆಯಲ್ಲಿ ಬಹಳಷ್ಟು ಸ್ಥಳವಿದ್ದರೂ ವಾಹನವನ್ನು ಖ್ವಾಜಾ ಅವರ ಟೊಯೊಟೊ ಕಾರಿನ ಸಮೀಪದಲ್ಲೇ ಚಲಾಯಿಸಿರುವುದು ಹಂತಕರ ಹತ್ಯೆ ಸಂಚನ್ನು ದೃಢಪಡಿಸಿದೆ.

ಆವರೆಗೂ ನಿರ್ಜನವಾಗಿದ್ದ ರಸ್ತೆಯಲ್ಲಿ ಖ್ವಾಜಾ ರಸ್ತೆಗೆ ಬಿದ್ದ ಬಳಿಕ ಸ್ಕೂಟರ್‌ನಲ್ಲಿ ವ್ಯಕ್ತಿಯೊಬ್ಬರು ಬಂದಿದ್ದಾರೆ. ಅವರು ಖ್ವಾಜಾ ಮನೆಯವರ ಗಮನ ಸೆಳೆದಿದ್ದಾರೆ. ಕೂಡಲೇ ಖ್ವಾಜಾ ಅವರನ್ನು ಮಹಾವೀರ ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ವೈದ್ಯರು, ಖ್ವಾಜಾ ಅದಾಗಲೇ ಕೊನೆಯುಸಿರೆಳೆದಿದ್ದಾರೆ ಎಂದು ದೃಢಪಡಿಸಿದ್ದಾರೆ.

ಸಂಚು ಹೂಡಿ ಕೊಲೆ: ಕುಟುಂಬದ ಆರೋಪ

ವಕ್ಫ್ ಭೂಮಿ-ನಿವೇಶನಗಳ ಅತಿಕ್ರಮಣ ಮಾಡಿಕೊಂಡಿರುವವರೇ ಸಂಚು ನಡೆಸಿ ಕೊಲೆ ಮಾಡಿಸಿದ್ದಾರೆ ಎಂದು ಖ್ವಾಜಾ ಅವರ ಮಗ, ವಕೀಲರೂ ಆಗಿರುವ ಮೊಹಮ್ಮದ್ ಫರ್ಹಾನ್ ಆರೋಪಿಸಿದ್ದಾರೆ. ಹಿಟ್ ಅಂಡ್ ರನ್ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ತನಿಖೆ ಆರಂಭಿಸಿದ್ದಾರೆ. ಹಂತಕರ ವಾಹನ ಪತ್ತೆಗೆ ಮತ್ತು ಆರೋಪಿಗಳ ಸೆರೆಗೆ 4 ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ.

ಪ್ರಪಾತಕ್ಕೆ ಬಿದ್ದ ಕಾರು: 8 ಯುವಕರ ಸಾವು

ರಾಯಗಢ, ಮಹಾರಾಷ್ಟ್ರ: ಎಸ್ಯುವಿ ಕಾರೊಂದು ಸುಮಾರು 1 ಸಾವಿರ ಅಡಿ ಆಳದ ಕಣಿವೆಗೆ ಬಿದ್ದು 8 ಯುವಕರು ಮೃತಪಟ್ಟಿರುವ ಘಟನೆ ಮಹಾರಾಷ್ಟ್ರದ ರಾಯಗಢ ಜಿಲ್ಲೆಯಲ್ಲಿ ನಡೆದಿದೆ. ಮೃತರನ್ನು ಸತಾರಾ ನಿವಾಸಿಗಳಾದ ರಿತೇಶ್ ಲೋಖಂಡೆ (22), ಸುಹಾಸ್ ಲೋಖಂಡೆ (20), ಉತ್ಕರ್ಷ್ ಶಿಂಗ್ಟೆ (21), ನಿಖಿಲ್ ಶಿಂಗ್ಟೆ (25), ಮಹೇಶ್ ಪವಾರ (25), ಆದಿತ್ಯ ಸಾಳುಂಖೆ (21), ರಾಜೇಶ್ ಕಾಟ್ಕರ (35), ಮತ್ತು ರತ್ನಗಿರಿಯ ಅಂಶ್ ಚವಾಣ್ (19) ಎಂದು ಗುರುತಿಸಲಾಗಿದೆ.

ಅಂಬೇನಾಳಿ ಘಾಟ್ ಬಳಿ ಕಡಿದಾದ ರಸ್ತೆಯ ತಿರುವಿನಲ್ಲಿ ಕಾರು ಹೋಗುತ್ತಿರುವಾಗ ಆಳವಾದ ಕಣಿವೆಗೆ ನಿಯಂತ್ರಣ ತಪ್ಪಿ ಬಿದ್ದಿದೆ. ಆ ಪ್ರದೇಶದಲ್ಲಿ ಮೊಬೈಲ್ ನೆಟ್ವರ್ಕ್ ಸಹ ಸಿಗದಿದ್ದರಿಂದ ತುರ್ತು ಸಹಾಯ ಸಾಧ್ಯವಾಗಿರಲಿಲ್ಲ. ಇದರಿಂದ ಮೃತರ ಕುಟುಂಬದವರು ಆತಂಕಗೊಂಡು ತಮ್ಮವರು ಸಂಪರ್ಕಕ್ಕೆ ಸಿಗುತ್ತಿಲ್ಲ ಎಂದು ಪೊಲೀಸರಿಗೆ ಮಾಹಿತಿ ನೀಡಿದ್ದರು. ಮಾಹಿತಿ ತಿಳಿದು ಪೊಲೀಸರು ಕಾರ್ಯಾಚರಣೆ ಕೈಗೊಂಡಾಗ ಅಪಘಾತ ಸಂಭವಿಸಿರುವುದು ಕಂಡು ಬಂದಿದೆ. ಪೋಳಾದಪುರ- ಮಹಾಬಲೇಶ್ವರ ರಸ್ತೆಯ ಅಂಬೇನಾಳಿ ಘಾಟ್ ಬಳಿ ಈ ದುರಂತ ಸಂಭವಿಸಿದೆ.

ಭಾರತೀಯ ಮೂಲದ ತಾಯಿ-ಮಗ ಇಂಗ್ಲೆಂಡ್ ಮೇಯರ್‌ಗಳಾಗಿ ಆಯ್ಕೆ

ಚಂಡೀಗಢ: ಭಾರತೀಯ ಮೂಲದ ತಾಯಿ-ಮಗ ಇಬ್ಬರೂ ಇಂಗ್ಲೆಂಡ್‌ನಲ್ಲಿ ಮೇಯರ್‌ಗಳಾಗಿ ಆಯ್ಕೆಯಾಗಿದ್ದಾರೆ. ಯುಕೆಯಲ್ಲಿ ಭಾರತೀಯ ಮೂಲದ ಅತ್ಯಂತ ಕಿರಿಯ ಮೇಯರ್ ಆಗುವ ಮೂಲಕ ತುಷಾರ್ ಅವರು ಇತಿಹಾಸ ಸೃಷ್ಟಿಸಿದ್ದಾರೆ.

ಎಲ್ಸ್ಟ್ರೀ ಮತ್ತು ಬೋರ್‌ಹ್ಯಾಮ್ವುಡ್ ಟೌನ್ ಕೌನ್ಸಿಲ್‌ನ ಇತಿಹಾಸದಲ್ಲೇ ಅತಿ ಕಿರಿಯ ಮೇಯರ್ ಆಗಿ ಆಯ್ಕೆಯಾಗಿದ್ದು, ಅದಾದ ಒಂದು ವಾರದ ಬಳಿಕ ಅವರ ತಾಯಿ ಹರ್ಟ್ಸ್‌ಮೀರ್ ಬರೋ ಕೌನ್ಸಿಲ್‌ನ ಮೊದಲ ಭಾರತೀಯ ಮೂಲದ ಮೇಯರ್ ಆಗಿ ಆಯ್ಕೆಯಾಗಿದ್ದಾರೆ.

ಹರಿಯಾಣದ ಸೋನಿಪತ್ ಜಿಲ್ಲೆಯ ಖಾರ್ಖೋಡಾ ಪ್ರದೇಶದಲ್ಲಿರುವ ರೋಹ್ನಾ ಎಂಬುದು ಈ ಕುಟುಂಬದ ಮೂಲ ಗ್ರಾಮವಾಗಿದ್ದು, 2013ರಲ್ಲಿ ಯುಕೆಗೆ ಸ್ಥಳಾಂತರಗೊಳ್ಳುವ ಮೊದಲು ಅವರು ದೀರ್ಘಕಾಲ ರೋಹ್ಟಕ್‌ನಲ್ಲಿ ವಾಸಿಸುತ್ತಿದ್ದರು.

ಲ್ಯಾಟಿನ್ ಅಮೆರಿಕ, ಆಫ್ರಿಕಾದಿಂದ ಭಾರತಕ್ಕೆ ಕಚ್ಚಾ ತೈಲ ಆಮದು

ದೆಹಲಿ: ಹೊರ್ಮುಜ್ ಜಲಸಂಧಿಯಲ್ಲಿ ಸರಕುಗಳ ಸಾಗಣೆಗೆ ಉಂಟಾದ ನಿರ್ಬಂಧದಿಂದ ದೇಶದ ತೈಲ ಸಂಸ್ಕರಣಾ ಕಂಪನಿಗಳು ಲ್ಯಾಟಿನ್ ಅಮೆ ರಿಕ ಮತ್ತು ಆಫ್ರಿಕಾದಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳಲು ಮುಂದಾಗಿವೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ದೇಶದ ತೈಲ ಸಂಸ್ಕರಣಾ ಕಂಪನಿಗಳು ತೈಲ ಕೊರತೆಯನ್ನು ಸರಿದೂಗಿಸಲು, ವೆನೆಜುವೆಲಾ, ಬ್ರೆಜಿಲ್, ಅಂಗೋಲಾ ಮತ್ತು ನೈಜೀರಿಯಾದಿಂದ ತೈಲ ಆಮದನ್ನು ಹೆಚ್ಚಳ ಮಾಡಿವೆ. ಜತೆಗೆ ರಷ್ಯಾದಿಂದ ತೈಲ ಖರೀದಿಯನ್ನು ಮುಂದುವರಿಸಿವೆ.

ನಿತ್ಯ ಜನಸಾಮಾನ್ಯರ ಜೇಬಿಗೆ ಕತ್ತರಿ: ಖರ್ಗೆ ವಾಗ್ದಾಳಿ

ಇಂಧನ ದರ ಏರಿಸಿ 43 ಲಕ್ಷ ಕೋಟಿ ರು. ಲೂಟಿ

ದೆಹಲಿ: ದೇಶದಲ್ಲಿ ಪದೇ ಪದೇ ಪೆಟ್ರೋಲ್-ಡೀಸೆಲ್ ದರ ಏರಿಕೆ ಮಾಡುವ ಮೂಲಕ ಕಳೆದ 12 ವರ್ಷಗಳಲ್ಲಿ ಪ್ರಧಾನಿ ಮೋದಿ ಸರಕಾರ ಒಟ್ಟು 43 ಲಕ್ಷ ಕೋಟಿ ರು. ಲೂಟಿ ಮಾಡಿದೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೋಮವಾರ ಕಿಡಿಕಾರಿದ್ದಾರೆ.

ಕಳೆದ 11 ದಿನಗಳಲ್ಲಿ 4ನೇ ಬಾರಿ ಪೆಟ್ರೋಲ್-ಡೀಸೆಲ್ ದರ ಏರಿಸಲಾಗಿದೆ. ಇದು ಸಾಮಾನ್ಯ ಜನರ ಮೇಲೆ ನಡೆಸಲಾಗುತ್ತಿರುವ ನಿತ್ಯದ ದರೋಡೆಯಾಗಿದೆ. ಮೋದಿ ಸರ್ಕಾರ ಪೆಟ್ರೋಲ್ ಸಿಂಪಡಿಸಿ ಜನರ ಉಳಿತಾಯದ ಹಣಕ್ಕೆ ಬೆಂಕಿ ಹಚ್ಚುತ್ತಿದೆ ಎಂದು ಕೇಂದ್ರ ಸರಕಾರದ ವಿರುದ್ಧ ಖರ್ಗೆ ತೀವ್ರ ವಾಗ್ದಾಳಿ ನಡೆಸಿದ್ದಾರೆ. ಕಾಂಗ್ರೆಸ್ ನೇತೃತ್ವದ 'ಯುಪಿಎ' ಒಕ್ಕೂಟ ಸರಕಾರದ ಅವಧಿಯಲ್ಲಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಶೇ.175.34ರಷ್ಟು ಏರಿಕೆಯಾಗಿತ್ತು. ಈಗ ಎನ್‌ಡಿಎ ಸರಕಾರದ ಅವಧಿಯಲ್ಲಿ ಕಚ್ಚಾತೈಲ ಬೆಲೆ ಅಷ್ಟೇನೂ ಏರಿಕೆಯಾಗಿಲ್ಲ. ಹಾಗಿದ್ದೂ 2014ರಲ್ಲಿ 71.41 ರು.ಗಳಷ್ಟಿದ್ದ ಪೆಟ್ರೋಲ್ ದರವನ್ನು 2026ರಲ್ಲಿ 102.12ಕ್ಕೂ, ಡೀಸೆಲ್ ದರವನ್ನು 56.71 ರು.ಗಳಿಂದ 95.20 ರು.ಗೂ ಏರಿಸಲಾಗಿದೆ ಎಂದು ಖರ್ಗೆ ಕಿಡಿಕಾರಿದ್ದಾರೆ. ಇಂಧನ ದರ ನಿತ್ಯ ಏರಿಸುತ್ತಿರುವುದರಿಂದ ಜನಸಾಮಾನ್ಯರ ಖರ್ಚಿನ ಮೇಲೆ ಮತ್ತಷ್ಟು ಹೊರೆ ಬೀಳುತ್ತಿದೆ. ರೈತರಿಗೆ ಟ್ರ್ಯಾಕ್ಟರ್ ಮೊದಲಾದ ಕೃಷಿ ಯಂತ್ರೋಕರಣಗಳಿಗೂ ಡೀಸೆಲ್ ತುಟ್ಟಿಯಾಗಿದೆ. ಸಣ್ಣ ಕೈಗಾರಿಕೆಗಳವರೂ ಇಂಧನ ವೆಚ್ಚದ ಭಾರಕ್ಕೆ ಬಗ್ಗ ಹೋಗಿದ್ದಾರೆ ಎಂದು ಖರ್ಗೆ ಟೀಕಿಸಿದರು.

ಸೆಕ್ಷನ್ 124ಎ ಪುನರುಜ್ಜೀವನ: ಆತಂಕ ಮೂಡಿಸಿದ ಸುಪ್ರೀಂ

ದೇಶದ್ರೋಹ ಕಾನೂನು: ಚರ್ಚೆ ಮತ್ತೆ ಮುನ್ನೆಲೆಗೆ

ನವದೆಹಲಿ: ಸುಪ್ರೀಂ ಕೋರ್ಟ್ ದೇಶದ್ರೋಹ ಸಂಬಂಧಿತ ಸೆಕ್ಷನ್ 124ಎ ಬಗ್ಗೆ ನೀಡಿದ ಇತ್ತೀಚಿನ ಸ್ಪಷ್ಟೀಕರಣವು ದೇಶದಲ್ಲಿ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದೆ. ಇದು ಒಪ್ಪಿಗೆ ಆಧಾರಿತ ಆರೋಪಗಳನ್ನು ಎದುರಿಸುತ್ತಿರುವ ವ್ಯಕ್ತಿಗಳ ಬಗ್ಗೆ ಆತಂಕ ಹುಟ್ಟಿಸಿದೆ. ಈ ಕಾನೂನು ವಸಾಹತುಶಾಹಿ ಯುಗದ ಅವಶೇಷವಾಗಿದ್ದು, ಅದರ ದುರುಪಯೋಗ ಹೆಚ್ಚಾಗಿದೆ. ಇಂದಿನ ಸಮಾಜಕ್ಕೆ ಹೊಂದಿಕೆಯಾಗುವುದಿಲ್ಲ ಎಂದು ನ್ಯಾಯಾಲಯವೂ ಮತ್ತು ಕೇಂದ್ರ ಸರಕಾರವೂ ಈ ಹಿಂದೆ ಒಪ್ಪಿಕೊಂಡಿದ್ದವು.

ಮೇ 21ರಂದು ನ್ಯಾಯಾಲಯ ನೀಡಿದ ಸ್ಪಷ್ಟೀಕರಣ, ಕೆಲವು ಸಂದರ್ಭಗಳಲ್ಲಿ ದೇಶದ್ರೋಹ ಪ್ರಕರಣಗಳ ವಿಚಾರಣೆ ಮುಂದುವರಿಯಬಹುದು ಎಂಬ ಸಂದೇಶ ಹೊರಬಂದಿರುವುದು ಆತಂಕವನ್ನು ಸೃಷ್ಟಿಸಿದೆ. ಈ ತೀರ್ಪಿನಿಂದ ಮತ್ತೆ ದೇಶದ್ರೋಹ ಪ್ರಕರಣಗಳು ಮುಂದುವರಿಯುವ ಸಾಧ್ಯತೆ ಇದ್ದು, ಇದು ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟುಮಾಡುತ್ತದೆ ಎಂಬ ಕಳವಳ ವ್ಯಕ್ತವಾಗಿದೆ.

ಸಂವಿಧಾನದಲ್ಲಿ ಉಲ್ಲೇಖ?

ದೇಶದ್ರೋಹ ಎಂಬ ಪದ ಭಾರತೀಯ ಸಂವಿಧಾನದಲ್ಲಿ ವ್ಯಾಖ್ಯಾನಿಸಿಲ್ಲ. ಆದರೆ, ವಿಧಿ 19(1)(ಎ) ಅಡಿಯಲ್ಲಿ ವಾಕ್ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ನೀಡಲಾಗಿದೆ. ವಿಧಿ 19(2) ಅಡಿಯಲ್ಲಿ ರಾಷ್ಟ್ರದ ಭದ್ರತೆ ಮತ್ತು ಸಾರ್ವಜನಿಕ ಶಾಂತಿಯ ಹೆಸರಿನಲ್ಲಿ ಕೆಲವು ನಿರ್ಬಂಧಗಳನ್ನು ವಿಧಿಸಲು ಬಹುದು.

ಈಗ ಪ್ರಸ್ತುತವಲ್ಲ!

ಮೇ 11, 2022ರಂದು ಸುಪ್ರೀಂ ಕೋರ್ಟ್ 3 ನ್ಯಾಯಮೂರ್ತಿಗಳ ಪೀಠವು ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 124ಎ ಅಡಿಯಲ್ಲಿ ನಡೆಯುತ್ತಿದ್ದ ಎಲ್ಲ ಪ್ರಕರಣಗಳನ್ನು ಸ್ಥಗಿತಗೊಳಿಸಿತ್ತು. ಆ ಪೀಠದಲ್ಲಿ ನ್ಯಾಯಮೂರ್ತಿ ಸೂರ್ಯಕಾಂತ್ ಕೂಡ ಸದಸ್ಯರಾಗಿದ್ದರು. ಆ ಸಮಯದಲ್ಲಿ ನ್ಯಾಯಾಲಯವು ಈ ಕಾನೂನು 1898ರ ಕಾಲದಿಂದ ಬಂದಿದೆ, ಸಂವಿಧಾನಕ್ಕೂ ಹಿಂದಿನದು, ಮತ್ತು ಅದರ ದುರುಪಯೋಗ ಹೆಚ್ಚಾಗಿದೆ ಎಂದು ಗಮನಿಸಿತ್ತು.

ವಸಾಹತುಶಾಹಿಯ ಹೊರೆ

ಮೇ 11ರ ತಾತ್ಕಾಲಿಕ ಆದೇಶದಲ್ಲಿ ಕೇಂದ್ರ ಸರಕಾರದ ಪ್ರತಿಜ್ಞಾಪತ್ರದ ಭಾಗಗಳನ್ನು ಉಲ್ಲೇಖಿಸಲಾಗಿತ್ತು. ಅದರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಜಾದಿ ಕಾ ಅಮೃತ ಮಹೋತ್ಸವ ಭಾಷಣವನ್ನು ಉಲ್ಲೇಖಿಸಿ, ದೇಶವು ವಸಾಹತುಶಾಹಿಯ ಹೊರೆಯನ್ನು ತೊರೆದು ಮುಂದೆ ಸಾಗಬೇಕೆಂದು ಹೇಳಲಾಗಿತ್ತು.

ದೇಶದ್ರೋಹ ಎಂದರೇನು?

ದೇಶದ್ರೋಹ (ಸೆಡಿಷನ್) ಎಂದರೆ ಸರಕಾರದ ವಿರುದ್ಧ ದ್ವೇಷ, ಅಸಮಾಧಾನ ಅಥವಾ ಹಿಂಸಾತ್ಮಕ ಬಂಡಾಯಕ್ಕೆ ಪ್ರಚೋದನೆ ನೀಡುವುದು. ಈ ಕಾನೂನು ಹಿಂದಿನ ಐಪಿಸಿ ಸೆಕ್ಷನ್ 124ಎ ಅಡಿಯಲ್ಲಿ ಇದೆ. ಬ್ರಿಟಿಷರು ಸ್ವಾತಂತ್ರ್ಯ ಹೋರಾಟಗಾರರ ವಿರುದ್ಧ ಇದನ್ನು ಬಳಸುತ್ತಿದ್ದರು. ನ್ಯಾಯಾಲಯದ ಪ್ರಕಾರ, ಸರಕಾರವನ್ನು ಟೀಕಿಸುವುದು ದೇಶದ್ರೋಹ ಅಲ್ಲ. ಆದರೆ, ಹಿಂಸೆಗೆ ಪ್ರಚೋದನೆ ನೀಡುವುದು ಅಥವಾ ರಾಷ್ಟ್ರದ ವಿರುದ್ಧ ಬಂಡಾಯ ಹುಟ್ಟುಹಾಕುವುದು ಶಿಕ್ಷಾರ್ಹವಾಗ ಬಹುದು.

ಯಮುನಾ ನದಿ ಮಾಲಿನ್ಯಕ್ಕೆ ವಿರೋಧ ಜಿರಳೆ ವೇಷದಲ್ಲಿ ಪ್ರತಿಭಟನೆ

ಉತ್ತರ ಪ್ರದೇಶದ ಮಥುರಾದಲ್ಲಿ ಯಮುನಾ ನದಿಯ ಮಾಲಿನ್ಯದ ವಿರುದ್ಧ ನಡೆದ ವಿಚಿತ್ರ ಪ್ರತಿಭಟನೆ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಮಥುರಾ ಮಹಾನಗರ ಪಾಲಿಕೆ ಕಚೇರಿ ಸಮೀಪ ನಡೆದ ಘಟನೆಯಾಗಿದೆ. ಸಾಮಾ ಜಿಕ ಹೋರಾಟಗಾರ 'ದೀಪಕ್ ಶರ್ಮಾ' ಅವರು ಜಿರಲೆ ವೇಷ ತೊಟ್ಟು, ನದಿಯ ಬಳಿ ಇರುವ ಕಸದ ಕೊಳವೆಗೆ ಇಳಿದು ಗಮನ ಸೆಳೆದಿದ್ದಾರೆ.

ಏಕೆ ಜಿರಲೆ ವೇಷ?

- ಅಶುದ್ಧ ಪರಿಸರದ ಪ್ರತೀಕವೇ ಜಿರಲೆ
- ಅಧಿಕಾರಿಗಳ ಗಮನ ಸೆಳೆಯಲು
- ಜನರಿಗೆ ಮಾಲಿನ್ಯದ ಗಂಭೀರತೆ ತಿಳಿಸಲು
- ಮಲಿನ ಪರಿಸರದಲ್ಲಿ ಬದುಕುತ್ತಿರುವ ಸ್ಥಿತಿಯನ್ನು ತೋರಿಸಲು

ಯಮುನಾ ನದಿ ಪರಿಸರದಷ್ಟೇ ಅಲ್ಲ, ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿಯೂ ಮಹತ್ವದ್ದಾಗಿದೆ. ಯಮುನ ಶುದ್ಧೀಕರಣದ ಆಶ್ವಾಸನೆಗಳು ಈಡೇರಿಸಿಲ್ಲ. ಇಲ್ಲಿನ ಅಧಿಕಾರಿಗಳು ಸಮಸ್ಯೆಯನ್ನು ನಿರ್ಲಕ್ಷಿಸುತ್ತಿದ್ದಾರೆ. ಇದರಿಂದ ಇಲ್ಲಿ ಸುತ್ತಮುತ್ತ ವಾಸಿಸುವ ಜನರಿಗೆ ಕುಡಿಯಲು ಶುದ್ಧ ನೀರಿಲ್ಲದೆ ಎಲ್ಲ ರೀತಿಯ ಅಪಾಯಕ್ಕೆ ಒಳಗಾಗುತ್ತಿದ್ದಾರೆ.

-ದೀಪಕ್ ಶರ್ಮಾ

ಮೂಲ ಸಮಸ್ಯೆ ಏನು?

- ಶುದ್ಧೀಕರಿಸದ ಒಳಚರಂಡಿ ನೀರು ನೇರವಾಗಿ ಯಮುನ ನದಿಗೆ ಸೇರುತ್ತಿದೆ.
- ಮಥುರಾ ಮತ್ತು ಬೃಂದಾವನ ನಿವಾಸಿಗಳು ಧಾರ್ಮಿಕ ಆಚರಣೆಗಳಲ್ಲಿ ಈ ನೀರನ್ನು ಬಳಸುತ್ತಾರೆ
- ಹಲವು ವರ್ಷಗಳಿಂದ ಭರವಸೆ ಇದ್ದರೂ ಮಾಲಿನ್ಯ ನಿಯಂತ್ರಣ ಕ್ರಮಗಳು ಸಮರ್ಪಕವಾಗಿಲ್ಲ

ಭಾವುಕತೆ

ಚಂದ್ರನ ಕಡೆ ಬೆರಳು



ಒಬ್ಬ ಶಿಷ್ಯ ಗುರು ಬೋಧಿಧರ್ಮನ ಬಳಿಗೆ ಬಂದು ಕೇಳಿದ– ಗುರುಗಳೇ, ಸತ್ಯ ಎಲ್ಲಿದೆ? ಜ್ಞಾನ ಎಲ್ಲಿದೆ? ನನಗೆ ತೋರಿಸಿ. ಗುರು ಆಕಾಶದ ಕಡೆ ಬೆರಳು ತೋರಿಸಿದರು. ಆ ರಾತ್ರಿ ಪೂರ್ಣಚಂದ್ರ ಹೊಳೆಯುತ್ತಿತ್ತು. ಶಿಷ್ಯನು ಗುರುಗಳ ಬೆರಳನ್ನೇ ನೋಡುತ್ತ ನಿಂತ.

ಅದನ್ನು ನೋಡಿ ಗುರು ನಕ್ಕರು. ನಾನು ಚಂದ್ರನ ಕಡೆ ಬೆರಳು ತೋರಿಸಿದೆ. ನೀನು ಬೆರಳನ್ನೇ ನೋಡುತ್ತಿದ್ದೀಯ. ಬೆರಳು ದಾರಿ ತೋರಿಸುತ್ತದೆ, ಆದರೆ ಅದು ಚಂದ್ರ ಅಲ್ಲ ಎಂದರು. ಶಿಷ್ಯ ಕ್ಷಣಕಾಲ ಮೌನವಾಗಿದ್ದ. ಆಮೇಲೆ ನಿಧಾನವಾಗಿ ಮೇಲಕ್ಕೆ ನೋಡಿದ. ಚಂದ್ರ ಅಲ್ಲೇ ಇತ್ತು, ಎಂದಿನಿಂದಲೂ. ಪದಗಳು ದಾರಿ ತೋರಿಸಬಹುದು. ಆದರೆ ಸತ್ಯ ಪದಗಳಲ್ಲಿ ಸಿಕ್ಕಿಬೀಳೋದಿಲ್ಲ. ಕೆಲವೊಮ್ಮೆ ಉತ್ತರ ಕೇಳುತ್ತಾ ನಾವು ಪದಗಳಲ್ಲೇ ಉಳಿದುಬಿಡುತ್ತೇವೆ. ಉತ್ತರ ಮೊದಲೇ ಅಲ್ಲಿ ಇರುತ್ತದೆ.

ಸುತ್ತಮುತ್ತ

15 ನಿಮಿಷದ ನಗರ

ಜಗತ್ತಿನಲ್ಲಿ '15 ನಿಮಿಷದ ನಗರ' ಎಂಬ ಪರಿಕಲ್ಪನೆ ಜನಪ್ರಿಯ ಆಗ್ತಿದೆ. ಅದರ ಅರ್ಥ ಇಷ್ಟೆ– ಮನುಷ್ಯ ವಾಸಿಸೋ ಏರಿಯಾಕ್ಕೆ ಶಾಲೆ, ಕಚೇರಿ, ಆಸ್ಪತ್ರೆ, ಪಾರ್ಕ್, ಸರಕಾರಿ ಆಫೀಸಯ ಹೀಗೆ ದಿನನಿತ್ಯದ ಬಳಕೆಗೆ ಸಂಬಂಧಿಸಿದ ಎಲ್ಲವೂ 15 ನಿಮಿಷದ ನಡಿಗೆಯ ಒಳಗೇ ಇರೋದು. ಅಮೆರಿಕ–ಯುರೋಪ್‌ಗಳಲ್ಲಿ ವಾಸದ ಏರಿಯಾ ಬೇರೆ, ಫ್ಯಾಕ್ಟರಿಗಳು ಬೇರೆ, ಕಚೇರಿ ಬೇರೆ, ಪಾರ್ಕ್ ಬೇರೆ ಕಡೆ. ಆದರೆ ಭಾರತದಲ್ಲಿ ಬಹಳ ಮೊದಲಿನಿಂದಲೂ ಇವೆಲ ಒಟ್ಟಿಗೇ ಇವೆ. ಬೆಂಗಳೂರಿನ ಬಸವನಗುಡಿ, ಮಲ್ಲೇಶ್ವರ ಇವನ್ನೆಲ್ಲ ಗಮನಿಸಬಹುದು. ಇದರಿಂದ ಜನತೆಯ ಸಮಯ, ಶ್ರಮ, ಹಣ ಉಳಿತಾಯ. ಆಧುನಿಕ ನಗರ ಪ್ಲಾನರ್‌ಗಳು ಇದನ್ನು ಈಗ ಬುದ್ಧಿಪೂರ್ವಕವಾಗಿ ಅಳವಡಿಸಿಕೊಳ್ಳುತ್ತಿದ್ದಾರೆ.

ಮಾತು ಗೀತೆ

ಯಾವುದು ಹಿತ?

ಭಗವದ್ ಗೀತೆಯ ದೃಷ್ಟಿಯಲ್ಲಿ ಪ್ರಿಯವಾಗೋದು ಮತ್ತು ಹಿತವಾಗೋದು ಬೇರೆ ಬೇರೆ ಇರಬಹುದು. ಅದನ್ನು ಈ ಶ್ಲೋಕ ಸ್ಪಷ್ಟವಾಗಿ ಹೇಳುತ್ತದೆ– 'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ । ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ' ಅಂದರೆ, ಇನ್ನೊಬ್ಬರ ದಾರಿ ಚೆನ್ನಾಗಿ ಕಾಣಿಸಿಕೊಂಡರೂ, ತನ್ನ ದಾರಿಯೇ ಹಿತ. ಅದು ಕಷ್ಟವಾದರೂ ತನ್ನ ಸತ್ಯಕ್ಕೆ ತಕ್ಕ ದಾರಿಯಲ್ಲಿ ನಡೆಯುವುದು ಒಳ್ಳೆಯದು. ಇನ್ನೊಬ್ಬರ ದಾರಿಯನ್ನು ಅನುಸರಿಸುವುದು ಭಯ ತರುತ್ತದೆ. ಕ್ಷಣಿಕ ಸುಖವೇ ಹಿತ ಅಲ್ಲ. ಈಗ ಸಿಹಿ ಅನ್ನಿಸಿದರೂ ಮುಂದೆ ಅದು ನೋವು ತರಬಹುದು. ಸತ್ಯಕ್ಕೆ ಹತ್ತಿರ ಇರುವುದೇ ಹಿತ. ಮನಸ್ಸಿಗೆ ಶಾಂತಿ ಕೊಡುವುದು ಹಿತ. ತನ್ನ ಧರ್ಮವನ್ನು ಪ್ರಾಮಾಣಿಕವಾಗಿ ಬದುಕುವುದು ಹಿತ. ಕೆಲವೊಮ್ಮೆ ಹಿತ ಅನ್ನೋದು ಸುಲಭ ದಾರಿ ಅಲ್ಲ. ಒಳಗೆ ನೆಮ್ಮದಿ ಕೊಡುವ, ಬೆಳವಣಿಗೆಗೆ ಸಹಾಯ ಮಾಡುವ, ಸತ್ಯದ ಜೊತೆ ಇರುವ ದಾರಿಯೇ ಹಿತ.

ಹನಿ ಹನಿ ಕವಿತೆ

ಸನ್ಯಾಸಿ– ಪ್ರೇಮಿ

ನಿನ್ನ ದೇಹದ ಬೂದಿಗುಡ್ಡೆ
ಕಾಣಬಲ್ಲೆಯಾದರೆ
ನೀನು ಸನ್ಯಾಸಿ
ಅದರಲ್ಲಿ ಉರಿವ ಕೆಂಡವ
ನೋಡಬಲ್ಲೆಯಾದರೆ
ನೀನು ಪ್ರೇಮಿ

ವಿಶ್ವವಾಣಿ ಬೆಂಗಳೂರು 26-05-2026 ಮಂಗಳವಾರ @vishwavaninews

ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

ಅಂದಿನ ಬಡವರ ಆಹಾರ ಇಂದಿನ ಶ್ರೀಅನ್ನ, ಜಾಗತಿಕ ಮಟ್ಟದಲ್ಲಿ ಸೂಪರ್ ಫುಡ್ ಲಿಸ್ಟ್‌ನಲ್ಲಿವೆ.

ಪುಟ್ಟ ಧಾನ್ಯಗಳೇ ಸಂಜೀವಿನಿ

● ರಶ್ಮಿ ಹೆಗಡೆ ಮುಂಬೈ

ಒಂದು ಕಾಲದಲ್ಲಿ ಬಡವರ 'ಆಹಾರ' ಎಂದು ಕರೆಯಲ್ಪಟ್ಟಿದ್ದ ಸಿರಿಧಾನ್ಯಗಳು (millets) ಇಂದು ಜಾಗತಿಕ ಮಟ್ಟದಲ್ಲಿ 'ಸೂಪರ್ ಫುಡ್' ಲಿಸ್ಟ್‌ನಲ್ಲಿ ಸೇರಿವೆ. ಸಾವಿರಾರು ವರ್ಷಗಳಿಂದ ಭಾರತೀಯ ಕೃಷಿ ಪರಂಪರೆಯ ಅಸ್ಮಿತೆಯಾಗಿದ್ದ ಸಿರಿಧಾನ್ಯ ಹೇಗೆ ವಿಸ್ಮೃತಿಗೆ ಜಾರಿತ್ತು ಎನ್ನುವುದು ಸಂಶೋಧನಾತ್ಮಕ ವಿಷಯ. ಮಿಲ್ಲೆಟ್ಸ್ ನಿಂದ ತಯಾರಾಗುವ ಉಪ್ಪಿಟ್ಟು, ಲಡ್ಡು, ರೊಟ್ಟಿ ಅಷ್ಟೇ ಏಕೆ ಐಸ್ಕ್ರೀಮ್‌ಗಳು ಟ್ರೆಂಡ್‌ನಲ್ಲಿವೆ. ಅನ್ನ, ಗೋಧಿ ಬಿಡಿ, ಸಿರಿಧಾನ್ಯ ಬಳಸಿ ಎಂಬ ಕ್ಯಾಂಪೇನ್‌ಗಳು ಸೋಶಿಯಲ್ ಮೀಡಿಯಾದಲ್ಲಿ ಜಾಗತಿಕ ಮಟ್ಟದಲ್ಲಿ ಆವರಿಸಿಕೊಂಡಿದೆ.

ಅಷ್ಟಕ್ಕೂ ಪ್ರಧಾನಿ ನರೇಂದ್ರ ಮೋದಿಯವರಿಂದ ಹಿಡಿದು ವಿಶ್ವ ಆರೋಗ್ಯ ಸಂಸ್ಥೆಯವರೂ ಮಿಲ್ಲೆಟ್ಸ್ ಬಗ್ಗೆ ಅಷ್ಟೊಂದು ಒತ್ತು ನೀಡುತ್ತಿರುವುದೇಕೆ?

ಈ ಸಿರಿಧಾನ್ಯಗಳು ಭಾರತದ ಅತ್ಯಂತ ಪ್ರಾಚೀನ ಬೆಳೆ ಗಳು, ನಮ್ಮ ಪೂರ್ವಿಕರ ಮೂಲ ಆಹಾರ. ಹರಪ್ಪ ಮತ್ತು ಮೊಹೆಂಜೋದಾರೋ ನಾಗರಿಕತೆಯ ಉತ್ಖನನದಲ್ಲಿ ಇವು ಗಳ ಅವಶೇಷಗಳು ಪತ್ತೆಯಾಗಿವೆ. ಸಾಹಿತ್ಯದಲ್ಲಿ ಕವಿ ಕನಕ ದಾಸರ 'ರಾಮಧಾನ್ಯ ಚರಿತ್ರೆ' ರಾಗಿಯ ಶ್ರೇಷ್ಠತೆಯನ್ನು ಸಾರಿ ಹೇಳುತ್ತದೆ. ಋಗ್ವೇದ ಮತ್ತು ಕಾಳಿದಾಸನ ಕೃತಿಗಳಲ್ಲಿ ಇವನ್ನು ಮಂಗಳಕರ ಧಾನ್ಯಗಳೆಂದು ಉಲ್ಲೇಖಿಸಲಾಗಿವೆ. 1960ರ ದಶಕಗಳವರೆಗೂ ಭಾರತೀಯರ ದಿನನಿತ್ಯದ ಆಹಾರ ದಲ್ಲಿ ಈ ಸಿರಿಧಾನ್ಯಗಳದ್ದೇ ಅಧಿಪತ್ಯವಿತ್ತು. ಆದರೆ, 1960 ರಲ್ಲಿ ಬಂದ ಭೀಕರ ಬರಗಾಲ, ಯುದ್ಧಗಳು ಹಾಗೂ ಜನ ಸಂಖ್ಯಾ ಸ್ಫೋಟ ನಮ್ಮನ್ನು ಹಸಿವಿನ ಸುಳಿಗೆ ದೂಡಿದವು. ಈ ಹಸಿವಿನ ಯುದ್ಧ ಗೆಲ್ಲಲು 'ಹಸಿರು ಕ್ರಾಂತಿ'ಯನ್ನು (Green Revolution) ಅನಿವಾರ್ಯವಾಗಿ ಅಪ್ಪಿಕೊಂಡೆವು. ಹಸಿವಿ ನಿಂದ ಜನರನ್ನು ಹೊರತರಲು ವಿಜ್ಞಾನಿ ಎಂ. ಎಸ್. ಸ್ವಾಮಿ ನಾಥನ್ ಹಾಗೂ ಅವರ ತಂಡ ವೇಗವಾಗಿ ಬೆಳೆಯುವಂಥ, ಗೋಧಿ ಮತ್ತು ಅಕ್ಕಿಯ ಹೊಸ ತಳಿಗಳನ್ನು, ಅವುಗಳ ಇಳುವರಿಯನ್ನು ಹೆಚ್ಚಿಸಲು ಕೀಟನಾಶಕಗಳನ್ನು ಹಾಗೂ ರಾಸಾಯನಿಕ ಗೊಬ್ಬರಗಳನ್ನು ಭಾರತೀಯರಿಗೆ ಪರಿಚಯಿಸಿ ದರು. ಸಿರಿಧಾನ್ಯಗಳನ್ನು ಒರಟು ಧಾನ್ಯಗಳು (Coarse grains) ಎಂದು ವರ್ಗೀಕರಿಸಲಾಯಿತು. ನಿಧಾನವಾಗಿ ಸಿರಿಧಾನ್ಯಗಳ ಜಾಗವನ್ನು ಗೋಧಿ ಮತ್ತು ಬಿಳಿ ಅಕ್ಕಿ ಆವರಿಸಿಕೊಂಡವು.

ಕನ್ನಡಿಗ, ಪದ್ಮಶ್ರೀ ಹಾಗೂ ಕೃಷಿರತ್ನ ಪುರಸ್ಕೃತ ಮಿಲೆಟ್ ಮ್ಯಾನ್ ಆಫ್ ಇಂಡಿಯಾ ಡಾ. ಖಾದರ್ ವಾಲಿ ಅವರು ಅವುಗಳಿಗೆ 'ಸಿರಿಧಾನ್ಯ' ಎಂದು ಹೆಸರಿಟ್ಟರು. 'ಸಿರಿ' ಅಂದರೆ ಸಂಪತ್ತು. ಈ ಧಾನ್ಯಗಳಲ್ಲಿ ಆರೋಗ್ಯದ ಅತಿದೊಡ್ಡ ಸಂಪತ್ತು ಇರುವುದರಿಂದ ಈ ಹೆಸರು. ಸಿರಿಧಾನ್ಯಗಳು ಪೌಷ್ಟಿಕಾಂಶಗಳ ಗಣಿ. ಅದಕ್ಕೇ ನಮ್ಮ ಹಿರಿಯರು ಹೇಳಿದ್ದು 'ರಾಗಿ ತಿಂದವ ರೋಗಿಯಾಗಲಾರ' ಎಂದು. ಅತ್ಯಂತ ಕಡಿಮೆ ನೀರಿನಲ್ಲಿ, ರಾಸಾಯನಿಕ ಗೊಬ್ಬರಗಳಿಲ್ಲದೆ ಬೆಳೆಯುವ ಇವು ರೈತನಿಗೆ 'ಆರ್ಥಿಕ ಸಿರಿ' ನೀಡಿದರೆ, ಇದನ್ನು ಸೇವಿಸುವವನಿಗೆ 'ಆರೋಗ್ಯದ ಸಿರಿ' ನೀಡುತ್ತದೆ.

ಇವತ್ತು ಜಗತ್ತು 'ಗ್ಲುಟನ್ ಫ್ರೀ' ಡಯಟ್ ಎಂದು ಬೊಬ್ಬೆ ಹೊಡೆಯುತ್ತಿದೆ. ಮೈದಾ ಹಾಗೂ ಗೋಧಿಯಲ್ಲಿರುವ ಗ್ಲುಟನ್ ಅಂಶ ನಮಗೆ ಗೊತ್ತಿಲ್ಲದಂತೆ ನಮ್ಮ ಜೀರ್ಣಾಂಗವನ್ನು ಹಾಳು ಮಾಡುತ್ತಿದೆ. ಆದರೆ, ನಮ್ಮ ಸಜ್ಜೆ, ಸಾಮೆ, ಬರಗು, ರಾಗಿ, ಜೋಳ, ಕೊರಲೆಗಳಲ್ಲಿ ಈ ಸಮಸ್ಯೆಯೇ ಇಲ್ಲ. ಪ್ರತಿಯೊಂದು ಸಿರಿಧಾನ್ಯವೂ ತನ್ನದೇ ಆದ ವಿಶಿಷ್ಟ ಗುಣಲಕ್ಷಣಗಳನ್ನು ಮತ್ತು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ.

1 **ರಾಗಿ:** Finger Millet ಇದು ಕ್ಯಾಲ್ಸಿಯಂನ ಅತ್ಯುತ್ತಮ ಮೂಲ. ಮೂಳೆಗಳ ಬಲವರ್ಧನೆಗೆ ಮತ್ತು ಬೆಳೆಯುವ ಮಕ್ಕಳಿಗೆ ಅಮೃತವಿದ್ದಂತೆ.

2 **ನವಣೆ:** Foxtail millet ಇದು ನರಮಂಡಲದ ಆರೋಗ್ಯಕ್ಕೆ ಶ್ರೇಷ್ಠ. ಶ್ವಾಸಕೋಶದ ಶುದ್ಧೀಕರಣ ಮತ್ತು ತೂಕ ಇಳಿಕೆಗೆ ಸಹಕಾರಿ.

3 **ಸಾಮೆ:** Little millet ಮಹಿಳೆಯರ ಹಾರ್ಮೋನ್ ಸಮಸ್ಯೆಗಳನ್ನು (PCOD) ಸರಿಪಡಿಸಲು ಮತ್ತು ಸಂತಾನೋತ್ಪತ್ತಿ ಅಂಗಗಳ ಆರೋಗ್ಯಕ್ಕೆ ಇದು ಉತ್ತಮ.

4 **ಊದಲು:** Barnyard millet ಮಧುಮೇಹಿಗಳಿಗೆ ಇದು ವರದಾನ. ಲಿವರ್ ಮತ್ತು ಕಿಡ್ನಿಗಳ ಶುದ್ಧೀಕರಣಕ್ಕೆ ಸಹಾಯಕಾರಿ.

5 **ಅರ್ಕ:** Kodo Millet ರಕ್ತವನ್ನು ಶುದ್ಧೀಕರಿಸುವ ಗುಣ ಹೊಂದಿದೆ. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಅನಿಮಿಯ ತಡೆಗಟ್ಟಲು ಸಹಕಾರಿ.

6 **ಕೊರಲೆ:** Brown Top Millet ಹೆಚ್ಚಿನ ನಾರಿನಂಶ (Fibre)ಇರುವುದರಿಂದ ಕರುಳಿನ ಸಮಸ್ಯೆ ಮತ್ತು ಮಲಬದ್ಧತೆಗೆ ರಾಮಬಾಣ.

7 **ಸಜ್ಜೆ :** Pearl millet ದೇಹಕ್ಕೆ ಹೆಚ್ಚಿನ ಶಕ್ತಿ ನೀಡುತ್ತದೆ. ಕಬ್ಬಿಣಾಂಶ ಹೆಚ್ಚಾಗಿರುವುದರಿಂದ ರಕ್ತ ಹೀನತೆಯನ್ನು ಹೋಗಲಾಡಿಸುತ್ತದೆ.

8 **ಜೋಳ:** Sorghum ಜೀರ್ಣಕ್ರಿಯೆಗೆ ತುಂಬಾ ಒಳ್ಳೆಯದು. ಹೃದಯದ ಆರೋಗ್ಯ ಕಾಪಾಡಲು ಮತ್ತು ಶಕ್ತಿಯನ್ನು ವೃದ್ಧಿಸಲು ಸಹಕಾರಿ.

ಭಾರತದ ಪ್ರಸ್ತಾವನೆಯ ಮೇರೆಗೆ ವಿಶ್ವಸಂಸ್ಥೆಯು 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ಘೋಷಿಸಿತು. ಪ್ರಧಾನಿ ಮೋದಿಯವರು ಇದನ್ನು 'ಶ್ರೀ ಅನ್ನ' ಎಂದು ಗೌರವಿಸಿ ಕರೆದು, ಇದರ ಬಳಕೆಗಾಗಿ ಹೆಚ್ಚು ಒತ್ತು ನೀಡುತ್ತಿದ್ದಾರೆ. ಇಂದು ಭಾರತ ಸಿರಿಧಾನ್ಯಗಳ ಉತ್ಪಾದನೆ ಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಇದರ ಮರುಬಳಕೆ ನಮ್ಮ ಆರೋಗ್ಯ ವೃದ್ಧಿಗೆ ಮಾತ್ರವಲ್ಲದೆ, ನಮ್ಮ ಮಣ್ಣಿನ ಸತ್ವಕ್ಕೆ, ರೈತನ ಶ್ರಮಕ್ಕೆ ಮತ್ತು ಪೂರ್ವಜರ ಜ್ಞಾನಕ್ಕೆ ನಾವು ನೀಡುವಂತಹ ಗೌರವ. ಮುಂದಿನ ಪೀಳಿಗೆಗೆ ನಾವಿಡುತ್ತಿ ರುವ ಆರೋಗ್ಯದ ಬುನಾದಿ. ಈ ಪೌಷ್ಟಿಕ ಕ್ರಾಂತಿಯು ಭಾರತವನ್ನು ವಿಶ್ವದ ಆರೋಗ್ಯ ಭೂಪಟದಲ್ಲಿ ಮತ್ತೊಮ್ಮೆ ಉನ್ನತ ಸ್ಥಾನದಲ್ಲಿ ಪ್ರತಿಷ್ಠಾಪಿಸಲಿ. 2026ರ ಈ ಕಾಲಘಟ್ಟ ದಲ್ಲಿ ನಾವು ಎದುರಿಸುತ್ತಿರುವ 'ಆರೋಗ್ಯದ ಬರಗಾಲ'ಕ್ಕೆ ಈ ಪುಟ್ಟ ಧಾನ್ಯಗಳೇ 'ಸಂಜೀವಿನಿ'.

ಯಮನಿಗೇ ಶಾಪ ಕೊಟ್ಟ ಮಾಂಡವ್ಯ!

● ವಿ.ಎಸ್. ಕಳಸೇಶ್ವರ

ಅಪರಾಧಕ್ಕೆ ಶಿಕ್ಷೆ ಕೊಡುವ ದಂಡಸಂಹಿತೆಯಲ್ಲೂ ಬಾಲಾಪರಾಧಿಗಳ ಬಗ್ಗೆ ಕನಿಕರ ತೋರುವುದು ನಮಗೆಲ್ಲ ತಿಳಿದ ವಿಷಯ. ಆದರೆ, ಮಹಾಭಾರತದ ಕಾಲದಲ್ಲೂ ಪಾಪ–ಪುಣ್ಯಗಳ ವಿಚಾರದಲ್ಲಿ ಎಳೆಮಕ್ಕಳು ಅರಿವಿಲ್ಲದೆ ಮಾಡುವ ಪಾಪಕಾರ್ಯಗಳ ಪರವಾಗಿ ಯಮನಲ್ಲಿ ವಾದ ಮಂಡಿಸಿದ್ದಲ್ಲದೆ ತಪ್ಪುಮಾಡಿದ ಯಮನಿಗೇ ಶಾಪಕೊಟ್ಟ ಮಾಂಡವ್ಯ ಋಷಿಯ ಕಥೆಯು ನಿಜಕ್ಕೂ ನೀತಿ ತತ್ವಗಳನ್ನೊಳಗೊಂಡ ಸ್ಫೂರ್ತಿದಾಯಕ ಕಥೆ...ಇದು ಮಹಾಭಾರತದ ಆದಿ ಪರ್ವದ ಸಂಭವ ಪರ್ವದ 107–108ನೇಯ ಅಧ್ಯಾಯಗಳಲ್ಲಿ ಬರುವ ವಿದುರನ ಜನನಕ್ಕೆ ಸಂಬಂಧಿಸಿದ ಅಣಿಮಾಂಡವ್ಯನೆಂಬ ಋಷಿಯ ಕಥೆ.

ಶೂಲವನ್ನೇ ಕತ್ತರಿಸಲಾಯಿತು. ಶೂಲದ ಮೊನೆಯನ್ನು ದೇಹದಲ್ಲಿರಿಸಿಕೊಂಡೇ ಜೀವಿಸಿದ್ದರಿಂದ ಅವನು ಅಣಿಮಾಂಡವ್ಯನೆಂದೇ ಪ್ರಖ್ಯಾತನಾದನು. ಆದರೆ, ತಾನು ಏನೂ ತಪ್ಪುಮಾಡದೆ ಶೂಲದ ವೇದನೆಯನ್ನು ಅನುಭವಿಸಬೇಕಾಗಿ ಬಂದಿದ್ದರಿಂದ ಇದರ ಕಾರಣ ತಿಳಿಯಲು ಯೋಗಶಕ್ತಿಯಿಂದ, ಪಾಪ–ಪುಣ್ಯಗಳ ಲೆಕ್ಕವಿಡುವ ಯಮನನ್ನೇ ನೇರವಾಗಿ ಭೇಟಿಮಾಡಿ ತಾನು ಶೂಲ ಶಿಕ್ಷೆ ಅನುಭವಿಸುವುದಕ್ಕೆ ಕಾರಣ ತಿಳಿಯಬಯಸುತ್ತಾನೆ. ಅದಕ್ಕೆ ಯಮನು ಉತ್ತರಿಸುತ್ತಾ ಮಾಂಡವ್ಯನು ಬಾಲ್ಯದಲ್ಲಿ ಒಂದು ಸಣ್ಣ ಚಿಟ್ಟೆಯ ಹೊಟ್ಟೆಗೆ ಹರಿತವಾದ ಮೊನೆಯಿಂದ ಚುಚ್ಚಿ ಹಿಂಸಿಸಿದ್ದಕ್ಕೆ ಈ ಶಿಕ್ಷೆಯೆನ್ನುತ್ತಾನೆ. ಆದರೆ ಮಾಂಡವ್ಯನು ಅದಕ್ಕೊಪ್ಪದೆ ಎಳೆ ವಯಸ್ಸಿನಲ್ಲಿ ತಿಳಿಯದೇ ಮಾಡಿದ ಅಷ್ಟು ಸಣ್ಣ ತಪ್ಪಿಗೆ ಇಂತಹ

ಸದಾ ಕಠೋರ ತಪಸ್ಸಿನಲ್ಲಿ ನಿರತನಾಗಿರುತ್ತಿದ್ದ ಧರ್ಮಜ್ಞನಾದ ಮಾಂಡವ್ಯ ಋಷಿಯು ಒಮ್ಮೆ ದೀರ್ಘ ಕಾಲ ಮೌನವ್ರತದಲ್ಲಿದ್ದು ಒಂಟಿಕಾಲಿನಲ್ಲಿ ನಿಂತು ಕೈಗಳನ್ನೆತ್ತಿ ತಪಸ್ಸಿನಲ್ಲಿ ನಿರತನಾಗಿದ್ದಾಗ ಕಳ್ಳರ ಗುಂಪೊಂದು ಕೊಳ್ಳೇ ಹೊಡೆದ ಗಂಟುಗಳ ಸಮೇತ ಋಷಿಯ ಆಶ್ರಮದ ಒಳಗೆ ಓಡಿಬಂದು ಅಡಗಿ ಕುಳಿತಿತ್ತು. ಕಳ್ಳರನ್ನರಸಿ ಬಂದ ರಾಜಭಟರು ಕದ್ದ ಮಾಲುಗಳ ಸಮೇತ ಸಿಕ್ಕ ಕಳ್ಳರ ಜತೆಗೆ ಅಲ್ಲಿದ್ದ ಮಾಂಡವ್ಯ ಋಷಿಯು ಕಳ್ಳರ ನಾಯಕನೆಂದು ಭ್ರಮಿಸಿ ರಾಜನಲ್ಲಿಗೆ ಕರೆದೊಯ್ದರು. ರಾಜನು ವಿಚಾರಣೆ ನಡೆಸಿ ಎಲ್ಲರನ್ನೂ ಶೂಲಕ್ಕೇರಿಸುವಂತೆ ಆಜ್ಞೆ ಮಾಡಿದ. ರಾಜಭಟರು ಕಳ್ಳರೊಂದಿಗೆ ಮೌನ ತಪದಲ್ಲಿದ್ದ ಮಾಂಡವ್ಯನನ್ನೂ ಸೇರಿಸಿ ಶೂಲಕ್ಕೇರಿಸಿ ನಡೆದರು. ಮಾರನೆಯ ಬೆಳಗ್ಗೆ ಅತ್ತ ಹೋದ ರಾಜಭಟರು ಶೂಲಕ್ಕೇರಿಸಲ್ಪಟ್ಟ ಕಳ್ಳರೆಲ್ಲರೂ ಮರಣ ಹೊಂದಿದ್ದರೂ ಮಾಂಡವ್ಯ ಮುನಿಯು ಶೂಲದ ಮೇಲೆ ಕುಳಿತೇ ತಪೋಮಗ್ನರಾಗಿರುವುದನ್ನು ಕಂಡು ಭಯ– ಚಕಿತರಾಗಿ ರಾಜನಲ್ಲಿ ವರದಿ ಮಾಡಿದರು. ರಾಜನು ಶೂಲಕ್ಕೇರಿಸಲ್ಪಟ್ಟ ಕಠಿಣ ತಪಸ್ವಿ ಮಾಂಡವ್ಯನು ಯೋಗಶಕ್ತಿಯಿಂದ ಇನ್ನೂ ಬದುಕುಳಿದಿರುವುದನ್ನು ಕಂಡು ನಿಜ ವಿಚಾರ ತಿಳಿದು ನಿರಪರಾಧಿಯನ್ನು ಶೂಲಕ್ಕೇರಿಸಿದ್ದರಿಂದ ಶಾಪಭೀತನಾಗಿ ಋಷಿಯಲ್ಲಿ ಕ್ಷಮೆ ಯಾಚಿಸಿ ಅವನ ದೇಹದಲ್ಲಿ ಹೊಕ್ಕಿದ್ದ ಶೂಲವನ್ನು ತೆಗೆಸಲು ಪ್ರಯತ್ನಿಸಿದನಾದರೂ ಸಾಧ್ಯವಾಗದೆ ಕೊನೆಗೆ

ಘೋರ ಶಿಕ್ಷೆ ಸರಿಯೇ, ಎಂದು ವಾದಿಸಿ, 12ನೇಯ ವಯಸ್ಸಿನ ಒಳಗಿನವರು ಮಾಡುವ ತಪ್ಪಿಗೆ ಕಠಿಣ ಶಿಕ್ಷೆ ನೀಡಬಾರದೆಂಬ ನಿಯಮವನ್ನು ಯಮನಿಗೆ ನೆನಪಿಸುತ್ತಾನೆ. ಯಮನು ಮಾಂಡವ್ಯನಿಗೆ ಉತ್ತರಿಸುತ್ತಾ, ಅಲ್ಪ ಪುಣ್ಯಕ್ಕೆ ಅಧಿಕ ಫಲವಿರು ವಂತೆಯೇ ಅಲ್ಪ ಪಾಪಕ್ಕೂ ಅಧಿಕ ಶಿಕ್ಷೆಯನ್ನು ಅನುಭವಿಸಬೇಕಲ್ಲವೆ ಎಂದು ಉತ್ತರಿಸುತ್ತಾನೆ. ಆದರೆ ಈ ಉತ್ತರದಿಂದ ತೃಪ್ತನಾಗದ ಯೋಗಿ, ತಪಸ್ವಿ ಅಣಿಮಾಂಡವ್ಯನು ಇಂತಹ ಕ್ಷುಲ್ಲಕ ತಪ್ಪಿಗೆ ಘೋರ ಶಿಕ್ಷೆಯನ್ನು ನೀಡಿದ ತಪ್ಪಿಗಾಗಿ ನೀನು ಭೂಮಿಯಲ್ಲಿ ಮನುಷ್ಯ ಜನ್ಮ ತಾಳು ಎಂದು ಯಮನಿಗೇ ಶಾಪ ನೀಡಿದ್ದಲ್ಲದೆ, ಇನ್ನು ಮುಂದೆ 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮುಗ್ಧ ಮಕ್ಕಳು ಗೊತ್ತಿಲ್ಲದೆ ಮಾಡುವ ಪಾಪಕ್ಕೆ ಕಠಿಣ ಶಿಕ್ಷೆ ನೀಡಬಾರದೆಂಬ ಹೊಸ ನಿಯಮವನ್ನು ತರುವಂತೆ ನಿರ್ದೇಶಿಸುತ್ತಾನೆ. ಇದನ್ನು ಓದುವಾಗ ಮುಗ್ಧ ಮನಸ್ಸಿನ ಎಳೆಯರ ಬಗ್ಗೆ ವಾದಿಸಿ ಯಮನನ್ನೇ ಸೋಲಿಸಿದ ಅಣಿಮಾಂಡವ್ಯನ ಬಗ್ಗೆ ಹೆಮ್ಮೆಯೆನಿಸುತ್ತದೆ. ಅಣಿಮಾಂಡವ್ಯನ ಶಾಪದ ದೆಸೆಯಿಂದ ಯಮನು ವಿದುರನಾಗಿ ಭೂಲೋಕದಲ್ಲಿ ಜನ್ಮ ತಳೆಯಬೇಕಾಯಿತು ಎಂಬಲ್ಲಿಗೆ ಅಣಿಮಾಂಡವ್ಯನ ಕಥೆ ಮುಕ್ತಾಯಗೊಳ್ಳುತ್ತದೆ. ಯಮನನ್ನು ಎದುರಿಸಿದ ಸಾವಿತ್ರಿ, ನಚಿಕೇತ, ಶುನಶ್ಶೇಪ ಮುಂತಾದವರ ಸಾಲಿಗೆ ಅಣಿಮಾಂಡವ್ಯನೂ ಸೇರುತ್ತಾನೆ.

ಗುರುಗಳು ಹೇಳಿದ ಬುದ್ಧಿವಂತರು!

● ಬೇಲೂರು ರಾಮಮೂರ್ತಿ

ಅಂದಿನ ಗುರುಕುಲದಲ್ಲಿ ಪಾಠ ಪ್ರಾರಂಭವಾಗುವ ಮೊದಲು ಗುರುಗಳು ಶಿಷ್ಯರನ್ನು ನೋಡಿ ನಿಮ್ಮಲ್ಲಿ ಬುದ್ಧಿವಂತರು ಯಾರು ಅಂತ ಕೇಳಿದರು. ಒಂದೈದು ನಿಮಿಷ ಆದರೂ ಯಾರೂ ಕೈ ಎತ್ತಲಿಲ್ಲ, ಎದ್ದು ನಿಲ್ಲಲಿಲ್ಲ. ಗುರುಗಳು ನಗುಭಾವದಿಂದ ಹಾಗಾದರೆ ನೀವೆಲ್ಲರೂ ಬುದ್ಧಿವಂತರು ಎಂದರು. ಶಿಷ್ಯರಿಗೆ ಅರ್ಥವಾಗಲಿಲ್ಲ. ಗುರುಗಳು ಅದೇ ವಿಷಯವನ್ನು ಅಂದಿನ ಪಾಠಕ್ಕೆ ಬಳಸಿಕೊಂಡರು.

ಸರ್ವಜ್ಞ ಹೇಳಿದ್ದಾನೆ, 'ಸುಮ್ಮನಿರಬಲ್ಲವನೇ ಬಲ್ಲ' ಎಂದು. ನಮ್ಮ ಸಮಾಜದಲ್ಲಿ ಮೂರು ರೀತಿಯ ಬುದ್ಧಿವಂತರನ್ನು ನೀವು ಕಾಣಬಹುದು. ಒಂದು ವರ್ಗ ನಾನೇ ಬುದ್ಧಿವಂತ, ನನಗೆಲ್ಲ ಗೊತ್ತು, ನನಗೆ ಗೊತ್ತಿರುವಷ್ಟು ಇನ್ಯಾರಿಗೂ ಗೊತ್ತಿಲ್ಲ, ನನಗೆ ಗೊತ್ತಿರುವಷ್ಟೇ ಅಂತಿಮ ಎಂದುಕೊಂಡು ಓಡಾಡುವವನು. ಸಿಕ್ಕ–ಸಿಕ್ಕವರ ಜತೆ ಬಡಾಯಿ ಕೊಚ್ಚಿಕೊಂಡು ವಾದ ಮಾಡುತ್ತಾ ಇತರರು ಸರಿಯಾದ ವಿಷಯವನ್ನು ತಿಳಿಸಿದರೂ ಅದನ್ನು ಖಂಡಿಸುವವನು. ಇಂಥವರನ್ನು ಅಲ್ಪ ವಿದ್ಯಾ ಮಹಾಗರ್ವಿ ಎನ್ನುತ್ತಾರೆ.

ಎರಡನೇಯ ವರ್ಗಕ್ಕೆ ಸೇರಿದವರು ನನಗೆ ಇಷ್ಟು ಗೊತ್ತು, ಆದರೆ ನನಗೆ ಗೊತ್ತಿಲ್ಲದಿರುವುದು ಇನ್ನೆಷ್ಟಿದೆಯೋ ಎಂದುಕೊಂಡು ಪಂಡಿತರಲ್ಲಿ ತನ್ನ ವಿಚಾರಧಾರೆಯನ್ನು ತಿಳಿಸಿ ಅವರಿಂದ ಇನ್ನಷ್ಟು ವಿದ್ಯೆ ಕಲಿಯುವ ಅಪೇಕ್ಷೆ ಹೊಂದಿರುವವರು. ಬೇರೆ ಯಾರಾದರೂ ಸರಿ ಇವರು ತಿಳಿದಿರುವ ವಿದ್ಯೆಯನ್ನು ಅದು ಹಾಗಲ್ಲ ಹೀಗೆ ಎಂದು ತಿದ್ದಲು ಬಂದರೆ ಅಚ್ಚರಿಯಿಂದ ಹೌದಾ ಹಾಗೂ ಇದೆಯಾ ನನಗೆ ಗೊತ್ತಿರಲೇ ಇಲ್ಲ ಎಂದು ಒಪ್ಪಿಕೊಳ್ಳುವವರು ಮತ್ತು ಸದಾ ಹೊಸತನ್ನು ಅಧ್ಯಯನ ಮಾಡಲು ಕಾತುರರಾಗಿರುವವರು.

ಇನ್ನು ಮೂರನೇಯ ವರ್ಗದವರು ತಮಗೆ ತಿಳಿದಿರುವ ವಿದ್ಯೆಯ ಬಗೆಗೆ ಯಾರಲ್ಲಿಯೂ ಕೊಚ್ಚಿಕೊಳ್ಳುವುದಿಲ್ಲ. ವಿದ್ಯಾ ದದಾತಿ ವಿನಯಂ ಎನ್ನುವ ಹಾಗೆ ಸಭೆ ಸಮಾರಂಭಗಳಲ್ಲಿ ಅತ್ಯಂತ ವಿನಯದಿಂದ ಇರುವವರು. ಒಂದಿಷ್ಟೂ ಗರ್ವ ಇಲ್ಲದೇ ಇರುವವರು. ಮೌನವಾಗಿದ್ದು ಇತರರು ಹೇಳುವುದನ್ನು ತಾಳ್ಮೆಯಿಂದ ಕೇಳಿಸಿಕೊಳ್ಳುವವರು ಮತ್ತು ಹೊಸ–ಹೊಸ ಗ್ರಂಥಗಳನ್ನು ಅಧ್ಯಯನ ಮಾಡಲು ಸದಾ ಆಸಕ್ತಿ ಇರುವವರು. ಜತೆಗೆ ಇಂಥವರ ಬಹುಮುಖ್ಯ ಗುಣ ಎಂದರೆ ನನಗೆ ಅದು ಗೊತ್ತು ಇದು ಗೊತ್ತು ಎಂದು ಎಲ್ಲೂ ಹೇಳಿಕೊಂಡು ತಿರುಗುವುದಿಲ್ಲ. ಯಾರಾದರೂ ಯಾವ ವಿಷಯದ ಬಗೆಗೆ ಕೇಳಿದರೂ ಬಹಳ ತಾಳ್ಮೆಯಿಂದ ತಿಳಿಸಿಕೊಡುತ್ತಾರೆ. ಅಯ್ಯೋ ಇದೇನಯ್ಯಾ ನಿನಗೆ ಇದೂ ಗೊತ್ತಿಲ್ವಾ ಅಂತ ಯಾರನ್ನೂ ಹೀಯಾಳಿಸುವುದಿಲ್ಲ. ಅಂಥವರು ಯಾವುದೇ ಸಭೆ ಸಮಾರಂಭಗಳಿಗೆ ಹೋದರೂ ಇಲ್ಲಿರುವವರೆಲ್ಲ ನನ್ನಷ್ಟೇ ಅಥವಾ ನನಗಿಂತ ಬುದ್ಧಿವಂತರು ಎನ್ನುವ ಧನ್ಯ ಭಾವದಲ್ಲೇ ಇರುತ್ತಾರೆ. ಇನ್ನು ಯಾವುದೇ ವಿಷಯವನ್ನು ಯಾರೂ ಕೇಳದೇ ತಾವಾಗಿಯೇ ಹೇಳುವವರಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಇತರರಲ್ಲಿ ಇರುವ ಗುಣಗಳನ್ನು, ವಿದ್ಯೆಯನ್ನು ತಿಳಿದು ಗೌರವಿಸುವವರು. ಮನುಷ್ಯ ಮನುಷ್ಯನಲ್ಲಿ ಹೇಗೆ ಭೇದ ಇರುವುದೋ ಹಾಗೇ ಅವರು ತಿಳಿದುಕೊಂಡಿರುವ ವಿದ್ಯೆಗಳಲ್ಲೂ ಭೇದವಿರುತ್ತದೆ.

ಹೀಗಾಗಿ ನೀವು ನಾನು ತಿಳಿಸಿದಂಥಾ ಮೂರನೇ ವರ್ಗದ ಬುದ್ಧಿವಂತರು ಎನಿಸಿಕೊಂಡರೆ ಅದೇ ನೀವುಗಳು ನನಗೆ ಕೊಡುವ ಗುರುದಕ್ಷಿಣೆ ಎಂದು ಅಂದಿನ ಪಾಠವನ್ನು ಮುಗಿಸಿದರು.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

1. ಕಷ್ಟಪಟ್ಟು, ಧೈರ್ಯದಿಂದ ಮಾಡಿದ ಕಾರ್ಯ ಶಿವನ ಮತ್ತೊಂದು ಹೆಸರಿನಿಂದ ತೊಡಗಿದೆ (5)
3. ಹಲವು ಬಗೆಯಲ್ಲಿ ನಡೆದಿದೆ ಜಗಳ (3)
5. ಪ್ರತಿಸಲವೂ ತಿನ್ನಬೇಕೆನಿಸುವ ಮಾವು (3)
6. ಒಂದು ಬಗೆಯ ಚರ್ಮವಾದ್ಯ ನರಿಯ ನಡುವೆ ಇದೆ (3)
8. ಚಕಚಕನೆ ಮೋಸ ಮಾಡುವವನು (3)
10. ಮೇರೆಯೂ ಆಗಬಲ್ಲ ಅಳತೆ (4)
11. ಈಗಿನ ಕಾಲವಿದು (4)
13. ಅಸ್ತವ್ಯಸ್ತವಾಗಿ ಬಂದಿರುವ ಸದರ (3)
16. ಮತ್ತೊಂದು ಪದ್ಯವು ಅಸ್ತವ್ಯಸ್ತವಾಗಿ ಬಂದಿದೆ (3)
18. ಚೆಲ್ಲಾಪಿಲ್ಲಿಯಾಗಿರುವ ಕೆಟ್ಟವನು (3)
19. ಒಡಕು ಅಥವಾ ವೈಮನಸ್ಯ (3)
20. ಆರೋಗ್ಯ ಹದಗೆಟ್ಟಾಗ ಚಿಕಿತ್ಸೆಗಾಗಿ ಭೇಟಿ ನೀಡುವ ಸ್ಥಳ (5)

ಮೇಲಿಂದ ಕೆಳಕ್ಕೆ

1. ಹೋಮಕ್ಕೆ ಮತ್ತೊಂದು ಹೆಸರಿದು (3)
2. ಗ್ರಾ.ಪಂ. ಅಧ್ಯಕ್ಷ (4)
3. ಪೂಜೆಮಾಡುವಾಗ ನೀರು ತುಂಬಿಡುವ ಕೊಡ (3)
4. ಕುದುರೆಯ ಮುಖದ ನಾಟಕ (5)
7. ಬರೀ ಹೆದರಿಕೆ (3)
8. ಕಾರ್ಯಕ್ರಮಕ್ಕೆ ಕೇಳಿದ ಚಂದಾ ಹಣ (3)
9 ಮರದ ರೆಂಬೆ, ಟಿಸಿಲು (3)
10. ಬೇರೆಯವರನ್ನು ಆಶ್ರಯಿಸಿರುವ (5)
12. ಅಳೆಯುವ ಸಾಧನ (3)
14. ಸಿಹಿಯಾದ ಸ್ವಾದ (4)
15. ಸೂರ್ಯ, ದೀಪದ ಪ್ರಕಾಶ (3)
17. ನಯವಾಗಿ ಬಂದಿರುವ ನಮ್ರತೆ (3)

ಸರಿಯುತ್ತರಗಳು

ಅಮೆಜಾನ್ ಕಾಡಿನ ಪುಟ್ಟ ಜೇನಿನ ದೊಡ್ಡ ಕಥೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಅಮೆಜಾನ್‌ನ ನಿಗೂಢ ಹಸಿರಿನ ಮಡಿಲಲ್ಲಿ, ಎಲೆಗಳ ಮೇಲೆ ಸೂರ್ಯನ ಬೆಳಕು ಚಿನ್ನದ ನೂಲಿನಂತೆ ಜಾರುವ ಹೊತ್ತಿಗೆ, ಆ ಕಾಡಿನ ಅತ್ಯಂತ ಸಣ್ಣ ಜೀವಿಗಳು ತಮ್ಮ ದೈನಂದಿನ ಕಾಯಕದಲ್ಲಿ ಮಗ್ನವಾಗಿರುತ್ತಿದ್ದವು. ಅವುಗಳ ರೆಕ್ಕೆಗಳ ಸದ್ದು ಜೋರಾಗಿರಲಿಲ್ಲ; ಕೇವಲ ಒಂದು ಮೃದುವಾದ, ಪ್ರೀತಿಯ ಗುಣುಗುಡುವಿಕೆಯಂತಿತ್ತು. ಅವುಗಳೇ ಕೊಂಡಿಯಿಲ್ಲದ ಜೇನುನೊಣಗಳು (Stingless bees).

ಶತಶತಮಾನಗಳಿಂದ, ಪೆರುವಿನ ಅಮೆಜಾನ್ ಕಾಡಿನ ಮೂಲನಿವಾಸಿಗಳಿಗೂ ಮತ್ತು ಈ ಪುಟ್ಟ ಜೇನುನೊಣಗಳಿಗೂ ನಡುವೆ ಒಂದು ಕಣ್ಣಿಗೆ ಕಾಣದ, ಹೃದಯಕ್ಕೆ ಮಾತ್ರ ತಿಳಿಯುವ ಪವಿತ್ರವಾದ ಸಂಬಂಧವಿತ್ತು. ಈ ಜೇನುನೊಣಗಳು ಕೇವಲ ಕೀಟಗಳಾಗಿರಲಿಲ್ಲ; ಅವು ಕಾಡಿನ ಉಸಿರಾಗಿದ್ದವು. ಕೋಕೋ, ಕಾಫಿ, ಮತ್ತು ಆವಕಾಡೊಗಳ ಹೂವುಗಳ ಮೇಲೆ ಕುಳಿತು, ಪ್ರಕೃತಿಯ ಸೃಷ್ಟಿ ಕಾರ್ಯಕ್ಕೆ ಜೀವ ತುಂಬುತ್ತಿದ್ದವು. ಮೂಲನಿವಾಸಿಗಳು ಈ ಪುಟ್ಟ ಜೀವಿಗಳನ್ನು ತಮ್ಮ ಕುಟುಂಬದ ಸದಸ್ಯರಂತೆ ನೋಡಿಕೊಳ್ಳುತ್ತಿದ್ದರು. ಅವುಗಳು ನೀಡುವ ಹನಿ–ಹನಿ ಜೇನು ಕೇವಲ ಆಹಾರವಾಗಿರಲಿಲ್ಲ, ಅದರಲ್ಲಿ ಕಾಡಿನ ಆಶೀರ್ವಾದವಿತ್ತು, ಕಾಯಿಲೆ ಗುಣಪಡಿಸುವ ಅಮೃತವಿತ್ತು.

ಆದರೆ, ಕಾಲ ಬದಲಾಯಿತು. ಮನುಷ್ಯನ ದುರಾಸೆಯ ಕೊಡಲಿ ಕಾಡಿನ ಗರ್ಭವನ್ನು ಸೀಳತೊಡಗಿತು. ಹೊಗೆಯುಗುಳುವ ಯಂತ್ರಗಳು, ವಿಷಕಾರಿ ಕೀಟನಾಶಕಗಳು ಹಸಿರು ಸಾಮ್ರಾಜ್ಯವನ್ನು ಆವರಿಸಿಕೊಂಡವು. ಜತೆಗೆ, ಹೊರಗಿನಿಂದ ಬಂದ ಆಫ್ರಿಕನ್ ಜೇನುನೊಣಗಳ ಹಾವಳಿ ಹೆಚ್ಚಾಯಿತು. ನಿಧಾನವಾಗಿ, ಆ ಮೃದುವಾದ ಗುಣುಗುಡುವಿಕೆ ಕ್ಷೀಣಿಸತೊಡಗಿತು. ಕಾಡಿನ ಹಿರಿಯರು ಕಣ್ಣೀರು ತುಂಬಿದ ಕಣ್ಣುಗಳಿಂದ ಆಕಾಶದತ್ತ ನೋಡುತ್ತಿದ್ದರು–ಯಾಕಂದರೆ ಕೊಂಡಿಯಿಲ್ಲದ ಆ ಪುಟ್ಟ ಜೇನುನೊಣಗಳು ಕಣ್ಮರೆಯಾಗುತ್ತಿದ್ದವು. ಕಾಡು ತನ್ನ ಜೀವಕಳೆಯನ್ನು ಕಳೆದುಕೊಳ್ಳುತ್ತಿರುವಂತೆ ಭಾಸವಾಗುತ್ತಿತ್ತು. ಆ ಪುಟ್ಟ ಜೀವಿಗಳು ಮೌನವಾಗಿ ರೋದಿಸುತ್ತಿದ್ದವು, ಆದರೆ, ಆ ಅಳು ಯಾರಿಗೂ ಕೇಳಿಸುತ್ತಿರಲಿಲ್ಲ.

ಈ ಮೌನ ರೋದನವನ್ನು ವಿಜ್ಞಾನಿ ರೋಸಾ ವಾಸ್ಕ್ವೆಜ್ ಎಸ್ಪಿನೋಜಾ ಮತ್ತು ಅಲ್ಲಿನ ಮೂಲ ನಿವಾಸಿಗಳ ನಾಯಕರು ಕೇಳಿಸಿಕೊಂಡರು. ನಮ್ಮ ಕಾಡನ್ನು ಕಾಯುವ ಈ ಪುಟ್ಟ ಕಾವಲುಗಾರರನ್ನು ನಾವು ಹೀಗೆಯೇ ಸಾಯಲು ಬಿಡಬೇಕೇ? ಎಂಬ ಪ್ರಶ್ನೆ ಅವರ ಎದೆಯಲ್ಲಿ ಕಿಚ್ಚು ಹಚ್ಚಿತು. ಅವರು ಈ ಜೀವಿಗಳ ಉಳಿವಿಗಾಗಿ ಹೋರಾಡಲು ನಿರ್ಧರಿಸಿದರು. ಕೇವಲ ಕಾಗದದ ಕಾನೂನಿಗಾಗಿ ಅಲ್ಲ, ಒಂದು ಜೀವದ ಅಸ್ತಿತ್ವದ ಹಕ್ಕಿಗಾಗಿ ಆ ಹೋರಾಟ ನಡೆದಿತ್ತು.

ಅಂತಿಮವಾಗಿ, ಆ ಪವಾಡ ಸಂಭವಿಸಿತು. ಇಡೀ ಜಗತ್ತು ಕ್ರಿಸ್ಮಸ್ ಸಡಗರದಲ್ಲಿ ಮುಳುಗಿದ್ದ 2025ರ ಡಿಸೆಂಬರ್ 22ರಂದು, ನೌಟಾ ನಗರವು ಒಂದು ಐತಿಹಾಸಿಕ ತೀರ್ಪನ್ನು ನೀಡಿತು. ಅದಕ್ಕೂ ಮುನ್ನ ಅಕ್ಟೋಬರ್‌ನಲ್ಲಿ ಸತಿಪೋ ಪ್ರಾಂತ್ಯವು

ಹಚ್ಚಿದ್ದ ಕಿಡಿಗೆ ಈಗ ಸಂಪೂರ್ಣ ಜೀವ ಬಂದಿತ್ತು. ಆ ಹೊಸ ಕಾನೂನು ಕೇವಲ ಕಾಗದದ ತೀರ್ಪಾಗಿರಲಿಲ್ಲ; ಅದು ಪ್ರಕೃತಿಯ ಪರವಾಗಿ ಬರೆದ ಕಾಳಜಿಯಾಗಿತ್ತು.

ಆ ಕಾನೂನಿನಂತೆ ಈ ಪುಟ್ಟ ಜೇನುನೊಣಗಳು ಕೇವಲ ಕೀಟಗಳಲ್ಲ; ಅವುಗಳೂ ನಮ್ಮಂತೆ ಬದುಕುವ ಹಕ್ಕನ್ನು ಹೊಂದಿರುವ ಜೀವಗಳು. ಸ್ವಚ್ಛವಾದ, ಆರೋಗ್ಯಕರವಾದ ಕಾಡಿನಲ್ಲಿ ತಲೆಯೆತ್ತಿ ಬಾಳುವ, ತಮ್ಮ ಸಂತತಿಯನ್ನು ಮತ್ತೆ ಬೆಳೆಸುವ ಪೂರ್ಣ ಹಕ್ಕು ಅವುಗಳಿಗಿದೆ ಎಂದು ಘೋಷಿಸಲಾಯಿತು. ಇದು ಇಡೀ ಅಮೆಜಾನ್ ಕಾಡು ನಿಟ್ಟುಸಿರು ಬಿಟ್ಟ ಕ್ಷಣ. ಮನುಷ್ಯ ಕೊನೆಗೂ ತನ್ನ ಅಹಂಕಾರವನ್ನು ಬದಿಗಿಟ್ಟು, ಅತ್ಯಂತ ಕಿರಿದಾದ ಜೀವಿಯ ಎದುರು ತಲೆಬಾಗಿದ್ದ.

ಈಗ ಮತ್ತೆ ಅಮೆಜಾನ್ ಕಾಡಿನಲ್ಲಿ ಮುಂಜಾನೆ ಮೂಡುತ್ತಿದೆ. ಎಲೆಗಳ ಮರೆಯಲ್ಲಿ, ಹೂವುಗಳ ಒಡಲಲ್ಲಿ ಆ ಪುಟ್ಟ ರೆಕ್ಕೆಗಳು ಮತ್ತೆ ನವೋಲ್ಲಾಸದಿಂದ ಬಡಿಯುತ್ತಿವೆ.

ಜಗತ್ತನ್ನು ಸುಂದರವಾಗಿಡಲು ದೊಡ್ಡ ಕ್ರಾಂತಿಗಳೇ ಆಗಬೇಕಾಗಿಲ್ಲ, ಕೆಲವೊಮ್ಮೆ ಪ್ರಕೃತಿಯ ಅತ್ಯಂತ ಸಣ್ಣ ಜೀವಿಗೆ ನಾವು ನೀಡುವ ಗೌರವ ಮತ್ತು ಪ್ರೀತಿ ಇಡೀ ಸೃಷ್ಟಿಯನ್ನೇ ಉಳಿಸಬಲ್ಲದು ಎಂಬುದಕ್ಕೆ ಈ ಕಥೆಯೇ ಸಾಕ್ಷಿ. ಇದೆಲ್ಲಕ್ಕಿಂತ ಮಿಗಿಲಾಗಿ ಭೂಮಿಯಲ್ಲಿ ಬದುಕುವ ಹಕ್ಕು ನಮಗಷ್ಟೇ ಅಲ್ಲ, ನಮ್ಮಂತೆ ಕೋಟ್ಯಂತರ ಜೀವಿಗಳಿಗೂ ಇದೆ. ಆದರೆ, ಆ ಅರ್ಹತೆಯನ್ನು ಬೆಳೆಸಿಕೊಳ್ಳಲು ನಾವು ಎಲ್ಲ ಜೀವಿಗಳನ್ನು ಗೌರವಿಸುವ ಕನಿಷ್ಠ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು.

ನೀವೂ ಬರೆಯಬಹುದು
ನಮ್ಮ ವಿಳಾಸ ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು–560098
e-mail: vishwavanimagazine@gmail.com

ಐಪಿಎಲ್ ಹಬ್ಬ 2026

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್
ಗುಜರಾತ್

ಪರ್ಪಲ್ ಕ್ಯಾಪ್
ಭುವನೇಶ್ವರ್ ಕುಮಾರ್
ಆರ್‌ಸಿಬಿ

IPL T20 2026

ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ
Q ಬೆಂಗಳೂರು	14	9	5	18
Q ಗುಜರಾತ್	14	9	5	18
Q ಹೈದರಾಬಾದ್	14	9	5	18
Q ರಾಜಸ್ಥಾನ್	13	7	6	14
ಪಂಜಾಬ್	13	6	6	13
ಕೋಲ್ಕತಾ	13	6	6	13
ಚೆನ್ನೈ	14	6	8	12
ಡೆಲ್ಲಿ	13	6	7	12
ಮುಂಬೈ	12	4	9	8
ಲಖನೌ	13	4	9	8

1ನೇ ಕ್ವಾಲಿಫೈಯರ್: ಬೌಲಿಂಗ್, ಬ್ಯಾಟಿಂಗ್ ಬಲಿಷ್ಠ ಗುಜರಾತ್ ಟೈಟಾನ್ಸ್ ಆರ್‌ಸಿಬಿಗೆ ಎದುರಾಳಿ

ತಂಡಕ್ಕೆ ಮರಳಿದ ಸಾಲ್ಟ್, ಆಡುವ ಸಾಧ್ಯತೆ, ಬೌಲಿಂಗ್‌ನಲ್ಲಿ ಭುವನೇಶ್ವರ್, ಹೇಜಲ್‌ವುಡ್ ಭರವಸೆ

ಇಂದು ಗೆದ್ದರೆ ಆರ್‌ಸಿಬಿ ಫೈನಲ್‌ಗೆ

ಧರ್ಮಶಾಲಾ: ಐಪಿಎಲ್ ಕೊನೆಯಹಂತವನ್ನು ಪ್ರವೇಶಿಸಿದೆ. ಮಂಗಳವಾರ ಹಿಮಾಚಲಪ್ರದೇಶದ ಧರ್ಮಶಾಲಾ ಮೈದಾನದಲ್ಲಿ ಆರ್‌ಸಿಬಿ-ಗುಜರಾತ್ ಟೈಟಾನ್ಸ್ ನಡುವೆ 1ನೇ ಕ್ವಾಲಿಫೈಯರ್ ಪಂದ್ಯ ನಡೆಯಲಿದೆ. ಇಲ್ಲಿ ಗೆದ್ದ ತಂಡ ನೇರವಾಗಿ ಫೈನಲ್ ಪ್ರವೇಶಿಸಲಿದೆ. ಸೋತ ತಂಡ ಮೇ 29ರಂದು ನಡೆಯುವ 2ನೇ ಕ್ವಾಲಿಫೈಯರ್ ಪಂದ್ಯಕ್ಕೆ ಅರ್ಹತೆ ಪಡೆಯಲಿದೆ. ಈ ಮೂಲಕ ಫೈನಲ್‌ಗೇರಲು ಇನ್ನೊಂದು ಅವಕಾಶವನ್ನು ಪಡೆಯಲಿದೆ.

ಲೀಗ್ ಹಂತದಲ್ಲಿ ಆರ್‌ಸಿಬಿ ಅತ್ಯುತ್ತಮ ಮತ್ತು ಸ್ಥಿರ ಪ್ರದರ್ಶನ ನೀಡುವ ಮೂಲಕ ಕ್ವಾಲಿಫೈಯರ್-1ಕ್ಕೆ ಅಗ್ರಸ್ಥಾನಿಯಾಗಿಯೇ ಪ್ರವೇಶ ಪಡೆದಿದೆ. ಹಾಗಾಗಿ ತಂಡ ಉತ್ತಮ ಆತ್ಮವಿಶ್ವಾಸದಲ್ಲಿದೆ. ಕೂಟದ ಮೊದಲರ್ಧದಲ್ಲಿ ಅಂದರೆ 7 ಪಂದ್ಯಗಳಲ್ಲಿ 5ಅನ್ನು, ಬಾಕಿ 7 ಪಂದ್ಯಗಳಲ್ಲಿ 4 ಅನ್ನು ಗೆದ್ದಿದೆ. ಚೇಸ್ ಮಾಡುವಾಗ ಬೇಗ ಆಟ ಮುಗಿಸಲು ಯತ್ನಿಸಿದೆ. ಮೊದಲು ಬ್ಯಾಟಿಂಗ್ ಮಾಡುವಾಗ ದೊಡ್ಡ ಗುರಿಯನ್ನು ನೀಡಲೆಂದೇ ಆಡಿದೆ. ಸತತ 2ನೇ ಕೂಟದಲ್ಲಿ ಅಗ್ರ 2 ತಂಡಗಳಲ್ಲಿ ಒಂದಾಗಿ ಪ್ಲೇಆಫ್‌ಗೇರಿದೆ. ಕಳೆದ ವರ್ಷ ಅಹ್ಮದಾಬಾದ್‌ನಲ್ಲೇ ಆರ್‌ಸಿಬಿ ಫೈನಲ್ ಪಂದ್ಯವನ್ನು ಗೆದ್ದಿತ್ತು. ಈಗ ಮತ್ತೆ ಅಲ್ಲೇ ಫೈನಲ್ ಆಡುವ ಉಮೇದಲ್ಲಿದೆ. ಆದರೆ ಫೈನಲ್‌ನಲ್ಲಿ ಆತಿಥೇಯ ಗುಜರಾತ್ ಎದುರಾಗದೇ ಇರಲಿ ಎಂಬ ಲೆಕ್ಕಾಚಾರವಂತೂ ಒಳಗೊಳಗೇ ನಡೆದಿರುವುದು ಖಚಿತ.

ಸಾಲ್ಟ್ ಆಡುವ ಸಾಧ್ಯತೆ: ಇಂಗ್ಲೆಂಡ್‌ನ ಪ್ರಮುಖ ಬ್ಯಾಟರ್ ಫಿಲ್ ಸಾಲ್ಟ್ ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿದ್ದಾರೆ. ಒಂದು ವೇಳೆ ಅವರು ಫಿಟ್ ಅನಿಸಿಕೊಂಡರೆ ಖಚಿತವಾಗಿ ಮೈದಾನಕ್ಕಿಳಿಯಲಿದ್ದಾರೆ. ಇಲ್ಲವಾದರೆ ವೆಂಕಟೇಶ್ ಅವಕಾಶ ಸಿಗಬಹುದು.

ಗುಜರಾತ್ ಬ್ಯಾಟಿಂಗ್ ಬಲಿಷ್ಠ, ಬೌಲಿಂಗ್ ಮಾರಕ: ಗುಜರಾತ್ ತಂಡ ಈ ಬಾರಿ ಅದ್ಭುತ ಬ್ಯಾಟಿಂಗ್ ಲೈನಪ್ ಹೊಂದಿದೆ. ಮೊದಲು ಬ್ಯಾಟಿಂಗ್ ಮಾಡಿದಾಗ ದೊಡ್ಡ ಮೊತ್ತದತ್ತಲೇ ಗಮನ ಹರಿಸಿ ಆಡಿದೆ. ಮೊದಲು ಬ್ಯಾಟ್ ಮಾಡಿದಾಗ 2 ಪಂದ್ಯಗಳಲ್ಲಿ ಅದು ಸರಿಯಾಗಿ 229 ರನ್ ಗಳಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಚೇಸಿಂಗ್ ಮಾಡುವಾಗ ಅದು ವಿಕೆಟ್‌ಗಳು ಉಳಿದಿವೆಯಾ, ಇಲ್ಲವೇ ಎಂದು ನೋಡದೇ ರನ್ ಬಾರಿಸಲು ಆದ್ಯತೆ ನೀಡಿದೆ. ಹೀಗೆ ಗಮನಿಸಿದಾಗ ಪ್ರತಿ ಪಂದ್ಯದಿಂದ ಪಂದ್ಯಕ್ಕೂ ಕನಿಷ್ಠ 20 ರನ್ ಹೆಚ್ಚು ಬಾರಿಸುತ್ತ ಬಂದಿರುವುದನ್ನು ನೋಡಬಹುದು. ಅದರ ಈ ವ್ಯೂಹದಲ್ಲಿ ಕಿಂಚಿತ್ತೂ ಬದಲಾವಣೆ ಮಾಡುವ ಅಗತ್ಯ ಕಂಡುಬಂದಿಲ್ಲ. ಅಂತಹ ಒಂದು ಬಲಿಷ್ಠ ಸ್ಥಿತಿಯಲ್ಲಿ ಆ ತಂಡವಿದೆ. ಬೌಲಿಂಗ್‌ನಲ್ಲಿ ಜೇಸನ್ ಹೋಲ್ಡರ್ ಮಿಂಚುತ್ತಿರುವುದು, ಈಗಾಗಲೇ ಬಲಿಷ್ಠವಾಗಿರುವ ಬೌಲಿಂಗನ್ನು ಇನ್ನಷ್ಟು ಮಾರಕಗೊಳಿಸಿದೆ. ಈ ತಂಡ ಕೂಟದ 2ನೇ ಭಾಗದಲ್ಲಿ 6-1ರ ಗೆಲುವಿನ ದಾಖಲೆ ಹೊಂದಿದೆ.

ಸಂಭಾವ್ಯ ತಂಡಗಳು

ಆರ್‌ಸಿಬಿ: ಕೊಹ್ಲಿ, ಸಾಲ್ಟ್/ವೆಂಕಟೇಶ್, ಪಡಿಕ್ಕಲ್, ಪಾಟೀದಾರ್ (ನಾಯಕ), ಜಿತೇಶ್, ಶೆಫರ್ಡ್, ಟಿಮ್, ಕೃಣಾಲ್, ಭುವನೇಶ್ವರ್, ಡಫಿ/ಸುಯಶ್, ಹೇಜಲ್‌ವುಡ್, ರಸಿಖ್.

ಗುಜರಾತ್: ಗಿಲ್ (ನಾಯಕ), ಸುದರ್ಶನ್, ಬಟ್ಲರ್, ಸುಂದರ್, ಹೋಲ್ಡರ್, ರಾಹುಲ್, ನಿಶಾಂತ್, ರಶೀದ್, ಅರ್ಶದ್, ರಬಾಡ, ಸಿರಾಜ್, ಪ್ರಸಿದ್ಧ/ಕಿಶೋರ್.

ಅಂಕಣ ಹೇಗಿದೆ?

ಧರ್ಮಶಾಲಾ ಅಂಕಣ ಬ್ಯಾಟಿಂಗ್ ಸ್ನೇಹಿ. ಅದರಲ್ಲೂ ಚೇಸಿಂಗ್ ಮಾಡುವ ತಂಡಕ್ಕೆ ಅನುಕೂಲ ಹೆಚ್ಚು. ಆ ಹಂತದಲ್ಲಿ ವಾತಾವರಣದಲ್ಲಿ ತೇವಾಂಶ ಹೆಚ್ಚಾಗುವುದರಿಂದ, ಬೌಲರ್‌ಗಳಿಗೆ ಚೆಂಡಿನ ಮೇಲೆ ಹಿಡಿತ ತಪ್ಪುತ್ತದೆ. ಜೊತೆಗೆ ಸಣ್ಣ ಅಂಕಣವಾಗಿರುವುದರಿಂದ ಬೌಂಡರಿಗಳನ್ನು ಹೊಡೆಯುವುದು ಸಲೀಸು. ಬ್ಯಾಟರ್‌ಗಳು ವೇಗದ ಎಸೆತವನ್ನು ನಿರೀಕ್ಷಿಸಿದ್ದಾಗ, ದಿಢೀರನೆ ನಿಧಾನ ಎಸೆತ ಎದುರಾಗುತ್ತದೆ. ವಾತಾವರಣ ಸಂಪೂರ್ಣ ಸಹಕರಿಸಿದರೆ ಮಾತ್ರ ಅಂಕಣದಲ್ಲಿ ಸ್ಪರ್ಧಾತ್ಮಕತೆ ಕಾಣಲಿದೆ.

ಮೀಸಲು ದಿನವಿಲ್ಲ, ಪಂದ್ಯ ರದ್ದಾದರೆ ಲೀಗ್ ಅಂಕಪಟ್ಟಿಯ ಅಗ್ರರು ಫೈನಲ್‌ಗೆ

ಈ ಬಾರಿ ಫೈನಲ್ ಪಂದ್ಯಕ್ಕೆ ಮಾತ್ರ ಮೀಸಲು ದಿನವಿದೆ. ಕ್ವಾಲಿಫೈಯರ್-1, ಎಲಿಮಿನೇಟರ್, ಕ್ವಾಲಿಫೈಯರ್-2 ಪಂದ್ಯಗಳಿಗೆ ಮೀಸಲು ದಿನಗಳಿಲ್ಲ. ಒಂದು ವೇಳೆ ಮಳೆಯಿಂದ ಇಡೀ ಪಂದ್ಯ ರದ್ದಾದರೆ ಗುಂಪು ಹಂತದಲ್ಲಿ ಅಂಕಪಟ್ಟಿಯಲ್ಲಿ ಹೆಚ್ಚಿನ ಅಂಕ ಹೊಂದಿರುವ ತಂಡ ಮುಂದಿನ ಹಂತಕ್ಕೇರಲಿವೆ. ಆದರೆ ಅಧಿಕಾರಿಗಳು ಪಂದ್ಯವನ್ನು ನಡೆಸಲು ಎಲ್ಲ ಯತ್ನ ನಡೆಸಲಿದ್ದಾರೆ. ಕನಿಷ್ಠ ತಲಾ 5 ಓವರ್‌ಗಳ ಪಂದ್ಯಗಳನ್ನಾದರೂ ನಡೆಸಲು 120 ನಿಮಿಷವನ್ನು ಮೀಸಲಿಟ್ಟಿದ್ದಾರೆ. ತೀರಾ ಅನಿವಾರ್ಯವೆನಿಸಿದರೆ ಸೂಪರ್ ಓವರ್ ಮೂಲಕ ಫಲಿತಾಂಶ ನಿರ್ಧರಿಸಲು ಯತ್ನಿಸಲಿದ್ದಾರೆ. ರಾತ್ರಿ 11.55ರೊಳಗೆ ಅಂಕಣ ಕನಿಷ್ಠ 5 ಓವರ್‌ಗಳ ಪಂದ್ಯವಾಡಿಸಲು ಸಿದ್ಧವಾದರೆ ಮಾತ್ರ ಅಧಿಕಾರಿಗಳು ಮುಂದಿನ ನಿರ್ಧಾರ ಮಾಡಲಿದ್ದಾರೆ.

ಮುಖಾಮುಖಿ
ಒಟ್ಟು ಪಂದ್ಯ 8
ಆರ್‌ಸಿಬಿ ಜಯ 4
ಗುಜರಾತ್ ಜಯ 4

ಕುತೂಹಲಕಾರಿ ಸಂಗತಿಗಳು

1 ಗುಜರಾತ್ ಟೈಟಾನ್ಸ್ 2022ರಿಂದ ಐಪಿಎಲ್ ಆರಂಭಿಸಿತು. ಇಲ್ಲಿಯವರೆಗೂ ಅದು ಧರ್ಮಶಾಲಾದಲ್ಲಿ ಆಡಿಯೇ ಇಲ್ಲ.

2 ಪವರ್ ಪ್ಲೇನಲ್ಲಿ ಅತ್ಯುತ್ತಮ ಬೌಲಿಂಗ್ ಪ್ರದರ್ಶಿಸಿದ ಎರಡು ತಂಡಗಳು ಇಲ್ಲಿ ಎದುರಾಗಿವೆ. ಈ ಹಂತದಲ್ಲಿ ಗುಜರಾತ್ ಬೌಲರ್‌ಗಳು 30, ಆರ್‌ಸಿಬಿ ಬೌಲರ್‌ಗಳು 28 ವಿಕೆಟ್ ಕಿತ್ತಿದ್ದಾರೆ.

3 ಇದೇ ಮೊದಲ ಬಾರಿಗೆ ಆರ್‌ಸಿಬಿ-ಗುಜರಾತ್ ತಂಡಗಳು ಪ್ಲೇಆಫ್‌ನಲ್ಲಿ ಪರಸ್ಪರ ಮುಖಾಮುಖಿಯಾಗುತ್ತಿವೆ.

4 ಗುಜರಾತ್ ಸ್ಪಿನ್ನರ್ ರಶೀದ್ ಹಿಂದಿನೆರಡು ಐಪಿಎಲ್ ಕೂಟಗಳು ಸೇರಿ 19 ವಿಕೆಟ್ ಪಡೆದಿದ್ದರು. ಈ ಬಾರಿ ಇದೊಂದೇ ಕೂಟದಲ್ಲಿ 19 ವಿಕೆಟ್ ಪಡೆದಿದ್ದಾರೆ.

ಸಮಾಚಾರ ಸಣ್ಣದಲ್ಲ

ಟ್ರಾವಿಸ್ ಹೆಡ್ ಪತ್ನಿಗೆ, ಭಾರತೀಯ ಅಭಿಮಾನಿಗಳ ಬೆದರಿಕೆ: ನೊಂದ ಜೆಸ್ಸಿಕಾ



ದೆಹಲಿ: ಟ್ರಾವಿಸ್ ಹೆಡ್ ಪತ್ನಿ ಜೆಸ್ಸಿಕಾ ಹೆಡ್ ಭಾರತೀಯ ಕ್ರಿಕೆಟ್ ಅಭಿಮಾನಿಗಳ ಕಿರುಕುಳದಿಂದ ಬೇಸತ್ತು ಹೋಗಿದ್ದಾರೆ. ಇತ್ತೀಚೆಗೆ ಕೊಹ್ಲಿ ಮತ್ತು ಟ್ರಾವಿಸ್ (ಹೈದರಾಬಾದ್) ನಡುವೆ ಪಂದ್ಯದ ವೇಳೆ ಚಕಮಕಿ ನಡೆದು, ಪಂದ್ಯಾನಂತರ ಕೊಹ್ಲಿ ಹೆಡ್ ಕೈಕುಲುಕಿರಲಿಲ್ಲ. ಅಲ್ಲಿಂದ ಸಾಮಾಜಿಕ ತಾಣಗಳಲ್ಲಿ ಹೆಡ್ ಪತ್ನಿ ಜೆಸ್ಸಿಕಾ ಮತ್ತು ಅವರ ಮಗಳ ಖಾತೆಯಲ್ಲಿ ಭಾರತೀಯ ಅಭಿಮಾನಿಗಳು ಅಶ್ಲೀಲ ಬೈಗುಳ ಆರಂಭಿಸಿದ್ದಾರೆ. ಅಷ್ಟು ಮಾತ್ರವಲ್ಲ ಬೆದರಿಕೆಯನ್ನೂ ಹಾಕಿದ್ದಾರೆ. ಇದನ್ನು ಆಸ್ಟ್ರೇಲಿಯಾದ ಮಾಧ್ಯಮವೊಂದರಲ್ಲಿ ನೋವಿನಿಂದ ಜೆಸ್ಸಿಕಾ ಹೇಳಿಕೊಂಡಿದ್ದಾರೆ.

ಕ್ರೀಡೆಯಲ್ಲಿ ಭಾವನೆ ಮತ್ತು ಉದ್ವೇಗ ಇರುವುದು ಸಹಜ. ಆದರೆ ಆಟದ ಹಿಂದೆ ನಿಜವಾದ ಮನುಷ್ಯರು ಮತ್ತು ಅವರ ಕುಟುಂಬಗಳು ಇರುತ್ತವೆ ಎಂಬುದನ್ನು ಮರೆಯಬಾರದು. 2023ರ ಏಕದಿನ ವಿಶ್ವಕಪ್ ಮುಗಿದ ನಂತರ ನಡೆದ ದೌರ್ಜನ್ಯ ಮತ್ತೊಮ್ಮೆ ಮರುಕಳಿಸಿದಂತೆ ಭಾಸವಾಗುತ್ತಿದೆ. ಬೆಳಗ್ಗೆ ಎದ್ದು ನೋಡುವಷ್ಟರಲ್ಲಿ ನನ್ನ ಸೋಶಿಯಲ್ ಮೀಡಿಯಾ ಖಾತೆಗಳು ತುಂಬಿಹೋಗಿವೆ. ನನ್ನ ಸ್ನೇಹಿತರು ಮತ್ತು ಕುಟುಂಬದವರನ್ನು ಗುರಿಯಾಗಿಸಿ ದಾಳಿ ಮಾಡಲಾಗುತ್ತಿದೆ, ಎಂದು ನೋವು ತೋಡಿಕೊಂಡಿದ್ದಾರೆ. ಮುಂದುವರಿದು ಮಾತನಾಡಿದ ಅವರು, ಈ ಘಟನೆಯಾದರೂ ಜನರ ಮನಸ್ಸಿನಲ್ಲಿ ಪರಸ್ಪರರ ಬಗ್ಗೆ ಸ್ವಲ್ಪ ದಯೆ ಮತ್ತು ಗೌರವವನ್ನು ಮೂಡಿಸಲಿ ಎಂದು ನಾನು ಭಾವಿಸುತ್ತೇನೆ, ಎಂದು ಆಶಿಸಿದ್ದಾರೆ. ಜೆಸ್ಸಿಕಾ ತಮ್ಮ ಹೇಳಿಕೆಯಲ್ಲಿ ಉಲ್ಲೇಖಿಸಿರುವಂತೆ, ಇದು ಅವರಿಗೆ ಮೊದಲ ಕಹಿ ಅನುಭವವೇನಲ್ಲ. 2023ರ ಏಕದಿನ ವಿಶ್ವಕಪ್ ಫೈನಲ್ನಲ್ಲಿ ಟ್ರಾವಿಸ್ ಹೆಡ್ ಶತಕ ಬಾರಿಸಿ ಭಾರತದ ವಿರುದ್ಧ ಆಸ್ಟ್ರೇಲಿಯಾವನ್ನು ಗೆಲ್ಲಿಸಿದ್ದರು. ಆ ಪಂದ್ಯ ಮುಗಿದ ತಕ್ಷಣವೂ ಭಾರತೀಯ ಕ್ರಿಕೆಟ್ ಅಭಿಮಾನಿಗಳ ಒಂದು ಸಣ್ಣ ವರ್ಗ ಜೆಸ್ಸಿಕಾ ಮತ್ತು ಅವರ ಪುಟಾಣಿ ಮಗಳ ಇನ್ಸ್ಟಾಗ್ರಾಮ್ ಖಾತೆಗಳಿಗೆ ನುಗ್ಗಿ ಅತ್ಯಂತ ನಿಂದನಾತ್ಮಕ ಸಂದೇಶಗಳನ್ನು ಹಾಗೂ ಜೀವ ಬೆದರಿಕೆಗಳನ್ನು ಹಾಕಿದ್ದರು.

ಒಟ್ಟು 350 ಸ್ಪರ್ಧಿಗಳು, ಕರ್ನಾಟಕದಿಂದ 15, ದೇಶಾದ್ಯಂತ ಒಟ್ಟು 341 ಮಂದಿ ಕಣದಲ್ಲಿ

ಇಂದಿನಿಂದ ಬೆಂಗಳೂರಲ್ಲಿ ಅಂ.ರಾ. ಪ್ಯಾರಾ ಅಥ್ಲೆಟಿಕ್ಸ್

ಬೆಂಗಳೂರು: ಭಾರತೀಯ ಪ್ಯಾರಾಲಿಂಪಿಕ್ಸ್ ಸಮಿತಿ (ಪಿಸಿಐ) ಆಯೋಜಿಸುತ್ತಿರುವ 8ನೇ ಆವೃತ್ತಿಯ ಇಂಡಿಯನ್ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಅಂತಾರಾಷ್ಟ್ರೀಯ ಚಾಂಪಿಯನ್‌ಶಿಪ್ ಮಂಗಳವಾರ ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಆರಂಭವಾಗಲಿದೆ. 3 ದಿನಗಳ ಕಾಲ ನಡೆಯಲಿರುವ ಚಾಂಪಿಯನ್‌ಶಿಪ್‌ನಲ್ಲಿ ಭಾರತದ 341 ಮಂದಿ ಸೇರಿ ಒಟ್ಟು 5 ರಾಷ್ಟ್ರಗಳ 350 ಕ್ರೀಡಾಪಟುಗಳು ಪಾಲ್ಗೊಳ್ಳಲಿದ್ದಾರೆ. ಶ್ರೀಲಂಕಾ, ಕಿರ್ಗಿಸ್ತಾನ, ಥಾಯ್ಲೆಂಡ್, ಫಿಲಿಪ್ಪೀನ್ಸ್‌ನ ಅಥ್ಲೀಟ್‌ಗಳೂ ಭಾಗಿಯಾಗಲಿದ್ದಾರೆ.

ಕೂಟದಲ್ಲಿ ಒಟ್ಟು 155 ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿವೆ. ಈ ಕೂಟವು ಅಕ್ಟೋಬರ್ 18ರಿಂದ 24ರವರೆಗೆ ಜಪಾನಿನ ಐಚಿ-ನಗೊಯಾದಲ್ಲಿ ನಡೆಯಲಿರುವ 5ನೇ ಪ್ಯಾರಾ ಏಷ್ಯನ್ ಗೇಮ್ಸ್‌ಗೆ ಅರ್ಹತಾಕೂಟವಾಗಿರಲಿದೆ. 155 ವಿಭಾಗಗಳ ಪೈಕಿ 89 ವಿಭಾಗಗಳಲ್ಲಿ ಪುರುಷ ಅಥ್ಲೀಟ್‌ಗಳು, 66 ವಿಭಾಗಗಳಲ್ಲಿ ಮಹಿಳಾ ಅಥ್ಲೀಟ್‌ಗಳಿಗೆ ಸ್ಪರ್ಧೆಗಳು ನಡೆಯಲಿವೆ. ಭಾರತದ 341 ಅಥ್ಲೀಟ್‌ಗಳ ಪೈಕಿ 66 ಮಂದಿಗೆ ಪ್ಯಾರಾ ಏಷ್ಯನ್ ಗೇಮ್ಸ್‌ಗೆ ಅರ್ಹತೆ ದೊರೆಯಲಿದೆ.

ವಿದೇಶಿಗರ ಪೈಕಿ ಶ್ರೀಲಂಕಾದ ಮೂವರು, ಕಿರ್ಗಿಸ್ತಾನದ ಇಬ್ಬರು, ಥಾಯ್ಲೆಂಡ್ ಹಾಗೂ ಫಿಲಿಪ್ಪೀನ್ಸ್‌ನ ತಲಾ ಒಬ್ಬರು ಇದ್ದಾರೆ. ಅಫ್ಘಾನಿಸ್ತಾನದ ಇಬ್ಬರು ಆಗಮಿಸುವ ನಿರೀಕ್ಷೆ ಇದೆ ಎಂದು ಆಯೋಜಕರು ತಿಳಿಸಿದ್ದಾರೆ. ಸದ್ಯ ಪಟ್ಟಿಯಲ್ಲಿರುವ ಅಥ್ಲೀಟ್‌ಗಳ ಪೈಕಿ 30 ಮಂದಿ ತಲಾ 3 ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗಮನ ಸೆಳೆಯಲಿದ್ದಾರೆ. ಭಾರತದ 19 ರಾಜ್ಯ ಹಾಗೂ ಸರ್ವೀಸಸ್‌ನ ಅಥ್ಲೀಟ್‌ಗಳು ಕಣಕ್ಕಿಳಿಯಲಿದ್ದಾರೆ. ಕರ್ನಾಟಕದ 15 ಅಥ್ಲೀಟ್‌ಗಳಿದ್ದರೆ, ಅತಿಹೆಚ್ಚು ಅಥ್ಲೀಟ್‌ಗಳು ಹರ್ಯಾಣ ರಾಜ್ಯದವರಾಗಿದ್ದಾರೆ. ಹರ್ಯಾಣದ 84 ಮಂದಿ ಸ್ಪರ್ಧೆಗಿಳಿಯಲಿದ್ದಾರೆ. ಗೋವಾದ ಏಕೈಕ ಪ್ಯಾರಾ ಅಥ್ಲೀಟ್ ಪಾಲ್ಗೊಳ್ಳುತ್ತಿರುವುದು ಕೂಡ ವಿಶೇಷ.

350 ಕೂಟದಲ್ಲಿ ಪಾಲ್ಗೊಳ್ಳುವ ಒಟ್ಟು ಪ್ಯಾರಾ ಅಥ್ಲೀಟ್‌ಗಳ ಸಂಖ್ಯೆ

341 ಕೂಟದಲ್ಲಿ ಸ್ಪರ್ಧಿಸುವ ಒಟ್ಟು ಭಾರತೀಯ ಅಥ್ಲೀಟ್‌ಗಳ ಸಂಖ್ಯೆ

155 ಕೂಟದಲ್ಲಿ ಸ್ಪರ್ಧೆ ನಡೆಯಲಿರುವ ಒಟ್ಟು ವಿಭಾಗಗಳ ಸಂಖ್ಯೆ

89 ಒಟ್ಟು ಪುರುಷ ಅಥ್ಲೀಟ್‌ಗಳು ಸ್ಪರ್ಧಿಸುವ ವಿಭಾಗಗಳ ಸಂಖ್ಯೆ

66 ಮಹಿಳಾ ಅಥ್ಲೀಟ್‌ಗಳು ಸ್ಪರ್ಧಿಸುವ ಒಟ್ಟು ವಿಭಾಗಗಳ ಸಂಖ್ಯೆ

30 ಅಥ್ಲೀಟ್‌ಗಳು ತಲಾ 3 ಸ್ಪರ್ಧೆಗಳಲ್ಲಿ ಭಾಗವಹಿಸಲಿದ್ದಾರೆ

84 ಹರ್ಯಾಣದಿಂದ ಆಗಮಿಸಲಿರುವ ಅಥ್ಲೀಟ್‌ಗಳ ಸಂಖ್ಯೆ

ಮೇ 28ರವರೆಗೂ ನಡೆಯಲಿರುವ ಕೂಟಕ್ಕೆ ಭಾರತೀಯ ಪ್ಯಾರಾ ಅಥ್ಲೆಟಿಕ್ಸ್ ಸಂಸ್ಥೆ ಸಕಲ ಸಿದ್ಧತೆ ಮಾಡಿಕೊಂಡಿದೆ. ಅಥ್ಲೀಟ್‌ಗಳಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಲಾಗುತ್ತದೆ. ಮುಂಬರುವ ಪ್ಯಾರಾ ಏಷ್ಯನ್ ಗೇಮ್ಸ್‌ನಲ್ಲಿ ದಾಖಲೆಯ ಪದಕಗಳನ್ನು ಗೆಲ್ಲಲು ಈ ಕೂಟ ಮೊದಲ ಹೆಜ್ಜೆ ಆಗಲಿದೆ ಎಂದು ಭಾರತೀಯ ಪ್ಯಾರಾಲಿಂಪಿಕ್ ಸಮಿತಿಯ ಮುಖ್ಯಸ್ಥ ಡಾ.ಸತ್ಯನಾರಾಯಣ ಅವರು ತಿಳಿಸಿದ್ದಾರೆ.

ಜೊಕೊವಿಚ್ 2ನೇ ಸುತ್ತಿಗೆ

ಫ್ರೆಂಚ್ ಗ್ರ್ಯಾನ್‌ಸ್ಲಾಮ್: ಸ್ವಿಟೋಲಿನಾ, ರಿಬಕಿನಾಗೆ ಜಯ

ಪ್ಯಾರಿಸ್: ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಆರಂಭವಾಗಿರುವ ಫ್ರೆಂಚ್ ಓಪನ್ ಟೆನಿಸ್ ಗ್ರ್ಯಾನ್‌ಸ್ಲಾಮ್ ಕೂಟದಲ್ಲಿ ನೊವಾಕ್ ಜೊಕೊವಿಚ್ 2ನೇ ಸುತ್ತಿಗೇರಿದ್ದಾರೆ. ಸಾರ್ವಕಾಲಿಕ ದಾಖಲೆಯ 25ನೇ ಸಿಂಗಲ್ಸ್ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಅವರು ಮೊದಲ ಸುತ್ತಿನ ಸವಾಲನ್ನು 5-7, 7-5, 6-1, 6-4ರಿಂದ ದಾಟಿದ್ದಾರೆ. ಗಿಯೋವಾನಿ ಎಂಪೆಟ್‌ಶಿ ಪೆರಿಕಾರ್ಡ್ ವಿರುದ್ಧ ಹೋರಾಟಕಾರಿ ಜಯ ಸಾಧಿಸಿದ್ದಾರೆ. ಮಹತ್ವದ ಫಲಿತಾಂಶವೊಂದರಲ್ಲಿ ಮೊದಲ ಸುತ್ತಿನಲ್ಲೇ ಸ್ಟಾನಿಸ್ಲಾಸ್ ವಾವ್ರಿಂಕ ಸೋತು ಕೂಟದಿಂದ ಹೊರಬಿದ್ದಿದ್ದಾರೆ. ನೆದರ್ಲೆಂಡ್ಸ್‌ನ ಬರೀ 25 ವರ್ಷದ ಆಟಗಾರ ಜೆಸ್ಪರ್ ಡಿ ಜಾಂಗ್‌ಗೆ ಅವರು ಮಣಿದಿದ್ದಾರೆ.

ಮಹಿಳಾ ವಿಭಾಗದಲ್ಲಿ ಯೂಲಿಯಾ ಪುಟಿನ್‌ತ್ಸೆವಾ 4-6, 6-4, 6-1ರಿಂದ ಟಲಿಯಾ ಗಿಬ್ಸನ್‌ರನ್ನು ಸೋಲಿಸಿದ್ದಾರೆ. ಖ್ಯಾತ ಆಟಗಾರ್ತಿ ಯೂಲಿಯಾ ಗೆಲುವಿಗೆ ತುಸು ಬೆವರಿಳಿಸಿದರು. ಉಕ್ರೇನ್‌ನ ವಿಖ್ಯಾತ ಆಟಗಾರ್ತಿ ಎಲಿನಾ ಸ್ವಿಟೋಲಿನಾ 3-6, 6-1, 7-6ರಿಂದ ಹಂಗೇರಿಯಾ ಅನ್ನಾ ಬೊಂಡರ್ ವಿರುದ್ಧ ಗೆದ್ದರು. ಇನ್ನು ಪ್ರಮುಖ ಆಟಗಾರ್ತಿ ಎಲೆನಾ ರಿಬಕಿನಾ 6-2, 6-2ರ ನೇರ ಸೆಟ್‌ಗಳಿಂದ ವೆರೋನಿಕಾ ಎರ್ಜಾವೆಕ್‌ರನ್ನು ಮಣಿಸಿದರು. ಎಲಿಸ್ ಮಾರ್ಟೆನ್ಸ್ 7-5, 6-0ಯಿಂದ ಟಟ್ಜಾನಾ ಮಾರಿಯಾರನ್ನು ಸೋಲಿಸಿದರು.

ಕನ್ನಡದಲ್ಲಿ ವೀಕ್ಷಕ ವಿವರಣೆ

ಇದೇ ಮೊದಲ ಬಾರಿ ಫ್ರೆಂಚ್ ಓಪನ್ ಟೆನಿಸ್ ಪಂದ್ಯದ ವೀಕ್ಷಕ ವಿವರಣೆ ಕನ್ನಡದಲ್ಲೂ ಲಭ್ಯವಾಗಲಿದೆ. ಸೋನಿ ಟೆನ್ 4 ವಾಹಿನಿಯಲ್ಲಿ ಮುಖ್ಯ ಅಂಕಣದಲ್ಲಿ ನಡೆಯುವ ಪಂದ್ಯಗಳ ವೀಕ್ಷಕ ವಿವರಣೆ ಕನ್ನಡದಲ್ಲೂ ಬರಲಿದೆ.

ದೀಪಾವಳಿಗೂ ಮೊದಲೇ ಬರಲಿದೆ ರಾಮಾಯಣ

ಬಾಲಿವುಡ್ ನಲ್ಲಿ ನಿರ್ಮಾಣವಾಗುತ್ತಿರುವ ರಾಮಾಯಣ ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆ. ರಣಬೀರ್ ಕಪೂರ್ ರಾಮನಾಗಿ ಅಭಿನಯಿಸುತ್ತಿದ್ದು, ಸಾಯಿ ಪಲ್ಲವಿ ಸೀತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಯಶ್ ರಾವಣನಾಗಿ ಅಬ್ಬರಿಸಲಿದ್ದಾರೆ. ರಾಮಾಯಣ ಎರಡು ಭಾಗದಲ್ಲಿ ತೆರೆಗೆ ಬರಲಿದ್ದು, ಮೊದಲ ಭಾಗ ಈ ವರ್ಷದ ದೀಪಾವಳಿಯಂದು ಅದ್ದೂರಿಯಾಗಿ ತೆರೆಗೆ ಬರಲಿದೆ ಎಂದು ಚಿತ್ರತಂಡ ಈ ಹಿಂದೆಯೇ ಘೋಷಿಸಿತ್ತು.ಆದರೆ ಈಗ ಸಿಕ್ಕಿರುವ ಮಾಹಿತಿಯ ಪ್ರಕಾರ ರಾಮಾಯಣ ಒಂದು ವಾರಕ್ಕೆ ಮೊದಲೇ ತೆರೆಗೆ ಬರಲಿದೆ. ದೀಪಾವಳಿಯ ಹಿನ್ನೆಲೆಯಲ್ಲಿ ಸಾಲು ಸಾಲು ರಜೆಗಳಿವೆ. ರಜೆಯ ಮೇಲೆ ಕಣ್ಣಿಟ್ಟಿರುವ ಚಿತ್ರತಂಡ ದೀಪಾವಳಿಗೂ ಮೊದಲೇ ಸಿನಿಮಾವನ್ನು ತೆರೆಗೆ ತರಲು ಸಿದ್ಧತೆ ನಡೆಸಿದೆ. ರಾಮಾಯಣ ಎರಡನೇ ಭಾಗ ಮುಂದಿನ ವರ್ಷದ ದೀಪಾವಳಿಯ ಸಂದರ್ಭದಲ್ಲಿಯೇ ರಿಲೀಸ್ ಆಗಲಿದೆ. ಯಶ್ ಈ ಚಿತ್ರದಲ್ಲಿ ರಾವಣನಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಯಶ್ ತಮ್ಮ ಪಾತ್ರದ ಶೂಟಿಂಗ್ ಕೂಡ ಮುಗಿಸಿದ್ದಾರೆ. ದ್ವಿತೀಯಾ ಭಾಗದಲ್ಲಿ ರಾಮ ಹಾಗೂ ರಾವಣರ ರೋಚಕ ಯುದ್ಧದ ಸನ್ನಿವೇಶ ಮೂಡಿಬರಲಿದ್ದು, ದ್ವಿತೀಯಾ ಭಾಗದಲ್ಲಿ ಯಶ್, ರಾವಣನಾಗಿ ಖದರ್ ತೋರಲಿದ್ದಾರೆ. ಸನ್ನಿ ಡಿಯೋಲ್, ಕಾಜಲ್ ಅಗರ್ ವಾಲ್, ವಿವೇಕ್ ಒಬೆರಾಯ್ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ನಿತೇಶ್ ತಿವಾರಿ ನಿರ್ದೇಶನದ ಈ ಚಿತ್ರ ಅದ್ದೂರಿ ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. ರಾಮಾಯಣ ಒಂದು ಸಾವಿರ ಕೋಟಿಗೂ ಹೆಚ್ಚು ಗಳಿಕೆ ಕಾಣಲಿದೆ ಎಂಬ ನಿರೀಕ್ಷೆ ಇದೆ.

ವಿಜಯ್ ರಾಘವೇಂದ್ರ ಹುಟ್ಟುಹಬ್ಬಕ್ಕೆ

ಮಹಾನ್ ಉಡುಗೊರೆ

ಚಿನ್ನಾರಿ ಮುತ್ತ ಖ್ಯಾತಿಯ ವಿಜಯ್ ರಾಘವೇಂದ್ರ, ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅದರಲ್ಲಿ ಮಹಾನ್ ಚಿತ್ರವೂ ಒಂದು. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಬುದ್ದೂರು ನಿರ್ಮಿಸುತ್ತಿರುವ, ಈ ಚಿತ್ರವನ್ನು ಪಿ.ಸಿ.ಶೇಖರ್ ನಿರ್ದೇಶನ ಮಾಡುತ್ತಿದ್ದಾರೆ. ರೈತರ ಕುರಿತಾದ ಕಥಾಹಂದರ ಹೊಂದಿರುವ ಈ ಚಿತ್ರದಲ್ಲಿ ವಿಜಯ ರಾಘವೇಂದ್ರ ರೈತನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಟ ವಿಜಯ ರಾಘವೇಂದ್ರ ಅವರಿಗೆ ಹುಟ್ಟುಹಬ್ಬದ ಸಂಭ್ರಮ. ಈ ಸಂದರ್ಭದಲ್ಲಿ ಮಹಾನ್ ಚಿತ್ರತಂಡ ವಿಜಯ್ ರಾಘವೇಂದ್ರ ಅವರ ವಿಶೇಷ ಲುಕ್ ಬಿಡುಗಡೆ ಮಾಡಿದ್ದು, ಆ ಮೂಲಕ ಹುಟ್ಟುಹಬ್ಬಕ್ಕೆ ಉಡುಗೊರೆ ನೀಡಿದೆ.

ಚಿತ್ರವನ್ನು ಯಾವುದೇ ಕೊರತೆ ಬಾರದ ಹಾಗೆ ಪ್ರಕಾಶ್ ಬುದ್ದೂರು ನಿರ್ಮಾಣ ಮಾಡುತ್ತಿದ್ದಾರೆ. ಪಿ.ಸಿ.ಶೇಖರ್ ನಿರ್ದೇಶನದ ಹನ್ನೊಂದನೆ ಚಿತ್ರ ಇದಾಗಿದೆ. ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಈ ಚಿತ್ರದ ಬಿಡುಗಡೆಗಾಗಿ ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ವಿಜಯ ರಾಘವೇಂದ್ರ, ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷಾ, ಕಿರಣ್ ಶ್ರೀನಿವಾಸ್ ಮುಂತಾದವರು ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ.

ಡಿಯರ್ ಹಸ್ಬೆಂಡ್‌ನ ಹೊಸ ಗಾನ

ಗುರುರಾಜ ಕುಲಕರ್ಣಿ ನಿರ್ದೇಶನದಲ್ಲಿ ಡಿಯರ್ ಹಸ್ಬೆಂಡ್ ಚಿತ್ರ ಮೂಡಿಬರುತ್ತಿದೆ. ಈಗಾಗಲೇ ಸದ್ದಿಲ್ಲದೆ, ಡಿಯರ್ ಹಸ್ಬೆಂಡ್ ಚಿತ್ರದ ಮೊದಲ ಹಂತದ ಚಿತ್ರೀಕರಣ ಯಶಸ್ವಿಯಾಗಿ ಮುಕ್ತಾಯವಾಗಿದೆ. ಇದೀಗ ಚಿತ್ರದ ಹಾಡುಗಳ ಧ್ವನಿ ಮುದ್ರಣ ಕಾರ್ಯವು ಕೂಡ ಮುಗಿಸಿದೆ.

ಬೆಂಗಳೂರಿನಲ್ಲಿ ಈ ಹಾಡಿನ ಧ್ವನಿಮುದ್ರಣ ಕಾರ್ಯ ನಡೆಯಿತು. ವೀರ್ ಸಮರ್ಥ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದಿರುವ ಮಾಲಾಶ್ರೀ ಸಿಕ್ಕಳೋ ಮೆಲ್ಲನೆ ನಕ್ಕಳೋ ಎಂದು ಆರಂಭವಾಗುವ ಈ ಹಾಡಿನ ಸಾಲುಗಳಿಗೆ ಪ್ರಮೋದ್ ಮರವಂತೆ ಸಾಹಿತ್ಯ ರಚಿಸಿದ್ದಾರೆ. ಮುಂಬೈನಿಂದ ಬೆಂಗಳೂರಿಗೆ ಬಂದ ಬಾಲಿವುಡ್ ನ ಖ್ಯಾತ ಗಾಯಕ ನಕಾಶ್ ಈ ಹಾಡಿಗೆ ದನಿಯಾಗಿದ್ದಾರೆ.

ಈಗಾಗಲೇ ಡಿಯರ್ ಹಲ್ಬೆಂಡ್ ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದೆ. ಇದೀಗ ಬಾಕಿಯಿದ್ದ ಸಿನಿಮಾದ ಹಾಡುಗಳ ರೆಕಾರ್ಡಿಂಗ್ ಕೂಡ ಪೂರ್ಣವಾಗಿದೆ. ಗಾಯಕ ನಕಾಶ್ ಈ ಹಾಡಿನ ಹಿನ್ನೆಲೆ, ಸಾಹಿತ್ಯದ ಅರ್ಥವನ್ನು ತಿಳಿದುಕೊಂಡು ತುಂಬಾ ಖುಷಿಯಿಂದ ಈ ಹಾಡನ್ನು ಹಾಡಿದ್ದಾರೆ.

ಸಂಗೀತ ನಿರ್ದೇಶಕ ವೀರ್ ಸಮರ್ಥ್ ಮತ್ತು ಗೀತ ಸಾಹಿತಿ ಪ್ರಮೋದ್ ಮರವಂತೆ ಕಾಂಬಿನೇಷನ್ ನಲ್ಲಿ ಬಂದಿರುವ ಹಾಡುಗಳದ್ದು ಒಂದು ಶೈಲಿಯಾಗಿದ್ದರೆ, ಈ ಹಾಡು ಅದೆಲ್ಲದಕ್ಕಿಂತ ವಿಭಿನ್ನವಾದ ಮತ್ತೊಂದು ಶೈಲಿಯಲ್ಲಿದೆ. ಹೊಸತನದಿಂದ ಕೂಡಿರುವ ಈ ಹಾಡು ಸಿನಿಪ್ರಿಯರನ್ನ ಸೆಳೆಯಲಿದೆ. ಮಂಡ್ಯ ಸೊಗಡಿನ ಹಿನ್ನೆಲೆಯ ಈ ಹಾಡು ನೋಡುಗರನ್ನು ಕುಳಿತಲ್ಲೇ ಕುಣಿಯುವಂತೆ ಮಾಡಲಿದೆ ಎಂದು ನಿರ್ದೇಶಕ ಗುರುರಾಜ ಕುಲಕರ್ಣಿ ಹೇಳಿದರು.

ಸಸ್ಪೆನ್ಸ್, ಕ್ರೈಂ-ಥ್ರಿಲ್ಲರ್ ಶೈಲಿಯಲ್ಲಿ ಮೂಡಿಬರುತ್ತಿರುವ ಡಿಯರ್ ಹಸ್ಬೆಂಡ್ ಚಿತ್ರದಲ್ಲಿ ಸೂರಜ್ ಗೌಡ, ಶರಣ್ಯಾ ಶೆಟ್ಟಿ, ಪ್ರವೀಣ್, ಕುಮಾರ ಬಂಗಾರಪ್ಪ ಹೀಗೆ ಹಲವರು ನಟಿಸಿದ್ದಾರೆ. ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ.

ಕೆಲ ತಿಂಗಳ ಹಿಂದಷ್ಟೇ ನಟ ಕಿಚ್ಚ ಸುದೀಪ್, ಡಿಯರ್ ಹಸ್ಬೆಂಡ್ ಚಿತ್ರದ ಟೈಟಲ್ ಟೀಸರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಹಾರೈಸಿದ್ದರು. ಡಿಯರ್ ಹಸ್ಬೆಂಡ್ ಚಿತ್ರದ ಮುಂದಿನ ಹಂತದ ಚಿತ್ರೀಕರಣ ಬೆಂಗಳೂರು, ಮಂಡ್ಯ, ಮೈಸೂರು, ಶ್ರೀರಂಗಪಟ್ಟಣ, ಗೋವಾ ಸುತ್ತಮುತ್ತ ನಡೆಸಲಾಗಿದೆ. ಜೆ9 ಕಮ್ಯುನಿಕೇಶನ್ ಅಂಡ್ ಮೀಡಿಯಾ ಸಂಸ್ಥೆಯಲ್ಲಿ ನಿರ್ಮಾಣವಾಗುತ್ತಿರುವ ಈ ಚಿತ್ರ ಇದೇ ವರ್ಷಾಂತ್ಯಕ್ಕೆ ತೆರೆಗೆ ಬರಲಿದೆ.

ಮಹಾಲಕ್ಷ್ಮೀ ಮದುವೆ ಇದು ಮನೆ ಮನೆ ಕಥೆ

ಕಿರುತೆರೆಯಲ್ಲಿ ಈಗಾಗಲೇ ಹಲವು ಧಾರಾವಾಹಿಗಳು ಮೂಡಿಬರುತ್ತಿವೆ. ಆ ಸಾಲಿಗೆ ಈಗ ಮಹಾಲಕ್ಷ್ಮೀ ಮದುವೆಯ ಕಥೆಯೂ ಸಿನಿಪ್ರಿಯರ ಮನಗೆಲ್ಲಲು ಬರುತ್ತಿದೆ.

ಮೂಗುತಿ ಮಲ್ಲಿ ಪ್ರಸಾರವಾಗುತ್ತಿರುವ ಉದಯ ಟಿವಿಯಲ್ಲಿ ಈ ಧಾರಾವಾಹಿಯೂ ಮೂಡಿಬರಲಿದೆ. ನಾಯಕ ಶ್ರೀಹರಿ ಮಧ್ಯಮ ವರ್ಗದ ಹುಡುಗ, ಹುಡುಗಿ ಮಹಾಲಕ್ಷ್ಮೀಯೂ ಮಧ್ಯಮ ವರ್ಗಕ್ಕೆ ಸೇರಿದವಳು. ಬ್ಯಾಂಕ್‌ನಲ್ಲಿ ಕೆಲಸ ಮಾಡುವ ಮಗನಿಗೆ ಒಳ್ಳೆಯ ವರದಕ್ಷಿಣೆ ಮತ್ತು ಒಡವೆ ತರುವ ಹುಡುಗಿ ಬರಲಿ ಎಂಬುದು ಹುಡುಗನ ಅಮ್ಮನ ಆಸೆ. ಈ ಆಸೆಗೆ ಇನ್ನೂ ಸ್ವಲ್ಪ ಕುಮ್ಮಕ್ಕು ಕೊಡೋಳು ಹುಡುಗನ ಅಕ್ಕ. ಹಾಗೆಂದು ಅವರೇನೂ ಕೆಟ್ಟವರಲ್ಲ, ನಮ್ಮ ಶ್ರೀಹರಿ ಚೆನ್ನಾಗಿದ್ದರೆ ನಾವೂ ಚೆನ್ನಾಗಿರ್ತೀವಿ ಎಂಬ ಮಹದಾಸೆ ಅವರಿಗೆ. ಆದ್ರೆ ಮಹಾಲಕ್ಷ್ಮೀ ಗಟ್ಟಿಗಿತ್ತಿ. ಅಪ್ಪನ ಆಸರೆ ಇಲ್ಲದೆ ಮನೆ ಜವಾಬ್ದಾರಿ ತಾನೇ ಹೊತ್ತುಕೊಂಡವಳು. ತಂಗಿಯರನ್ನ ಓದಿಸಬೇಕು. ಅಮ್ಮನಿಗೆ ಆಸರೆಯಾಗಬೇಕು ಅನ್ನೋದು ಆಕೆಯ ಉದ್ದೇಶ. ಹಾಗಾಗಿ ಮದುವೆ ಆದರೂ ಸಂಬಳಾನ ಅಮ್ಮನಿಗೆ ಕೊಡ್ತೀನಿ ಅನ್ನೋದು ಆಕೆಯ ಷರತ್ತು. ಸಾವಿರ ಸುಳ್ಳು ಇಲ್ಲ, ಒಂದೇ ಒಂದು ಸುಳ್ಳಿನ ಮೂಲಕ ನಡೆಯೋ ಶ್ರೀಹರಿ ಮತ್ತು ಮಹಾ ಲಕ್ಷ್ಮೀ ಮದುವೆ ಯಾವ ರೀತಿ ಮುಂದೆ ಸಾಗು ತ್ತದೆ ಅನ್ನೋದೆ ಈ ಧಾರಾವಾಹಿಯ ಕಥೆ.

ಮಹಾಲಕ್ಷ್ಮೀ ಪಾತ್ರದಲ್ಲಿ ನಟಿ ಅಮೂಲ್ಯ ಗೌಡ ಕಾಣಿಸಿಕೊಳ್ಳಲಿದ್ದಾರೆ. ನಾಯಕನಾಗಿ ಭರತ್ ಶಿವಣ್ಣ ಕಾಣಿಸಿಕೊಳ್ಳಲಿದ್ದಾರೆ. ಉಳಿದಂತೆ ಶಿವಾಜಿರಾವ್ ಜಾಧವ್, ಸೀತಾ ಕೋಟೆ, ಅಮೃತಾ ರಾಮಮೂರ್ತಿ, ಪದ್ಮಿನಿ, ಕಾಮಿಡಿ ನಟರಾದ ಮಂಜು ಪಾವಗಡ ಮತ್ತು ಮಾನಸಾ, ಮೇಘಶ್ರೀ, ಸ್ನೇಹಾ ಭಟ್, ಪ್ರತೀಕ್ಷಾ, ಧನುಷ್ ಗೌಡ, ಹರಿಪ್ರಿಯಾ, ಮಹಾಲಕ್ಷ್ಮೀ ಮದುವೆಗೆ ಸಾಕ್ಷಿಯಾಗಲಿದ್ದಾರೆ.

ಲೈಮ್‌ಲೈಟ್ ಪ್ರೊಡಕ್ಷನ್ಸ್ ನಲ್ಲಿ ನಿರ್ಮಾಣಗೊಳ್ಳುತ್ತಿರುವ ಮಹಾಲಕ್ಷ್ಮೀ ಮದುವೆ ಧಾರಾವಾಹಿಯನ್ನು ಶಿವಧ್ವಜ್ ಶೆಟ್ಟಿ ಮತ್ತು ಪ್ರಶಾಂತ್ ರೈ ನಿರ್ಮಾಣ ಮಾಡುತ್ತಿದ್ದಾರೆ. ಶಿವು ಪೂಜೇನ ಅಗ್ರಹಾರ ನಿರ್ದೇಶನದ ಹೊಣೆ ಹೊತ್ತಿದ್ದಾರೆ. ಛಾಯಾಗ್ರಹಣ ಯೋಗೇಶ್ ಗೌಡ ಅವರದಾಗಿದೆ. ಜೂನ್ 1ರಿಂದ ಮಹಾಲಕ್ಷ್ಮೀ ಮದುವೆ ಉದಯ ಟಿವಿಯಲ್ಲಿ ಪ್ರಸಾರ ಆರಂಭಿಸಲಿದೆ.